₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಬುಧವಾರ 25.09.2024 ಸಂಪುಟ: 67 ಸಂಚಿಕೆ: 140 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ದಾರಿದೀಪೋಕ್ತಿ
ಯಾರಾದರೂ ನಮ್ಮನ್ನು ಬಳಸಿಕೊಂಡರೆ, ಉಪಯೋಗಿಸಿಕೊಂಡು ಮರೆತರೆ ಅಂಥವರ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳಬಾರದು. ಆದರೆ ನಮ್ಮ ಬೆಳವಣಿಗೆಯಲ್ಲಿ ಸಹಕರಿಸಿದವರನ್ನು, ಕಾರಣ ರಾದವರನ್ನು ಮಾತ್ರ ಎಂದೂ ಮರೆಯಬಾರದು.

ವಕ್ರತುಂಡೋಕ್ತಿ
ಸಂತಸವನ್ನು ಖರೀದಿಸುವುದು ಸಾಧ್ಯವಿಲ್ಲ. ಆದರೆ ವಿದೇಶ ಯಾತ್ರೆಗೆ ವಿಮಾನ ಟಿಕೆಟ್ ಖರೀದಿಸುವುದು ಸಾಧ್ಯ.

ವೀರ ಸಾವರ್ಕರ್ ಆಸ್ಕರ್‌ಗೆ ಪ್ರವೇಶ
ಲಾಪತಾ ಲೇಡೀಸ್ ಚಿತ್ರದ ನಂತರ ಇದೀಗ ಬಾಲಿವುಡ್ ನಟ ರಣ ದೀಪ್ ಹೂಡಾ ನಟಿಸಿ, ನಿರ್ದೇಶಿಸಿರುವ ಸ್ವಾತಂತ್ರ್ಯ ವೀರ ಸಾವರ್ಕರ್ ಚಿತ್ರ 2025ನೇ ಸಾಲಿನ ಆಸ್ಕರ್ ಪ್ರಶಸ್ತಿಗೆ ಪ್ರವೇಶ ಪಡೆದಿದೆ.

ಸಂಪಾದಕೀಯ ಪುಟಗಳು

ಸೂರ್ತಿ ಸೆಲೆಯೋ, ಕ್ರೂರ ರಕ್ಕಸಿಯೋ? ಹಿಂದಿರುಗಿ ನೋಡಿದಾಗ ಡಾ. ನಾ.ಸೋಮೇಶ್ವರ ಸಂ.ಪುಟ | 6

ಬದುಕೇ ಕಲಬೆರಕೆ, ತುಪವೇನು ಮಹಾ?! ಲೋಕಮತ ಲೋಕೇಶ್ ಕಾಯರ್ಗ ಸಂ.ಪುಟ | 7

ಬಿಎನ್‌ಎಸ್ 218ರಲ್ಲಿ ನೀಡಿದ್ದ ಪ್ರಾಸಿಕ್ಯೂಷನ್ ರದ್ದು | 17 'ಎ'ಗೆ ಮಾತ್ರ ಊರ್ಜಿತವೆಂದ ಪೀಠ

ಮುಂದಿನ ಕಾನೂನು ಹೋರಾಟಕ್ಕೆ ಸಿದ್ಧತೆ ಶುರು | ರಾಜಕೀಯವಾಗಿ ಹೋರಾಡಲು ಕಾಂಗ್ರೆಸ್ ಸಭೆ

ಸಿಎಂಗೆ ಭಾಗಶಃ ರಿಲೀಫ್

ಬೆಂಗಳೂರು: ರಾಜ್ಯ ರಾಜಕೀಯದಲ್ಲಿ ಭಾರಿ ವಿವಾದಕ್ಕೆ ಕಾರಣವಾಗಿದ್ದ ಮುಡಾ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಸಿಆರ್‌ಪಿಸಿ 17'ಎ' ಅಡಿ ಪ್ರಾಥಮಿಕ ತನಿಖೆಗೆ ಅನುಮತಿ ನೀಡಿರುವ ಹೈಕೋರ್ಟ್, ರಾಜ್ಯಪಾಲರು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ ಸೆಕ್ಷನ್ 218ರಲ್ಲಿ ನೀಡಿದ್ದ ಪ್ರಾಸಿಕ್ಯೂಷನ್ ಆದೇಶವನ್ನು ತಿರಸ್ಕರಿಸಿದೆ. ಈ ಮೂಲಕ ನೇರ ಪ್ರಾಸಿಕ್ಯೂಷನ್ ತೂಗುಗತ್ತಿಯಿಂದ ಸಿಎಂ ಸಿದ್ದರಾಮಯ್ಯ ಪಾರಾಗಿದ್ದಾರೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ನಿವೇಶನ ಹಂಚಿಕೆ ಸಂಬಂಧ ಮುಖ್ಯಮಂತ್ರಿ ವಿರುದ್ಧದ ಕ್ರಿಮಿನಲ್ ಪ್ರಕರಣ ತನಿಖೆಗೆ ರಾಜ್ಯಪಾಲರ ಆದೇಶ ಪ್ರಶ್ನಿಸಿ ಸಿದ್ದರಾಮಯ್ಯ ಅವರು ಸಲ್ಲಿಸಿದ್ದ ರಿಟ್ ಅರ್ಜಿಯ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠ ಮಂಗಳವಾರ ಮಧ್ಯಾಹ್ನ 197 ಪುಟಗಳ ಸುದೀರ್ಘ ತೀರ್ಪು ಪ್ರಕಟಿಸಿದೆ.

ರಾಜ್ಯಪಾಲರು 17 'ಎ'ನಲ್ಲಿ ತನಿಖೆಗೆ ಅವಕಾಶ ನೀಡಿರುವುದು ಮೇಲ್ನೋಟಕ್ಕೆ ಸಿದ್ದರಾಮಯ್ಯ ಅವರಿಗೆ ಹಿನ್ನಡೆ ಎನ್ನುವ ವಿಶ್ಲೇಷಣೆಗಳು ಕೇಳಿಬರುತ್ತಿದ್ದರೂ, ಸೂಕ್ಷ್ಮವಾಗಿ ಗಮನಿಸಿದರೆ, ಇದೊಂದು 'ಸುದೀರ್ಘ' ಪ್ರಕ್ರಿಯೆಯಾಗಿದೆ. ಒಂದು ವೇಳೆ 218ರಲ್ಲಿ ಪ್ರಾಸಿಕ್ಯೂಷನ್‌ಗೆ ಅವಕಾಶ ನೀಡಿದ್ದರೆ ಸಿಎಂಗೆ ಸಂಕಷ್ಟ ಎದುರಾಗುತ್ತಿತ್ತು. ಆದರೀಗ ಅದನ್ನು ತಿರಸ್ಕರಿಸಿರುವುದರಿಂದ ಮುಖ್ಯಮಂತ್ರಿಗಳು ನಿರಾಳರಾಗಿದ್ದಾರೆ ಎನ್ನುವ ಮಾತುಗಳು ಕೇಳಿಬಂದಿವೆ.

ತೀರ್ಪಿನ ಸಾರಾಂಶ: ದೂರುದಾರರು ದೂರನ್ನು ದಾಖಲಿಸಲು ಅಥವಾ ರಾಜ್ಯಪಾಲರಿಂದ ಅನುಮೋದನೆ ಪಡೆಯಲು ಸಮರ್ಥರಾಗಿದ್ದಾರೆ. ವಾಸ್ತವ ಪರಿಸ್ಥಿತಿಯಲ್ಲಿ ಪಿಸಿ ಕಾಯಿದೆಯ ಸೆಕ್ಷನ್ 17 'ಎ' ಅಡಿಯಲ್ಲಿ ಅನುಮೋದನೆ ಕಡ್ಡಾಯವಾಗಿದೆ. ಕಾಯಿದೆಯ ನಿಬಂಧನೆಗಳ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳಿಗಾಗಿ ಸಾರ್ವಜನಿಕ ನೌಕರನ ವಿರುದ್ಧ ಬಿಎನ್‌ಎಸ್‌ಎಸ್ ಸಿಆರ್‌ಪಿಸಿ 223 ರ ಸೆಕ್ಷನ್ 200 ರ ಅಡಿಯಲ್ಲಿ ದಾಖಲಿಸಲಾದ ಖಾಸಗಿ ದೂರಿನಲ್ಲಿ ಪೊಲೀಸ್ ಅಧಿಕಾರಿಯು ಅನುಮೋದನೆ ಪಡೆಯಲು ಸೆಕ್ಷನ್ 17 'ಎ'ನಲ್ಲಿ ಎಲ್ಲಿಯೂ ಅಗತ್ಯವಿಲ್ಲ. ಅಂತಹ ಅನುಮೋದನೆ ಪಡೆಯುವುದು ದೂರುದಾರರ ಕರ್ತವ್ಯ ಎಂದು ತೀರ್ಪಿನಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಸಾಮಾನ್ಯ ಪರಿಸ್ಥಿತಿಯಲ್ಲಿ ರಾಜ್ಯಪಾಲರು ಭಾರತದ ಸಂವಿಧಾನದ 163ನೇ ವಿಧಿಯ ಅಡಿಯಲ್ಲಿ ಪಡೆದಂತೆ ಮಂತ್ರಿಗಳ ಮಂಡಳಿಯ ಸಹಾಯ ಮತ್ತು ಸಲಹೆಯ ಮೇರೆಗೆ ಕಾರ್ಯನಿರ್ವಹಿಸಬೇಕಾಗುತ್ತದೆ. ಆದರೆ ಕೆಲ ಸಂದರ್ಭಗಳಲ್ಲಿ ಸ್ವತಂತ್ರ ನಿರ್ಧಾರ ತೆಗೆದುಕೊಳ್ಳಬಹುದು. ಪ್ರಸ್ತುತ ಪ್ರಕರಣವು ಅಂತಹದ್ದು. ರಾಜ್ಯಪಾಲರು ಸ್ವತಂತ್ರ ವಿವೇಚನಾಧಿಕಾರ ಚಲಾಯಿಸುವ ಕ್ರಮದಲ್ಲಿ ಯಾವುದೇ ದೋಷ ಕಂಡುಬಂದಿಲ್ಲ.

ಆದೇಶ ಕಾಯಿದೆಯ ಸೆಕ್ಷನ್ 17 'ಎ' ಅಡಿಯಲ್ಲಿ ಅನುಮೋದನೆಗೆ ನಿರ್ಬಂಧಿಸಲು ಓದಲಾಗುತ್ತದೆ ಮತ್ತು ಬಿಎನ್‌ಎಸ್‌ಎಸ್‌ನ ಮಂಜೂರಾತಿ 218 ಅನ್ನು ನೀಡುವ ಆದೇಶವಲ್ಲ. ಅರ್ಜಿಯಲ್ಲಿ ವಿವರಿಸಿರುವ ಸಂಗತಿಗಳು ನಿಸ್ಸಂದೇಹವಾಗಿ ತನಿಖೆಯ ಅಗತ್ಯವಿರುತ್ತದೆ. ಈ ಎಲ್ಲ ಕಾಯಿದೆಗಳ ಫಲಾನುಭವಿಯು ಹೊರಗಿನವರು ಯಾರೂ ಅಲ್ಲ, ಆದರೆ ಅರ್ಜಿದಾರರ ಪತ್ನಿ ಎಂಬುದು ಮುಖ್ಯ ಎಂದು ತೀರ್ಪಿನಲ್ಲಿದೆ.

ಸಿಎಂ ಸಿದ್ದರಾಮಯ್ಯ ಮುಂದಿನ ನಡೆ ಏನಾಗಿರಬಹುದು?

- ಹೈಕೋರ್ಟ್ ದ್ವಿಸದಸ್ಯ ಪೀಠದಲ್ಲಿಯೇ ಈ ಆದೇಶವನ್ನು ಪ್ರಶ್ನಿಸಬಹುದು
- ಸುಪ್ರೀಂಕೋರ್ಟ್‌ನಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಸಬಹುದು
- ವಿಶೇಷ ನ್ಯಾಯಾಲಯದಲ್ಲಿ ಬರುವ ತೀರ್ಪಿನ ಮೇಲೆ ಯಾವ ರೀತಿಯಲ್ಲಿ ಹೋರಾಟ ಎನ್ನುವುದು ತೀರ್ಮಾನ
- ಒಂದು ವೇಳೆ ವಿಶೇಷ ನ್ಯಾಯಾಲಯದಲ್ಲಿ ತನಿಖೆಗೆ ಆದೇಶಿಸಿ, ಅದನ್ನು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಬಹುದು
- ಕಾನೂನಾತ್ಮಕ ಹೋರಾಟದೊಂದಿಗೆ ರಾಜಕೀಯವಾಗಿ ಹೋರಾಟ ಮುಂದುವರಿಯಲಿದೆ

ಬಿಜೆಪಿಯವರ ಪಿತೂರಿಗೆ ಹೆದರಿ ರಾಜೀನಾಮೆ ನೀಡುವುದಿಲ್ಲ. ನಾನು ಹೋರಾಟದಿಂದ ಬಂದವನು. ನಿಮ್ಮ ಷಡ್ಯಂತ್ರವನ್ನು ಸೋಲಿಸುತ್ತೇನೆ. ರಾಜ್ಯದಲ್ಲಿ ಸುಭದ್ರ ಸರಕಾರವನ್ನು ಅಸ್ಥಿರಗೊಳಿಸುವ ಉದ್ದೇಶದಿಂದ ಹಾಗೂ ನನ್ನ ಸುದೀರ್ಘ ರಾಜಕೀಯ ಜೀವನಕ್ಕೆ ಮಸಿ ಬಳಿಯುವ ಪ್ರಯತ್ನ ನಡೆಸಿದೆ. ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ , ಬಿಎನ್‌ಎಸ್ ಪ್ರಕಾರ 218 ಹಾಗೂ ಪಿಸಿ ಕಾಯಿದೆ 19ರಂತೆ ತನಿಖೆಗೆ ಅನುಮತಿ ನೀಡುವುದನ್ನು ತಿರಸ್ಕರಿಸಿ, ಪಿಸಿ ಕಾಯಿದೆಯ 17 ಎ ಪ್ರಕಾರ ತನಿಖೆಗೆ ಹೈಕೋರ್ಟ್ ಆದೇಶ ನೀಡಿದೆ. ಈ ತೀರ್ಪಿನ ಮೇಲೆ ಕಾನೂನು ಹೋರಾಟದ ಬಗ್ಗೆ ಕಾನೂನು ತಜ್ಞರೊಂದಿಗೆ ಚರ್ಚೆ ಮಾಡಿ, ಮುಂದಿನ ಕ್ರಮದ ಬಗ್ಗೆ ತೀರ್ಮಾನ ಮಾಡಲಾಗುವುದು.

– ಸಿದ್ದರಾಮಯ್ಯ, ಮುಖ್ಯಮಂತ್ರಿ

ಆದೇಶದಲ್ಲಿನ ಪ್ರಮುಖಾಂಶ

- ದೂರುದಾರರು ದೂರನ್ನು ದಾಖಲಿಸಲು ಅಥವಾ ರಾಜ್ಯಪಾಲರಿಂದ ಅನುಮೋದನೆ ಪಡೆಯಲು ಸಮರ್ಥರು
- ಪಿಸಿ ಕಾಯಿದೆಯ ಸೆಕ್ಷನ್ 17 'ಎ' ಅಡಿಯಲ್ಲಿ ಅನುಮೋದನೆ ಕಡ್ಡಾಯ
- ರಾಜ್ಯಪಾಲರು ಸ್ವತಂತ್ರ ವಿವೇಚನಾಧಿಕಾರ ಚಲಾಯಿಸುವ ಕ್ರಮದಲ್ಲಿ ಯಾವುದೇ ದೋಷ ಕಂಡುಬಂದಿಲ್ಲ
- ಅರ್ಜಿಯಲ್ಲಿ ವಿವರಿಸಿರುವ ಸಂಗತಿಗಳು ನಿಸ್ಸಂದೇಹವಾಗಿ ತನಿಖೆಯ ಅಗತ್ಯವಿರುತ್ತದೆ
- ಪ್ರಕರಣದಲ್ಲಿ ಫಲಾನುಭವಿಯು ಹೊರಗಿನವರಲ್ಲ, ಆದರೆ ಅರ್ಜಿದಾರರ (ಸಿಎಂ) ಪತ್ನಿ ಎಂಬುದು ಮುಖ್ಯ

17'ಎ' ಎಂದರೇನು?

2018ರಲ್ಲಿ ಪಿಸಿ ಕಾಯಿದೆಗೆ ತಿದ್ದುಪಡಿ ಮಾಡುವ ಮೂಲಕ ಸೆಕ್ಷನ್ 17 'ಎ' ಅನ್ನು ಪರಿಚಯಿಸಲಾಗಿದೆ. ಅದು ಯಾವುದೇ ಪೊಲೀಸ್ ಅಧಿಕಾರಿಯು ತನ್ನ ಅಧಿಕೃತ ಕರ್ತವ್ಯಗಳ ನಿರ್ವಹಣೆಯಲ್ಲಿ ಸಾರ್ವಜನಿಕ ನೌಕರನು ಮಾಡಿದ ಯಾವುದೇ ಶಿಫಾರಸು ಅಥವಾ ನಿರ್ಧಾರಕ್ಕೆ ಸಂಬಂಧಿಸಿದ ಪ್ರಕರಣದ ಸತ್ಯಾಸತ್ಯತೆ ಬಗ್ಗೆ ಮಾಹಿತಿ ಕಲೆ ಹಾಕಬಹುದು. ಅಂದರೆ ಈ ಪ್ರಕರಣದಲ್ಲಿ ಯಾರ ಯಾರ ಪಾತ್ರವೇನು? ಪ್ರಭಾವದ ಬಗ್ಗೆ ತನಿಖೆ ನಡೆಸಬಹುದು. ತನಿಖೆಯ ನಂತರ 19 (ಎ) ಅಡಿ ಚಾರ್ಜ್‌ಶೀಟ್ ಸಲ್ಲಿಕೆಗೆ ರಾಜ್ಯಪಾಲರ ಅನುಮತಿ ಕಡ್ಡಾಯವಾಗಿ ಪಡೆದುಕೊಳ್ಳಬೇಕು.

ವಾದ ಮಂಡಿಸಿದವರು...

ಸಿಎಂ ಪರ: ಹಿರಿಯ ವಕೀಲ ಡಾ.ಅಭಿಷೇಕ್ ಮನು ಸಿಂಘ್ವಿ , ಹಿರಿಯ ವಕೀಲ ಪ್ರೊ.ರವಿವರ್ಮ ಕುಮಾರ್, ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ , ವಕೀಲ ಶತಭಿಷ್ ಶಿವಣ್ಣ.
ಸಿಎಂ ವಿರುದ್ಧ : ರಾಜ್ಯಪಾಲರ ವಿಶೇಷ ಕರ್ತವ್ಯಾಧಿಕಾರಿ ಪರವಾಗಿ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಕೇವಿಯೇಟರ್ ಸ್ನೇಹಮಯಿ ಕೃಷ್ಣ ಪರವಾಗಿ ವಕೀಲ ಮಣಿಂದರ್ ಸಿಂಗ್, ಕೆ.ಜಿ.ರಾಘವನ್, ಹಿರಿಯ ವಕೀಲೆ ಲಕ್ಷ್ಮಿ ಅಯ್ಯಂಗಾರ್, ಟಿ.ಜೆ.ಅಬ್ರಹಾಂ ಪರವಾಗಿ ವಕೀಲ ರಂಗನಾಥ್ ರೆಡ್ಡಿ, ಪಿ. ಎಸ್.ಪ್ರದೀಪ್ ಕುಮಾರ್ ವಕೀಲ ಪ್ರಭುಲಿಂಗ ನಾವದಗಿ.

ಬಿಎನ್‌ಎಸ್‌ಎಸ್ 218

ಭಾರತೀಯ ನಾಗರಿಕಾ ಸುರಕ್ಷಾ ಸಂಹಿತಾ-2023 ರ ಕಾಯಿದೆಯ ಅನ್ವಯ ಸಿಎಂ ಪ್ರಕರಣಕ್ಕೆ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ ಸೆಕ್ಷನ್ 218 ಅನ್ವಯವಾಗುವುದಿಲ್ಲ. ನ್ಯಾಯಾಧೀಶರು ಅಥವಾ ಮ್ಯಾಜಿಸ್ಟ್ರೇಟ್, ಸರಕಾರಿ ಅಧಿಕಾರಿಗಳ ಪ್ರಾಸಿಕ್ಯೂಷನ್‌ಗೆ ಮಾತ್ರ ಈ ಸೆಕ್ಷನ್ ಅನ್ವಯವಾಗುತ್ತದೆ.

ಅಧೀನ ನ್ಯಾಯಾಲಯದಲ್ಲಿ ಇಂದು ತೀರ್ಪು?

ಸಿಎಂ ಸಿದ್ದರಾಮಯ್ಯ ಅವರಿಗೆ ಬುಧವಾರವೂ ಮಹತ್ವದ ದಿನವಾಗಿದೆ. ಹೈಕೋರ್ಟ್‌ನಲ್ಲಿ ಅರ್ಜಿ ವಜಾಗೊಳ್ಳುತ್ತಿದ್ದಂತೆ ಅಧೀನ ನ್ಯಾಯಾಲಯಕ್ಕಿದ್ದ ತಡೆಯಾಜ್ಞೆ ಕೂಡ ತೆರವಾಗಿದೆ. ಇಂದು ಜನಪ್ರತಿನಿಧಿಗಳ ನ್ಯಾಯಾಲಯದಲ್ಲಿ ಸಿದ್ದರಾಮಯ್ಯ ಅವರಿಗೆ ಸಂಬಂಧಿತ ಅರ್ಜಿ ವಿಚಾರಣೆಗೆ ನಿಗದಿಯಾಗಿದೆ. ಮೂಡಾ ಪ್ರಕರಣ ಪ್ರಾಸಿಕ್ಯೂಷನ್ ಸಂಬಂಧಪಟ್ಟ ಅರ್ಜಿ ವಿಚಾರಣೆಗೆ ಬದಲಿದ್ದು, ಕಲಾಪದ ಆರಂಭದಲ್ಲೇ ಆದೇಶ ನೀಡಲು ಅರ್ಜಿದಾರರು ಮನವಿ ಮಾಡಿದ್ದಾರೆ. ಹೈಕೋರ್ಟ್ ತೀರ್ಪಿನಂತೆ ಅಧೀನ ನ್ಯಾಯಾಲಯದ ತಡೆಯಾಜ್ಞೆ ತೆರವುಗೊಂಡಿರುವುದರಿಂದ ಜನಪ್ರತಿನಿಧಿಗಳ ಕೋರ್ಟ್ ತನಿಖೆಗೆ ಆದೇಶ ನೀಡಿದರೆ ಸಿಎಂ ವಿರುದ್ಧ ಎಫ್‌ಐಆರ್ ಹಾಕಬಹುದಾಗಿದೆ.

ಸಿಎಂ ಬೆನ್ನಿಗೆ ನಿಂತ ಸಂಪುಟ

ಮುಖ್ಯಮಂತ್ರಿ ಬೆಂಬಲಕ್ಕೆ ಇಡೀ ಸಂಪುಟ ನಿಂತಿದೆ. ಹೈಕೋರ್ಟ್ ತೀರ್ಪು ಪ್ರಕಟವಾಗುತ್ತಿದ್ದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗೃಹ ಕಚೇರಿ ಕೃಷ್ಣಾದಲ್ಲಿ ಹಿರಿಯ ಸಚಿವರು ಹಾಗೂ ಆಪ್ತರೊಂದಿಗೆ ಚರ್ಚೆ ನಡೆಸಿದರು. ಈ ವೇಳೆ ಎಲ್ಲ ಸಚಿವರು, ಈ ಪ್ರಕರಣದಲ್ಲಿ ಸಿದ್ದರಾಮಯ್ಯ ಬೆನ್ನಿಗೆ ನಿಲ್ಲುವ ಭರವಸೆ ನೀಡಿದ್ದಾರೆ. ಕೇವಲ ರಾಜ್ಯ ನಾಯಕರು ಮಾತ್ರವಲ್ಲದೇ, ದೆಹಲಿ ನಾಯಕರು ಸಿದ್ದರಾಮಯ್ಯಗೆ ಕರೆ ಮಾಡಿ ಚರ್ಚೆ ನಡೆಸಿದ್ದಾರೆ. ಮುಖ್ಯಮಂತ್ರಿಗಳ ನಿವಾಸಕ್ಕೆ ಮಂಗಳವಾರ ಮಧ್ಯಾಹ್ನ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಸಚಿವ ಎಚ್.ಸಿ.ಮಹದೇವಪ್ಪ, ಕೆ.ಜೆ.ಜಾರ್ಜ್, ಕೃಷ್ಣ ಬೈರೇಗೌಡ, ಬೈರತಿ ಸುರೇಶ್, ಅಡ್ವೊಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ಭೇಟಿ ನೀಡಿ ಮುಂದಿನ ರಾಜಕೀಯ ಹಾಗೂ ಕಾನೂನಾತ್ಮಕ ಹೋರಾಟಕ್ಕೆ ಸಂಬಂಧಿಸಿದಂತೆ ಚರ್ಚಿಸಿದರು.

ಹೈಕೋರ್ಟ್ 17 'ಎ' ಅಡಿ ತನಿಖೆಗೆ ಆದೇಶ ನೀಡಿದೆ. ಹಾಗಾಗಿ ಲೋಕಾಯುಕ್ತ ಪೊಲೀಸರು ತನಿಖೆ ನಡೆಸಲಿದ್ದಾರೆ. ಇಲ್ಲಿ ಸಿಎಂ ವಿರುದ್ಧ ಎಫ್‌ಐಆರ್ ಮಾಡಲು ಬರುವುದಿಲ್ಲ. ಸಿಎಂ ಪಾತ್ರದ ಬಗ್ಗೆ ಮಾತ್ರ ತನಿಖೆ ನಡೆಸಿ ವರದಿ ಕೊಡಬೇಕಾಗಿದೆ. ರಾಜ್ಯಪಾಲರ ಪಾತ್ರ ಇಲ್ಲಿಗೆ ಮುಗಿದಿದೆ.

– ಎ.ಎಸ್.ಪೊನ್ನಣ್ಣ, ಸಿಎಂ ಕಾನೂನು ಸಲಹೆಗಾರರು

ಸರಕಾರ ಅಸ್ಥಿರಗೊಳಿಸಲು ಸಾಧ್ಯವಿಲ್ಲ



ಕರ್ನಾಟಕದ ರಾಜ್ಯಪಾಲರು ಸರಕಾರವನ್ನು ಅಸ್ಥಿರಗೊಳಿಸಲು ಭಾರಿ ಪ್ರಯತ್ನ ಮಾಡುತ್ತಿದ್ದಾರೆ. ಈ ರೀತಿ ಪ್ರತಿಪಕ್ಷಗಳು ಆಡಳಿತದಲ್ಲಿರುವ ರಾಜ್ಯದಲ್ಲಿ ಅಲ್ಲಿನ ಸರಕಾರಗಳನ್ನು, ರಾಜಭವನವನ್ನು ಬಳಸಿಕೊಂಡು ಅಸ್ಥಿರಗೊಳಿಸುವುದು ಇದೇ ಮೊದಲಲ್ಲ. ಈಗಾಗಲೇ ತಮಿಳುನಾಡು ಸೇರಿದಂತೆ ಹಲವು ರಾಜ್ಯಗಳಲ್ಲಿ ಈ ಪ್ರಯತ್ನ ನಡೆಸಲಾಗಿತ್ತು. ಆದರೆ ಕರ್ನಾಟಕದಲ್ಲಿ ಇದು ಸಾಧ್ಯವಿಲ್ಲ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಹೇಳಿದ್ದಾರೆ. ಕರ್ನಾಟಕದ ಜನರು ದೆಹಲಿ ದರ್ಬಾರ್ ಮುಂದೆ ಮಂಡಿಯೂರಿ ಕೂರುವುದಕ್ಕೆ ರಾಜ್ಯ ಕಾಂಗ್ರೆಸ್ ಯಾವುದೇ ಕಾರಣಕ್ಕೂ ಅವಕಾಶ ನೀಡುವುದಿಲ್ಲ. ನಮ್ಮ ಸರಕಾರ ದೇಶದಲ್ಲಿರುವ ಉತ್ತಮ ಸರಕಾರವಾಗಿದ್ದು, ರಾಜ್ಯದ ಜನರ ಮಾತಿಗೆ ಮಾತ್ರ ಮನ್ನಣೆ ನೀಡುತ್ತೇವೆ ಹೊರತು, ದೆಹಲಿ ದರ್ಬಾರ್‌ಗೆ ಅಲ್ಲ. ಆದ್ದರಿಂದ ಕರ್ನಾಟ ಕದಲ್ಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಸರಕಾರವನ್ನು ಯಾವುದೇ ಕಾರಣಕ್ಕೂ ಅಸ್ಥಿರಗೊಳಿಸಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಜಗ್ಗದ ಸಿಎಂ; ಕಾನೂನು ಹೋರಾಟಕ್ಕೆ ರೆಡಿ

ಸಿದ್ದರಾಮಯ್ಯ ಅವರ ರಾಜೀನಾಮೆ ಪಡೆಯುವ ಲೆಕ್ಕಾಚಾರದಲ್ಲಿದ್ದ ಪ್ರತಿಪಕ್ಷಗಳ ಯೋಜನೆಗೆ ಮುಖ್ಯಮಂತ್ರಿಗಳು ಜಗ್ಗದೇ, ರಾಜಕೀಯ ಹಾಗೂ ಕಾನೂನು ಹೋರಾಟಕ್ಕೆ ಮುಂದಾಗಿದ್ದಾರೆ. ಹೈಕೋರ್ಟ್‌ನಲ್ಲಿ ಸಿದ್ದರಾಮಯ್ಯ ವಿರುದ್ಧ 17'ಎ'ನಲ್ಲಿರುವ ಪ್ರಕರಣದ ತನಿಖೆಗೆ ವಿಶೇಷ ಜನಪ್ರತಿನಿಧಿಗಳ ನ್ಯಾಯಾಲಯ ಅನುಮತಿ ನೀಡಿದರೂ, ಅದರ ವಿರುದ್ಧ ಹೈಕೋರ್ಟ್ ಹಾಗೂ ಸುಪ್ರೀಂ ಕೋರ್ಟ್‌ನಲ್ಲಿ ವಿವಿಧ ಹಂತದಲ್ಲಿ ಪ್ರಶ್ನಿಸಲು ಅವಕಾಶವಿರುವುದರಿಂದ ಇದೊಂದು ಸುದೀರ್ಘ ಪ್ರಕ್ರಿಯೆ ಎನ್ನುವುದು ಸ್ಪಷ್ಟವಾಗಿದೆ. ಆದ್ದರಿಂದ ಈ ಪ್ರಕರಣದಲ್ಲಿ ಜಗ್ಗದೇ ಮುಂದುವರಿಯಲು ಸಿಎಂ ತೀರ್ಮಾನಿಸಿದ್ದಾರೆ ಎನ್ನಲಾಗಿದೆ. ಹೈಕೋರ್ಟ್ ಏಕಸದಸ್ಯ ಪೀಠದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪರ ಅರ್ಜಿ ಸಲ್ಲಿಸುವಾಗಲೇ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ಈ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿ ಬರಲಿದೆ. ಆದ್ದರಿಂದ ಅದಕ್ಕೆ ಸಜ್ಜಾಗಿರುವಂತೆ ಸಿದ್ದರಾಮಯ್ಯ ಅವರಿಗೆ ಸಲಹೆ ನೀಡಿದ್ದರು. ಇದರೊಂದಿಗೆ ಸಿಂಘ್ವಿ ಅವರೂ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲು ಬೇಕಾದ ಅಗತ್ಯ ಸಿದ್ಧತೆಗಳನ್ನು, ವಾದ ಪೂರ್ಣಗೊಂಡ ಕೂಡಲೇ ಆರಂಭಿಸಿದ್ದಾರೆ. ಆದ್ದರಿಂದ ಹೈಕೋರ್ಟ್ ತೀರ್ಪು ಸಿದ್ದರಾಮಯ್ಯ ಅವರಿಗೆ ಹೆಚ್ಚು ಆಘಾತ ನೀಡಿಲ್ಲ ಎನ್ನುವ ಮಾತುಗಳನ್ನು ಆಪ್ತರು ಹೇಳಿದ್ದಾರೆ.

ಎರಡು ಸಭೆಗಳಲ್ಲಿ ಭಾಗವಹಿಸಿದ್ದ ಸಿಎಂ

ಹೈಕೋರ್ಟ್‌ನಲ್ಲಿ ತೀರ್ಪು ಪ್ರಕಟವಾಗುವುದು ನಿಗದಿಯಾಗಿದ್ದರೂ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಗಳವಾರ ಎರಡು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಖಾಸಗಿ ಹೋಟೆಲ್‌ನಲ್ಲಿ ನಡೆದ ರಸ್ತೆ ಸುರಕ್ಷತೆಗೆ ಸಂಬಂಧಿಸಿದ ಕಾರ್ಯಕ್ರಮದಲ್ಲಿ ಬೆಳಗ್ಗೆ 11ಗಂಟೆಗೆ ಭಾಗವಹಿಸಿದ್ದ ಸಿಎಂ, ತೀರ್ಪು ಪ್ರಕಟಗೊಳ್ಳುವ ಮೊದಲು ಅಲ್ಲಿಂದ ನಿರ್ಗಮಿಸಿದರು. ಬಳಿಕ ಸಂಜೆ ವೇಳೆಗೆ ಯಲಹಂಕದಲ್ಲಿ ಉದ್ಘಾಟನೆಗೊಂಡ ರಾಜ್ಯದ ಮೊದಲ ಅನಿಲ್ ಆಧಾರಿತ ವಿದ್ಯುತ್ ಸ್ಥಾವರ ಕಾರ್ಯಕ್ರಮದಲ್ಲಿ ಭಾಗವಹಿಸುವ ಮೂಲಕ ಪ್ರಕರಣದ ಬಗ್ಗೆ ಯಾವುದೇ ಆತಂಕವಿಲ್ಲ ಎನ್ನುವ ಸ್ಪಷ್ಟ ಸಂದೇಶ ರವಾನಿಸುವ ಪ್ರಯತ್ನ ಮಾಡಿದರು.

ರಾಜ್ಯಾದ್ಯಂತ ಬಿಗಿ ಭದ್ರತೆ

ರಾಜ್ಯಪಾಲರ ಕ್ರಮವನ್ನು ಹೈಕೋರ್ಟ್ ಎತ್ತಿಹಿಡಿದ ಬೆನ್ನಲ್ಲೇ ರಾಜ್ಯಾದ್ಯಂತ ಕಟ್ಟೆಚ್ಚರ ವಹಿಸಲಾಗಿದ್ದು, ಪೊಲೀಸ್ ಇಲಾಖೆ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಹೈಕೋರ್ಟ್ ತೀರ್ಪು ನೀಡಿರುವ ಕಾರಣ ಪ್ರತಿಪಕ್ಷಗಳಾದ ಬಿಜೆಪಿ, ಜೆಡಿಎಸ್ ರಾಜೀನಾಮೆಗೆ ಆಗ್ರಹಿಸಿ ಪ್ರತಿಭಟನೆ, ಮುತ್ತಿಗೆ ಹಾಕುವ ಸಾಧ್ಯತೆಯಿರುವುದರಿಂದ ಸಿಎಂ ನಿವಾಸಕ್ಕೆ ಪೊಲೀಸ್ ಭದ್ರತೆ ಹೆಚ್ಚಿಸಲಾಗಿದೆ.

ಬಿಜೆಪಿ ಸಭೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅರ್ಜಿ ವಜಾಗೊಳ್ಳುತ್ತಿದ್ದಂತೆ ರಾಜ್ಯ ಬಿಜೆಪಿ ಕಚೇರಿಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ಪದಾಧಿಕಾರಿಗಳ ತುರ್ತು ಸಭೆ ನಡೆಸಲಾಯಿತು. ಮುಂದಿನ ದಿನದಲ್ಲಿ ಈ ಪ್ರಕರಣವನ್ನು ಯಾವ ರೀತಿ ತೆಗೆದುಕೊಂಡು ಹೋಗಬೇಕು? ಮುಖ್ಯಮಂತ್ರಿಗಳ ರಾಜೀನಾಮೆಗೆ ಯಾವ ರೀತಿಯಲ್ಲಿ ಒತ್ತಡ ಹೇರಬಹುದು ಎನ್ನುವ ಬಗ್ಗೆ ಚರ್ಚೆ ನಡೆಸಿದ್ದಾರೆ.

ಹಳ್ಳಿಯಿಂದ ದಿಲ್ಲಿಯವರೆಗೂ ಸಿದ್ದರಾಮಯ್ಯರಿಗೆ ಬೆಂಬಲ

ಬಿಜೆಪಿ ಹಾಗೂ ಜೆಡಿಎಸ್ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಕುತಂತ್ರ ರೂಪಿಸಿದೆ. ಅವರ ಕುತಂತ್ರಕ್ಕೆ ನಮ್ಮ ಸರಕಾರ ಜಗ್ಗುವುದಿಲ್ಲ ಬಗ್ಗುವುದಿಲ್ಲ. ಇಡೀ ಪಕ್ಷ ಮತ್ತು ಸರಕಾರ ಮುಖ್ಯಮಂತ್ರಿಗಳೊಂದಿಗೆ ನಿಲ್ಲಲಿದೆ. ದೆಹಲಿಯಿಂದ ಹಳ್ಳಿಯವರೆಗೂ ಇಡೀ ಕಾಂಗ್ರೆಸ್ ಸಿದ್ದರಾಮಯ್ಯ ಅವರಿಗೆ ಬೆಂಬಲ ನೀಡಲಿದೆ. ನಾವು ಕಾನೂನು ಹೋರಾಟ ಮಾಡುತ್ತೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ದೋಸ್ತಿ ಹೋರಾಟಕ್ಕೆ ಇದು ಮೊದಲ ಹಂತದ ವಿಜಯ

ಭ್ರಷ್ಟ ಕಾಂಗ್ರೆಸ್ ಸರಕಾರದ ವಿರುದ್ಧ ಬಿಜೆಪಿ ನಿರಂತರ ಹೋರಾಟ ನಡೆಸಿತ್ತು. ಸ್ವತಃ ಸಿಎಂ ಕುಟುಂಬವೇ ಫಲಾನುಭವಿಗಳಾಗಿರುವ ಮುಡಾ ಹಗರಣ ವಿರುದ್ಧ ಹೋರಾಟ ಹಮ್ಮಿಕೊಂಡಿದ್ದೆವು. ಬೆಂಗಳೂರು-ಮೈಸೂರು ಪಾದಯಾತ್ರೆ ನಡೆಸಿ ಬಿಜೆಪಿ- ಜೆಡಿಎಸ್ ಒಟ್ಟಾಗಿ ಯಶಸ್ವಿ ಹೋರಾಟ ಮಾಡಿದ್ದು, ಇದು ಮೊದಲ ಹಂತದ ಜಯ. ಸಿಎಂ ಕೂಡಲೇ ರಾಜೀನಾಮೆ ನೀಡಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ನನ್ನ ನೈತಿಕತೆ ಏನು ಅನ್ನೋದು ಸಾಬೀತಾಗಲಿ

ಸಿಎಂ ಪ್ರಾಸಿಕ್ಯೂಷನ್ ವಿಚಾರವಾಗಿ ನಾನು ಯಾವುದೇ ಪ್ರತಿಕ್ರಿಯೆ ನೀಡಲ್ಲ. ನನ್ನ ನೈತಿಕತೆ ಏನು ಅನ್ನೋದು ಸಾಬೀತಾಗಲಿ. ಯಾವುದೇ ತೀರ್ಮಾನ ಆಗದೇ ಇದ್ದರೂ ನನ್ನನ್ನು ಒಂದು ಪ್ರಕರಣದಲ್ಲಿ ಆರೋಪಿ ಮಾಡುತ್ತಿದ್ದಾರೆ. ನನ್ನ ಮೇಲಿನ ಆರೋಪ ಎಲ್ಲ ಮುಗಿಯಲಿ, ನಂತರ ಮಾತನಾಡುತ್ತೇನೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಜಮ್ಮು ಕಾಶ್ಮೀರದಲ್ಲಿ ಮತದಾನ ಇಂದು

ಶ್ರೀನಗರ: ಜಮ್ಮು- ಕಾಶ್ಮೀ ರದ ವಿಧಾನಸಭಾ ಚುನಾ ವಣೆಗೆ ಬುಧವಾರ 2ನೇ ಹಂತದ ಮತದಾನ ನಡೆ ಯಲಿದೆ. ಆರು ಜಿಲ್ಲೆಗಳ 26 ಕ್ಷೇತ್ರಗಳಿಗೆ ಚುನಾವಣೆ ನಡೆಯಲಿದ್ದು, ಒಟ್ಟು 239 ಅಭ್ಯರ್ಥಿಗಳು ಕಣದಲ್ಲಿದ್ದಾರೆ. 25 ಲಕ್ಷ ಮತದಾರರು ಹಕ್ಕು ಚಲಾಯಿಸಲಿದ್ದಾರೆ.

ಫನ್‌ತರಂಗ
– ರಘುಪತಿ ಶೃಂಗೇರಿ –



ಪರಪ್ಪನ ಅಗ್ರಹಾರದಲ್ಲೇ ವಶಕ್ಕೆ ಪಡೆದ ಎಸ್‌ಐಟಿ

ಮುನಿರತ್ನ 12 ದಿನ ಕಸ್ಟಡಿಗೆ

ಬೆಂಗಳೂರು: ಶಾಸಕ ಮುನಿರತ್ನ ವಿರುದ್ಧದ ಅತ್ಯಾಚಾರ ಆರೋಪ ಪ್ರಕರಣಕ್ಕೆ ಸಂಬಂಧಿಸಿ ದಂತೆ 12 ದಿನ ಎಸ್‌ಐಟಿ ಕಸ್ಟಡಿಗೆ ನೀಡಿ 42ನೇ ಎಸಿಎಂಎಂ ಕೋರ್ಟ್ ಆದೇಶ ಹೊರಡಿಸಿದೆ. ಶಾಸಕ ಮುನಿರತ್ನ ವಿರುದ್ಧದ ಆರೋಪಗಳ ಹಿನ್ನೆಲೆಯಲ್ಲಿ ಸರಕಾರದ ಮೇಲೆ ಬಹಳಷ್ಟು ಒತ್ತಡಗಳಿತ್ತು. ಜಾತಿ ನಿಂದನೆ, ಅತ್ಯಾಚಾರ ಆರೋಪ ಪ್ರಕರಣ ವನ್ನು ಗಂಭೀರವಾಗಿ ಪರಿಗಣಿಸಿದ್ದ ರಾಜ್ಯ ಸರಕಾರ, ಈ ಪ್ರಕರಣದ ವಿಚಾರಣೆಗೆ ವಿಶೇಷ ತನಿಖಾ ತಂಡ ನೇಮಿಸಿತ್ತು. ಈ ಪ್ರಕರಣದ ವಿಚಾರಣೆ ಕೈಗೆತ್ತಿಕೊಂಡು ವಿಶೇಷ ತನಿಖಾ ತಂಡವು ಶಾಸಕ ಮುನಿರತ್ನ ಅವರನ್ನು ಬಾಡಿ ವಾರೆಂಟ್ ಮೇಲೆ ಕಸ್ಟಡಿಗೆ ನೀಡುವಂತೆ ಎಸ್‌ಐಟಿ ಮನವಿ ಮಾಡಿತ್ತು. ಮಂಗಳವಾರ ಮುನಿರತ್ನ ವಿಡಿಯೊ ಕಾನ್ಫರೆನ್ಸ್ ಮೂಲಕ ವಿಶೇಷ ನ್ಯಾಯಾಲಯಕ್ಕೆ ಹಾಜರಾಗಿದ್ದರು. ವಿಚಾರಣೆ ನಡೆಸಿದ ಕೋರ್ಟ್ ಶಾಸಕ ಮುನಿರತ್ನ ಅವರನ್ನು ಅಕ್ಟೋಬರ್ 5ರ ವರೆಗೆ ಎಸ್‌ಐಟಿ ಕಸ್ಟಡಿಗೆ ನೀಡಿ ಆದೇಶಿಸಿದೆ. ಆದೇಶದ ಪ್ರತಿ ಪಡೆದಿರುವ ಎಸ್‌ಐಟಿ, ಪರಪ್ಪನ ಅಗ್ರಹಾರ ಜೈಲಿನತ್ತ ತೆರಳಿ ಬಾಡಿ ವಾರೆಂಟ್ ಮೇಲೆ ಮುನಿರತ್ನ ಅವರನ್ನು ವಶಕ್ಕೆ ಪಡೆದಿದ್ದಾರೆ.

ಬೆದರಿಕೆ: ಇಬ್ಬರ ವಿರುದ್ಧ ಎಫ್‌ಐಆರ್

ಮುನಿರತ್ನ ವಿರುದ್ಧ ಮಹಿಳೆಯೊಬ್ಬರು ನೀಡಿರುವ ದೂರಿನಲ್ಲಿ ಸಾಕ್ಷಿ ಹೇಳದಂತೆ ಬೆದರಿಕೆ ಹಾಕಿದ ಆರೋಪದಡಿ ಶಾಸಕರ ಬೆಂಬಲಿಗರಿಬ್ಬರ ವಿರುದ್ಧ ಯಶವಂತಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಈ ಸಂಬಂಧ ಠಾಣಾ ವ್ಯಾಪ್ತಿಯ ವ್ಯಕ್ತಿಯೊಬ್ಬರು, ಬಿಜೆಪಿ ಕಾರ್ಯಕರ್ತೆ ಸುನಂದಮ್ಮ ಹಾಗೂ ಮತ್ತೊಬ್ಬ ವ್ಯಕ್ತಿಯ ವಿರುದ್ಧ ದೂರು ನೀಡಿದ್ದಾರೆ. 'ಸೆ.21ರ ಬೆಳಗ್ಗೆ 11.30ಕ್ಕೆ ಬಿಜೆಪಿ ಕಾರ್ಯಕರ್ತೆ ಸುನಂದಮ್ಮ ಮತ್ತು ಮತ್ತೊಬ್ಬ ವ್ಯಕ್ತಿ ಮನೆಗೆ ಬಂದು, ಮುನಿರತ್ನ ವಿರುದ್ಧ ಮಹಿಳೆಯೊಬ್ಬರು ನೀಡಿದ ದೂರಿನಲ್ಲಿ ನಿಮ್ಮ ತಾಯಿ ಸಾಕ್ಷಿದಾರರಾಗಿದ್ದಾರೆ. ಶಾಸಕರ ವಿರುದ್ಧ ಸಾಕ್ಷಿ ಹೇಳಿದರೆ ಮನೆಗೆ ಬೆಂಕಿ ಹಚ್ಚಿ ನಾಶ ಮಾಡುತ್ತೇವೆ ಎಂದು ಬೆದರಿಸಿದರು ಎಂದು ಅವರು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಹಿಂದೂಗಳಿಗೆ ಗುಡಿಗಳ ನಿರ್ವಹಣೆ ಬಿಟ್ಟುಕೊಡಿ

ದೆಹಲಿ: ಸರಕಾರದ ನಿಯಂತ್ರಣದಿಂದ ದೇವಸ್ಥಾನಗಳನ್ನು ಮುಕ್ತಗೊಳಿಸದಿದ್ದರೆ,

ದೇಶವ್ಯಾಪಿ ಅಭಿಯಾನ ಹಮ್ಮಿಕೊಳ್ಳಲಾಗುವುದು ಎಂದು ವಿಎಚ್‌ಪಿ ಜಂಟಿ ಪ್ರಧಾನ ಕಾರ್ಯದರ್ಶಿ ಸುರೇಂದ್ರ ಜೈನ್ ಎಚ್ಚರಿಕೆ ನೀಡಿದ್ದಾರೆ. ಹಿಂದೂ ದೇವಾಲಯಗಳನ್ನು ಸರಕಾರಗಳು ಹಿಂದೂಗಳಿಗೆ ಸೇರಿದ ಸಂಸ್ಥೆಗಳಿಗೆ ಬಿಟ್ಟುಕೊಡದಿದ್ದರೆ ನ್ಯಾಯಾಲಯದಲ್ಲೂ ಹೋರಾಟ ನಡೆಸಲಾಗುವುದು. ಈ ಅಭಿಯಾನದ ಭಾಗವಾಗಿ ಮೊದಲು ಎಲ್ಲ ರಾಜ್ಯಗಳಲ್ಲೂ ಪ್ರತಿಭಟನೆ ನಡೆಸಿ, ಸಿಎಂಗಳ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಗುವುದು ಎಂದರು.

ಹರಿಣಿ ಲಂಕಾ ಪ್ರಧಾನಿ

ಕೊಲಂಬೊ: ಶ್ರೀಲಂಕಾದ ನೂತನ ಪ್ರಧಾನ ಮಂತ್ರಿ ಯಾಗಿ ಹರಿಣಿ ಅಮರ ಸೂರಿಯಾ ಅವರು ಮಂಗಳವಾರ ಪ್ರಮಾಣ ವಚನ ಸ್ವೀಕರಿಸಿದರು. ಆ ಮೂಲಕ ಶ್ರೀಲಂಕಾ ದಲ್ಲಿ ಪ್ರಧಾನಿ ಹುದ್ದೆ ಅಲಂಕರಿಸಿದ 2ನೇ ಮಹಿಳೆ ಎನಿಸಿಕೊಂಡಿದ್ದಾರೆ.

ಇಸ್ರೇಲ್ ದಾಳಿಗೆ ಅಕ್ಷರಶಃ ನಲುಗಿದ ಲೆಬನಾನ್

ಪ್ರತಿ ನಿಮಿಷಕ್ಕೂ ಹೆಚ್ಚುತ್ತಿರುವ ಸಾವಿನ ಸಂಖ್ಯೆ

ಲೆಬನಾನ್: ಸಾವಿನ ಸಂಖ್ಯೆ 558ಕ್ಕೆ ಏರಿಕೆ

ಜೆರುಸಲೆಮ್/ಬೈರೂತ್: ಕಳೆದ 8 ದಿನಗಳಿಂದ ಇಸ್ರೇಲ್ ಲೆಬನಾನ್ ಮೇಲೆ ನಿರಂತರ ದಾಳಿ ನಡೆಸುತ್ತಿದ್ದು, ಲೆಬನಾನ್ ಜನತೆ ಅಕ್ಷರಶಃ ನಲುಗಿದ್ದಾರೆ.

ಮೃತಪಟ್ಟವರ ಸಂಖ್ಯೆ ಈವರೆಗೆ 558ಕ್ಕೆ ಏರಿಕೆಯಾಗಿದೆ. 50 ಮಕ್ಕಳು, 97 ಮಹಿಳೆಯರು ಸಾವನ್ನಪ್ಪಿದ್ದಾರೆ. ಗಾಯಗೊಂಡವರ ಸಂಖ್ಯೆ ಕನಿಷ್ಠ 1835 ಎಂದು ಲೆಬನಾನ್ ಆರೋಗ್ಯ ಇಲಾಖೆ ಮಾಹಿತಿ ನೀಡಿದೆ. ಸಾವಿನ ಸಂಖ್ಯೆ ಮತ್ತಷ್ಟು ಏರಿಕೆಯಾಗುವ ಸಂಭವವಿದೆ. 1990ರ ಬಳಿಕ ಲೆಬನಾನ್‌ಗೆ ಇದು 'ಡೆಡ್ಲಿಯೆಸ್ಟ್ ಡೇ' ಎಂದು ಹೇಳಲಾಗಿದೆ.

ಲೆಬನಾನ್ ನಗರಗಳಲ್ಲಿನ ಜನರು ಜೀವ ರಕ್ಷಣೆಗೆ ಮನೆ ತೊರೆಯುವುದು ಅನಿವಾರ್ಯವಾಗಿದೆ. ಆದರೆ ಹೋಗುವುದೆಲ್ಲಿಗೆ ಎಂಬ ಗೊಂದಲದಲ್ಲಿ ಅಲ್ಲಿನ ನಾಗರಿಕರು ಕಂಗೆಟ್ಟಿದ್ದಾರೆ. ಇನ್ನೊಂ ದೆಡೆ ಪ್ರತಿ ನಿಮಿಷಕ್ಕೂ ಹೆಚ್ಚುತ್ತಿರುವ ಸಾವಿನ ಸಂಖ್ಯೆ, ಗಾಯಾಳುಗಳಿಂದ ಆಸ್ಪತ್ರೆಗಳು ಭರ್ತಿಯಾಗಿದ್ದು, ವೈದ್ಯಕೀಯ ಸೇವೆ ನೀಡಲು ಸಿಬ್ಬಂದಿ ಹರಸಾಹಸಪಡುತ್ತಿದ್ದಾರೆ.

- ಸಿರಿಯಾದತ್ತ 500ಕ್ಕೂ ಅಧಿಕ ಜನರ ಪ್ರಯಾಣ
- ಹಿಂಸಾಚಾರ ತಕ್ಷಣ ನಿಲ್ಲಿಸುವಂತೆ ಯುನಿಸೆಫ್ ಕರೆ
- ಲೆಬನಾನ್ ತೊರೆಯುವಂತೆ ಅಮೆರಿಕಾ ಪ್ರಜೆಗಳಿಗೆ ಸೂಚನೆ
- ಯುದ್ಧ ಸಹಿಸುವ ಶಕ್ತಿ ಇಲ್ಲ ಎಂದ ಯುಎನ್

ವಿವರಪುಟ → 8

ಉಕ್ರೇನ್: ಶಾಂತಿ ಸ್ಥಾಪನೆಗೆ ಸಹಕಾರ

ನ್ಯೂಯಾರ್ಕ್: ಅಮೆರಿಕ ಪ್ರವಾಸದಲ್ಲಿರುವ ಪ್ರಧಾನಿ ಮೋದಿ ಉಕ್ರೇನ್ ಅಧ್ಯಕ್ಷ ವ್ಲಾದಿಮಿರ್ ಝೆಲೆನ್ಸ್ಕಿ ಭೇಟಿಯಾಗಿದ್ದು, ಉಕ್ರೇನ್-ರಷ್ಯಾ ಸಂಘರ್ಷ ಕೊನೆಗೊಂಡು ಸ್ಥಿರತೆ ಸ್ಥಾಪನೆಗೆ ಎಲ್ಲ ರೀತಿಯ ಸಹಕಾರ ನೀಡಲು ಸಿದ್ಧ ಎಂದು ಹೇಳಿದ್ದಾರೆ.

ಎನ್‌ಕೌಂಟರ್; ಶವ ಹೊತ್ತೊಯ್ದ ನಕ್ಸಲರು

ಸುಕ್ಮಾ: ಛತ್ತೀಸ್‌ಗಢದ ಸುಕ್ಮಾ ಜಿಲ್ಲೆಯಲ್ಲಿ ಮಂಗಳವಾರ ನಡೆದ ಎನ್‌ಕೌಂಟರ್‌ನಲ್ಲಿ ಇಬ್ಬರು ನಕ್ಸಲರು ಹತರಾಗಿದ್ದಾರೆ. ಆದರೆ ನಕ್ಸಲರೇ ಹತರಾದವರ ಮೃತದೇಹಗಳನ್ನು ತೆಗೆದುಕೊಂಡು ಹೋಗಿದ್ದಾರೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಕಿರಣ್ ಚವ್ಹಾಣ್ ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಅಗಲಿದ ಜೀವ

ಬಾಲನಗೌಡ ಪಾಟೀಲ್

ರಾಮದುರ್ಗ: ತಾಲೂಕಿನ ಗೊಡಚಿ ಗ್ರಾಮ ಪಂಚಾಯತಿ ಮಾಜಿ ಸದಸ್ಯರು ಹಾಗೂ ಪಿಕೆಪಿಎಸ್ ಮಾಜಿ ಸದಸ್ಯರಾದ ಬಾಲನಗೌಡ ಮ. ಪಾಟೀಲ (82) ಭಾನುವಾರ ನಿಧನರಾಗಿದ್ದಾರೆ. ಮೃತರು ಪತ್ನಿ, ಪುತ್ರರು, ಪುತ್ರಿಯರು ಹಾಗೂ ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ಮೃತರ ಆತ್ಮಕ್ಕೆ ಸಮಸ್ತ ಗೊಡಚಿ ಗ್ರಾಮದ ಹಿತೈಷಿಗಳು ಹಾಗೂ ಹಿರಿಯರು ಸಂತಾಪ ಸೂಚಿಸಿದ್ದಾರೆ.

ಗೆಜೆಟಿಯರ್
ಪ್ರತಿ ಮಂಗಳವಾರ

ಅಂತಾರಾಷ್ಟ್ರೀಯ ಮಟ್ಟದ ಉತ್ಸವವಾಗಿ ಆಚರಿಸಲು ಸಿದ್ಧತೆ: ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್

ಕಿತ್ತೂರು ಉತ್ಸವ ಪೂರ್ವಭಾವಿ ಸಭೆ

ಚನ್ನಮ್ಮನ ಕಿತ್ತೂರು: ಚನ್ನಮ್ಮನ ವಿಜಯೋತ್ಸವದ 200ನೇ ವರ್ಷಾಚರಣೆ ಹಿನ್ನೆಲೆಯಲ್ಲಿ ಪ್ರಸಕ್ತ ವರ್ಷ ಚನ್ನಮ್ಮನ ಕಿತ್ತೂರು ಉತ್ಸವವನ್ನು ವಿಶ್ವ ಮಟ್ಟದ ಕಾರ್ಯಕ್ರಮವನ್ನಾಗಿ ಅದ್ದೂರಿಯಾಗಿ ಆಚರಿಸಲಾಗುವುದು. ಈ ನಿಟ್ಟಿನಲ್ಲಿ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಹೇಳಿದರು.

ಕಿತ್ತೂರಿನ ಶೆಟ್ಟರ ಕಲ್ಯಾಣ ಮಂಟಪದಲ್ಲಿ ಮಂಗಳವಾರ ಜರುಗಿದ ಚನ್ನಮ್ಮನ ಕಿತ್ತೂರು ಉತ್ಸವದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಈ ಬಾರಿಯ 200ನೇ ವರ್ಷದ ವಿಜಯೋತ್ಸವದ ಪ್ರಯುಕ್ತ ದೇಶದ ವಿವಿಧ ರಾಜ್ಯಗಳ ಆಹಾರ ಪದ್ಧತಿಯನ್ನು ಪರಿಚಯಿಸುವ ನಿಟ್ಟಿನಲ್ಲಿ ಅನ್ನೋತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಗುವುದು. ಈ ಬಾರಿಯ ಉತ್ಸವದ ನೆನಪಿಗಾಗಿ ರಾಣಿ ಚನ್ನಮ್ಮನ ಭಾವಚಿತ್ರವಿರುವ ಅಂಚೆ ಚೀಟಿ ಬಿಡುಗಡೆಗಾಗಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ವಾಯುವ್ಯ ಕರ್ನಾಟಕ ಸಾರಿಗೆ ಹೆಸರನ್ನು ಕಿತ್ತೂರು ಕರ್ನಾಟಕ ಸಾರಿಗೆ ಸಂಸ್ಥೆ ಎಂದು ನಾಮಕರಣಕ್ಕೆ ಹಾಗೂ ರಾಣಿಚನ್ನಮ್ಮ ವಿಶ್ವವಿದ್ಯಾಲಯದ ಬದಲಾಗಿ ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ' ಎಂದು ಮರುನಾಮಕರಣಕ್ಕಾಗಿ ಈಗಾಗಲೇ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ ಎಂದರು.

ಚನ್ನಮ್ಮನ ಕಿತ್ತೂರು ಉತ್ಸವದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರು ಮಾತನಾಡಿದರು.

ಏರ್ ಶೋ ಆಯೋಜನೆಗೆ ಕ್ರಮ : ಈ ಬಾರಿಯ ಕಿತ್ತೂರು ಉತ್ಸವದ ಅಂಗವಾಗಿ ಏರ್ ಶೋ ಆಯೋಜನೆಗಾಗಿ ಕೇಂದ್ರ ರಕ್ಷಣಾ ಸಚಿವಾಲಯವನ್ನು ಸಂಪರ್ಕಸಲಾಗಿದೆ. ಏರ್ ಶೋ ನಡೆಯುವ ವಿಶ್ವಾಸವಿದೆ, ಉತ್ಸವದ ಅಂಗವಾಗಿ ಪಾರಂಪರಿಕ ಕ್ರೀಡೆಗಳ ಆಯೋಜನೆಗೆ ಪಟ್ಟಿ ತಯಾರಿಸಲಾಗುತ್ತಿದ್ದು, ಅಂತರಾಷ್ಟ್ರೀಯ ಮಟ್ಟದ ಕುಸ್ತಿ ಆಯೋಜನೆಗೆ ಚಿಂತಿಸಲಾಗುವದು ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಹೇಳಿದರು..

ಕಿತ್ತೂರ ಶಾಸಕರಾದ ಬಾಬಾಸಾಹೇಬ ಪಾಟೀಲ ಅವರು ಮಾತನಾಡಿ, ಈ ಬಾರಿಯ ಕಿತ್ತೂರು ಉತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲು ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದರ.. ಈ ಬಾರಿಯ ಯುವ ಅಧಿಕಾರಿಗಳ ನೇತೃತ್ವದಲ್ಲಿ ಅತ್ಯಂತ ಹುಮಸ್ಸಿನಿಂದ ಈ ಬಾರಿಯ ಉತ್ಸವವನ್ನು ಅದ್ದೂರಿಯಾಗಿ ಆಚರಿಸಲು ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ ಎಂದು ಹೇಳಿದರು.

ಈ ಬಾರಿಯ ಉತ್ಸವದಲ್ಲಿ ಯಾವುದೇ ಲೋಪಗಳಿಗೆ ಆಸ್ಪದ ನೀಡದಂತೆ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ ಕಿತ್ತೂರು ಉತ್ಸವದ ಯಶಸ್ವಿಗೆ ಸಾರ್ವಜನಿಕರ ಪಾಲ್ಗೊಳುವಿಕೆ ಹಾಗೂ ಜವಾಬ್ದಾರಿ ಕೂಡ ಅಷ್ಟೆ ಮಹತ್ವದ್ದಾಗಿದೆ. ಉತ್ಸವದ ಯಶಸ್ಸಿಗೆ ಪ್ರತಿಯೊಬ್ಬರು ಕೈಜೋಡಿಸಬೇಕು ಎಂದು ಶಾಸಕ ಬಾಬಾಸಾಹೇಬ ಪಾಟೀಲ ಮನವಿ ಮಾಡಿಕೊಂಡರು.

ಸಾನಿಧ್ಯ ವಹಿಸಿ ಮಾತನಾಡಿದ ಕಲ್ಮಠದ ರಾಜಗುರು ಸಂಸ್ಥಾನ ಮಠದ ಮಡಿವಾಳ ರಾಜಯೋಗಿಂದ್ರ ಸ್ವಾಮಿಜಿಗಳು, ಈ ಬಾರಿಗೆ ವಿಜಯೋತ್ಸವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸುವುದು ಸರಕಾರದ ಜೊತೆಗೆ ಸಾರ್ವಜನಿಕರ ಜವಾಬ್ದಾರಿಯು ಆಗಿದೆ. ಈ ಬಾರಿಯ ಉತ್ಸವ ಸ್ಮರಣೀಯ ಉತ್ಸವವಾಗಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ ಸಿ.ಇ.ಓ ರಾಹುಲ್ ಶಿಂಧೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ, ಪ್ರಶಿಕ್ಷಣಾರ್ಥಿ ಆಯ್.ಎ.ಎಸ್. ಅಧಿಕಾರಿ ದಿನೇಶಕುಮಾರ ಮೀನಾ, ಬೈಲಹೊಂಗಲ ಉಪವಿಭಾಗಾಧಿಕಾರಿ ಪ್ರಭಾವತಿ ಫಕೀರಪೂರ, ಬೆಳಗಾವಿ ಉಪ ವಿಭಾಗಾಧಿಕಾರಿ ಶ್ರವಣ ನಾಯಕ, ಚಿಕ್ಕೋಡಿ ಉಪ ವಿಭಾಗಾಧಿಕಾರಿ ಸಂಪಗಾವಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

3 ದಿನಗಳ ಸಂಭ್ರಮದ ಉತ್ಸವ

ಕಿತ್ತೂರು ಉತ್ಸವದ ಮೆರವಣಿಗೆಯಲ್ಲಿ ಕೇವಲ ನಂದಿ ಧ್ವಜಕ್ಕೆ ಅನುಮತಿಸಲಾಗುವುದು. ಅ.23 ರಿಂದ ಮೂರು ದಿನಗಳ ಕಾಲ ಜರುಗಲಿರುವ ಉತ್ಸವದಲ್ಲಿ ರಾಷ್ಟ್ರಮಟ್ಟದ ಕಲಾವಿದರ ಜತೆಗೆ ಸ್ಥಳೀಯ ಕಲಾವಿದರುಗಳಿಗೆ ಆದ್ಯತೆ ನೀಡಲಾಗುವದು ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ತಿಳಿಸಿದರು.

CIN: L67100MH1995PLC093797
Regd. Office: IIFL House, Sun Infotech Park, Road No. 16V, Plot No.B-23, Thane Industrial Area, Wagle Estate, Thane - 400604
Tel: (91-22) 41035000 • Fax: (91-22) 25806654
E-mail: reach@iifl.com • Website: www.iifl.com

IIFL FINANCE

ಚಿನ್ನದ ಆಭರಣಗಳ ಹರಾಜಿನ ಸಾರ್ವಜನಿಕ ಪ್ರಕಟಣೆ

ನಾವು, ಐಐಎಫ್‌ಎಲ್ ಫೈನಾನ್ಸ್ ಲಿಮಿಟೆಡ್ ("IIFL") ತಮ್ಮ ಸಾಲವನ್ನು ಕ್ರಮಬದ್ಧಗೊಳಿಸದ ಅಥವಾ ಬಾಕಿ ಇರುವ ಮೊತ್ತವನ್ನು ಪಾವತಿಸದ ಡೀಫಾಲ್ಟ್ ಮಾಡಿದ ಗ್ರಾಹಕರ ಚಿನ್ನದ ಆಭರಣಗಳನ್ನು ಹರಾಜು ಮಾಡುತ್ತಿದ್ದೇವೆ ಎಂದು ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ಈ ಮೂಲಕ ಎಲ್ಲಾ ಸಂಬಂಧಪಟ್ಟ ಸಾಲಗಾರರಿಗೆ ಸೂಚಿಸಲಾಗಿದೆ. ನೋಂದಾಯಿತ ಹರಾಜು ಸೂಚನೆಗಳು ಮತ್ತು ಪುನರಾವರ್ತಿತ ಜ್ಞಾಪನೆಗಳ ಮೂಲಕ ತಿಳಿಸಲಾಗಿದೆ. ಈ ಕೆಳಗಿನ ಸಾಲ ಖಾತೆಗಳಲ್ಲಿ ಅಡವು ಇರಿಸಲಾದ ಚಿನ್ನದ ಆಭರಣಗಳ ಸಾರ್ವಜನಿಕ ಏಲಂ ಅನ್ನು **28.09.2024** ರಂದು ಬೆಳಗ್ಗೆ ಗಂಟೆ **10** ರಿಂದ ಈ ಕೆಳಗಿನ ಜಿಲ್ಲಾ ಕೇಂದ್ರಗಳಲ್ಲಿ ನಡೆಸಲಾಗುತ್ತದೆ **ಬಿಜಾಪುರ-'ಶಬರಿ ನಿಲಯ', ಮೊದಲ ಮಹಡಿ, ಎದುರು. ರಿಲಯನ್ಸ್ ಟ್ರೆಂಡ್ಸ್, ವಿಜಯಪುರ ಮುಖ್ಯ ರಸ್ತೆ, ಸಂಗೋಳಿ ರಾಯಣ್ಣ ಸರ್ಕಲ್, ಸಿಂದಗಿ ಟೌನ್, ವಿಜಯಪುರ ಜಿಲ್ಲೆ, ಕರ್ನಾಟಕ** -586128. ಸ್ಥಳ ಅಥವಾ ದಿನಾಂಕದಲ್ಲಿನ ಯಾವುದೇ ಬದಲಾವಣೆಯನ್ನು (ಏನಾದರೂ ಇದ್ದರೆ) ಏಲಂನ ಕೇಂದ್ರದಲ್ಲಿ ದರ್ಶಿಸಲಾಗುತ್ತದೆ. ಯಾವುದೇ ಕಾರಣಕ್ಕಾಗಿ ಒಂದು ವೇಳೆ ಇಲ್ಲಿ ನಮೂದಿಸಲಾದ ದಿನಾಂಕದಂದು ಏಲಂ ನಡೆಸಲು ಸಾಧ್ಯವಾಗದಿದ್ದರೆ ಅಥವಾ ಅದೇ ದಿನ ಏಲಂ ಮುಗಿಯದಿದ್ದರೆ, ಅವೇ ನಿಯಮಗಳು ಮತ್ತು ಪರತ್ತುಗಳೊಂದಿಗೆ ನಂತರದ ಯಾವುದೇ ದಿನಾಂಕದಂದು ಸದರಿ ಏಲಂ ಅನ್ನು ನಡೆಸುವ ಅಥವಾ ಮುಂದುವರಿಸುವ ಹಕ್ಕನ್ನು ಐಐಎಫ್‌ಎಲ್ ಕಾದಿರಿಸಿಕೊಂಡಿದೆ. ಗ್ರಾಹಕರು ಮರಣಹೊಂದಿದರೆ, ಹರಾಜಿಗೆ ಸಂಬಂಧಿಸಿದ ಎಲ್ಲಾ ಷರತ್ತುಗಳು ನಾಮನಿರ್ದೇಶಿತ/ಕಾನೂನುಬದ್ಧ ಉತ್ತರಾಧಿಕಾರಿಗಳಿಗೆ ಅನ್ವಯವಾಗುತ್ತವೆ.

ಚಿನ್ನದ ಸಾಲದ ಖಾತೆ ಸಂಖ್ಯೆ: GL22689995, GL22948254, GL23497829, GL24412765, GL24845909, GL25412744, GL26024109, GL26563145, GL26783776, GL26802301, GL27211590, GL27225042, GL27248779, GL27751831, GL27778713, GL28037475, GL28055395, GL28096970, GL28218146, GL28251456, GL28278089, GL28296049, GL28698025, GL28701540, GL28727787, GL28728045, GL28776624, GL28792803, GL28964897, GL29013175, GL29022050, GL29188692, GL29838752, GL29848086, GL29943662, GL29963174, GL29990193, GL30002353, GL30009956, GL30117587, GL30139297, GL30146498, GL30245290, GL30256854, GL30429758, GL30471760, GL30485839, GL30497640, GL30554038, GL30887527, GL18843999, GL19182442, GL20286466, GL21355626, GL23512323, GL24142152, GL25278911, GL25511480, GL25957087, GL26158742, GL26200722, GL26322591, GL26534121, GL26618462, GL26729844, GL26773824, GL26779470, GL26779579, GL26983357, GL27052770, GL27354582, GL27466336, GL27567809, GL27692965, GL27707713, GL27719195, GL27945714, GL27964219, GL28113152, GL28134118, GL28154208, GL28339107, GL28356516, GL28498334, GL28504405, GL28563456, GL28577022, GL28578837, GL28581061, GL28586619, GL28586927, GL28587130, GL28589776, GL28681783, GL28772429, GL28793004, GL28846632, GL28846652, GL28862537, GL28863253, GL28867217, GL28867920, GL28868049, GL28868094, GL29142841, GL29152666, GL29165295, GL29180422, GL29338848, GL29355932, GL29506189, GL29526187, GL29668530, GL29686368, GL29754290, GL29772324, GL29809336, GL29825526, GL29848626, GL29988126, GL30201680, GL30213682, GL30227819, GL30234840, GL30288990, GL30295086, GL30341266, GL30354637, GL30361718, GL30441850, GL30561988, GL30567904, GL30575021, GL30602510, GL30607273, GL30629187, GL30643400, GL30659853, GL30766294, GL30770281, GL31024830, GL24667153, GL24781627, GL24961366, GL25503410, GL26326177, GL27575159, GL27584328, GL27790623, GL27979616, GL27996431, GL28263091, GL28379960, GL28409394, GL28512083, GL28527691, GL28566736, GL28584730, GL28773629, GL28794007, GL29293430, GL29299472, GL29359252, GL29381444, GL29407887, GL29428130, GL29729316, GL29913940, GL29930020, GL29940609, GL29962198, GL30074304, GL30087546, GL30433650, GL30518622, GL30522580, GL30694516, GL30716991, GL30794133, GL32009575, GL32590795

ಹರಾಜನ್ನು ''ಎಲ್ಲಿ ಇದ್ದಾರೋ ಹಾಗೆ'', ''ಏನು ಇದೆಯೋ ಹಾಗೆ'' ಮತ್ತು ''ಇರುವುದೆಲ್ಲಾ ಇದೆ'' ಆಧಾರದ ಮೇಲೆ ನಡೆಸಲಾಗುವುದು ಮತ್ತು ಐಐಎಫ್‌ಎಲ್ ಗುಣಮಟ್ಟ, ಶುದ್ಧತೆ, ಕ್ಯಾರೇಟೇಜ್, ತೂಕ ಅಥವಾ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಾತಿನಿಧ್ಯ ಅಥವಾ ವಾರಂಟಿಗಳನ್ನು ನೀಡುವುದಿಲ್ಲ. ಐಐಎಫ್‌ಎಲ್, ತನ್ನ ಸಂಪೂರ್ಣ ವಿವೇಚನೆಯಿಂದ, ಹರಾಜು ಪಟ್ಟಿಯಿಂದ ಯಾವುದೇ ಖಾತೆಗಳನ್ನು ಮುಂದೂಡಬಹುದು ಅಥವಾ ತೆಗೆದುಹಾಕಬಹುದು, ಯಾವುದೇ ಪೂರ್ವ ಸೂಚನೆ ಇಲ್ಲದೆ ಮತ್ತು ಯಾವುದೇ ಕಾರಣವನ್ನು ನೀಡದೆಯೇ ಮತ್ತು ಯಾವುದೇ ಕಾರಣವನ್ನು ನೀಡದೆ ಯಾವುದೇ ಅಥವಾ ಎಲ್ಲಾ ಬಿಡ್‌ಗಳು ಅಥವಾ ಕೊಡುಗೆಗಳನ್ನು ತಿರಸ್ಕರಿಸಬಹುದು. ಡೀಫಾಲ್ಟ್ ಮಾಡಿದ ಸಾಲಗಾರ(ರು), ವಾಗ್ದಾನ ಮಾಡಿದ ಆಭರಣಗಳು ಮತ್ತು ಇತರ ವಿವರಗಳನ್ನು ಆಯಾ ಶಾಖೆಯಲ್ಲಿ ಪ್ರದರ್ಶಿಸಲಾಗಿದೆ. ಸಾಲ ಮರುಪಾವತಿ ಮಾಡದ ಸಾಲಗಾರನಿ(ರಿ)ಗೆ ಇತ್ತೀಚಿನ ಬಡ್ಡಿ ಮತ್ತು ಅನ್ವಯವಾಗುವ ಎಲ್ಲಾ ಶುಲ್ಕಗಳು ಸೇರಿದಂತೆ ಸಂಪೂರ್ಣ ಬಾಕಿಗಳನ್ನು ಮರುಪಾವತಿಸಿ ಅವರ ಸಾಲದ ಖಾತೆಯನ್ನು ಮುಚ್ಚುವ ಅಥವಾ ಕ್ರಮಬದ್ಧಗೊಳಿಸುವ ಆಯ್ಕೆಯನ್ನು ಈ ಪ್ರಕಟಣೆಯು ಪ್ರಕಟಗೊಂಡ ನಂತರವೂ ಹೊಂದಿರುತ್ತಾರೆ, ಆದರೆ ಯಾವುದೇ ಸಂದರ್ಭದಲ್ಲಿ ಅದನ್ನು ಹರಾಜಿನ ದಿನಾಂಕದವರೆಗೆ ಮಾಡಬೇಕು; ಅದು ವಿಫಲವಾದರೆ, ಅಡಮಾನ ಇಟ್ಟಿರುವ ಚಿನ್ನದ ಆಭರಣಗಳನ್ನು ಮಾರಾಟ ಮಾಡಲಾಗುತ್ತದೆ ಮತ್ತು ಬಾಕಿಗಳನ್ನು (ಯಾವುದಾದರೂ ಇದ್ದರೆ) ಬಡ್ಡಿ ಮತ್ತು ವೆಚ್ಚಗಳೊಂದಿಗೆ ಮರುಪಡೆಯಲಾಗುತ್ತದೆ. ಆದಾಗ್ಯೂ, ಈ ಪ್ರಕಟಣೆಯ ನಂತರ ಅಥವಾ ನಂತರ ಮುಚ್ಚಲಾದ ಅಥವಾ ಕ್ರಮಬದ್ಧಗೊಳಿಸಲಾದ ಡೀಫಾಲ್ಟರ್ ಸಾಲಗಳು ಪ್ರಮಾಣಾನುಗುಣವಾದ ಪ್ರಕಟಣೆ ಶುಲ್ಕವನ್ನು ಭರಿಸಬೇಕಾಗುತ್ತದೆ. ಎರವಲುದಾರರು ತಮ್ಮ ಇತ್ತೀಚಿನ ಬ್ಯಾಂಕ್ ಖಾತೆಯ ವಿವರಗಳನ್ನು ಸಲ್ಲಿಸಲು/ಅಪ್‌ಡೇಟ್ ಮಾಡಲು ವಿನಂತಿಸಲಾಗಿದೆ, ಯಾವುದಾದರೂ ಇದ್ದರೆ ಹೆಚ್ಚುವರಿ ಹರಾಜು ಆದಾಯದ ಮರುಪಾವತಿಗಾಗಿ.

ವಿವರವಾದ ಮಾಹಿತಿಗಾಗಿ, ನಿಯಮಗಳು ಮತ್ತು ಷರತ್ತುಗಳಿಗಾಗಿ, ಐಐಎಫ್‌ಎಲ್ ಫೈನಾನ್ಸ್ ಲಿಮಿಟೆಡ್‌ನ ಸಂಬಂಧಿತ ಶಾಖೆಯನ್ನು ಸಂಪರ್ಕಿಸಿ.

ಸ್ಥಳ: ಬಿಜಾಪುರ
ದಿನಾಂಕ: 25.09.2024

ಎಸ್‌ಡಿ/-
ಅಧಿಕೃತಸಹಿ
ಐಐಎಫ್‌ಎಲ್ ಫೈನಾನ್ಸ್ ಲಿಮಿಟೆಡ್

ಕೋರೆ ಆಸ್ಪತ್ರೆಯಲ್ಲಿ ಪೋಷಣ್ ಮಾಸಿಕ ಆಚರಣೆ

ಬೆಳಗಾವಿ: ರಾಷ್ಟ್ರೀಯ ಪೋಷಣ್ ಮಾಸಿಕ ಅಂಗವಾಗಿ ಕೆಎಲ್‌ಇ ಸಂಸ್ಥೆಯ ಡಾ. ಪ್ರಭಾಕರ ಕೋರೆ ಆಸ್ಪತ್ರೆ ಹಾಗೂ ವೈದ್ಯಕೀಯ ಸಂಶೋಧನಾ ಕೇಂದ್ರದ ಸೌಂದರ್ಯವರ್ಧಕ ಹಾಗೂ ಪುನರನಿರ್ಮಾಣ ಹಾಗೂ ಕಾಹೆರ ಜೆಎನ್ ವೈದ್ಯಕೀಯ ಮಹಾವಿದ್ಯಾಲಯದ ಸಾರ್ವಜನಿಕ ಆರೋಗ್ಯ ವಿಭಾಗಗಳ ಸಂಯುಕ್ತಾಶ್ರಯದಲ್ಲಿ ಆಸ್ಪತ್ರೆಯಲ್ಲಿ ಇತ್ತೀಚೆಗೆ ಪೋಷಣಾಂಶ ಜಾಗೃತಿ ಸಮಾರಂಭವನ್ನು ಸೀಳು ತುಟಿ ಹೊಂದಿದ ಮಕ್ಕಳು ಹಾಗೂ ತಾಯಂದಿರಿಗಾಗಿ ಏರ್ಪಡಿಸಲಾಗಿತ್ತು.

ಜೆಎನ್ ವೈದ್ಯಕೀಯ ಮಹಾವಿದ್ಯಾಲಯದ ಉಪಪ್ರಾಚಾರ್ಯ ಹಾಗೂ ಸ್ಮೈಲ್ ಟ್ರೇನ್ ಯೋಜನೆಯ ನಿರ್ದೇಶಕರಾದ ಡಾ. ರಾಜೇಶ ಪವಾರ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು, ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಯೋಜನಾಧಿಕಾರಿಗಳು ಸೀಳು ತುಟಿ ಹಾಗೂ ಅಂಗುಳ ತೊಂದರೆ ಅನುಭವಿಸುತ್ತಿರುವ ಶಿಶು ಅಥವಾ ಮಕ್ಕಳನ್ನು ಗುರುತಿಸಿ ಆಸ್ಪತ್ರೆಗೆ ಶೀಘ್ರ ಕಳುಹಿಸಿದರೆ ಶಸ್ತ್ರಚಿಕಿತ್ಸೆ ನೆರವೇರಿಸಿ, ಆಹಾರ ತೆಗೆದುಕೊಳ್ಳುವುದರ ಅನುಕೂಲ ಕಲ್ಪಿಸಿದರೆ ಅಪೌಷ್ಟಿಕಾಂಶತೆಯಿಂದ ಮಕ್ಕಳನ್ನು ತಪ್ಪಿಸಬಹುದು ಎಂದು ತಿಳಿಸಿದರು.

ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕರಾದ ಡಾ. ಕರ್ನಲ್ ಎಂ ದಯಾನಂದ ಅವರು ಮಾತನಾಡಿ, ಇಲ್ಲಿಯವರೆಗೆ ಸುಮಾರು 10 ಸಾವಿರಕ್ಕೂ ಅಧಿಕ ಮಕ್ಕಳ ಸೀಳು ತುಟಿ ಮತ್ತು ಅಂಗುಳ ಶಸ್ತ್ರ ಚಿಕಿತ್ಸೆ ನೆರವೇರಿಸಿ ಅವರ ಮುಖದಲ್ಲಿ ಮಂದಹಾಸ ಮೂಡಿಸಿರುವುದು ಅತ್ಯಂತ ಶ್ಲಾಘನೀಯ ಎಂದರು.

ಸ್ತ್ರೀರೋಗ ಮತ್ತು ಹೆರಿಗೆ ತಜ್ಞವೈದ್ಯರಾದ ಡಾ. ಹೇಮಾ ಪಾಟೀಲ್ ಹಾಗೂ ಪಬ್ಲಿಕ್ ಹೆಲ್ತ್ ನ ಮುಖ್ಯಸ್ಥರಾದ ಡಾ. ಮುಬಾಶಿರ ಅವರು ಒಳ್ಳೆಯ ಪೋಷಕಾಂಶಗಳ ಕುರಿತು ಮಾತನಾಡಿದರು. ಈ ಸಂದರ್ಭದಲ್ಲಿ ತಾಲೂಕಾ ಆರೋಗ್ಯಾಧಿಕಾರಿ ಡಾ. ರಾಜಶ್ರೀ ಪಾಟೀಲ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

ಜೆಎನ್ ವೈದ್ಯಕೀಯ ಮಹಾವಿದ್ಯಾಲಯದ ಉಪಪ್ರಾಚಾರ್ಯ ಡಾ. ರಾಜೇಶ ಪವಾರ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ನರೇಗಾ ಅನುಷ್ಠಾನಕ್ಕೆ ಶ್ರಮಿಸಲು ಜಿಪಂ ಉಪಕಾರ್ಯದರ್ಶಿ ಸೂಚನೆ

ಕಾಗವಾಡ: ತಾಲೂಕಿನ ಗ್ರಾಮ ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಪಂಚಾಯತಿಯಲ್ಲಿ ಬಾಕಿ ಇರುವ ತೆರಿಗೆ ಸಂಗ್ರಹಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ನರೇಗಾ ಸೇರಿದಂತೆ ಸರ್ಕಾರದ ವಿವಿಧ ಯೋಜನೆಗಳ ಅನುಷ್ಠಾನಕ್ಕಾಗಿ ಪ್ರಾಮಾಣಿಕವಾಗಿ ಶ್ರಮಿಸಬೇಕೆಂದು ಜಿ.ಪಂ.ಉಪಕಾರ್ಯದರ್ಶಿ ಬಸವರಾಜ ಅಡವಿಮಠ ಅಧಿಕಾರಿಗಳಿಗೆ ಸೂಚಿಸಿದರು.

ಸೋಮವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ತಾಲೂಕಿನ ಅಧಿಕಾರಿಗಳ ಸಭೆಯಲ್ಲಿ ಮಾತನಾಡುತ್ತಿದ್ದರು. ಕರ ವಸೂಲಿಯಲ್ಲಿ ತೆರಿಗೆ ಸಂಗ್ರಹಣೆಯ ಕುರಿತು ಕಟ್ಟುನಿಟ್ಟಿನ ಕ್ರಮ ಕೈಗೊಂಡ ಹಿನ್ನೆಲೆಯಲ್ಲಿ ಈಗ ತೆರಿಗೆ ಸಂಗ್ರಹಣೆಯಲ್ಲಿ ಪ್ರಗತಿಯಾಗಿದ್ದು, ಒಂದೆರಡು ಗ್ರಾಮ ಪಂಚಾಯತಿಗಳು ಮಾತ್ರ ಇನ್ನೂ ತೆರಿಗೆ ಸಂಗ್ರಹವನ್ನು ಬಾಕಿ ಉಳಿಸಿಕೊಂಡಿವೆ. ಅವರಿಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.

ಅಧಿಕಾರಿಗಳ ಸಭೆಯಲ್ಲಿ ಮಾತನಾಡುತ್ತಿರುವ ಜಿಲ್ಲಾ ಪಂಚಾಯತ ಕಾರ್ಯದರ್ಶಿ ಬಸವರಾಜ ಅಡವಿಮಠ

ರಾಜ್ಯ ಸರಕಾರ ಕಳೆದ ವರ್ಷದ ಬಜೆಟ್ ನಲ್ಲಿ ಮಂಡಿಸಿದ್ದ ಅನುಗುಣವಾಗಿ ಈ ವರ್ಷದ ಕ್ರಿಯಾ ಯೋಜನೆಗಳನ್ನು ರೂಪಿಸಿದ್ದು, ಸರಕಾರದ ಯೋಜನೆಗಳು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಎಲ್ಲ ಅಧಿಕಾರಿಗಳು ಶ್ರಮಿಸಬೇಕು ಎಂದು ತಿಳಿಸಿದರು.

ಪಿಡಿಒಗಳು ನರೇಗಾ ಯೋಜನೆಯಲ್ಲಿ ಹೆಚ್ಚು ಕೆಲಸಗಳ ಕ್ರಿಯಾ ಯೋಜನೆ ಸಿದ್ಧಪಡಿಸಿ, ಕೂಲಿ ಕಾರ್ಮಿಕ ಜನರಿಗೆ ಕೆಲಸಗಳನ್ನು ನೀಡಬೇಕು. ಅವಧಿಯಲ್ಲಿ ಕೂಲಿ ಹಣ ಪಾವತಿಯಾಗುವಂತೆ ನಿಗಾ ವಹಿಸಬೇಕು. ಇದರಲ್ಲಿ ನಿರ್ಲಕ್ಷ್ಯ ತೋರಿದರೆ ಕ್ರಮ ಕೈಗೊಳ್ಳಲಾಗುವುದು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ತಾ.ಪಂ. ಇಒ ವೀರಣ್ಣ ವಾಲಿ, ಸಿಡಿಪಿಒ ಸಂಜೀವಕುಮಾರ ಸದಲಗಿ, ರವೀಂದ್ರ ಮುರಗಾಲಿ, ಡಾ. ಬಸವರಾಜ ಕಾಗೆ, ಬಿ.ಜೆ. ಕಾಂಬಳೆ, ದುರ್ಯೋಧನ ಮಾಳಿ, ಬಸವರಾಜ ಯಾದವಾಡ, ಪ್ರಶಾಂತ ಗಂಗಧರ, ಮೈಬೂಬ ಕೊತ್ವಾಲ, ಎ.ಡಿ. ಅನಾರಿ ಸೇರಿದಂತೆ ತಾಲೂಕಿನ ಎಲ್ಲ ಇಲಾಖೆಯ ಅಧಿಕಾರಿಗಳು, ಗ್ರಾಮ ಅಭಿವೃದ್ಧಿ ಅಧಿಕಾರಿಗಳು ಉಪಸ್ಥಿತರಿದ್ದರು.

CIN: L67100MH1995PLC093797
Regd. Office: IIFL House, Sun Infotech Park, Road No. 16V, Plot No.B-23, Thane Industrial Area, Wagle Estate, Thane - 400604
Tel: (91-22) 41035000 • Fax: (91-22) 25806654
E-mail: reach@iifl.com • Website: www.iifl.com

IIFL FINANCE

ಚಿನ್ನದ ಆಭರಣಗಳ ಹರಾಜಿನ ಸಾರ್ವಜನಿಕ ಪ್ರಕಟಣೆ

ನಾವು, ಐಐಎಫ್‌ಎಲ್ ಫೈನಾನ್ಸ್ ಲಿಮಿಟೆಡ್ ("IIFL") ತಮ್ಮ ಸಾಲವನ್ನು ಕ್ರಮಬದ್ಧಗೊಳಿಸದ ಅಥವಾ ಬಾಕಿ ಇರುವ ಮೊತ್ತವನ್ನು ಪಾವತಿಸದ ಡೀಫಾಲ್ಟ್ ಮಾಡಿದ ಗ್ರಾಹಕರ ಚಿನ್ನದ ಆಭರಣಗಳನ್ನು ಹರಾಜು ಮಾಡುತ್ತಿದ್ದೇವೆ ಎಂದು ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ಈ ಮೂಲಕ ಎಲ್ಲಾ ಸಂಬಂಧಪಟ್ಟ ಸಾಲಗಾರರಿಗೆ ಸೂಚಿಸಲಾಗಿದೆ. ನೋಂದಾಯಿತ ಹರಾಜು ಸೂಚನೆಗಳು ಮತ್ತು ಪುನರಾವರ್ತಿತ ಜ್ಞಾಪನೆಗಳ ಮೂಲಕ ತಿಳಿಸಲಾಗಿದೆ. ಈ ಕೆಳಗಿನ ಸಾಲ ಖಾತೆಗಳಲ್ಲಿ ಅಡವು ಇರಿಸಲಾದ ಚಿನ್ನದ ಆಭರಣಗಳ ಸಾರ್ವಜನಿಕ ಏಲಂ ಅನ್ನು **28.09.2024** ರಂದು ಬೆಳಗ್ಗೆ ಗಂಟೆ **10** ರಿಂದ ಈ ಕೆಳಗಿನ ಜಿಲ್ಲಾ ಕೇಂದ್ರಗಳಲ್ಲಿ ನಡೆಸಲಾಗುತ್ತದೆ **ಬಾಗಲಕೋಟ-ಹುನಗುಂದ ಜಿಎಲ್-#192-1 ಬಿ -1, "ಕಡಪಟ್ಟಿ ಕಾಂಪ್ಲೆಕ್ಸ್, "1ನೇ ಮಹಡಿ, ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣದ ಹತ್ತಿರ, ವಿ ಎಂ ಸರ್ಕಲ್, ಬಾಗಲಕೋಟೆ ಜಿಲ್ಲೆ, ಹುನಗುಂದ** - 587118. **ಕರ್ನಾಟಕ**. ಸ್ಥಳ ಅಥವಾ ದಿನಾಂಕದಲ್ಲಿನ ಯಾವುದೇ ಬದಲಾವಣೆಯನ್ನು (ಏನಾದರೂ ಇದ್ದರೆ) ಏಲಂನ ಕೇಂದ್ರದಲ್ಲಿ ದರ್ಶಿಸಲಾಗುತ್ತದೆ. ಯಾವುದೇ ಕಾರಣಕ್ಕಾಗಿ ಒಂದು ವೇಳೆ ಇಲ್ಲಿ ನಮೂದಿಸಲಾದ ದಿನಾಂಕದಂದು ಏಲಂ ನಡೆಸಲು ಸಾಧ್ಯವಾಗದಿದ್ದರೆ ಅಥವಾ ಅದೇ ದಿನ ಏಲಂ ಮುಗಿಯದಿದ್ದರೆ, ಅವೇ ನಿಯಮಗಳು ಮತ್ತು ಪರತ್ತುಗಳೊಂದಿಗೆ ನಂತರದ ಯಾವುದೇ ದಿನಾಂಕದಂದು ಸದರಿ ಏಲಂ ಅನ್ನು ನಡೆಸುವ ಅಥವಾ ಮುಂದುವರಿಸುವ ಹಕ್ಕನ್ನು ಐಐಎಫ್‌ಎಲ್ ಕಾದಿರಿಸಿಕೊಂಡಿದೆ. ಗ್ರಾಹಕರು ಮರಣಹೊಂದಿದರೆ, ಹರಾಜಿಗೆ ಸಂಬಂಧಿಸಿದ ಎಲ್ಲಾ ಷರತ್ತುಗಳು ನಾಮನಿರ್ದೇಶಿತ/ಕಾನೂನುಬದ್ಧ ಉತ್ತರಾಧಿಕಾರಿಗಳಿಗೆ ಅನ್ವಯವಾಗುತ್ತವೆ.

ಚಿನ್ನದ ಸಾಲದ ಖಾತೆ ಸಂಖ್ಯೆ: GL25366893, GL25499672, GL26212546, GL27488071, GL27941053, GL27962968, GL28281099, GL28627903, GL28641992, GL28828427, GL29062120, GL29839712, GL29853888, GL29857545, GL29874073, GL29875562, GL29885024, GL30169556, GL30390915, GL30403177, GL30406180, GL30424096, GL30491986, GL30614617, GL30645114, GL30680452, GL30687634, GL34183395, GL25766464, GL26467774, GL26721488, GL26742048, GL26743171, GL26819761, GL26910256, GL27231350, GL27250214, GL27820984, GL27832624, GL28023826, GL28284759, GL28318378, GL28529440, GL28569603, GL28591621, GL28614882, GL28705122, GL28729733, GL28739161, GL28761978, GL29626114, GL29640391, GL29824783, GL29848348, GL29949683, GL29959921, GL29964594, GL29986548, GL30702942, GL30768029, GL30813904, GL33244096, GL28384946, GL29973608, GL29984446, GL30287535, GL25985654, GL26342008, GL26372958, GL27758863, GL27778709, GL28385079, GL28406596, GL28602907, GL28617083, GL30014979, GL30029290, GL22922775, GL26021217, GL27010022, GL27987133, GL27995508, GL28174558, GL28184549, GL28298747, GL28298874, GL28488422, GL28502225, GL28530977, GL29031898, GL29053010, GL29364779, GL29383745, GL30067980, GL30085994, GL30330599, GL30347378, GL30442906, GL30517297, GL31304675, GL25109080, GL25173900, GL26462742, GL26857598, GL28239318, GL28420917, GL28444298, GL28458966, GL28888324, GL29723669, GL29880223, GL30067873, GL30087631, GL30149154, GL30163209, GL30167023, GL30190416, GL30205216, GL30435294, GL30572937, GL30733918, GL31103935, GL32515215, GL26021482, GL26180036, GL27438289, GL27695437, GL27721737, GL27750594, GL27778474, GL28289618, GL28506431, GL28527753, GL28679153, GL28695368, GL29256786, GL29279709, GL29627381, GL29993532, GL30010315, GL30194900, GL30206410, GL30213641, GL30249160, GL30258201, GL30281301, GL30293360, GL30389753, GL30410706, GL30504172, GL30638407, GL30638441, GL30660195, GL30765014, GL32316287, GL22101788, GL24443024, GL24637367, GL24984236, GL25108964, GL25129605, GL25164433, GL25167561, GL25352440, GL25360783, GL25451138, GL25454204, GL25669932, GL25871672, GL25893863, GL26166655, GL26436821, GL26497443, GL26498201, GL26498854, GL26509890, GL26702596, GL26846122, GL27255413, GL27415704, GL27426335, GL27445396, GL27593062, GL27615516, GL27636085, GL27644172, GL27702964, GL27730296, GL28137976, GL28153700, GL28315081, GL28329381, GL28436164, GL28457908, GL28539090, GL28594517, GL28605305, GL28613423, GL28613541, GL28652383, GL28656370, GL28670645, GL28671673, GL28704824, GL28728018, GL28809605, GL28811467, GL28811846, GL28813681, GL28823841, GL28837162, GL28843499, GL29108643, GL29116065, GL29123556, GL29129384, GL29132565, GL29153092, GL29162540, GL29178120, GL29322503, GL29600770, GL29615897, GL29623460, GL29638933, GL29721159, GL29856019, GL29890751, GL29907363, GL29980932, GL29984944, GL30066300, GL30088405, GL30280577, GL30333832, GL30354204, GL30361140, GL30367643, GL30368907, GL30379282, GL30379404, GL30388830, GL30432893, GL30603405, GL30629769, GL30674306, GL30699445, GL30705315, GL30735718, GL30736068, GL31360304, GL31524954, GL31687969, GL32367672, GL32392554, GL25648663, GL26432152, GL27858908, GL27870081, GL28712772, GL28730854, GL29542485, GL29778360, GL29797267, GL29880612, GL29948442, GL29962699, GL30094163, GL30113996, GL30128341, GL30248087, GL30491017, GL30515252, GL30515886

ಹರಾಜನ್ನು ''ಎಲ್ಲಿ ಇದ್ದಾರೋ ಹಾಗೆ'', ''ಏನು ಇದೆಯೋ ಹಾಗೆ'' ಮತ್ತು ''ಇರುವುದೆಲ್ಲಾ ಇದೆ'' ಆಧಾರದ ಮೇಲೆ ನಡೆಸಲಾಗುವುದು ಮತ್ತು ಐಐಎಫ್‌ಎಲ್ ಗುಣಮಟ್ಟ, ಶುದ್ಧತೆ, ಕ್ಯಾರೇಟೇಜ್, ತೂಕ ಅಥವಾ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಾತಿನಿಧ್ಯ ಅಥವಾ ವಾರಂಟಿಗಳನ್ನು ನೀಡುವುದಿಲ್ಲ. ಐಐಎಫ್‌ಎಲ್, ತನ್ನ ಸಂಪೂರ್ಣ ವಿವೇಚನೆಯಿಂದ, ಹರಾಜು ಪಟ್ಟಿಯಿಂದ ಯಾವುದೇ ಖಾತೆಗಳನ್ನು ಮುಂದೂಡಬಹುದು ಅಥವಾ ತೆಗೆದುಹಾಕಬಹುದು, ಯಾವುದೇ ಪೂರ್ವ ಸೂಚನೆ ಇಲ್ಲದೆ ಮತ್ತು ಯಾವುದೇ ಕಾರಣವನ್ನು ನೀಡದೆಯೇ ಮತ್ತು ಯಾವುದೇ ಕಾರಣವನ್ನು ನೀಡದೆ ಯಾವುದೇ ಅಥವಾ ಎಲ್ಲಾ ಬಿಡ್‌ಗಳು ಅಥವಾ ಕೊಡುಗೆಗಳನ್ನು ತಿರಸ್ಕರಿಸಬಹುದು. ಡೀಫಾಲ್ಟ್ ಮಾಡಿದ ಸಾಲಗಾರ(ರು), ವಾಗ್ದಾನ ಮಾಡಿದ ಆಭರಣಗಳು ಮತ್ತು ಇತರ ವಿವರಗಳನ್ನು ಆಯಾ ಶಾಖೆಯಲ್ಲಿ ಪ್ರದರ್ಶಿಸಲಾಗಿದೆ. ಸಾಲ ಮರುಪಾವತಿ ಮಾಡದ ಸಾಲಗಾರನಿ(ರಿ)ಗೆ ಇತ್ತೀಚಿನ ಬಡ್ಡಿ ಮತ್ತು ಅನ್ವಯವಾಗುವ ಎಲ್ಲಾ ಶುಲ್ಕಗಳು ಸೇರಿದಂತೆ ಸಂಪೂರ್ಣ ಬಾಕಿಗಳನ್ನು ಮರುಪಾವತಿಸಿ ಅವರ ಸಾಲದ ಖಾತೆಯನ್ನು ಮುಚ್ಚುವ ಅಥವಾ ಕ್ರಮಬದ್ಧಗೊಳಿಸುವ ಆಯ್ಕೆಯನ್ನು ಈ ಪ್ರಕಟಣೆಯು ಪ್ರಕಟಗೊಂಡ ನಂತರವೂ ಹೊಂದಿರುತ್ತಾರೆ, ಆದರೆ ಯಾವುದೇ ಸಂದರ್ಭದಲ್ಲಿ ಅದನ್ನು ಹರಾಜಿನ ದಿನಾಂಕದವರೆಗೆ ಮಾಡಬೇಕು; ಅದು ವಿಫಲವಾದರೆ, ಅಡಮಾನ ಇಟ್ಟಿರುವ ಚಿನ್ನದ ಆಭರಣಗಳನ್ನು ಮಾರಾಟ ಮಾಡಲಾಗುತ್ತದೆ ಮತ್ತು ಬಾಕಿಗಳನ್ನು (ಯಾವುದಾದರೂ ಇದ್ದರೆ) ಬಡ್ಡಿ ಮತ್ತು ವೆಚ್ಚಗಳೊಂದಿಗೆ ಮರುಪಡೆಯಲಾಗುತ್ತದೆ. ಆದಾಗ್ಯೂ, ಈ ಪ್ರಕಟಣೆಯ ನಂತರ ಅಥವಾ ನಂತರ ಮುಚ್ಚಲಾದ ಅಥವಾ ಕ್ರಮಬದ್ಧಗೊಳಿಸಲಾದ ಡೀಫಾಲ್ಟರ್ ಸಾಲಗಳು ಪ್ರಮಾಣಾನುಗುಣವಾದ ಪ್ರಕಟಣೆ ಶುಲ್ಕವನ್ನು ಭರಿಸಬೇಕಾಗುತ್ತದೆ. ಎರವಲುದಾರರು ತಮ್ಮ ಇತ್ತೀಚಿನ ಬ್ಯಾಂಕ್ ಖಾತೆಯ ವಿವರಗಳನ್ನು ಸಲ್ಲಿಸಲು/ಅಪ್‌ಡೇಟ್ ಮಾಡಲು ವಿನಂತಿಸಲಾಗಿದೆ, ಯಾವುದಾದರೂ ಇದ್ದರೆ ಹೆಚ್ಚುವರಿ ಹರಾಜು ಆದಾಯದ ಮರುಪಾವತಿಗಾಗಿ.

ವಿವರವಾದ ಮಾಹಿತಿಗಾಗಿ, ನಿಯಮಗಳು ಮತ್ತು ಷರತ್ತುಗಳಿಗಾಗಿ, ಐಐಎಫ್‌ಎಲ್ ಫೈನಾನ್ಸ್ ಲಿಮಿಟೆಡ್‌ನ ಸಂಬಂಧಿತ ಶಾಖೆಯನ್ನು ಸಂಪರ್ಕಿಸಿ.

ಸ್ಥಳ: ಬಾಗಲಕೋಟ
ದಿನಾಂಕ: 25.09.2024

ಎಸ್‌ಡಿ/-
ಅಧಿಕೃತಸಹಿ
ಐಐಎಫ್‌ಎಲ್ ಫೈನಾನ್ಸ್ ಲಿಮಿಟೆಡ್

CIN: L67100MH1995PLC093797
Regd. Office: IIFL House, Sun Infotech Park, Road No. 16V, Plot No.B-23, Thane Industrial Area, Wagle Estate, Thane - 400604
Tel: (91-22) 41035000 • Fax: (91-22) 25806654
E-mail: reach@iifl.com • Website: www.iifl.com

IIFL FINANCE

ಚಿನ್ನದ ಆಭರಣಗಳ ಹರಾಜಿನ ಸಾರ್ವಜನಿಕ ಪ್ರಕಟಣೆ

ನಾವು, ಐಐಎಫ್‌ಎಲ್ ಫೈನಾನ್ಸ್ ಲಿಮಿಟೆಡ್ ("IIFL") ತಮ್ಮ ಸಾಲವನ್ನು ಕ್ರಮಬದ್ಧಗೊಳಿಸದ ಅಥವಾ ಬಾಕಿ ಇರುವ ಮೊತ್ತವನ್ನು ಪಾವತಿಸದ ಡೀಫಾಲ್ಟ್ ಮಾಡಿದ ಗ್ರಾಹಕರ ಚಿನ್ನದ ಆಭರಣಗಳನ್ನು ಹರಾಜು ಮಾಡುತ್ತಿದ್ದೇವೆ ಎಂದು ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ಈ ಮೂಲಕ ಎಲ್ಲಾ ಸಂಬಂಧಪಟ್ಟ ಸಾಲಗಾರರಿಗೆ ಸೂಚಿಸಲಾಗಿದೆ. ನೋಂದಾಯಿತ ಹರಾಜು ಸೂಚನೆಗಳು ಮತ್ತು ಪುನರಾವರ್ತಿತ ಜ್ಞಾಪನೆಗಳ ಮೂಲಕ ತಿಳಿಸಲಾಗಿದೆ. ಈ ಕೆಳಗಿನ ಸಾಲ ಖಾತೆಗಳಲ್ಲಿ ಅಡವು ಇರಿಸಲಾದ ಚಿನ್ನದ ಆಭರಣಗಳ ಸಾರ್ವಜನಿಕ ಏಲಂ ಅನ್ನು **28.09.2024** ರಂದು ಬೆಳಗ್ಗೆ ಗಂಟೆ **10** ರಿಂದ ಈ ಕೆಳಗಿನ ಜಿಲ್ಲಾ ಕೇಂದ್ರಗಳಲ್ಲಿ ನಡೆಸಲಾಗುತ್ತದೆ **ಬೆಳಗಾವಿ–ಸಿ ಟಿ ಎಸ್ ನಂ.** 2982, **1ನೇ ಮಹಡಿ, ಬಫ್ನಾ ಚೌಕ್, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಹತ್ತಿರ, ರವಿವಾರಪೇಟೆ, ಗೋಕಾಕ್ ಟೌನ್, ಬೆಳಗಾವಿ ಜಿಲ್ಲೆ, ಗೋಕಾಕ್** -591307. ಸ್ಥಳ ಅಥವಾ ದಿನಾಂಕದಲ್ಲಿನ ಯಾವುದೇ ಬದಲಾವಣೆಯನ್ನು (ಏನಾದರೂ ಇದ್ದರೆ) ಏಲಂನ ಕೇಂದ್ರದಲ್ಲಿ ದರ್ಶಿಸಲಾಗುತ್ತದೆ. ಯಾವುದೇ ಕಾರಣಕ್ಕಾಗಿ ಒಂದು ವೇಳೆ ಇಲ್ಲಿ ನಮೂದಿಸಲಾದ ದಿನಾಂಕದಂದು ಏಲಂ ನಡೆಸಲು ಸಾಧ್ಯವಾಗದಿದ್ದರೆ ಅಥವಾ ಅದೇ ದಿನ ಏಲಂ ಮುಗಿಯದಿದ್ದರೆ, ಅವೇ ನಿಯಮಗಳು ಮತ್ತು ಪರತ್ತುಗಳೊಂದಿಗೆ ನಂತರದ ಯಾವುದೇ ದಿನಾಂಕದಂದು ಸದರಿ ಏಲಂ ಅನ್ನು ನಡೆಸುವ ಅಥವಾ ಮುಂದುವರಿಸುವ ಹಕ್ಕನ್ನು ಐಐಎಫ್‌ಎಲ್ ಕಾದಿರಿಸಿಕೊಂಡಿದೆ. ಗ್ರಾಹಕರು ಮರಣಹೊಂದಿದರೆ, ಹರಾಜಿಗೆ ಸಂಬಂಧಿಸಿದ ಎಲ್ಲಾ ಷರತ್ತುಗಳು ನಾಮನಿರ್ದೇಶಿತ/ಕಾನೂನುಬದ್ಧ ಉತ್ತರಾಧಿಕಾರಿಗಳಿಗೆ ಅನ್ವಯವಾಗುತ್ತವೆ.

ಚಿನ್ನದ ಸಾಲದ ಖಾತೆ ಸಂಖ್ಯೆ: GL26630425, GL26929014, GL29107617, GL29108083, GL29233726, GL29255878, GL30067653, GL30086988, GL30193726, GL30212793, GL30667547, GL30767058, GL28342432, GL28357650, GL28545231, GL28557534, GL28681196, GL28694847, GL28773411, GL28792915, GL29698645, GL29710229, GL29802004, GL29823158, GL29923057, GL29933121, GL29946713, GL29962534, GL30203437, GL30214298, GL30220217, GL30228314, GL30235412, GL30237333, GL30327650, GL30346947, GL30413307, GL30500226, GL30519572, GL30610265, GL30629918, GL30633751, GL30663767, GL30769694, GL29715391, GL29857119, GL29875434, GL30022904, GL30030082, GL30562954, GL30567982, GL22170357, GL22464378, GL24079498, GL24090603, GL27440785, GL27710428, GL27719624, GL28191814, GL28214426, GL28449998, GL28456567, GL29078239, GL29555612, GL29570823, GL30221938, GL30466161, GL30473086, GL30486194, GL30486832, GL30654322, GL30780484, GL30800978, GL22552814, GL23791870, GL25291589, GL25341755, GL26056923, GL27358465, GL28781275, GL28792692, GL29814710, GL29822394, GL29866031, GL29873410, GL29974650, GL29975972, GL29985038, GL29987813, GL30031640, GL30032770, GL30067273, GL30085913, GL30089436, GL30130514, GL30140337, GL30152503, GL30215363, GL30287332, GL30294105, GL30604320, GL30634941, GL30639573, GL30810763, GL32606122, GL33473451, GL23902828, GL25735922, GL25841180, GL26165230, GL26474152, GL26637302, GL28811568, GL28818631, GL29120192, GL29130044, GL29375208, GL29381378, GL29971188, GL29976172, GL29987091, GL29987850, GL30097388, GL30144927, GL30205345, GL30239217, GL30256620, GL30350347, GL30403809, GL30430624, GL30458957, GL30483794, GL30491324, GL30514354, GL30637889, GL30690641, GL30736257, GL32571657, GL32601773, GL23517422, GL25147044, GL25220216, GL26458391, GL26587262, GL26601718, GL26603532, GL27027408, GL27124792, GL27129695, GL27181900, GL27260528, GL27276729, GL27381464, GL27472231, GL27474008, GL27484695, GL27817005, GL27833613, GL28027649, GL28093649, GL28252339, GL28571162, GL28587905, GL28595739, GL28602919, GL28617006, GL28812157, GL28818891, GL28858269, GL28869419, GL29085922, GL29101556, GL29304041, GL29332241, GL29393528, GL29404798, GL29408809, GL29428214, GL29505449, GL29713454, GL29884929, GL29905642, GL29981428, GL29985361, GL30046651, GL30057035, GL30092307, GL30112457, GL30130956, GL30140420, GL30195402, GL30223224, GL30228089, GL30237030, GL30285705, GL30394595, GL30396269, GL30520372, GL30534241, GL30580249, GL30619407, GL30631356, GL30663325, GL30784746, GL32621873, GL26499620, GL27998996, GL28834569, GL28844160, GL29035645, GL29814912, GL29822411, GL30145833, GL30163687, GL30169100, GL30201280, GL30212433, GL30470824, GL30484189, GL30548893, GL30553403, GL30554210, GL30567287, GL30639091, GL30660165, GL30666430, GL30685726, GL22121497, GL25108858, GL26267019, GL26371240, GL26559469, GL27153127, GL27284643, GL27301546, GL27575343, GL27584474, GL27807943, GL27830297, GL27982524, GL27997565, GL28540057, GL28596437, GL28615819, GL28708940, GL28729983, GL28834855, GL28966795, GL28979931, GL29165626, GL29976444, GL29984833, GL30030523, GL30046880, GL30055785, GL30145738, GL30172340, GL30190128, GL30243170, GL30492905, GL30507017, GL30515346, GL30574002, GL30581443, GL30590200, GL30623452, GL30651172, GL30690770, GL30692834, GL30720010, GL30737183, GL30742301, GL26166273, GL26983986, GL28266108, GL28291662, GL29941563, GL29961989, GL30004532, GL30012233, GL30028963, GL30241171, GL30437578, GL30691196, GL30716924, GL32243802, GL34341733, GL28446443, GL28456007, GL30354328, GL30361287, GL22207621, GL23350629, GL25422972, GL26583106, GL28676592, GL28695962, GL28848745, GL28973171, GL29084845, GL29517737, GL29670357, GL29784125, GL29795981, GL29813483, GL29821378, GL29916003, GL29930692, GL29944339, GL29963400, GL29969221, GL29986170, GL30021964, GL30029934, GL30065076, GL30087411, GL30382443, GL30402437, GL30705472, GL30718959

ಹರಾಜನ್ನು ''ಎಲ್ಲಿ ಇದ್ದಾರೋ ಹಾಗೆ'', ''ಏನು ಇದೆಯೋ ಹಾಗೆ'' ಮತ್ತು ''ಇರುವುದೆಲ್ಲಾ ಇದೆ'' ಆಧಾರದ ಮೇಲೆ ನಡೆಸಲಾಗುವುದು ಮತ್ತು ಐಐಎಫ್‌ಎಲ್ ಗುಣಮಟ್ಟ, ಶುದ್ಧತೆ, ಕ್ಯಾರೇಟೇಜ್, ತೂಕ ಅಥವಾ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಾತಿನಿಧ್ಯ ಅಥವಾ ವಾರಂಟಿಗಳನ್ನು ನೀಡುವುದಿಲ್ಲ. ಐಐಎಫ್‌ಎಲ್, ತನ್ನ ಸಂಪೂರ್ಣ ವಿವೇಚನೆಯಿಂದ, ಹರಾಜು ಪಟ್ಟಿಯಿಂದ ಯಾವುದೇ ಖಾತೆಗಳನ್ನು ಮುಂದೂಡಬಹುದು ಅಥವಾ ತೆಗೆದುಹಾಕಬಹುದು, ಯಾವುದೇ ಪೂರ್ವ ಸೂಚನೆ ಇಲ್ಲದೆ ಮತ್ತು ಯಾವುದೇ ಕಾರಣವನ್ನು ನೀಡದೆಯೇ ಮತ್ತು ಯಾವುದೇ ಕಾರಣವನ್ನು ನೀಡದೆ ಯಾವುದೇ ಅಥವಾ ಎಲ್ಲಾ ಬಿಡ್‌ಗಳು ಅಥವಾ ಕೊಡುಗೆಗಳನ್ನು ತಿರಸ್ಕರಿಸಬಹುದು. ಡೀಫಾಲ್ಟ್ ಮಾಡಿದ ಸಾಲಗಾರ(ರು), ವಾಗ್ದಾನ ಮಾಡಿದ ಆಭರಣಗಳು ಮತ್ತು ಇತರ ವಿವರಗಳನ್ನು ಆಯಾ ಶಾಖೆಯಲ್ಲಿ ಪ್ರದರ್ಶಿಸಲಾಗಿದೆ. ಸಾಲ ಮರುಪಾವತಿ ಮಾಡದ ಸಾಲಗಾರನಿ(ರಿ)ಗೆ ಇತ್ತೀಚಿನ ಬಡ್ಡಿ ಮತ್ತು ಅನ್ವಯವಾಗುವ ಎಲ್ಲಾ ಶುಲ್ಕಗಳು ಸೇರಿದಂತೆ ಸಂಪೂರ್ಣ ಬಾಕಿಗಳನ್ನು ಮರುಪಾವತಿಸಿ ಅವರ ಸಾಲದ ಖಾತೆಯನ್ನು ಮುಚ್ಚುವ ಅಥವಾ ಕ್ರಮಬದ್ಧಗೊಳಿಸುವ ಆಯ್ಕೆಯನ್ನು ಈ ಪ್ರಕಟಣೆಯು ಪ್ರಕಟಗೊಂಡ ನಂತರವೂ ಹೊಂದಿರುತ್ತಾರೆ, ಆದರೆ ಯಾವುದೇ ಸಂದರ್ಭದಲ್ಲಿ ಅದನ್ನು ಹರಾಜಿನ ದಿನಾಂಕದವರೆಗೆ ಮಾಡಬೇಕು; ಅದು ವಿಫಲವಾದರೆ, ಅಡಮಾನ ಇಟ್ಟಿರುವ ಚಿನ್ನದ ಆಭರಣಗಳನ್ನು ಮಾರಾಟ ಮಾಡಲಾಗುತ್ತದೆ ಮತ್ತು ಬಾಕಿಗಳನ್ನು (ಯಾವುದಾದರೂ ಇದ್ದರೆ) ಬಡ್ಡಿ ಮತ್ತು ವೆಚ್ಚಗಳೊಂದಿಗೆ ಮರುಪಡೆಯಲಾಗುತ್ತದೆ. ಆದಾಗ್ಯೂ, ಈ ಪ್ರಕಟಣೆಯ ನಂತರ ಅಥವಾ ನಂತರ ಮುಚ್ಚಲಾದ ಅಥವಾ ಕ್ರಮಬದ್ಧಗೊಳಿಸಲಾದ ಡೀಫಾಲ್ಟರ್ ಸಾಲಗಳು ಪ್ರಮಾಣಾನುಗುಣವಾದ ಪ್ರಕಟಣೆ ಶುಲ್ಕವನ್ನು ಭರಿಸಬೇಕಾಗುತ್ತದೆ. ಎರವಲುದಾರರು ತಮ್ಮ ಇತ್ತೀಚಿನ ಬ್ಯಾಂಕ್ ಖಾತೆಯ ವಿವರಗಳನ್ನು ಸಲ್ಲಿಸಲು/ಅಪ್‌ಡೇಟ್ ಮಾಡಲು ವಿನಂತಿಸಲಾಗಿದೆ, ಯಾವುದಾದರೂ ಇದ್ದರೆ ಹೆಚ್ಚುವರಿ ಹರಾಜು ಆದಾಯದ ಮರುಪಾವತಿಗಾಗಿ.

ವಿವರವಾದ ಮಾಹಿತಿಗಾಗಿ, ನಿಯಮಗಳು ಮತ್ತು ಷರತ್ತುಗಳಿಗಾಗಿ, ಐಐಎಫ್‌ಎಲ್ ಫೈನಾನ್ಸ್ ಲಿಮಿಟೆಡ್‌ನ ಸಂಬಂಧಿತ ಶಾಖೆಯನ್ನು ಸಂಪರ್ಕಿಸಿ.

ಸ್ಥಳ: ಬೆಳಗಾವಿ
ದಿನಾಂಕ: 25.09.2024

ಎಸ್‌ಡಿ/-
ಅಧಿಕೃತಸಹಿ
ಐಐಎಫ್‌ಎಲ್ ಫೈನಾನ್ಸ್ ಲಿಮಿಟೆಡ್

ಅಥಣಿಯಲ್ಲಿ ತಾಂತ್ರಿಕ ವಿವಿ ಸ್ಥಾಪನೆಯಾಗಲಿ

ಇಂಜಿನಿಯರ್ ದಿನಾಚರಣೆಯನ್ನು ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಸಿವ್ಹಿಲ್ ವಿಭಾಗದ ಮುಖ್ಯಸ್ಥ ಡಾ.ನಾಗರಾಜ ಪಾಟೀಲ ಉದ್ಘಾಟಿಸಿ ಮಾತನಾಡಿದರು.

ಅಥಣಿ: ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಹೊಸ ತಂತ್ರಜ್ಞಾನವನ್ನು ಇಂಜಿನಿಯರ್ ಗಳು ತಮ್ಮ ವೃತ್ತಿ ಜೀವನದಲ್ಲಿ ಅಳವಡಿಸಿಕೊಂಡು ಜನರಿಗೆ ನಿಗದಿತ ಸಮಯದೊಳಗೆ ಉತ್ತಮವಾದ ಸೇವೆಯನ್ನು ನೀಡಬಹುದಾಗಿದೆ ಎಂದು ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಸಿವ್ಹಿಲ್ ವಿಭಾಗದ ಮುಖ್ಯಸ್ಥ ಡಾ.ನಾಗರಾಜ ಪಾಟೀಲ ಹೇಳಿದರು. ರವಿವಾರ ಪಟ್ಟಣದಲ್ಲಿ ಸಿವ್ಹಿಲ್ ಇಂಜನೀಯರ್ಸ ಮತ್ತು ಆರ್ಕಿಟೆಕ್ಟ ವೆಲ್ ಫೇರ್ ಅಸೋಸಿಯೇಶನ್ ವತಿಯಿಂದ ಸರ್ ಎಂ ವಿಶ್ವೇಶ್ವರಯ್ಯ ಅವರ ಜನ್ಮ ದಿನದ ಅಂಗವಾಗಿ ಆಯೋಜಿಸಿದ್ದ ಇಂಜನೀಯರ್ಸ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡುತ್ತಿದ್ದರು. ಇಂದಿನ ಅತ್ಯಾಧುನಿಕ ಯುಗದಲ್ಲಿ ಇಂಜನೀಯರಗಳಿಗೆ ಅದರಲ್ಲೂ ಸಿವ್ಹಿಲ್ ಇಂಜನೀಯರಗಳಿಗೆ ಸಾಕಷ್ಟು ಅವಕಾಶಗಳು ಮತ್ತು ಸೌಲಭ್ಯಗಳಿದ್ದು ಇವುಗಳನ್ನು ಸದುಪಯೋಗ ಮಾಡಿಕೊಳ್ಳಬೇಕು ಎಂದು ಕರೆ ನೀಡಿದರು. ಒಂದೆರಡು ದಶಕದ ಹಿಂದೆ ಇಂಜನೀಯರಗಳು ಕಡ್ಡಾಯವಾಗಿ ಸೈಟಗೆ ತೆರಳಿ ಅಳೆದು-ತೂಗಿ ಅವಶ್ಯ ಎನಿಸಿದಲ್ಲಿ ಸರ್ವೆ ಮಾಡಿಸಬೇಕಾಗುತ್ತಿತ್ತು. ಆದರೆ ಇಂದು ಸೆಟ್ ಲೈಟ್ ಫೋಟೊಗಳ ಮತ್ತು ಕೆಲ ಆಪ್ ಗಳನ್ನು ಬಳಸಿಕೊಂಡು ತಮ್ಮ ತಮ್ಮ ಕಛೇರಿಗಳಲ್ಲಿಯೇ ಸಂಪೂರ್ಣ ಮಾಹಿತಿ ಪಡೆಯುವ ಮೂಲಕ ಕಾರ್ಯವನ್ನು ಅನುಷ್ಠಾನಗೊಳಿಸಬಹುದು ಎಂದರು. ಈ ಸಂದರ್ಭದಲ್ಲಿ ಇಂಜನೀಯರ್ ವಿಜಯ ಕಾಮಕರ, ಅಥಣಿ ಸಿವಿಲ್ ಇಂಜಿನಿಯರ್ಸ್ ಅಸೋಸಿಯೇಷನ್ ಅಧ್ಯಕ್ಷ ಎಸ್.ಎಸ್.ಗಲಗಲಿ, ನಿವೃತ್ತ ಇಂಜನೀಯರ್ ಅರುಣ ಯಲಗುದ್ರಿ, ಸಿವ್ಹಿಲ್ ಇಂಜನೀಯರ್ ರಾಜಶೇಖರ ಟೊಪಗಿ, ಆರ್ಕಿಟೆಕ್ಟ ಅಮರ ದುರ್ಗಣ್ಣವರ ಮಾತನಾಡಿದರು. ಈ ವೇಳೆ ಇಂಜಿನಿಯರ್ ಅಸೋಸಿಯೇಷನ್ ಉಪಾಧ್ಯಕ್ಷ ಮುರುಘೇಶ ಪಾಟೀಲ, ಕಾರ್ಯದರ್ಶಿ ಅಮೋಘ ಪೂಜಾರಿ, ಖಜಾಂಚಿ ಸಂತೋಷ ಪಾಟೀಲ ಮತ್ತು ಸರ್ವ ಸದಸ್ಯರು ವಹಿಸಿದ್ದರು.

ಈಶ್ವರಗೆ ದತ್ತಿ ನಿಧಿ ಪ್ರಶಸ್ತಿ

ಗೋಕಾಕ: ನಗರದ ಗಜಲ್ ಕವಿ ಈಶ್ವರ ಮಮದಾಪೂರ ಇವರ ಕಣ್ಣೊಳಗಿನ ಕಣ್ಣು ಗಜಲ್ ಕೃತಿಗೆ ಹಾಸನದ ಮಾಣಿಕ್ಯ ಪ್ರಕಾಶನ ಕೊಡಮಾಡುವ ರಾಜ್ಯ ಮಟ್ಟದ ದತ್ತಿ ನಿಧಿ ಪ್ರಶಸ್ತಿ ಲಭಿಸಿದೆ.

ಸನ್ 2024ನೆಯ ಸಾಲಿಗೆ ದಿ.ಫಾತಿಮಾಭಿ ಜನಾಬ್ ಸೈಯದ್ ಅಬ್ದುಲ್ ಘನಿಸಾಬ್ ಸ್ಮಾರಕ ದತ್ತಿ ಗಜಲ್ ಮಾಣಿಕ್ಯ ಪ್ರಶಸ್ತಿಯು ಇದಾಗಿದೆ.

ಸಪ್ಟೆಂಬರ್ 28 ಶನಿವಾರ ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನ ಜಯಚಾಮರಾಜೇಂದ್ರ ಒಡೆಯರ್ ಸಭಾಂಗಣದಲ್ಲಿ ನಡೆಯುವ ರಾಜ್ಯಮಟ್ಟದ ಕಾರ್ಯಕ್ರಮದಲ್ಲಿ ಗೌರವ ಧನ ಹಾಗೂ ಪ್ರಶಸ್ತಿ ಪತ್ರವನ್ನು ನೀಡಿ ಗೌರವಿಸಲಾಗುತ್ತದೆ.

ಸಮಾಚಾರ ಸಣ್ಣದಲ್ಲ

ತೀರ್ಪು ಸ್ವಾಗತಾರ್ಹ: ಅರುಣ ಕಾರಜೋಳ

ಮುಧೋಳ: ದಲಿತರ ಭೂಮಿಯನ್ನು ಅಕ್ರಮವಾಗಿ ಕಬಳಿಸಿ, ಬಡವರ ಪಾಲಿಗೆ ಸೇರಬೇಕಾಗಿದ್ದ ಸೈಟುಗಳನ್ನು ಸಂಭಂದಿಕರ, ತಮ್ಮ ಹೆಸರಿಗೆ ಮಾಡಿಕೊಂಡಿದ್ದ ಸಿಎಂ. ಸಿದ್ರಾಮಯ್ಯ ವಿರುದ್ಧ ಹೈಕೋರ್ಟ್ ಪ್ರಾಸಿಕ್ಯೂಶನ್‌ಗೆ ಅನುಮತಿ ನೀಡಿರುವದು ಸ್ವಾಗತಾರ್ಹ ತೀರ್ಪು ಎಂದು ಬಿಜೆಪಿ. ಯುವ ಧುರೀಣ ಅರುಣ ಜಿ. ಕಾರಜೋಳ ತಿಳಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು ತಮ್ಮ ಬ್ರಹ್ಮಾಂಡ ಭ್ರಷ್ಟಾಚಾರ ಮುಚ್ಚಿಕೊಳ್ಳಲು ಘನವೆತ್ತ ರಾಜ್ಯಪಾಲರ ಮೇಲೆ ಕೀಳು ಮಟ್ಟದ ರಾಜಕೀಯಕ್ಕೆ ಕಾಂಗ್ರೆಸ್ ನಾಯಕರು ಮುಂದಾಗಿದ್ದರು, ಆದರೆ ನ್ಯಾಯಾಲಯವು ರಾಜ್ಯಪಾಲರ ನಡೆಯನ್ನು ಎತ್ತಿ ಹಿಡಿದು ಭ್ರಷ್ಟರಿಗೆ ದೇಶದಲ್ಲಿ ಜಾಗವಿಲ್ಲ ಎಂಬುದನ್ನು ಪುನರುಚ್ಚಿಸಿದೆ ಎಂದಿದ್ದಾರೆ. ಸಿದ್ರಾಮಯ್ಯ ಅವರಿಗೆ ಈ ನೆಲದ ಕಾನೂನಿನ ಹಾಗು ಸಂವಿಧಾನದ ಬಗ್ಗೆ ಕಿಂಚತ್ತಾದರೂ ಗೌರವವಿದ್ದರೆ ನ್ಯಾಯಾಲಯದ ತೀರ್ಪಿಗೆ ತಲೆಬಾಗಿ ಕೂಡಲೆ ಅವರು ಸಿಎಂ. ಸ್ಥಾನಕ್ಕೆ ರಾಜಿನಾಮೆ ನೀಡಬೇಕು. ಎಂದು ಎ.ಜಿ.ಕಾರಜೋಳ ಆಗ್ರಹಿಸಿದದ್ದಾರೆ.

ಕೋರ್ಟ್‌ನಿಂದ ಆರೋಪಿಗೆ ಜೈಲು ಶಿಕ್ಷೆ

ಬಾಗಲಕೋಟೆ: ಬೇರೆ ಮಹಿಳೆಯೊಂದಿಗೆ ಸೇರಿ ಹೆಂಡತಿಗೆ ಹಿಂಸೆ ಕೊಟ್ಟು, ಆಕೆ ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡಿದ ಭೀಮಪ್ಪ ವಡ್ಡರಗೆ ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯ ಶಿಕ್ಷೆ ವಿಧಿಸಿದೆ. ಕೆರೂರ ಪೊಲೀಸ್ ಠಾಣೆ ವ್ಯಾಪ್ತಿಯ ಮೆಟಗುಡ್ಡ ಗ್ರಾಮದ ಭೀಮಪ್ಪ ವಡ್ಡರ ಅನೈತಿಕ ಸಂಬಂಧ ಹೊಂದಿದ್ದ ಮಹಿಳೆಯೊಂದಿಗೆ ಸೇರಿ ಪತ್ನಿ ತಾಯವ್ವಳಿಗೆ ಹೊಡೆದು ಬಡಿದು ಮಾಡಿದ್ದರಿಂದ ಮನನೊಂದಿದ್ದ ತಾಯವ್ವ ತವರು ಮನೆಯಲ್ಲಿ 2017ರ ಜನವರಿ 13 ರಂದು ಆತ್ಮಹತ್ಯೆಗೆ ಶರಣಾಗಿದ್ದಳು. ಈ ಕುರಿತು ಕೆರೂರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಅಂದಿನ ಪಿಎಸ್‌ಐ ಎಸ್.ಎಂ. ಅವಜಿ ಅವರು ನ್ಯಾಯಾಲಯಕ್ಕೆ ದೋಷಾರೋಪ ಸಲ್ಲಿಸಿದ್ದರು. ಭೀಮಪ್ಪ ಪತ್ನಿಗೆ ನೀಡುತ್ತಿದ್ದ ಕಿರುಕುಳ ಸಾಬೀತಾದ ಹಿನ್ನೆಲೆಯಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಎನ್.ವಿ.ವಿಜಯ ಅವರು ಆರೋಪಿಗೆ 5 ಸಾವಿರ ರು. ದಂಡ ಹಾಗೂ ಜೈಲು ಶಿಕ್ಷೆ ವಿಧಿಸಿ ಆದೇಶ ಹೊರಡಿಸಿದ್ದಾರೆ. ಸರಕಾರದ ಪರವಾಗಿ ಪ್ರಧಾನ ಸರಕಾರಿ ಅಭಿಯೋಜಕ ವಿ.ಜಿ. ಹೆಬಸೂರ ವಾದ ಮಂಡಿಸಿದ್ದಾರೆ.

ಬಿಜೆಪಿಗಿಲ್ಲ ರಾಜೀನಾಮೆ ಕೇಳುವ ನೈತಿಕತೆ

ಬಾದಾಮಿ: ಕೋರ್ಟ್ ತೀರ್ಪು ತನಿಖೆಯನ್ನು ನಡೆಸಿ ಎಂದು ಹೇಳಿರುವುದು ಅಷ್ಟೇ ಸಿದ್ದರಾಮಯ್ಯನವರ ಕೇಳಿರೋ ಅರ್ಜಿಯನ್ನು

ತಿರಸ್ಕರಿಸಿ ವಿಚಾರಣೆ ನಡೆಸುವಂತೆ ಸ್ಪಷ್ಟಪಡಿಸಿದೆ ತನಿಖೆ ನಡೆಯಲಿ ಆ ತನಿಖೆಯಲ್ಲಿ ಸ್ಪಷ್ಟ ನಿರ್ಧಾರಗಳು ಬರುವವರೆಗೂ ವಿರೋಧ ಪಕ್ಷದವರಿಗೆ ರಾಜೀನಾಮೆ ಕೇಳುವ ನೈತಿಕತೆ ಇಲ್ಲ ಎಂದು ಕೆಪಿಸಿಸಿ ಮಾಧ್ಯಮ ವಕ್ತಾರ ಮಹಾಂತೇಶ ಹಟ್ಟಿ ಪ್ರತಿಕ್ರಿಯಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯೆ ನೀಡಿರುವ ಅವರು ಕೇಂದ್ರ ಬಿಜೆಪಿಯವರು ಗೌರ್ನರ್ ಹುದ್ದೆಯನ್ನು ಗೌರ್ನರ್ ಆಫೀಸ್‌ನ್ನು ದುರುಪಯೋಗಪಡಿಸಿಕೊಳ್ಳುತ್ತಿರುವುದು ಸ್ಪಷ್ಟವಾಗಿ ಕಾಣುತ್ತಿದೆ ಹಲವಾರು ಬಿಜೆಪಿಯವರ ತನಿಖೆಗಳನ್ನ ಕೊಟ್ಟರು ಅದನ್ನು ಗೌರ್ನರ್ ಬದಿಗಿಟ್ಟು ಸಿದ್ದರಾಮಯ್ಯನವರ ಪ್ರಕರಣವನ್ನು ತೆಗೆದುಕೊಂಡು ದ್ವೇಷದ ರಾಜಕಾರಣ ಮಾಡಲು ಹೊರಟಿದೆ ಕರ್ನಾಟಕದ ಜನತೆ 135 ಸೀಟುಗಳನ್ನು ಕಾಂಗ್ರೆಸ್ಸಿಗೆ ಕೊಟ್ಟು ಸ್ಪಷ್ಟ ಬಹುಮತದ ಆಶೀರ್ವಾದ ನೀಡಿದ್ದಾರೆ ಜನರ ಆಶೀರ್ವಾದ ಇರೋದ್ರಿಂದ ಸಿದ್ದರಾಮಯ್ಯನವರು ರಾಜೀನಾಮೆ ಕೊಡೋ ಪ್ರಶ್ನೆ ಇಲ್ಲ ಎಂದು ಮಹಾಂತೇಶ ಹಟ್ಟಿ ತಿಳಿಸಿದ್ದಾರೆ.

ಅಗಲಿದ ಜೀವ

ರತ್ನಾ ಜೋಳದ

ಗುಳೇದಗುಡ್ಡ: ಸ್ಥಳೀಯ ಬಣಜಿಗ ಸಮಾಜದ ರತ್ನಾ ಸುಭಾಷ ಜೋಳದ (67) ಮಂಗಳವಾರ ನಿಧನರಾದರು. ಮೃತರು ಒಬ್ಬ ಪುತ್ರ ಸೇರಿದಂತೆ ಅಪಾರ ಬಂಧುಬಳಗ ಅಗಲಿದ್ದಾರೆ.

ವಿರಾಮ
ಪ್ರತಿ ಭಾನುವಾರ

{ಸಿದ್ದರಾಮಯ್ಯ } ಮುಖ್ಯಮಂತ್ರಿ

ನಾವು ವಿಧಾನಸಭೆ ಚುನಾವಣೆಯಲ್ಲಿ 136 ಗೆದ್ದ ಬಳಿಕ ಬಿಜೆಪಿ ಆಪರೇಷನ್ ಕಮಲ ಮಾಡಲು ಯತ್ನಿಸಿದರು. ದುಡ್ಡು ಕೊಟ್ಟು ಶಾಸಕರನ್ನು ಖರೀದಿಸಲು ಯತ್ನಿಸಿದರು. ಆದರೆ, ನಮ್ಮ ಶಾಸಕರು ಅವರ ದುಡ್ಡಿನ ಆಸೆಗೆ ಬಿದ್ದಿಲ್ಲ. ಅವರ ಯತ್ನ ವಿಫಲವಾಯಿತು. ಬಡವರ ಪರವಾದ ನಮ್ಮ ಕಾರ್ಯಕ್ರಮಗಳನ್ನು ವಿರೋಧ ಮಾಡಿದರು.

ದೇಶಕ್ಕಾಗಿ ಇಂದಿರಾ, ರಾಜೀವ್ ಗಾಂಧಿಯಿಂದ ಜೀವ ತ್ಯಾಗ, ಸಚಿವ ಆರ್.ಬಿ.ತಿಮ್ಮಾಪುರ

ರಾಹುಲ್ ವಿರುದ್ಧ ಆರೋಪ ಖಂಡಿಸಿ ಕಾಂಗ್ರೆಸ್ ಪ್ರತಿಭಟನೆ

ಬಾಗಲಕೋಟೆ: ರಾಹುಲ್ ಗಾಂಧಿ ಅವರ ಬಗ್ಗೆ ಬಿಜೆಪಿ ನಾಯಕರು ಮಾಡುತ್ತಿರುವ ಆರೋಪ ಖಂಡಿಸಿ ನಗರದ ಬಸವೇಶ್ವರ ವೃತ್ತದಲ್ಲಿ ಕಾಂಗ್ರೆಸ್ ಪಕ್ಷದಿಂದ ಪ್ರತಿಭಟನೆ ನಡೆಯಿತು.

ಇಲ್ಲಿನ ಬಸವೇಶ್ವರ ವೃತ್ತದಲ್ಲಿ ಜಮಾವಣೆಗೊಂಡ ಕಾಂಗ್ರೆಸ್ ನಾಯಕರುಗಳು ಹಾಗೂ ಕಾರ್ಯಕರ್ತರು ಬಿಜೆಪಿ ವಿರುದ್ಧ ಪ್ರತಿಭಟನೆ ಕೂಗಿ ಆಕ್ರೋಶ ವ್ಯಕ್ತ ಪಡಿಸಿದರು.

ಸಚಿವ ಆರ್.ಬಿ.ತಿಮ್ಮಾಪುರ ಮಾತನಾಡಿ, ದೇಶಕ್ಕಾಗಿ ಕುಟುಂಬಸ್ಥರನ್ನು ಕಳೆದುಕೊಂಡಿರುವ ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರ ಬಗ್ಗೆ ಬಿಜೆಪಿ ನಾಯಕರು ಹಗುರವಾಗಿ ಮಾತನಾಡುವುದನ್ನು ನಿಲ್ಲಿಸಬೇಕು. ದೇಶಕ್ಕಾಗಿ ರಾಹುಲ್ ಅವರ ಅಜ್ಜಿ ಇಂದಿರಾ ಗಾಂಧಿ ಹಾಗೂ ತಂದೆ ರಾಜೀವ್ ಗಾಂಧಿ ಜೀವವನ್ನೇ ತ್ಯಾಗ ಮಾಡಿದ್ದಾರೆ. ಅವರ ವಿಚಾರವಾಗಿ ಬಿಜೆಪಿ ನಾಯಕರು ಇಲ್ಲಸಲ್ಲದ ಹೇಳಿಕೆ ನೀಡುವುದನ್ನು ನಿಲ್ಲಿಸಬೇಕೆಂದರು.

ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯ ನಂತರದಲ್ಲಿ ದೇಶಕ್ಕೆ ಕಾಂಗ್ರೆಸ್ ಸಾಕಷ್ಟು ಕೊಡುಗೆಗಳನ್ನು ನೀಡಿದೆ. ಏನನ್ನೂ ಮಾಡದ ಬಿಜೆಪಿ ಅವರು ಕೇವಲ ಸುಳ್ಳು ಹೇಳುವುದರಲ್ಲೇ ಕಾಲಹರಣ ಮಾಡುತ್ತಿದ್ದಾರೆ. ಸುಳ್ಳಿನ ಫ್ಯಾಕ್ಟರಿಯನ್ನೇ ಬಿಜೆಪಿ ನಾಯಕರು ತೆರೆದಿದ್ದಾರೆ. ಬಿಜೆಪಿ ಅವರಿಗೆ ಸಂವಿಧಾನ, ಅಂಬೇಡ್ಕರ್ ಬಗ್ಗೆ ಗೌರವವಿಲ್ಲ, ಅದಕ್ಕಾಗಿಯೇ ಪದೇ, ಪದೆ ಸಂವಿಧಾನಕ್ಕೆ ಧಕ್ಕೆ ತರುವ ರೀತಿ ಮಾತುಗಳನ್ನಾಡುತ್ತಾರೆ. ಜನರೇ ಇವರಿಗೆ ತಕ್ಕಪಾಠ ಕಲಿಸಬೇಕೆಂದು ಹೇಳಿದರು.

ಶಾಸರಾದ ಜೆ.ಟಿ.ಪಾಟೀಲ ಹಾಗೂ ಎಚ್.ವೈ.ಮೇಟಿ ಮಾತನಾಡಿ, ಗಾಂಧಿ ಕುಟುಂಬ ತಮ್ಮ ಸರ್ವಸ್ವವನ್ನೂ ದೇಶಕ್ಕಾಗಿ ಮೀಸಲಿಟ್ಟಿದೆ. ರಾಹುಲ್ ಗಾಂಧಿ ಅವರು ದೇಶದ ಭರವಸೆಯ ನಾಯಕರಾಗಿ ಬೆಳೆಯುತ್ತಿದ್ದು, ಇದನ್ನು ಸಹಿಸದ ಬಿಜೆಪಿ ನಾಯಕರು ಸುಳ್ಳು ಸುದ್ದಿಯನ್ನು ಹರಡುತ್ತಿದ್ದಾರೆ. ಅವರಿಗೆ ಬೆದರಿಕೆ ಹಾಕುವ ರೀತಿಯ ಮಾತುಗಳನ್ನಾಡುತ್ತಿದ್ದಾರೆ ಎಂದು ದೂರಿದರು.

ಬಾದಾಮಿ ಶಾಸಕ ಭೀಮಸೇನ ಚಿಮ್ಮನಕಟ್ಟಿ, ಕೆಪಿಸಿಸಿ ಉಪಾಧ್ಯಕ್ಷ ಎಂ.ಬಿ.ಸೌದಾಗರ, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ರಕ್ಷಿತಾ ಈಟಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ ಬಳ್ಳಾರಿ, ವಕ್ತಾರ ಚಂದ್ರಶೇಖರ ರಾಠೋಡ, ಮುಖಂಡರಾದ ಆನಂದ ಜಿಗಜಿನ್ನಿ, ರಮೇಶ ಬದ್ನೂರ, ಮುತ್ತು ಜೋಳದ, ಮಲ್ಲಿಕಾರ್ಜುನ ಮೇಟಿ, ಮಲ್ಲಿಕಾರ್ಜುನ ಶಿರೂರ ಇತರರಿದ್ದರು.

ಬಾಗಲಕೋಟೆಯ ಬಸವೇಶ್ವರ ವೃತ್ತದಲ್ಲಿ ಕಾಂಗ್ರೆಸ್ ಪಕ್ಷದಿಂದ ಪ್ರತಿಭಟನೆ ನಡೆಯಿತು.

> ದೇಶದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಾಗಿನಿಂದಲೂ ಸರಕಾರಿ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಂಡು ಬೆದರಿಸುವ ಕೆಲಸವನ್ನು ಮಾಡುತ್ತಿದೆ. ಇವರ ಬಣ್ಣ ಗೊತ್ತಾಗಿ ಜನ ಕಾಂಗ್ರೆಸ್ ಬೆಂಬಲಿಸುತ್ತಿದ್ದು, ಅದನ್ನು ಸಹಿಸದೆ ರಾಹುಲ್ ಗಾಂಧಿ ಅವರ ವ್ಯಕ್ತಿತ್ವಕ್ಕೆ ಮಸಿ ಬಳಿಯುವ ಕಾರ್ಯಕ್ಕೆ ಕೈ ಹಾಕಿದೆ ಇದು ಬಿಜೆಪಿಗೆ ತಿರುಗುಬಾಣವಾಗಲಿದೆ.
> ಎಸ್.ಜಿ.ನಂಜಯ್ಯನಮಠ, ಕಾಂಗ್ರೆಸ್ ಜಿಲ್ಲಾಧ್ಯಕ್ಷ

ಸಿಎಂ ತನಿಖೆ ಎದುರಿಸಲಿ

ಬಾಗಲಕೋಟೆ: ಸಮಾಜವಾದಿ ಹಿನ್ನೆಲೆಯಿಂದ ಬಂದಿದ್ದೇನೆ ಎನ್ನುವ ಸಿದ್ದರಾಮಯ್ಯ ತಮ್ಮ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವ ಮೂಲಕ ಮುಡಾ ಹಗರಣದ ತನಿಖೆ ಎದುರಿಸಬೇಕು ಎಂದು ಹುಬ್ಬಳ್ಳಿ ಸೆಂಟ್ರಲ್ ಶಾಸಕ ಮಹೇಶ ಟೆಂಗಿನಕಾಯಿ ಆಗ್ರಹಿಸಿದರು.

ಇಲ್ಲಿನ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯಾವ ತಪ್ಪು ಮಾಡಿಲ್ಲ ಎಂದು ಸಿದ್ದರಾಮಯ್ಯ ಮೊದಲಿನಿಂದ ಹೇಳಿಕೊಳ್ಳುತ್ತಿದ್ದಾರೆ. ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿ, ತನಿಖೆ ಎದುರಿಸಲಿ. ಅಲ್ಲಿ ಆರೋಪ ಮುಕ್ತರಾಗಿ ಬಂದರೆ ಮತ್ತೆ ಮುಖ್ಯಮಂತ್ರಿಯಾಗಲಿ ಎಂದರು.

ಮುಡಾ ಹಗರಣದಲ್ಲಿ ಸಿದ್ದರಾಮಯ್ಯ ಹೆಸರು ಬಂದಿದ್ದರಿಂದಲೇ ರಾಜ್ಯಪಾಲರು ಪ್ರಕರಣ ಪ್ರಾಸಿಕ್ಯೂಶನ್‌ಗೆ ನೀಡಲು ಸೂಚನೆ ನೀಡಿದ್ದರು. ಆದರೆ, ಸಿದ್ದರಾಮಯ್ಯ ಅದನ್ನು ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಸದ್ಯ ತೀರ್ಪು ಬಂದಿದ್ದು, ಸಿದ್ದರಾಮಯ್ಯ ಕೂಡಲೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ತನಿಖೆ ಎದುರಿಸಬೇಕು ಎಂದು ಒತ್ತಾಯಿಸಿದರು.

ಕೇವಲ ಮಾತಿನಲ್ಲೇ ಮಾತ್ರ ಸಿದ್ದರಾಮಯ್ಯ ಸಮಾಜವಾದಿ ಎನ್ನುತ್ತಾರೆ. ಸಮಾಜವಾದಿ ಹಿನ್ನೆಲೆಯಿಂದ ಬಂದಿದ್ದರೆ ಅವರ ಮೇಲೆ ಆರೋಪ ಕೇಳಿ ಬಂದ ಕೂಡಲೇ ಸ್ಥಾನಕ್ಕೆ ರಾಜೀನಾಮೆ ನೀಡಬೇಕಿತ್ತು. ಆದರೆ, ಅವರು ಅದನ್ನು ಮಾಡಲಿಲ್ಲ. ಸದ್ಯ ತನಿಖಾ ಸಂಸ್ಥೆಗಳು ಅವರ ಅಡಿಯಲ್ಲೇ ಬರುವುದರಿಂದ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿ ತನಿಖೆಯನ್ನು ಎದುರಿಸಬೇಕು ಎಂದು ಆಗ್ರಹಿಸಿದರು. ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಮಾತನಾಡಿದರು.

ನಗರ ಸೇರಿದಂತೆ ಅನೇಕ ಕಡೆಗಳಲ್ಲಿ ಈಚೆಗೆ ನಡೆದ ಈದ್ ಮಿಲಾದ್ ಮೆರವಣಿಗೆಯಲ್ಲಿ ಪ್ಯಾಲಿಸ್ತೇನ್ ಧ್ವಜ ಪ್ರದರ್ಶನಗೊಂಡವು. ಸರಕಾರ ಇದರ ಮೇಲೆ ಕ್ರಮ ಜರುಗಿಸಲಿಲ್ಲ. ಈ ರಾಜ್ಯ ಸರಕಾರ ಪ್ರತಿ ಸಂದರ್ಭದಲ್ಲೂ ಹಿಂದು ವಿರೋಧಿ ನೀತಿ ಅನುಸರಿಸುತ್ತಿದೆ ಎಂದು ಆಕ್ರೋಶ ವ್ಯಕ್ತ ಪಡಿಸಿದರು.

> ವಕ್ಫ್ ಬೋರ್ಡ್‌ನ ಆಸ್ತಿ ಕೆಲವೇ ವರ್ಷಗಳಲ್ಲಿ 10 ಲಕ್ಷ ಎಕರೆ ದಾಟಿದೆ. ಅದನ್ನು ಇದೇ ರೀತಿಯಾಗಿ ಬಿಟ್ಟರೆ ನಮ್ಮ ನಿಮ್ಮ ಆಸ್ತಿಯನ್ನು ತನ್ನ ಆಸ್ತಿ ಎಂದು ಹೇಳಿಕೊಳ್ಳುತ್ತದೆ. ಕಾರಣ ವಕ್ಫ್ ಕಮಿಟಿಯನ್ನು ರದ್ದು ಪಡಿಸಲು ಎಲ್ಲರೂ ಒಂದಾಗಬೇಕಿದೆ.
> -ನಾರಾಯಣಸಾ ಭಾಂಡಗೆ, ರಾಜ್ಯಸಭೆ ಸದಸ್ಯ

ಬಾಗಲಕೋಟೆಯಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಶಾಸಕ ಮಹೇಶ ಟೆಂಗಿನಕಾಯಿ ಮಾತನಾಡಿದರು.

ಬಸವಸಿರಿ ಷೇರುದಾರರ ಲಾಭ ಸಮಾಜಸೇವೆಗೆ

ಬೀಳಗಿ: ಬಸವಸಿರಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತದ ಪ್ರತಿಯೊಬ್ಬ ಸದಸ್ಯರು ಲಾಭಾಂಶವನ್ನು ತಾವು ಪಡೆಯದೆ ಪ್ರತಿವರ್ಷ ಸಾಮಾಜಿಕ, ಧಾರ್ಮಿಕ ಕಾರ್ಯಗಳಿಗೆ ವಿನಿಯೋಗಿಸಲು ನಮ್ಮ ಆಡಳಿತ ಮಂಡಳಿಗೆ ಒಪ್ಪಿಗೆ ನೀಡಿರುವ ಶೇರುದಾರ ಸದಸ್ಯರ ಕಾರ್ಯ ಶ್ಲಾಘನೀಯವಾದದು ಎಂದು ಬಸವಸಿರಿ ಸೌಹಾರ್ದ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಶಿವಪ್ಪ ಅವಟಿ ಹೇಳಿದರು.

ಪಟ್ಟಣದ ಕಲಕತ್ತಿಮಠ ಆವರಣದಲ್ಲಿರುವ ಬ್ಯಾಂಕಿನಲ್ಲಿ ಬಸವಸಿರಿ ಸಹೌರ್ದ ಪತ್ತಿನ ಸಹಕಾರಿ ಸಂಘ ನಿಯಮಿತ ಬೀಳಗಿಯ 16 ನೇಯ ಸರ್ವ ಸಾಧಾರಣಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಬಡವರ ಮಧ್ಯಮ ವರ್ಗಗಳ ಜನರ ಶ್ರೇಯೋಭಿವೃದ್ಧಿಗಾಗಿ ಹಣಕಾಸು ನೆರವು ಕಲ್ಪಿಸುವ ಮೂಲಕ ನಮ್ಮ ಸಂಘ ಅನೇಕ ಕುಟುಂಬಗಳ ಬಾಳಿಗೆ ಬೆಳಕಾಗಿದೆ ಎಂದರು. ಕಾರ್ಯಕ್ರಮದಲ್ಲಿ ದೊಡ್ಯಾಳಮಠದ ಶಿವಾನಂದ ದೇವರು, ಉಪಾಧ್ಯಕ್ಷ ಸಂಗಪ್ಪ ಬುಡ್ಡರ, ನಿರ್ದೇಶಕರಾದ ವಿನಾಯಕ ಟಂಕಸಾಲಿ,ಪ್ರಮೋದ ದೇಶಪಾಂಡೆ, ರವಿ ಪಾಟೀಲ, ಶಿವಾನಂದ ಸಾರಾವರಿ, ಸುಬ್ರಾಯಗೌಡ ಪಾಟೀಲ, ಸಾಬಣ್ಣ ಹರಿಪಲ್ಲೆ, ಬಸವಂತಪ್ಪ ಸಂಕಾನಟ್ಟಿ, ವಿದ್ಯಾ ರವೀಂದ್ರ ಮಹಿಂದ್ರಕರ, ಸವಿತಾ ರುದ್ರಸ್ವಾಮಿಮಠ, ವ್ಯವಸ್ಥಾಪಕ ಸಿದ್ದಪ್ಪ ಹೆರಕಲ್ ಇದ್ದರು.

ಪಿಎಚ್.ಡಿ ಪದವಿ ಪಡೆದ ಸಂಘದ ನಿರ್ದೇಶಕಿ ವಿದ್ಯಾ ರವೀಂದ್ರ ಮಹೇಂದ್ರಕರವರನ್ನು ಸನ್ಮಾನಿಸಿ ಗೌರವಿಸಲಾಯಿತು.

> ಬ್ಯಾಂಕಿನಿಂದ ಹಣಕಾಸು ನೆರವು ಪಡೆದವರು ಸಮಯಕ್ಕೆ ಸರಿಯಾಗಿ ಪಾವತಿಸಿದರೆ ಬ್ಯಾಂಕ್ ಅಭಿವೃದ್ಧಿ ಹೊಂದಿ ಇನ್ನಷ್ಟು ಜನರಿಗೆ ಸಹಾಯ ಸಹಕಾರ ಮಾಡಲು ಅನುಕೂಲವಾಗುತ್ತದೆ, ಸಾಲದ ನೆರವು ಪಡೆದವರಷ್ಟೆ ಜಾಮೀನದಾರರು ಜವಬ್ದಾರಿಯಾಗುತ್ತಾರೆ ಅದಕ್ಕೆ ಅವರ ಸಹಕಾರ ಅಗತ್ಯ
> -ಶಿವಪ್ಪ ಸಿ ಅವಟಿ, ಅಧ್ಯಕ್ಷ, ಸೌಹಾರ್ದ ಪತ್ತಿನ ಸಹಕಾರಿ ಸಂಘ

ಶಾಸ್ತ್ರಿ ಪತ್ತಿನ ಸಹಕಾರಿಗೆ 6.57 ಲಕ್ಷ ರು.ಲಾಭ

ಗುಳೇದಗುಡ್ಡ: ಲಾಲ್‌ಬಹದ್ದೂರ ಶಾಸ್ತ್ರಿ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತದ ಸದಸ್ಯರ ಸಹಕಾರದಿಂದ 2023-24 ನೆ ಸಾಲಿನ ಒಟ್ಟು 6.57 ಲಕ್ಷ ನಿವ್ವಳ ಲಾಭ ಲಭಿಸಿದೆ.

ಸಂಘದ ಶೇರುದಾರರು ಹಾಗೂ ಗ್ರಾಹಕರ ಸಹಕಾರದಿಂದ ಉತ್ತಮ ಪ್ರಗತಿಯತ್ತ ಸಾಗುತ್ತಿದೆ ಎಂದು ಲಾಲ್‌ಬಹದ್ದೂರ ಶಾಸ್ತ್ರಿ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತದ ಅಧ್ಯಕ್ಷ ಬಾಲಮುಕುಂದ ತಾಪಡಿಯಾ ಹೇಳಿದರು.

ಅವರು ಸೋಮವಾರ ಪಟ್ಟಣದ ಲಾಲ್‌ಬಹದ್ದೂರ ಶಾಸ್ತ್ರಿ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ ಕಾರ್ಯಾಲಯದಲ್ಲಿ ಹಮ್ಮಿಕೊಂಡಿದ್ದ 9 ನೇ ವಾರ್ಷಿಕ ಸರ್ವ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ವರ್ಷದಿಂದ ವರ್ಷಕ್ಕೆ ಆರ್ಥಿಕವಾಗಿ ಪ್ರಗತಿ ಸಾಧಿಸುತ್ತಿದೆ. 2141 ಸದಸ್ಯರು ಹೊಂದಿದ್ದು, ಶೇರು ಬಂಡವಾಳ 49.79 ಲಕ್ಷ ರೂ, ದುಡಿಯುವ ಬಂಡವಾಳ 7.86 ಕೋಟಿ ರೂ, ಠೇವುಗಳು 7.02 ಕೋಟಿ ರೂ ಹೊಂದಿದೆ ಎಂದು ಹೇಳಿದರು.

ಈ ಸಂಧರ್ಭದಲ್ಲಿ ಉತ್ತಮ ಗ್ರಾಹಕರಿಗೆ ಸನ್ಮಾನಿಸಲಾಯಿತು. ಶ್ರೀಗುರುಸಿದ್ದೇಶ್ವರ ಮಠದ ಶ್ರೀಗುರುಬಸವ ದೇವರು, ಮರಡಿಮಠದ ಅಭಿನವ ಕಾಡಸಿದ್ದೇಶ್ವರ ಸ್ವಾಮಿಗಳು ಸಾನಿಧ್ಯ ವಹಿಸಿದರು. ನಿರ್ದೇಶಕರಾದ ಕೆ.ಟಿ.ಗಾಜಿ, ರಾಚಪ್ಪ ಸಾರಂಗಿ, ಆರ್.ಎಚ್.ಮಕಾನದಾರ,ಎಸ್.ಎಚ್.ಜಾಜು, ಎಸ್.ಕೆ.ಧಾರವಾಡ, ಎಸ್.ಎಲ್.ರಾಠೋಡ, ಎಮ್.ಎಸ್.ಕಾಳನ್ನವರ, ಎಸ್.ಎಚ್.ಗೌಡರ, ಬಿ.ಡಿ.ನಿಡಸೋಶಿ, ಎಸ್.ಎಮ್.ಸತ್ತಿಗೇರಿ, ಆರ್.ವಾಯ್.ಪವಾರ, ಸಲಹಾ ಸಮಿತಿ ಅಧ್ಯಕ್ಷ ಹಾಗೂ ಸದಸ್ಯರು ಹಾಗೂ ಸೌಹಾರ್ದ ನಿಯಮಿತದ ವ್ಯವಸ್ಥಾಪಕಿ ಭಾವನಾ ಅಲದಿ ಸೇರಿದಂತೆ ಮತ್ತಿತರರಿದ್ದರು.

ಆಯೋಧ್ಯೆಯಲ್ಲಿ ಶ್ರೀರಾಮನ ಮೂರ್ತಿ ಪ್ರತಿಷ್ಠಾಪನೆ ಸಂದರ್ಭದಲ್ಲಿ ಅಂದು ಜನಿಸಿದ ಮಗುವಿಗೆ ಸಹಕಾರಿ ನಿಯಮಿತದಿಂದ ಠೇವಣಿ ಪತ್ರ ನೀಡಲಾಯಿತು.

> ಲಾಲ್‌ಬಹದ್ದೂರ ಶಾಸ್ತ್ರಿ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ ಹಣಕಾಸಿನ ವ್ಯವಹಾರದ ಜೊತೆಗೆ ಸಾಮಾಜಿಕ ಕಾರ್ಯ ಚಟುವಟಿಕೆಗಳಲ್ಲಿಯೂ ತೊಡಗಿಸಿಕೊಳ್ಳುತ್ತದೆ. ಆಯೋಧ್ಯೆಯಲ್ಲಿ ಶ್ರೀರಾಮನ ಮೂರ್ತಿ ಪ್ರತಿಷ್ಠಾಪನೆ ಸಂದರ್ಭದಲ್ಲಿ ಅಂದು ಜನಿಸಿದ ಮಗುವಿಗೆ ಐದು ಸಾವಿರ ರೂಪಾಯಿ ಠೇವಣಿ ಹಣ ಮಕ್ಕಳ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಇಡಲಾಗುವುದು ಎಂದು ಹೇಳಲಾಗಿತ್ತು. ಅದರಂತೆ ಇಂದು 9 ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅಂದು ಜನಿಸಿದ ಐದು ಮಗುವಿಗೆ ಠೇವಣಿ ಪತ್ರ ನೀಡಿದ್ದೇವೆ.
> -ಪ್ರಶಾಂತ ಜವಳಿ, ಸಹಕಾರಿ ಉಪಾಧ್ಯಕ್ಷ

ಕೆರೂರ ಶಿಕ್ಷಕರ ಸಂಘಕ್ಕೆ 22 ಲಕ್ಷ ಲಾಭ

ಕೆರೂರ ಶಿಕ್ಷಕ-ಶಿಕ್ಷಕಿಯರ ಪತ್ತಿನ ಸಹಕಾರಿ ಸಂಘದ 61ನೇ ವಾರ್ಷಿಕ ಸಭೆಯನ್ನು ವೇದಿಕೆ ಮೇಲಿನ ಗಣ್ಯರು ಉದ್ಘಾಟಿಸಿದರು.

ಕೆರೂರ: ಸ್ಥಳಿಯ ಶಿಕ್ಷಕ-ಶಿಕ್ಷಕಿಯರ ಪತ್ತಿನ ಸಹಕಾರಿ ಸಂಘವು ಪ್ರಸ್ತುಕ ಆರ್ಥಿಕ ವರ್ಷದಲ್ಲಿ 22 ಲಕ್ಷ ನಿವ್ವಳ ಲಾಬಾಂಶ ಗಳಿಸಿದೆ ಎಂದು ಸಂಘದ ಅಧ್ಯಕ್ಷ ಹೆ ಎಚ್ ,ಪೋಲೀಸ ಪಾಟೀಲ ಹೇಳಿದರು.

ಅವರು ಭಾನುವಾರ ಸಂಘದ ಕಾರ್ಯಾಲಯದಲ್ಲಿ ಆಯೋಜಿಸಿದ್ದ 61 ನೇ ವಾರ್ಷಿಕ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು. ಸಂಘವು ಪ್ರಸ್ತುತ ಸಾಲೀನಲ್ಲಿ ಒಟ್ಟು 268 ಸದಸ್ಯರನ್ನು ಒಳಗೊಂಡಿದೆ, 1.59 ಕೋಟಿ ಶೇರು ಬಂಡವಾಳ,3.15 ಕೋಟಿ ದುಡಿಯುವ ಬಂಡವಾಳ,27.86 ಲಕ್ಷ ಠೇವು ಹಣ ಹೊಂದಿದೆ,ಶೇ.9ರಷ್ಟು ಸದಸ್ಯರಿಗೆ ಲಾಬಾಂಶ ಘೋಷಿಸಲಾಗಿದೆ ಎಂದರು.

ಸಂಘದ ಉತ್ತರೋತ್ತರ ಬೆಳವಣಿಗೆಗಾಗಿ ತೆಗೆದುಕೊಂಡ ಸಾಲವನ್ನು ಸಕಾಲಕ್ಕೆ ಮರುಪಾವತಿ ಮಾಡಿ ಎಂದು ಶಿಕ್ಷಣ ಸಂಯೋಜಕ ಎಸ್ ಪಿ ಗೌಡರ ಹೇಳಿದರು.

ಈ ಸಂದರ್ಭದಲ್ಲಿ ಪ.ಪಂ ಅಧ್ಯಕ್ಷೆ ನಿರ್ಮಲಾ ಮದಿ,ಉಪಾಧ್ಯಕ್ಷ ಮೋದಿನಸಾಬ ಚಿಕ್ಕೂರ, ಸಂಘದ ಉಪಾಧ್ಯಕ್ಷ ರಂಗಪ್ಪ ತಳವಾರ, ನಿರ್ದೇಶಕರಾದ ವಿನಾಯಕ ಪರದೇಶಿ, ಟಿ ಜಿ ತೀರ್ಥಪ್ಪನವರ, ಬಿ ಆರ್ ರಾಠೋಡ,ಹೆಚ್ ಕೆ ಸೈಯದಸಾಬ, ಆರ್ ಬಿ ಬಿಲ್ಲಾರ, ಬಿ ಎಸ್ ಹಂಜಿ, ಹೆಚ್ ಸಿ ಚಿಕ್ಕೂರ, ಎಮ್ ಪಿ ಯಾತನೂರ, ಎಮ್ ಎಸ್ ಕೊಣ್ಣೂರ, ಎಸ್ ವಿ ಕಲ್ಯಾಣಶೆಟ್ಟಿ, ರೂಪಾ ಮಾದರ, ಲೆಕ್ಕಪರಿಶೋಧಕ ಕೆ ಎಸ್ ಗಾಳಿ, ಎನ್ ವಾಯ್ ಚುಂಗಿನ, ಮುಖ್ಯ ಕಾರ್ಯದರ್ಶಿ ಎನ್ ಕೆ ಚವ್ಹಾಣ, ವಾಯ ಬಿ ಚಲವಾದಿ ಮತ್ತಿತರು ಇದ್ದರು.

ಜಿಲ್ಲಾ ದಸರಾ ಕ್ರೀಡಾಕೂಟಕ್ಕೆ ಸಚಿವ ಚಾಲನೆ

ಬಾಗಲಕೋಟೆ: ನವನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಹಮ್ಮಿಕೊಂಡ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಕ್ರೀಡಾ ಧ್ವಜಾರೋಹಣ ನೆರವೇರಿಸಿ ಚಾಲನೆ ನೀಡಿದರು.

ಜಿಲ್ಲಾಡಳಿತ, ಜಿಪಂ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಧ್ವಜಾರೋಹಣದ ನಂತರ ಕ್ರೀಡಾ ಜ್ಯೋತಿಯನ್ನು ಸ್ವೀಕರಿಸಲಾಯಿತು.

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಜಿಲ್ಲಾಧಿಕಾರಿ ಜಾನಕಿ ಕೆ.ಎಂ, ದಸರಾ ಕ್ರೀಡಾಕೂಟದ ಪೂರ್ವಭಾವಿಯಾಗಿ ಜಿಲ್ಲಾ ಮಟ್ಟದಲ್ಲಿ ಕ್ರೀಡಾಕೂಟಗಳನ್ನು ಹಮ್ಮಿಕೊಳ್ಳಲಾಗಿದೆ. ಇದರಲ್ಲಿ ಸಕ್ರಿಯವಾಗಿ ಪಾಲ್ಗೊಂಡು ನಿಮ್ಮ ಸಾಮರ್ಥ್ಯವನ್ನು ತೋರಿಸಿ ವಿಜೇತರಾಗಬೇಕು. ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿ ಮೈಸೂರಿನಲ್ಲಿ ನಡೆಯುವಂತ ಕ್ರೀಡೆಗಳಲ್ಲಿ ತಮ್ಮ ಸಾಮರ್ಥ್ಯವನ್ನು ತೋರಿಸಿ ವಿಜೇತರಾಗಿ ಜಿಲ್ಲೆಯ ಕೀರ್ತಿ ತರಲು ತಿಳಿಸಿದರು.

ಜಿಪಂ ಸಿಇಒ ಶಶಿಧರ ಕುರೇರ ಮಾತನಾಡಿ, ಕ್ರೀಡಾಕೂಟಗಳು ಗ್ರಾಮೀಣ ಮಟ್ಟದಿಂದ ರಾಜ್ಯ ಮಟ್ಟಕ್ಕೆ ಹೋಗಬೇಕಾದರೆ ದಸರಾ ಕ್ರೀಡಾಕೂಟಗಳ ಪಾತ್ರ ಬಹಳ ಮುಖ್ಯವಾಗಿದೆ. ಆಯಾ ತಾಲೂಕಿನ ಗ್ರಾಮೀಣ ಮಟ್ಟದಿಂದ ಆಗಮಿಸಿದ್ದು, ಜಿಲ್ಲಾ ಮಟ್ಟದಲ್ಲಿ ವಿಜೇತರಾಗಿ ರಾಜ್ಯ ಆಯ್ಕೆಯಾಗಿ ಯಶಸ್ವಿಯಾಗಿರಿ. ನಮ್ಮ ಜಿಲ್ಲೆಯಲ್ಲಿ ವಿಶೇಷವಾಗಿ ಸೈಕ್ಲಿಂಗ್, ಕುಸ್ತಿ ಹಾಗೂ ಕಬಡ್ಡಿ ಉತ್ತಮ ಪ್ರಾಮುಖ್ಯತೆ ಪಡೆದುಕೊಂಡಿವೆ ಎಂದರು.

ಸೈಕ್ಲಿಂಗ್‌ನಲ್ಲಿ ಸಾಧನೆ ಮಾಡಿದ ಕೀರ್ತಿ ನಾಯಕ, ಮಲ್ಲೇಶ ಬಡಿಗೇರ, ಕುಸ್ತಿ ಪಟುಗಳಾದ ಜ್ಯೋತಿಬಾ ಜಾಂಬರೆ, ಸೋನಿಯಾ ಜಾಧವ ಅವರಿಗೆ ಕ್ರೀಡಾ ಕಿಟ್‌ಗಳನ್ನು ವಿತರಿಸಿ, ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಶಾಸಕ ಎಚ್.ವೈ.ಮೇಟಿ, ಬೀಳಗಿ ಶಾಸಕ ಜೆ.ಟಿ.ಪಾಟೀಲ, ಅಲ್ಪಸಂಖ್ಯಾತರ ಜಿಲ್ಲಾ ಅಧಿಕಾರಿ ಶಿವಾನಂದ ಪಟ್ಟಣಶೆಟ್ಟಿ, ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಗುರುಪಾದ ಡೂಗನವರ ಸೇರಿದಂತೆ ಇತರರಿದ್ದರು.

ದಸರಾ ಕ್ರೀಡಾಕೂಟಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಚಾಲನೆ ನೀಡಿದರು.

ಸಹಕಾರಿ ಸಂಘಕ್ಕೆ 98 ಲಕ್ಷ ಲಾಭ

ಹುನಗುಂದ: ಸಂಘ ಸಂಸ್ಥೆಗಳು ಅಭಿವೃದ್ಧಿ ಜೊತೆ ಸಮಾಜಮುಖಿ ಕಾರ್ಯಗಳನ್ನು ಕೈಗೊಂಡಲ್ಲಿ ಸರ್ವರ ಸಹಕಾರ ದೊರೆತು ಸಂಘ ಹೆಮ್ಮರವಾಗಿ ಬೆಳೆಯಲು ಸಾಧ್ಯ ಎಂದು ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಬಸವರಾಜ ಹೊಸೂರ ಹೇಳಿದರು. ನಗರದ ಶ್ರೀಸಂಗಮೇಶ್ವರ ಮಂಗಲ ಭವನದಲ್ಲಿ ಪ್ರತಿಷ್ಠಿತ ಹಣಕಾಸು ಸಂಸ್ಥೆಯಾದ ಶ್ರೀಬಸವೇಶ್ವರ ಪತ್ತಿನ ಸಹಕಾರಿ ಸಂಘ.ನಿ. 2023-24ನೇ ಸಾಲಿನ 22 ನೇ ಸರ್ವ ಸಾಧಾರಣ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಶ್ರೀಬಸವೇಶ್ವರ ಪತ್ತಿನ ಸಹಕಾರಿ ಸಂಘಕ್ಕೆ 98.71 ಲಕ್ಷ ನಿವ್ವಳ ಲಾಭ ದೊರಕಿದೆ ಎಂದರು. ಬ್ಯಾಂಕಿನ ಉಪಾಧ್ಯಕ್ಷ ಸಿದ್ದಾಮೇಶ ಮೂಲಿಮನಿ, ನಿರ್ದೇಶಕರಾದ ಹೊನ್ನಪ್ಪ ರೋಣದ, ಸಂಗಣ್ಣ ಹುನ್ನಳ್ಳಿ, ಸೋಮಶೇಖರ ತೋಟಗೇರ, ಸಂಗಪ್ಪ ಹೂಲಗೇರಿ, ಶಿವುಕುಮಾರ ಬಾದವಾಡಗಿ, ಅನ್ನದಾನೇಶ್ವರ ಹಾದಿಮನಿ, ಚಂದ್ರಪ್ಪ ತಳವಾರ, ಮುತ್ತು ಲೋಕಾಪೂರ, ಅನ್ನಪೂರ್ಣ ಹೊಸೂರ, ಶಾಂತಾ ಹಳಪೇಟಿ,ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಸಿಬ್ಬಂದಿಗಳಾದ ಜಿ.ಎಂ.ಮಠ, ಪ್ರಾರ್ಥನೆ ಹಾಡಿದರು ಎಸ್.ಎಸ್.ಅಂಗಡಿ ಸ್ವಾಗತಿಸಿ. ಸಂಗಮೇಶ ಹಳಪೇಟಿ ನಿರುಪಿಸಿ,ವಿಜಯಲಕ್ಷ್ಮೀ ಪೋಲಿಸ ಪಾಟೀಲ ವಂದಿಸಿದರು. ಸಿಬ್ಬಂದಿಗಳಾದ ಎಂ.ಎಸ್.ಗುಡಿ, ವಿ.ಜಿ.ಕೊಮನೂರ, ಎಂ.ಟಿ. ಕಂದಗಲ್,ಎಂ.ಬಿ.ಕರಡಿ, ಸುರೇಶ ಪೈಲ, ಇನ್ನು ಅನೇಕರು ಇದ್ದರು.

ಬೇಡಿಕೆಗೆ ಆಗ್ರಹಿಸಿ ನಾಳೆಯಿಂದ ಮುಷ್ಕರ

ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ತಹಶೀಲ್ದಾರಿಗೆ ಮನವಿ ಸಲ್ಲಿಸುತ್ತಿರುವುದು.

ಬಾದಾಮಿ: ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಸೆ.26ರಿಂದ ಎಲ್ಲಾ ಬಗೆಯ ಮೊಬೈಲ್ ಆಪ್, ಹಾಗೂ ಅಪ್ಲಿಕೇಶನ್ ಅನ್ನು ಸ್ಥಗಿತಗೊಳಿಸಿ ಲೇಖನಿ ಸ್ಥಗಿತಗೊಳಿಸುವ ಮೂಲಕ ಎಲ್ಲಾ ಬೇಡಿಕೆ ಈಡೇಸುವವರೆಗೆ ಅನಿರ್ಧಿಷ್ಠಾವಧಿ ಮುಷ್ಕರ ರಾಜ್ಯವ್ಯಾಪಿ ಹಮ್ಮಿಕೊಳ್ಳಲಾಗುವುದು ಎಂದು ಎಂಬ ಆದೇಶವನ್ನು ರಾಜ್ಯ ಗ್ರಾಮ ಆಡಳಿತ ಅಧಿಕಾರಿಗಳ ಸಂಘ ಕರೆ ನೀಡಿದ್ದು ಸಮೂಹದ ಎಲ್ಲಾ ಬೇಡಿಕೆಗಳನ್ನು ಈಡೇರಿಸಿ ಉತ್ತಮ ಮತ್ತು ಗುಣಮಟ್ಟದ ರೀತಿಯಲ್ಲಿ ಸಾರ್ವಜನಿಕರ ಮತ್ತು ಸರಕಾರದ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಅನುಕೂಲ ಮಾಡಿಕೊಡಬೇಕೆಂದು ಸಂಘವು ಸರಕಾರಕ್ಕೆ ಆಗ್ರಹಿಸಿದರು

ಸಂಘದ ಗೌರವಧ್ಯಕ್ಷ ಬಿ.ಎಂ ಹಳ್ಳೂರ, ಅಧ್ಯಕ್ಷ ಆರ್.ವೈ ಯಲ್ಲಿಗುತ್ತಿ, ಉಪಾಧ್ಯಕ್ಷ ಸಲಾಖೆ, ಖಜಾಂಚಿ ಅಮೃತಾ ಪಾಟೀಲ, ಪ್ರಧಾನ ಕಾರ್ಯದರ್ಶಿ ಶಬ್ಬೀರ ಕೊಡಗನೂರ, ಸದಸ್ಯರಾದ ಎಸ್.ಜಿ ದ್ಯಾಂಪೂರ, ಗಿರೀಶ ಹಂಪಿಹೊಳಿಮಠ, ಪವಿತ್ರಾ ಪೂಜೇರ, ರಮೇಶ ಬಂದಿಕೇರಿ, ಗೌಡರ, ವಿಮಲಾ ದೊಡ್ಡವಾಡ. ಲಕ್ಷ್ಮಣ ತಳವಾರ, ಸಂಗಮೇಶ ಅಂಗಡಿ, ಶ್ರೀಕಾಂತ ಕೆಂಗಾರ, ಎಚ್.ಎಸ್.ಮಡಿವಾಳರ, ಧನಂಜಯ ಭೋವಿ, ಹವಾಲ್ದಾರ, ಜೋಗೇರ, ಕಲಾ.ಕೆ, ಸೊಪ್ಪಿನ ಸೇರಿದಂತೆ ಇತರರು ಇದ್ದರು.

ಗ್ರಾಮಗಳು ರಾಮ ರಾಜ್ಯವಾಗಲಿ: ಶಾಸಕ

ಕೆರೂರ: ಎಲ್ಲಿಯವರೆಗೆ ಗ್ರಾಮಗಳು ರಾಮರಾಜ್ಯವಾಗುವದಿಲ್ಲವೋ ಅಲ್ಲಿಯವರೆಗೆ ದೇಶದ ಅಭಿವೃದ್ಧಿಯಾಗುವುದಿಲ್ಲ ಎಂದು ಶಾಸಕ ಜೆ ಟಿ ಪಾಟೀಲ ಹೇಳಿದರು. ಅವರು ಸೋಮವಾರ ಸಮೀಪದ ಇನಾಂ ಹುಲ್ಲಿಕೇರಿ ಗ್ರಾಮದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯಿಂದ ಆಯೋಜಿಸಿದ್ದ ಕೆರೆ ಹಸ್ತಾಂತರ ಹಾಗೂ ಬಾಗಿನ ಅರ್ಪಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯು ಬಡಜನರಿಗೆ ಆರ್ಥಿಕವಾಗಿ ಶಕ್ತಿ ತುಂಬಿದೆ, ಸಂಸ್ಥೆಯು ಸಮಾಜ ಮುಖಿಕಾರ್ಯದಲ್ಲಿ ಸದ ನಿರತವಾಗಿದೆ ಎಂದು ಹೇಳಿದರು.ಕೆರೆಗಳ ಪುನಶ್ಚೇತನದಿಂದ ರೈತರ ಜಮೀನಿಗಳು ಸಮೃದ್ಧಿಯಾಗಲಿವೆ ಜೊತೆಗೆ ಪ್ರಾಣಿ ಸಂಕುಲಕ್ಕೆ ಅನುಕೂಲವಾಗಲಿದೆ, ಸಂಸ್ಥೆಯಿಂದ 6 ಲಕ್ಷ ವೆಚ್ಚದಲ್ಲಿ ಈ ಕೆರೆ ಪುನಶ್ಚೇತನವಾಗಿದೆ,ಕೆರೆಯನ್ನು ಗ್ರಾಮಸ್ಥರು ಸಂರಕ್ಷಿಸಿ ಉಳಿಸಿಕೊಳ್ಳಬೇಕು ಎಂದು ಧರ್ಮಸ್ಥಳ ಸಂಸ್ಥೆಯ ಜಿಲ್ಲಾ ನಿರ್ದೇಶಕ ಚನ್ನಕೇಶವ ಹೇಳಿದರು. ಈ ಸಂದರ್ಭದಲ್ಲಿ ಗ್ರಾ.ಪಂ ಅಧ್ಯಕ್ಷೆ ಶ್ರೀದೇವಿ ಲಮಾಣಿ,ಸದಸ್ಯೆ ಸುವರ್ಣಾ ತೀರ್ಥಪ್ಪನವರ,ಮಂಜುನಾಥ ಮತ್ತಿಕಟ್ಟಿ,ರಾಮನಗೌಡ ಮೂಲಿಮನಿ,ಮುಖಂಡರಾದ ಬಿ ಕೆ ಕೊವಳ್ಳಿ,ರಾಚಪ್ಪ ಬನ್ನಿದಿನ್ನಿ,ಕುಮಾರ ಬನ್ನಿದಿನ್ನಿ,ಮಲ್ಲಪ್ಪ ಬೂವನ್ನವರ,ರವಿ ಲಮಾಣಿ,ಎಚ್ ಆರ್ ಕಿತ್ತಲಿ,ಗೌಡಪ್ಪ ಹಿರೇಹಾಳ,ಸಂಸ್ಥೆಯ ಕ್ಷೇತ್ರ ಯೋಜನಾಧಿಕಾರಿ ಮಾಂತೇಶ,ಪಿಡಿಓ ಹಿರೇಗೌಡರ,ಕೆರೂರ ವಲಯದ ಕಂದಾಯ ನಿರೀಕ್ಷ ಆನಂದ ಭಾವಿಮಠ ಇದ್ದರು.

ಸಮಾಚಾರ ಸಣ್ಣದಲ್ಲ

ಸೋದರನಿಂದಲೇ ತಂಗಿಯ ಕೊಲೆ

ಗದಗ: ಆಸ್ತಿ ವಿವಾದಕ್ಕೆ ಸಂಬಂಧಿಸಿದಂತೆ ಅಣ್ಣನೇ ತಂಗಿಯನ್ನು ಬರ್ಬರವಾಗಿ ಕೊಲೆ ಮಾಡಿ ಪೊಲೀಸರಿಗೆ ಶರಣಾದ ಘಟನೆ ಮುಂಡರಗಿಯಲ್ಲಿ ಮಂಗಳವಾರ ನಡೆದಿದೆ. ಕಾವ್ಯಾ (32) ಕೊಲೆಗೀಡಾದ ಮಹಿಳೆ. ಈಶಪ್ಪ ಕ್ಯಾದಗಿಹಳ್ಳಿ ಕೊಲೆ ಆರೋಪಿ. ಅನ್ಯಕೋಮಿನ ಯುವಕ ಪ್ರಶಾಂತ ಹಡಪದ ಎಂಬವರ ಜೊತೆ ಮದುವೆಯಾಗಿದ್ದ ಯುವತಿ ಕಾವ್ಯಾ, ಆಸ್ತಿಗಾಗಿ ಅಣ್ಣ ಈಶಪ್ಪನ ವಿರುದ್ಧ ಕೇಸ್ ದಾಖಲಿಸಲು ಮುಂದಾಗಿದ್ದಳು. ಮನೆಗೆ ಬಂದ ತಂಗಿ ಕಾವ್ಯಾ ಅಣ್ಣನೊಂದಿಗೆ ವಾಗ್ವಾದ ನಡೆಸಿದ್ದಾಳೆ ಎನ್ನಲಾಗಿದ್ದು, ಜಗಳ ವಿಕೋಪಕ್ಕೆ ತಿರುಗಿ ತಂಗಿಯನ್ನು ಮಾರಕಾಸ್ತ್ರಗಳಿಂದ ಕೊಲೆಗೈದ ಈಶಪ್ಪ ತಾನೇ ಪೊಲೀಸರಿಗೆ ಶರಣಾಗಿದ್ದಾನೆ. ಸ್ಥಳಕ್ಕೆ ಹೆಚ್ಚುವರಿ ಎಸ್‌ಪಿ ಎಂ.ಬಿ. ಸಂಕದ ಭೇಟಿ ನೀಡಿದ್ದರು. ಮುಂಡರಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಾಕುವಿನಿಂದ ಇರಿತ ನಾಲ್ವರಿಗೆ ಗಾಯ

ಗಂಗಾವತಿ: ಗಣೇಶ ನಿಮಜ್ಜನ ಮೆರವಣಿಗೆಯ ಸಂದರ್ಭದಲ್ಲಿ ಗಲಾಟೆ ನಡೆದು ಚೂರಿ ಇರಿತಕ್ಕೊಳಗಾಗಿ ಒಬ್ಬ ಯುವಕ ಗಂಭೀರವಾಗಿ ಗಾಯಗೊಂಡಿದ್ದು, ಇತರ ಮೂವರಿಗೆ ಗಾಯಗಳಾಗಿರುವ ಘಟನೆ ಗಂಗಾವತಿಯಲ್ಲಿ ಸೋಮವಾರ ರಾತ್ರಿ ನಡೆದಿದೆ. ಗಂಭೀರವಾಗಿ ಗಾಯಗೊಂಡ ಶಿವು ದುರುಗಪ್ಪ ಮಾದಿಗ ಎಂಬವರನ್ನು ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಗುಂಡಮ್ಮ ಕ್ಯಾಂಪಿನ ಗಣೇಶ ಮೂರ್ತಿಯ ಮೆರವಣಿಯ ಯಶೋಧಾ ಆಸ್ಪತ್ರೆಯ ಮುಂಭಾಗ ಬಂದಾಗ ನೃತ್ಯ ಮಾಡುತ್ತಿದ್ದ ಯುವಕರ ನಡುವೆ ಗಲಾಟೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿಜಯಪುರ ಬಳಿ ಸಂಗಮನಾಥ ದೇವಾಲಯ ಜಲಾವೃತ

ಉ.ಕ.ದಲ್ಲಿ ನಿಲ್ಲದ ಮಳೆ ಜನಜೀವನ ಅಸ್ತವ್ಯಸ್ತ

ಬೆಂಗಳೂರು: ರಾಜ್ಯದ ವಿವಿಧೆಡೆ ಮಳೆ ಪರಿಸ್ಥಿತಿ ಮುಂದುವರಿದಿದೆ. ಧಾರವಾಡ, ಗದಗ, ಯಾದಗಿರಿ, ಕಲಬುರಗಿ ಮೊದಲಾದ ಜಿಲ್ಲೆಗಳಲ್ಲಿ ಭಾರಿ ಮಳೆಯಿಂದಾಗಿ ಹಲವೆಡೆ ಹಳ್ಳ-ಕೊಳ್ಳಗಳು ಭರ್ತಿಯಾಗಿ ಜನಜೀವನ ಅಸ್ತವ್ಯಸ್ತಗೊಂಡಿದೆ.

ಗದಗದಲ್ಲಿ ಸಿಡಿಲು ಬಡಿದು ಕುರಿಗಳು ಸಾವು

ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ವೆಂಕಟಾಪುರ ಗ್ರಾಮದಲ್ಲಿ ಮಳೆ ಜತೆಗೆ ಸಿಡಿಲು ಬಡಿದು ಕುರಿಗಳು ಮೃತಪಟ್ಟಿವೆ. ನಿಪ್ಪಾಣಿ ಮೂಲದ ಕುರಿಗಾಹಿಗೆ ಸೇರಿದ ನಾಲ್ಕು ಕುರಿಗಳು ಮೃತಪಟ್ಟಿವೆ. ಮಳೆಗಾಲದಲ್ಲಿ ತಮ್ಮ ಕುರಿಗಳನ್ನು ಮೇಯಿಸುತ್ತಾ ಸಂಚಾರ ಮಾಡುವ ಕುರಿಗಾಹಿಗಳು, ಸೋಮವಾರ ರಾತ್ರಿ ಗ್ರಾಮದ ಹೊರವಲಯದಲ್ಲಿ ತಂಗಿದ್ದರು. ಆಗ ಸುರಿದ ಭಾರಿ ಮಳೆ ವೇಳೆ ಸಿಡಿಲು ಬಡಿದು ಕುರಿಗಳು ಮೃತಪಟ್ಟಿವೆ. ಕುರಿಗಾಹಿಗಳಿಗೆ ಪಶುಸಂಗೋಪನಾ ಇಲಾಖೆ ಪರಿಹಾರ ನೀಡಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಸಿಡಿಲಿಗೆ ರೈತ ಬಲಿ: ಸಿಡಿಲಿನ ಹೊಡೆತಕ್ಕೆ ಧಾರವಾಡ ತಾಲೂಕಿನ ಹನುಮನಾಳ ಗ್ರಾಮದ ರೈತರೊಬ್ಬರು ಬಲಿಯಾಗಿದ್ದಾರೆ.ಭೀಮನಗೌಡ ಪಾಟೀಲ(65)ಮೃತ ದುರ್ದೈವಿ. ಹೊಲದಿಂದ ಮನೆಗೆ ಬರುವಾಗ ಸಿಡಿಲು ಬಡಿದು ಭೀಮನಗೌಡ ಮೃತಪಟ್ಟಿದ್ದಾರೆ. ಗರಗ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮನೆ ಗೋಡೆ ಕುಸಿದು ಬಿದ್ದು ವ್ಯಕ್ತಿ ಸಾವು: ಉತ್ತರ ಒಳನಾಡಿನಲ್ಲಿ ಮಳೆಯು ಅಬ್ಬರಿಸುತ್ತಿದ್ದು, ಕಲಬುರಗಿ ಜಿಲ್ಲೆಯ ಸೇಡಂ ತಾಲೂಕಿನ ಕುರುಕುಂಟಾ ಗ್ರಾಮದಲ್ಲಿ ಧಾರಾಕಾರವಾಗಿ ಸುರಿದ ಮಳೆಯಿಂದಾಗಿ ಮನೆಯ ಗೋಡೆ ಕುಸಿದು ವ್ಯಕ್ತಿಯೊಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ರಾಜೇಂದ್ರ ಪಾಟೀಲ್ (62) ಮೃತ ದುರ್ದೈವಿ. ರಾಜೋಳ ಗ್ರಾಮದಿಂದ ಮಗಳ ಮನೆ ಕುರುಕುಂಟಾಗೆ ತೆರಳಿದ್ದರು. ಮನೆಯಲ್ಲಿ ಮಲಗಿದ್ದ ವೇಳೆ ಗೋಡೆ ಕುಸಿದಿದೆ. ಪರಿಣಾಮ ರಾಜೇಂದ್ರ ಅವರು ರಕ್ತಸ್ರಾವವಾಗಿ ಮೃತಪಟ್ಟಿದ್ದಾರೆ.

ಜಲಾವೃತಗೊಂಡಿರುವ ಸಂಗಮನಾಥ ದೇವಾಲಯ

ಭಾರಿ ಮಳೆಗೆ ಉಕ್ಕಿಹರಿದ ಹಳ್ಳ, ಕೊಳ್ಳಗಳು

ವಿಜಯಪುರ ಜಿಲ್ಲೆಯಲ್ಲಿ ಸೋಮವಾರ ರಾತ್ರಿಯಿಡೀ ಸುರಿದ ಭಾರೀ ಮಳೆಗೆ ಹಳ್ಳ,ಕೊಳ್ಳಗಳು ಉಕ್ಕಿ ಹರಿದಿವೆ. ತಿಕೋಟಾ ತಾಲ್ಲೂಕಿನ ಕಳ್ಳಕವಟಗಿ ಗ್ರಾಮದ ಸಂಗಮನಾಥ ಹಳ್ಳವು ತುಂಬಿದ್ದು, ಸೇತುವೆ ಮೇಲಿಂದ ನೀರು ಹರಿಯುತ್ತಿದೆ. ವಿಜಯಪುರಕ್ಕೆ ಹೋಗುವ ಜಾಲಗೇರಿ, ಹುಬನೂರ ರಸ್ತೆಗಳಲ್ಲಿ ಸಂಚಾರ ಕೆಲಕಾಲ ಸ್ಥಗಿತವಾಗಿತ್ತು. ಸಂಗಮನಾಥ ದೇವಸ್ಥಾನದಲ್ಲಿ ಏಳೆಂಟು ಅಡಿ ನೀರು ಗರ್ಭಗುಡಿಯಲ್ಲಿ ನಿಂತಿದ್ದರಿಂದ ಮಂಗಳವಾರದ ಪೂಜಾ ಕೈಂಕರ್ಯ ನೆರವೇರಿಲ್ಲ. ಮಧ್ಯಾಹ್ನ ಗರ್ಭಗುಡಿಯಲ್ಲಿ ನೀರಿನ ಪ್ರಮಾಣ ಇಳಿದರೆ ಪೂಜೆ ನೆರವೇರುವುದು ಎಂದು ಅರ್ಚಕ ಮಲ್ಲಯ್ಯ ಹಿರೇಮಠ ತಿಳಿಸಿದರು. ಸಂಗಮನಾಥನ ಆವರಣ ಸಂಪೂರ್ಣ ಜಲಾವೃತವಾಗಿದ್ದು, ದೇವರ ದರ್ಶನ ಇಲ್ಲದಂತಾಗಿದೆ. ದೂರಿನಿಂದಲೇ ಜನರು ನಮಸ್ಕಾರ ಮಾಡುತ್ತಿದ್ದಾರೆ.

ಸಿಡಿಲು ಬಡಿದು ನಾಲ್ವರ ಸಾವು ಕುಟುಂಬಸ್ಥರಿಗೆ ಸಚಿವರ ಸಾಂತ್ವನ

ಯಾದಗಿರಿ: ಸೋಮವಾರ ಸಿಡಿಲು ಬಡಿದು ನಾಲ್ವರು ಮೃತಪಟ್ಟ ಯಾದಗಿರಿ ತಾಲೂಕಿನ ಜಿನಕೇರಾ ತಾಂಡಕ್ಕೆ ಜಿಲ್ಲಾ ಉಸ್ತುವಾರಿ ಸಚಿವರಾದ ಶರಣಬಸಪ್ಪ ದರ್ಶನಾಪುರ ಅವರು ಭೇಟಿ ನೀಡಿ, ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಸರಕಾರದಿಂದ ಸೂಕ್ತ ಪರಿಹಾರ ಒದಗಿಸಲು ಅಧಿಕಾರಿಗಳಿಗೆ ಸೂಚಿಸುವುದಾಗಿ ಭರವಸೆ ನೀಡಿದ್ದಾರೆ.

ಸಿಡಿಲು ಬಡಿದು ನೇನು(18), ಚೇನು (22), ಕಿಶನ್(30) ಮತ್ತು ಸುಮಿಬಾಯಿ(30) ಮೃತಪಟ್ಟಿದ್ದಾರೆ. ಇನ್ನೂ 8 ಜನಕ್ಕೆ ಗಾಯಗಳಾಗಿದ್ದು ಒಬ್ಬರ ಆರೋಗ್ಯದಲ್ಲಿ ಚೇತರಿಕೆ ಕಂಡಿದ್ದು, ಮನೆಗೆ ಮರಳಿದ್ದಾರೆ. ಅದರಂತೆ ಇನ್ನುಳಿದವರು ಸಹ ಆದಷ್ಟು ಬೇಗ ಗುಣಮುಖರಾಗಲಿ ಎಂದು ಸಚಿವರು ಹಾರೈಸಿದರು. ಇದಕ್ಕೂ ಮುಂಚೆ, ಸಿಡಿಲಿನಿಂದ ಗಾಯಗೊಂಡು ಯಾದಗಿರಿಯ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವವರನ್ನು ಸಚಿವ ದರ್ಶನಾಪುರ ಭೇಟಿಮಾಡಿ ಆರೋಗ್ಯ ವಿಚಾರಿಸಿದರು.

ಸಿಡಿಲಿನಿಂದ ಗಾಯಗೊಂಡು ಯಾದಗಿರಿಯ ಜಿಲ್ಲಾ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವವರ ಆರೋಗ್ಯವನ್ನು ಸಚಿವ ಶರಣಬಸಪ್ಪ ದರ್ಶನಾಪುರ ವಿಚಾರಿಸಿದರು.

ಮಳೆಗೆ ಕುಸಿದ ಮನೆ

ಚಿಕ್ಕಮಗಳೂರು: ಜಿಲ್ಲೆಯ ಆಲ್ದೂರು ಹೋಬಳಿಗಳ ವ್ಯಾಪ್ತಿಯ ಗ್ರಾಮಗಳಲ್ಲಿ ಮಳೆ ಅಬ್ಬರ ಜೋರಾಗಿತ್ತು. ಮಳೆಯ ಅಬ್ಬರಕ್ಕೆ ಐದಳ್ಳಿ ಗ್ರಾಮದ ಪ್ರಕಾಶ್ ಎಂಬುವವರ ಮನೆಯ ಗೋಡೆಗೆ ಹಾನಿಯಾಗಿ ಕುಸಿದು ಬಿದ್ದಿದೆ. ಈಗಾಗಲೇ ಕಾಫಿ ಕಾಯಿ ಕಟ್ಟುವಿಕೆ ಮುಗಿಯುತ್ತಾ ಬಂದಿದ್ದು, ಮಳೆ ಮುಂದುವರಿದರೆ ಬೆಳೆಗಾರರು ನಷ್ಟ ಎದುರಿಸಬೇಕಾಗುತ್ತದೆ ಎಂದು ಕಾಫಿ ಬೆಳೆಗಾರ ರವಿಕುಮಾರ್ ಎಚ್.ಎಲ್. ಹೇಳಿದ್ದಾರೆ.

ಉಪಾಹಾರ ಸೇವಿಸಿ ವಿದ್ಯಾರ್ಥಿಗಳು ಅಸ್ವಸ್ಥ

ಅರಕೇರಾ: ತಾಲೂಕಿನ ಆಲ್ಕೋಡ ಗ್ರಾಮದ ವಸತಿ ನಿಲಯವೊಂದರಲ್ಲಿ ಸೆ.24ರ ಮಂಗಳವಾರ ಬೆಳಗಿನ ಉಪಾಹಾರ ಸೇವಿಸಿ 10 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಸ್ವಸ್ಥರಾಗಿರುವ ಘಟನೆ ನಡೆದಿದೆ.

ಚಿತ್ರಾನ್ನ ಸೇವಿಸಿದ ವಿದ್ಯಾರ್ಥಿಗಳು ತಲೆ ಸುತ್ತು ಬಂದು, ವಾಂತಿ ಹಾಗೂ ಆಯಾಸಕ್ಕೆ ಒಳಗಾದರು. ಗಾಬರಿಗೊಂಡ ವಿದ್ಯಾರ್ಥಿಗಳು ಶಿಕ್ಷಕರ ಗಮನಕ್ಕೆ ತಂದಿದ್ದು, ಶಿಕ್ಷಕರು ಅಸ್ವಸ್ಥರಿಗೆ ಓಆರ್‌ಎಸ್ ಕುಡಿಸಿದ್ದು, 5-6 ವಿದ್ಯಾರ್ಥಿಗಳು ಚೇತರಿಸಿಕೊಂಡಿದ್ದಾರೆ.ನಂತರ ಅವರನ್ನು ಅರಕೇರಾದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ನೀಡಲಾಗಿದೆ.

ಆಹಾರದಲ್ಲಿ ವ್ಯತ್ಯಾಸ: ಈ ಕುರಿತು ಪ್ರತಿಕ್ರಿಯಿಸಿದ ವೈದ್ಯ ರಾಘವೇಂದ್ರ ಯಾರಿಗೂ ತೊಂದರೆಯಾಗಿಲ್ಲ. ಆಹಾರದಲ್ಲಿ ವ್ಯತ್ಯಾಸವಾಗಿದ್ದರಿಂದಾಗಿ ಈ ರೀತಿಯ ಸಮಸ್ಯೆ ಆಗಿರಬಹುದು ಎಂದು ತಿಳಿಸಿದ್ದಾರೆ. ಮುಂಜಾಗ್ರತಾ ದೃಷ್ಟಿಯಿಂದ ಅಸ್ವಸ್ಥ ವಿದ್ಯಾರ್ಥಿಗಳನ್ನು ದೇವದುರ್ಗದ ಸಾರ್ವಜನಿಕ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆಗೆ ಒಳಪಡಿಸಲಾಗಿದೆ. ಘಟನೆ ಬಗ್ಗೆ ಇಲಾಖಾ ಮಟ್ಟದ ವಿಚಾರಣೆ ನಡೆಸಬೇಕು ಎಂದು ಪಾಲಕರು ಪಟ್ಟು ಹಿಡಿದಿದ್ದಾರೆ. ತಿಂಗಳ ಹಿಂದೆಯೇ ಮಧ್ಯಾಹ್ನದ ಊಟದಲ್ಲಿ ವಿಷ ಬೆರೆಸಿದ ಪ್ರಕರಣ ಮಾಸುವ ಮುನ್ನವೇ ಮತ್ತೊಂದು ಆಘಾತ ಉಂಟಾಗಿದೆ. ಇದಕ್ಕೆ ಹಾಸ್ಟೆಲ್ ವಾರ್ಡನ್ ಹಾಗೂ ಶಾಲೆ ಮುಖ್ಯ ಶಿಕ್ಷಕರು ಉತ್ತರ ನೀಡಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಪ್ರತಾಪ್‌ಸಿಂಹ ವಿರುದ್ಧ ದೂರು

ಶಹಾಪುರ: ಕೋಮುಭಾವನೆಗಳಿಗೆ ಧಕ್ಕೆ ಹಾಗೂ ಗಲಭೆಗೆ ಪ್ರಚೋದನೆ ಕಾಯ್ದೆಯಡಿ ಬಿಜೆಪಿಯ ಮಾಜಿ ಸಂಸದ ಪ್ರತಾಪಸಿಂಹ ಸೇರಿ ಐವರ ವಿರುದ್ಧ ಶಹಾಪುರ ಠಾಣೆಯ ಪಿಎಸ್‌ಐ ಡಿ.ವಿ.ನಾಯಕ ಅವರು ದೂರು ದಾಖಲಿಸಿಕೊಂಡಿದ್ದಾರೆ.



ಶಹಾಪುರದ ಕರಣ ಸುಭೇದಾರ್, ಶಿವಕುಮಾರ ಶಿರವಾಳ, ಗುರುರಾಜ ಕಾಮಾ, ನಾಗಭೂಷಣ ಇತರ ಆರೋಪಿಗಳು. ಶನಿವಾರ ನಡೆದ ಹಿಂದೂ ಮಹಾ ಗಣಪತಿ ವಿಸರ್ಜನೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಪ್ರತಾಪಸಿಂಹ, ಎಲ್ಲ ಕಡೆ ಹಿಂದೂ ಮೆರವಣಿಗೆ ಮೇಲೆ ಕಲ್ಲುತೂರಾಟ ನಡೆಸುವ ಪ್ರವೃತ್ತಿ ಕಾಣಿಸ್ತಾ ಇದೆ. ಆದರೆ ಈದ್ಗಾ ಮೆರವಣಿಗೆಯಲ್ಲಿ ಕಲ್ಲು ಹೊಡೆದಿರುವುದನ್ನು ತೋರಿಸಿ. ಕಲ್ಲು ಹೊಡೆಯುವ ಸಂಸ್ಕೃತಿ ಮುಸ್ಲಿಮರಿಗೆ ಏಕೆ ಬರುತ್ತದೆ ಎಂದು ಪ್ರಶ್ನಿಸಿದ್ದರು. ಈ ಮೂಲಕ ಧಾರ್ಮಿಕ ಭಾವನೆಗಳಿಗೆ ಅಘಾತವನ್ನು ಉಂಟುಮಾಡುವ ಉದ್ದೇಶದಿಂದ ಬುದ್ಧಿಪೂರ್ವಕವಾಗಿ ಮತ್ತು ದ್ವೇಷಭಾವನೆಯಿಂದ ಮಾತನಾಡಿದ್ದು, ಹಾಗೂ ಗಲಭೆಗೆ ಪ್ರಚೋದಿಸಿದ್ದು ಕಂಡುಬಂದಿದ್ದರಿಂದ ದೂರು ದಾಖಲಿಸಿರುವುದಾಗಿ ಪಿಎಸ್‌ಐ ತಿಳಿಸಿದ್ದಾರೆ.

ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ತಿರುಗೇಟು

ರವಿಕುಮಾರ್ ಆರೋಪ ಸತ್ಯಕ್ಕೆ ದೂರವಾದದ್ದು

ಕಲಬುರಗಿ: ಮಾಡ್ಯೂಲರ್ ಆಪರೇಷನ್ ಥಿಯೇಟರ್ ಉಪಕರಣ ಖರೀದಿಯಲ್ಲಿ ಅವ್ಯವಹಾರ ನಡೆದಿದೆ ಎಂಬ ವಿಧಾನಪರಿಷತ್ ಸದಸ್ಯ ರವಿಕುಮಾರ್ ಆರೋಪ ಸತ್ಯಕ್ಕೆ ದೂರವಾದದ್ದು ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇರಳ ಕಂಪನಿ ಟೆಂಡರ್‌ನಲ್ಲಿ ಭಾಗವಹಿಸಿಲ್ಲ. ಹೀಗಿದ್ದಾಗ ನಾವೇನು ಅವರ ಮನೆಗೆ ಹೋಗಿ ಟೆಂಡರ್ ಕೊಡಬೇಕಾ? ಕೇರಳ ಕಂಪನಿ ಬಗ್ಗೆ ಯಾಕೆ ಅಷ್ಟು ಆಸಕ್ತಿ ಎಂದು ಪ್ರಶ್ನಿಸಿದರು.

ನಾಲ್ವರು ಟೆಂಡರ್ ಹಾಕಿದ್ದು, ಮೂವರನ್ನು ತಿರಸ್ಕರಿಸಿ ಒಬ್ಬರಿಗೆ ಕೊಟ್ಟಿದ್ದೇವೆ ಎಂದು ಹೇಳಿರುವುದು ಸುಳ್ಳು. ನಾಲ್ವರಲ್ಲಿ ಅರ್ಹತೆ ಇಲ್ಲದ ಕಾರಣ ಇಬ್ಬರ ಟೆಂಡರ್ ತಿರಸ್ಕರಿಸಲಾಗಿದೆ. ಇಬ್ಬರದ್ದು ಸ್ವೀಕಾರವಾಗಿದೆ. ಅದರಲ್ಲಿ ಎಲ್-1 ಅವರಿಗೆ ಟೆಂಡರ್ ಕೊಡಲಾಗಿದೆ ಎಂದು ಸಚಿವ ಶರಣ ಪ್ರಕಾಶ ಪಾಟೀಲ್ ಮಾಹಿತಿ ನೀಡಿದರು.

ಬಿಜೆಪಿ ಕಾಲದ ಕೋವಿಡ್ ಅವ್ಯವಹಾರ ಪ್ರಕರಣ ಕುರಿತಂತೆ ನ್ಯಾ.ಗುನ್ನಾ ಸಮಿತಿ ಮುಖ್ಯಮಂತ್ರಿಗೆ ಪ್ರಾಥಮಿಕ ವರದಿ ಕೊಟ್ಟಿದ್ದಾರೆ. ಈ ಬಗ್ಗೆ ಉನ್ನತ ಸಮಿತಿ ಮಾಡಿ ಕ್ರಮ ತೆಗೆದುಕೊಳ್ಳಲು ಹೇಳಿದ್ದಾರೆ. ಅದರಲ್ಲಿ ಬಹಳಷ್ಟು ಅವ್ಯವಹಾರ ಆಗಿದೆ ಕಂಡು ಬಂದಿದೆ. 500 ಕೋಟಿಗಿಂತಲೂ ಜಾಸ್ತಿ ಅವ್ಯವಹಾರ ಆಗಿದೆ ಎಂದು ಹೇಳಿದ್ದಾರೆ. ಇದು ಇನ್ನೂ ಹೆಚ್ಚಾಗಬಹುದು ಎಂದರು.

ದರ್ಶನ್‌ನನ್ನು ಭೇಟಿಯಾದ ಸುನೀಲ್

ಬಳ್ಳಾರಿ: ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ಬಳ್ಳಾರಿ ಕೇಂದ್ರ ಕಾರಾಗೃಹದಲ್ಲಿರುವ ದರ್ಶನ್ ನನ್ನು ವಕೀಲ ಸುನೀಲ್ ಮಂಗಳವಾರ ಭೇಟಿ ಮಾಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ವಕೀಲರು, ಜೈಲಲ್ಲಿರುವ ದರ್ಶನ್ ಗೆ ಹೊಸ ಮ್ಯಾನುವಲ್ ಪ್ರಕಾರ ಸೌಲಭ್ಯ ನೀಡಲು ಜೈಲಾಧಿಕಾರಿಗೆ ಬೇಡಿಕೆ ಸಲ್ಲಿಸಿದ್ದು, ಎರಡು ದಿನದಲ್ಲಿ ಮೂಲಭೂತ ಸೌಲಭ್ಯ ನೀಡದಿದ್ದರೆ ಮಾನವ ಹಕ್ಕುಗಳ ಆಯೋಗಕ್ಕೆ ದೂರು ನೀಡಲಾಗುವುದು ಎಂದರು. ಹೊಸ ನಿಯಮಾವಳಿಯಂತೆ ಮೆಡಿಕಲ್ ಬೆಡ್ ಮತ್ತು ದಿಂಬು ಕೊಡಲು ಅವಕಾಶ ಇದೆ. ನ್ಯಾಯಾಲಯದ ಆದೇಶದ ಬಗ್ಗೆ ಜೈಲು ಅಧಿಕಾರಿಗೆ ವಕೀಲ ಸುನೀಲ್ ಮನವರಿಕೆ ಮಾಡಿಕೊಟ್ಟರು. ಸೆಷನ್ ನ್ಯಾಯಾಲಯದಲ್ಲಿ ಜಾಮೀನು ಅರ್ಜಿ ಸಲ್ಲಿಕೆ ಮಾಡಲಾಗಿದ್ದು, ಸೆ.27 ರಂದು ವಿಚಾರಣೆ ಇದೆ. ಶನಿವಾರ ಜಾಮೀನಿಗೆ ಅರ್ಜಿ ಹಾಕಿದ್ದು, ಪಬ್ಲಿಕ್ ಪ್ರಾಸಿಕ್ಯೂಷನ್‌ಗೆ ಸಮಯ ತೆಗೆದುಕೊಂಡಿದ್ದಾರೆ. ಜಾಮೀನು ಅರ್ಜಿ ತಿರಸ್ಕೃತಗೊಂಡರೆ ಹೈಕೋರ್ಟ್‌ಗೆ ಹೋಗುತ್ತೇವೆ ಎಂದು ಹೇಳಿದರು.

ನಮಗೆ ನೂರಕ್ಕೆ ನೂರು ಜಾಮೀನು ಸಿಗುತ್ತದೆ ಎಂಬ ವಿಶ್ವಾಸ ಇದೆ. ಈಗಾಗಲೇ ಮೂವರಿಗೆ ಜಾಮೀನು ಸಿಕ್ಕಿದೆ. ನಮಗೆ ಕೆಲವೊಂದು ಸಂಶಯಗಳಿದ್ದವು. ಎಲ್ಲ ವಿವರಣೆ ತಗೊಂಡಿದ್ದೇವೆ. ದರ್ಶನ್ ಗೆ ಬೆನ್ನುನೋವು ಹೆಚ್ಚಾಗಿದೆ. ಹೀಗಾಗಿ ಮೆಡಿಕಲ್ ಅವಕಾಶಗಳನ್ನು ಕನ್ಸಿಡರ್ ಮಾಡುವುದಕ್ಕೆ ಜೈಲು ಅಧಿಕಾರಿಗಳಿಗೆ ಹೇಳಿದ್ದೇವೆ. ಮೂಲಭೂತ ಸೌಲಭ್ಯ ಕೊಡಿ ಎಂದು ಹೇಳಿದ್ದೇವೆ.

ಸುನೀಲ್, ವಕೀಲ

ಬೋನಿಗೆ ಬಿದ್ದ ಚಿರತೆ

ಗುಂಡ್ಲುಪೇಟೆ: ಅರಣ್ಯ ಇಲಾಖೆ ಹುಲಿಗೆ ಇರಿಸಿದ್ದ ಬೋನಿನಲ್ಲಿ ಸುಮಾರು 5ರಿಂದ 6 ವರ್ಷದ ಗಂಡು ಚಿರತೆಯೊಂದು ತಾಲೂಕಿನ ಪಡಗೂರಿನ ಹೊರ ವಲಯದಲ್ಲಿ ಸೆರೆಯಾಗಿದೆ.

ಪಡುಗೂರು ಗ್ರಾಮದ ಶಿವಕುಮಾರ್ ಎಂಬುವವರ ಜಮೀನಿನಲ್ಲಿ ಕಳೆದ ಮೂರ್ನಾಲ್ಕು ದಿನಗಳ ಹುಲಿ ಕಾಣಿಸಿಕೊಂಡ ಹಿನ್ನೆಲೆ ರೈತರ ಒತ್ತಾಯದ ಮೇರೆಗೆ ಗುಂಡ್ಲುಪೇಟೆ ಬಫರ್ ಜೋನ್ ವಲಯ ಅರಣ್ಯಾಧಿಕಾರಿಗಳು ಬೋನ್ ಇರಿಸಿದ್ದರು. ಇದೀಗ ಆ ಬೋನಿನಲ್ಲಿ ಚಿರತೆ ಸೆರೆಯಾಗಿದೆ. ಬೋನಿನಲ್ಲಿ ಕಟ್ಟಿಹಾಕಿದ್ದ ಕರುವನ್ನು ಚಿರತೆ ತಿಂದು ಹಾಕಿದೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ. ರೈತ ಶಿವಕುಮಾರ್ ಮಂಗಳವಾರ ಬೆಳಗ್ಗೆ ಜಮೀನಿಗೆ ಹೋಗಿದ್ದ ವೇಳೆ ಬೋನಿನಲ್ಲಿ ಚಿರತೆ ಸೆರೆಯಾಗಿರುವುದು ಗಮನಕ್ಕೆ ಬಂದಿದೆ. ಮಾಹಿತಿ ಅರಿತ ಆರ್ ಎಫ್‌ಓ ಸತೀಶ್ ಕುಮಾರ್ ನೇತೃತ್ವದ ಅರಣ್ಯಾಧಿಕಾರಿಗಳ ತಂಡ ಕೂಡಲೇ ಸ್ಥಳಕ್ಕೆ ಆಗಮಿಸಿ ಪರಿಶೀಲಿಸಿ, ಬಂಡೀಪುರ ಅಭಯಾರಣ್ಯದ ಕಲ್ಕೆರೆ ಅರಣ್ಯ ಪ್ರದೇಶಕ್ಕೆ ಬಿಡಲಾಗಿದೆ.

ಮುಡಾ ಹಗರಣ ಸಿದ್ದರಾಮಯ್ಯ ಭಾಗಿಯಾಗಿಲ್ಲ

ಶಿರಸಿ: ಮುಡಾ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಗಿಯಾಗಿಲ್ಲ. ಸಿಎಂ ಸಿದ್ದರಾಮಯ್ಯ ನಿರಪರಾಧಿಯಾಗಿ ಹೊರ ಬರಲಿದ್ದಾರೆ ಎಂದು ಕಾಂಗ್ರೆಸ್ ಶಾಸಕ ಭೀಮಣ್ಣ ನಾಯ್ಕ ಪ್ರತಿಕ್ರಿಯೆ ನೀಡಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕ ನಾಯ್ಕ, ಅಧಿವೇಶದಲ್ಲಿ ವಿಧಾನಸಭೆ ಒಳಗಡೆ ಹಾಗೂ ಹೊರಗಡೆಯೂ ಬಿಜೆಪಿ ಶಾಸಕರು ಮುಖ್ಯಮಂತ್ರಿ ವಿರುದ್ಧ ಇಲ್ಲಸಲ್ಲದ ಆರೋಪ ಮಾಡಿದ್ದಾರೆ ಎಂದು ಕಿಡಿಕಾರಿದ್ದಾರೆ.

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಧಾರವಾಡ
ಕಾರ್ಯನಿರ್ವಾಹಕ ಇಂಜಿನೀಯರರವರ ಕಚೇರಿ,
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ, ಧಾರವಾಡ
ಕ್ರ.ಸಂ./ಗ್ರಾ.ಕು.ನೀ.&.ನೈ./ವಿಧಾ/ಕಿ.ಇಂ.1/ಇ-ಟೆಂಡರ/2023-24/887 ದಿನಾಂಕ:24.09.2024
ಅಲ್ಪಾವಧಿ ಟೆಂಡರ ಪ್ರಕಟಣೆ (ಇ-ಪ್ರೊಕ್ಯೂರಮೆಂಟ ಮುಖಾಂತರ ಮಾತ್ರ)
ವಿಷಯ : ಅಲ್ಪಾವಧಿ ಟೆಂಡರನ ಕರೆ ಪ್ರಕಟಣೆ ಕುರಿತು.
ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಧಾರವಾಡ ಜಿಲ್ಲೆಯ ಧಾರವಾಡ ತಾಲೂಕಿನ ಕುಡಿಯುವ ನೀರಿನ ಕಾಮಗಾರಿಗಳ ಅಲ್ಪಾವಧಿ ಟೆಂಡರ ಕರೆಯಲಾಗಿದೆ.
ಕಾಮಗಾರಿಯ ವಿವರ ಈ ಕೆಳಗಿನಂತಿದೆ.
ವರ್ಗ: ಸಾಮಾನ್ಯ, ಇಡೆಂಟ್ ನಂ: RWSSD/2024-25/WT/WORK_INDENT 8507
ಟೆಂಡರಗಿಟ್ಟ ಮೊತ್ತ: ರೂ.77.18 lakhs
ಗುತ್ತಿಗೆ ಕಾರ್ಯಕ್ರಮದ ವಿವರಗಳು ಈ ಕೆಳಗಿನಂತಿವೆ. (Calander of Events)
(1) ಟೆಂಡರ್ ದಾಖಲಾತಿಗಳನ್ನು ಇ-ಪ್ರೊಕ್ಯುರಮೆಂಟ ಮುಖಾಂತರ ಡೌನಲೋಡ ಮಾಡಿಕೊಳ್ಳುವ ದಿನಾಂಕ:25.09.2024 ರಿಂದ 07.10.2024 ರ 16.30 ಘಂಟೆ ವರೆಗೆ
(2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ:08.10.2024 ಸಾಯಂಕಾಲ.4.30 ಘಂಟೆಗೆ
(3) ಆರ್ಥಿಕ ಬಿಡ್ ತೆರೆಯುವ ದಿನಾಂಕ:ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ
ಸದರಿ ಮೇಲೆ ತಿಳಿಸಿದ ಕಾಮಗಾರಿಯ ಅಂತಿಮ ಹೆಸರು, ಟೆಂಡರಗಿಟ್ಟ ಮೊತ್ತ, ಇ.ಎಂ.ಡಿ ಮೊತ್ತ ಮುಂತಾದ ವಿವರಗಳನ್ನು ವೆಬ್‌ಸೈಟ್ kppp.karnataka.gov.in ನಲ್ಲಿ ಪಡೆಯಬಹುದು. ಯಾವುದೇ ಕಾರಣ ನೀಡದೆ, ಟೆಂಡರಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದವರು ಹೊಂದಿರುತ್ತಾರೆ.
ಸಹಿ/- ಕಾರ್ಯನಿರ್ವಾಹಕ ಇಂಜನೀಯರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಧಾರವಾಡ
ವಾ.ಸಾ.ಇ/ಧಾರವಾಡ/424/ದೇಶಪಾಂಡೆಪಬ್ಲಿಸಿಟಿ/2024-25

ಕರ್ನಾಟಕ ಸರ್ಕಾರ
ಜಲ ಸಂಪನ್ಮೂಲ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ.
ಕಾರ್ಯಪಾಲಕ ಇಂಜಿನೀಯರ ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೊಪ್ಪಳ. E-mail: eemidnkst@rediffmail.com
ಕ್ರ.ಸಂ: ಕಾನಿಇಂ/ಸನೀ&ಅಂಅವಿ/ಕೊಪ್ಪಳ/ತಾಶಾ/2024-25/2891
ದಿನಾಂಕ: 21.09.2024
ತಿದ್ದುಪಡಿ ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
ಉಲ್ಲೇಖ :- ಈ ಕಛೇರಿ ಅಲ್ಪಾವಧಿ ಟೆಂಡರ ಪ್ರಕಟಣೆ ಸಂಖ್ಯೆ: 2840 ದಿನಾಂಕ: 17-09-2024
ಮೇಲಿನ ಉಲ್ಲೇಖದಲ್ಲಿ ಪ್ರಕಟಣೆಗೊಂಡ ಟೆಂಡರನಲ್ಲಿನ ಕಾಮಗಾರಿಯ ಈ ಕೆಳಗಿನಂತೆ ಮಾರ್ಪಾಡಿಸಿ ತಿದ್ದುಪಡಿ ಟೆಂಡರ ಪ್ರಕಟಣೆಯನ್ನು ಹೊರಡಿಸಲಾಗಿದೆ.
ಮೂಲ ಟೆಂಡರ ಪ್ರಕಟಣೆ: ಗುತ್ತಿಗೆದಾರರು ಡೌನಲೋಡ್ ಮಾಡಿಕೊಳ್ಳುವ ದಿನಾಂಕ:20-09-2024. ತಿದ್ದುಪಡಿ: ಗುತ್ತಿಗೆದಾರರು ಡೌನಲೋಡ್ ಮಾಡಿಕೊಳ್ಳುವ ದಿನಾಂಕ:24-09-2024
ಮೂಲ ಟೆಂಡರ ಪ್ರಕಟಣೆ: ಗುತ್ತಿಗೆದಾರರು ದಾಖಲಾತಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ :27-09-2024ರ ಸಂಜೆ 5.30 ಗಂಟೆಗೆ. ತಿದ್ದುಪಡಿ: ಗುತ್ತಿಗೆದಾರರು ದಾಖಲಾತಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ :03-10-2024 ಸಂಜೆ 5.30 ಗಂಟೆಗೆ
ಮೂಲ ಟೆಂಡರ ಪ್ರಕಟಣೆ: ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ:30-09-2024ರ ಬೆಳಿಗ್ಗೆ 11.00 ಗಂಟೆಗೆ. ತಿದ್ದುಪಡಿ: ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ:05-10-2024ರ ಬೆಳಿಗ್ಗೆ 11.00 ಗಂಟೆಗೆ.
ಮೂಲ ಟೆಂಡರ ಪ್ರಕಟಣೆ: ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ:01-10-2024 ಬೆಳಿಗ್ಗೆ 11.00 ಗಂಟೆಗೆ. ತಿದ್ದುಪಡಿ: ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ:06-10-2024 ಬೆಳಿಗ್ಗೆ 11.00 ಗಂಟೆಗೆ.
ಮೇಲಿನ ಟೆಂಡರ ಅಧಿಸೂಚನೆಯ ಎಲ್ಲಾ ನಯಮಗಳು ಮತ್ತು ಷರತ್ತುಗಳು ಬದಲಾವಣೆಯಾಗಿರುವುದಿಲ್ಲ.
ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕೊಪ್ಪಳ.
ಡಿಐಪಿಆರ್/ಕೊಪ್ಪಳ/419/ಕೆಎಸ್‌ಎಂಸಿ&ಎ/2024-25

ಕರ್ನಾಟಕ ಸರ್ಕಾರ
(ನಗರಾಭಿವೃದ್ಧಿ ಇಲಾಖೆ)
ಜಿಲ್ಲಾ ನಗರಾಭಿವೃದ್ಧಿ ಕೋಶ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮಂಡ್ಯ ಜಿಲ್ಲೆ, ಮಂಡ್ಯ
E-Mail:dudc_mnd@yahoo.co.in Ph No.08232-231111
ಸಂಖ್ಯೆ:ಎಂಯುಎನ್(7)17/ಕೆ.ಆರ್.ಪೇಟೆ/ಪ್ಯಾ-2&3/2021-22
ದಿನಾಂಕ:23-09-2024
ಟೆಂಡರ್ ಪ್ರಕಟಣೆ - (ಇ-ಪ್ರಕ್ಯೂರ್‌ಮೆಂಟ್ ಮೂಲಕ ಮಾತ್ರ)
ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ಪುರಸಭೆಯ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ)-ಯೋಜನೆ(ಹಂತ-4)ರಡಿ ಹಂಚಿಕೆಯಾಗಿರುವ ಅನುದಾನಕ್ಕೆ ಅನುಮೋದನೆಗೊಂಡ ರಸ್ತೆ, ಚರಂಡಿ, ಕಟ್ಟಡ ಹಾಗೂ ಇನ್ನಿತರೆ ಸಂಬಂಧಪಟ್ಟ ಅಭಿವೃದ್ಧಿ ಕಾಮಗಾರಿಗಳಿಗೆ ದ್ವಿ-ಲಕೋಟೆ ಪದ್ಧತಿಯಂತೆ ಟೆಂಡರ್‌ಗಳನ್ನು E-Procurement Portal ಮೂಲಕ ಆಹ್ವಾನಿಸಲಾಗಿದೆ. ಅರ್ಹ 3ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರು ಪ್ರಕಟಣೆಯಲ್ಲಿನ ಕಾಮಗಾರಿಗಳನ್ನು ಅಂತರ್ಜಾಲ ಮೂಲಕ ವೆಬ್‌ಸೈಟ್ ವಿಳಾಸ https/:eproc.karnataka.gov.in ಅನ್ನು ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.
ಕ್ರ.ಸಂ : 01. ಕಾಮಗಾರಿಗಳ ಇಂಡೆಂಟ್ ನಂಬರ್ : DMA/2024-25/OW/WORK_INDENT-28603. ಟೆಂಡರ್‌ಗಿಟ್ಟ ಮೊತ್ತ (Including GST) ರೂ.ಲಕ್ಷಗಳಲ್ಲಿ : 153.75. ಇಎಂಡಿ ಮೊತ್ತ ರೂ.ಲಕ್ಷಗಳಲ್ಲಿ : 2.31. ಅವಧಿ (ಮಳೆಗಾಲ ಸೇರಿದಂತೆ) : 9 ತಿಂಗಳು. ಗುತ್ತಿಗೆದಾರರ ದರ್ಜೆ : 3ನೇ ದರ್ಜೆ ಮತ್ತು ಮೇಲ್ಪಟ್ಟ
ಕ್ರ.ಸಂ : 02. ಕಾಮಗಾರಿಗಳ ಇಂಡೆಂಟ್ ನಂಬರ್ :DMA/2024-25/OW/WORK_INDENT-28357/ call -2. ಟೆಂಡರ್‌ಗಿಟ್ಟ ಮೊತ್ತ (Including GST) ರೂ.ಲಕ್ಷಗಳಲ್ಲಿ : 50.00. ಇಎಂಡಿ ಮೊತ್ತ ರೂ.ಲಕ್ಷಗಳಲ್ಲಿ : 1.00. ಅವಧಿ (ಮಳೆಗಾಲ ಸೇರಿದಂತೆ) : 6 ತಿಂಗಳು. ಗುತ್ತಿಗೆದಾರರ ದರ್ಜೆ : 3ನೇ ದರ್ಜೆ ಮತ್ತು ಮೇಲ್ಪಟ್ಟ
ಟೆಂಡರ್‌ಗಳಿಗಾಗಿ ನಿಗಧಿಪಡಿಸಿದ ದಿನಾಂಕಗಳು ಕೆಳಗಿನಂತಿವೆ. ಕ್ರ.ಸಂ.1ರ ಕಾಮಗಾರಿಗೆ ಸಂಬಂಧಿಸಿದಂತೆ ಪ್ರೀ-ಬಿಡ್ ಸಭೆ ದಿನಾಂಕ:24.09.2024 ಮಧ್ಯಾಹ್ನ 12.00 ಗಂಟೆಗೆ ಮತ್ತು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:05.10.2024, ಸಂಜೆ 5.30, ತಾಂತ್ರಿಕ ಬಿಡ್ ತೆರೆಯುವ ದಿನಾಂಕ:07.10.2024 ಆಗಿರುತ್ತದೆ.
ಕ್ರ.ಸಂ.2ರ ಕಾಮಗಾರಿಗೆ ಸಂಬಂಧಿಸಿದಂತೆ ಪ್ರೀ-ಬಿಡ್ ಸಭೆ ದಿನಾಂಕ: 27.09.2024 ಮಧ್ಯಾಹ್ನ 12.00 ಗಂಟೆಗೆ, ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ:08.10.2024 ಸಂಜೆ 5.30 ಗಂಟೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ:10-10-2024 ಆಗಿರುತ್ತದೆ. ಟೆಂಡರ್‌ಗಳನ್ನು ನಿಗಧಿಪಡಿಸಿರುವ ಕನಿಷ್ಟ ಅರ್ಹತಾ ಮಾನದಂಡಗಳನ್ನು ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್(ಕ್ರ.ಸಂ.1ರ ಕಾಮಗಾರಿ) KW-4 ಮತ್ತು (ಕ್ರ.ಸಂ.2ರ ಕಾಮಗಾರಿ) KW-2 ರಲ್ಲಿರುವಂತೆ ಪರಿಗಣಿಸಲಾಗುವುದು. ಈ ಬಗ್ಗೆ ಟೆಂಡರ್‌ದಾರರು ಟೆಂಡರ್ ಸಲ್ಲಿಸುವ ಮುನ್ನ ಮನದಟ್ಟು ಮಾಡಿಕೊಳ್ಳುವುದು. ಜಂಟಿ/ಸಹಭಾಗಿತ್ವದ ಟೆಂಡರ್‌ಗಳನ್ನು ಮಾನ್ಯ ಮಾಡುವುದಿಲ್ಲ. ಹೆಚ್ಚಿನ ವಿವರಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಲಾಗಿನ್ ಆಗಿ ಪಡೆಯಬಹುದು. ಸೂಚನೆ: ಕಾರಣಾಂತರಗಳಿಂದ ಟೆಂಡರ್ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು.
ಸಹಿ/-ಕಾರ್ಯಪಾಲಕ ಅಭಿಯಂತರರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ಮಂಡ್ಯ ಜಿಲ್ಲೆ, ಮಂಡ್ಯ
ವಾಸಾಸಂಇ/ಸನಿ-ಮಂ/ಕೆಎಸ್‌ಎಂಸಿ&ಎ/329/2024-25

ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ.
ಫ್ಯಾಕ್ಸ : 08472/260776, ದೂ: 08472/278675 ಇ ಮೇಲ್: itstaff_ulb_gulbarga@yahoo.com
ಸಂಖ್ಯೆ:ಕಮಪಾ/ಆಶಾ/ಎಸ್.ಡಬ್ಲ್ಯೂ.ಎಮ್/ಡಿಪಿಆರ್/05/2024-25 ದಿನಾಂಕ:20.09.2024
:: ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಪ್ರಕಟಣೆ ::
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು 2000ರ ಅಡಿಯಲ್ಲಿ ಕಲಬುರಗಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಈ ಕೆಳಗೆ ನಮೂದಿಸಲಾದ ಕಾಮಗಾರಿ ಅರ್ಹ ಬಿಡ್‌ದಾರರಿಂದ ಟೆಂಡರ್ ಅಹ್ವಾನಿಸಲಾಗಿದೆ.
ಈ ಕೆಳಕಂಡ ಸೇವೆಗಳಿಗೆ ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಪ್ರಕಾರ ಟೆಂಡರ್ ಕರೆಯಲಾಗಿದೆ.
1) ಕಾಮಗಾರಿ/ಸೇವೆಯ ವಿವರ : SUPPLY AND INSTALLATION OF OF 30KLD, LEACHATE TREATMENT PLANT IN KALABURAGI MAHANAGARA PALIKE, 2) Indent Numbers : DMA/2024-25/IND3344, 3) ಟೆಂಡರಗಿಟ್ಟ ಮೊತ್ತ : 59.57 ಲಕ್ಷಗಳು, 4) ಇ.ಎಮ್.ಡಿ (ಅಂದಾಜು ಮೊತ್ತ) : ರೂ. 1,19,140/-, 5) ಟೆಂಡರಿಗಾಗಿ ನಿಗಧಿಪಡಿಸಲಾದ ದಿನಾಂಕಗಳು : 1. ಆಕ್ಷೇಪಣೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 27.09.2024 ಮಧ್ಯಾಹ್ನ 02.00 ಗಂಟೆಯವರೆಗೆ, 2. ಟೆಂಡರ್ ಅರ್ಜಿ ಸ್ವಿಕರಿಸುವ ಕೊನೆಯ ದಿನಾಂಕ: 30.09.2024 ರಂದು ಮಧ್ಯಾಹ್ನ 02.30 ಗಂಟೆಯವರೆಗೆ, 3. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 01.10.2024 ರಂದು ಮಧ್ಯಾಹ್ನ 03.00 ಗಂಟೆಯವರೆಗೆ, 4. ಆರ್ಥಿಕ ಬಿಡ್ ತೆರೆಯುವ ದಿನಾಂಕ: 04.10.2024 ರಂದು ಮಧ್ಯಾಹ್ನ 11.30 ಗಂಟೆಯವರೆಗೆ,
* ಇಎಮ್‌ಡಿ ಕುರಿತು ಹಾಗೂ ಹೆಚ್ಚಿನ ವಿವರಗಳನ್ನು ಇ-ಪ್ರಕ್ಯೂರ್ಮೆಂಟ್‌ನಲ್ಲಿ ಪಡೆಯಬಹುದು. * ಹೆಚ್ಚಿನ ವಿವರಗಳಿಗಾಗಿ: ಪರಿಸರ ಅಭಿಯಂತರರು ಕಲಬುರಗಿ ಮಹಾನಗರ ಪಾಲಿಕೆರವರನ್ನು ಸಂಪರ್ಕಿಸಬಹುದಾಗಿದೆ. * ವೆಬ್‌ಸೈಟ್: Eproc.Karnataka.gov.in.
ಸಹಿ/- ಸಹಾಯಕ ಕಾರ್ಯಪಾಲಕ ಅಭಿಯಂತರರು, (ಪರಿಸರ)
ಕಲಬುರಗಿ ಮಹಾನಗರ ಪಾಲಿಕೆ ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/464/ಕೆ.ಎಸ್.ಎಂ.ಸಿ.&ಎ/2024-25

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.
ನಂ: ಬೆಂಅಪ್ರಾ/ನಯೋಸ/CLU-80/1485/2024-25 ದಿನಾಂಕ: 24.09.2024
ಪ್ರಕಟಣೆ
ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗುಂ	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	S.V. Shivakumar	ಬೆಂಗಳೂರು ದಕ್ಷಿಣ	ಕೆಂಗೇರಿ	ಅಗರ	19/2	0-33	ವ್ಯವಸಾಯ	ವಸತಿ
					19/3	1-00		
					19/4	1-00		
					19/5	1-00		
	ಒಟ್ಟು					3-33		

ಷರಾ: ಅರ್ಜಿದಾರರು ಬೆಂಗಳೂರು ನಗರ ಜಿಲ್ಲೆ, ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಅಗರ ಗ್ರಾಮದ ಸರ್ವೆ 19/2ರಲ್ಲಿ 33ಗುಂ, 19/3ರಲ್ಲಿ 1ಎ-0ಗುಂ, 19/4ರಲ್ಲಿ 1ಎ-0ಗುಂ ಮತ್ತು 19/5ರಲ್ಲಿ 1ಎ-0ಗುಂ ಒಟ್ಟು 03 ಎಕರೆ 33 ಗುಂಟೆ ಜಮೀನನ್ನು ವ್ಯವಸಾಯಕ್ಕಾಗಿ ಬಳಸಲು ಸಾಧ್ಯವಿರುವುದಿಲ್ಲ. ನಮ್ಮ ಜಮೀನಿನ ಸುತ್ತಮುತ್ತ ವಾಸದ ಉದ್ದೇಶಕ್ಕಾಗಿ ಬೇಡಿಕೆ ಇದ್ದು, ಪ್ರಶ್ನಿತ ಜಮೀನಿನಲ್ಲಿ ಯೋಜಿತ ಬೆಳವಣಿಗೆಯ ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ನಿವಾಸಿಗಳಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗುತ್ತದೆ. ಭೂ ಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಸಕ್ರಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಯೋಜನಾಬದ್ಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿಯಾಗಿರುತ್ತದೆ ಮತ್ತು ಸದರಿ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತ, ಪ್ರಶ್ನಿತ ಜಮೀನುಗಳನ್ನು 'ವ್ಯವಸಾಯ ವಲಯ' ದಿಂದ 'ವಸತಿ ಉಪಯೋಗಕ್ಕೆ' ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.
ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಟ್ಟದ್ದೇ ಸಂವಿಧಾನಬಾಹಿರ, ಅಪರಾಧ ಎಂದು ಆರೋಪಿಸಿದ ಕಾಂಗ್ರೆಸ್ಸಿಗರು, ಸಾರ್ವಜನಿಕವಾಗಿ ಕ್ಷಮೆಯಾಚಿಸಬೇಕು. ಸಾಂವಿಧಾನಿಕ ಹುದ್ದೆ ಅಗೌರವಿಸಿದ ಕಾರಣಕ್ಕಾಗಿ ಸಾರ್ವಜನಿಕ ಕ್ಷಮೆಯಾಚಿಸಲಿ. ಮುಖ್ಯಮಂತ್ರಿಗಳಿಗೆ ಬೇರೆ ದಾರಿ ಉಳಿದಿಲ್ಲ. ದುಬಾರಿ ವಕೀಲರೆಲ್ಲ ವಾದ ಮಂಡಿಸಿದರೂ, ಸತ್ಯ ಮುಚ್ಚಿಡಲು ಸಾಧ್ಯವಾಗಿಲ್ಲ.

ಸಿ.ಟಿ. ರವಿ
ವಿಧಾನಪರಿಷತ್ ಸದಸ್ಯ

ರಾಜ್ಯಪಾಲರು ರಾಜಕೀಯ ತೀರ್ಮಾನ ತೆಗೆದುಕೊಂಡಿದ್ದಾರೆ. ಇದು ರಾಜಕೀಯ ಪ್ರೇರಿತ ಪ್ರಾಸಿಕ್ಯೂಷನ್ ಎನ್ನುವ ಹೇಳಿಕೆಗೆ ಈಗಲೂ ಬದ್ಧ. ನಾವು ಕಾನೂನು ಹೋರಾಟ ಮುಂದುವರಿಸುತ್ತೇವೆ. ಹೈಕೋರ್ಟ್ ವಿಭಾಗೀಯ ಪೀಠ, ಸುಪ್ರೀಂ ಕೋರ್ಟ್‌ನಲ್ಲಿಯೂ ಕಾನೂನು ಹೋರಾಟ ಮಾಡುತ್ತೇವೆ. ಕಾನೂನು ಮತ್ತು ರಾಜಕೀಯ ಹೋರಾಟ ಮುಂದುವರಿಸುತ್ತೇವೆ.

ಕೃಷ್ಣಬೈರೇಗೌಡ
ಕಂದಾಯ ಸಚಿವ

ಮುಡಾ ಹಗರಣದಲ್ಲಿ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದನ್ನು ಹೈಕೋರ್ಟ್ ಎತ್ತಿ ಹಿಡಿದಿದ್ದು, ಮೇಲ್ನೋಟಕ್ಕೆ ಅಧಿಕಾರ ದುರುಪಯೋಗ ಎಂದಿದೆ. ರಾಜೀನಾಮೆ ನೀಡಲು ಇನ್ನೇನು ಹೇಳಬೇಕಿತ್ತು? ನಿಯಮಗಳನ್ನು ಗಾಳಿಗೆ ತೂರಿ ಅಧಿಕಾರ ದುರುಪಯೋಗ ಮಾಡಿದ್ದಾರೆ. ಈ ಹಿನ್ನೆಲೆ ಸಿದ್ದರಾಮಯ್ಯ ಅವರು ಕೂಡಲೇ ರಾಜೀನಾಮೆ ನೀಡಬೇಕು.

ಪ್ರಲ್ಹಾದ್ ಜೋಶಿ
ಕೇಂದ್ರ ಸಚಿವ

ಮುಂದಿನ ಹಂತದ ನ್ಯಾಯಾಂಗ ಹೋರಾಟಕ್ಕೆ ನಮ್ಮ ಸರಕಾರ ಹಾಗೂ ಕಾಂಗ್ರೆಸ್ ಪಕ್ಷ ಸಿದ್ಧವಾಗಿದ್ದು, ಇಡೀ ರಾಜ್ಯದ ಜನರು ಮತ್ತು ಹೈಕಮಾಂಡ್ ಮುಖ್ಯಮಂತ್ರಿಗಳ ಬೆನ್ನಿಗಿದ್ದಾರೆ. ದ್ವೇಷದ ರಾಜಕಾರಣದ ಭಾಗವಾಗಿ ನಡೆಯುತ್ತಿರುವ ಬೆಳವಣಿಗೆಗಳಿಗೆ ತಲೆ ಕೆಡಿಸಿಕೊಳ್ಳುವುದಿಲ್ಲ ಮತ್ತು ಮುಖ್ಯಮಂತ್ರಿಗಳು ರಾಜೀನಾಮೆ ನೀಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಎಚ್.ಸಿ. ಮಹದೇವಪ್ಪ
ಸಮಾಜ ಕಲ್ಯಾಣ ಸಚಿವ

ಕಾನೂನು ತಜ್ಞ, ಸಂವಿಧಾನ ತಜ್ಞ ಎಂದು ಹೇಳುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳುತ್ತಾರೆ. ಈ ಹಿಂದೆ ರಾಮಕೃಷ್ಣ ಹೆಗಡೆ ವಿರುದ್ಧ ಆರೋಪ ಕೇಳಿಬಂದಾಗ ರಾಜೀನಾಮೆ ನೀಡಿದ್ದರು. ಇದೀಗ ಸಿದ್ದರಾಮಯ್ಯ ವಿರುದ್ಧ ಕೇಳಿಬಂದಿರುವ ಆರೋಪದ ತನಿಖೆಗೆ ಅನುಮತಿಯನ್ನು ಹೈಕೋರ್ಟ್ ನೀಡಿದೆ. ಈ ಹಂತದಲ್ಲಿಯಾದರೂ ರಾಜೀನಾಮೆ ನೀಡಿ, ಮರ್ಯಾದೆ ಉಳಿಸಿಕೊಳ್ಳಲಿ.

ಆರ್. ಅಶೋಕ
ಪ್ರತಿಪಕ್ಷ ನಾಯಕ

ಸಿಎಂ ಸಿದ್ದರಾಮಯ್ಯ ಅವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವ ಹೈಕೋರ್ಟ್ ತೀರ್ಪು ಅನಿರೀಕ್ಷಿತ ಮಾತ್ರವಲ್ಲ ದುರದೃಷ್ಟಕರ. ಜನರಿಂದ ಆಯ್ಕೆಯಾದ ಸರಕಾರ ಅಸ್ಥಿರಗೊಳಿಸಿ, ಮುಖ್ಯಮಂತ್ರಿಯ ವಿರುದ್ಧದ ಬಿಜೆಪಿಯ ಷಡ್ಯಂತ್ರದ ಭಾಗ ವಾಗಿಯೇ ಪ್ರಕ್ರಿಯೆ ನಡೆಯುತ್ತಿರುವುದು ಸ್ಪಷ್ಟ. ಸೇಡಿನ ರಾಜಕಾರಣಕ್ಕೆ ನ್ಯಾಯಂಗದ ಮೂಲಕವೇ ಉತ್ತರ ಸಿಗಲಿದೆ.

ಬಿ.ಕೆ. ಹರಿಪ್ರಸಾದ್
ವಿಧಾನಪರಿಷತ್ ಸದಸ್ಯ

ಮುಡಾ ಹಗರಣ ಸಂಬಂಧ ಸಿಎಂ ವಿರುದ್ಧ ತೀರ್ಪು ಬಂದಿದೆ. ಇದರಿಂದ ಗೊತ್ತಾಗುತ್ತದೆ, ಕಾನೂನು ಎಲ್ಲರಿಗೂ ಒಂದೇ ಎಂಬುದು. ಸಿಎಂ ವಿರುದ್ಧ ವಿಚಾರಣೆಗೆ ನ್ಯಾಯಾಲಯವೇ ಒಪ್ಪಿಗೆ ನೀಡಿದೆ.ನ್ಯಾಯ ಸಾಮಾನ್ಯ ವ್ಯಕ್ತಿಗೂ ಒಂದೇ, ರಾಜಕೀಯ ವ್ಯಕ್ತಿಗೂ ಒಂದೇ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ನೈತಿಕ ಹೊಣೆಹೊತ್ತು ರಾಜೀನಾಮೆ ನೀಡಿ ವಿಚಾರಣೆಗೆ ಒಳಗಾಗಬೇಕು.

ಬಿ.ವೈ.ರಾಘವೇಂದ್ರ
ಬಿಜೆಪಿ ಸಂಸದ

ಪ್ರತಿಪಕ್ಷದವರು ಏನಾದರೂ ಮಾತನಾಡಲಿ. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜೀನಾಮೆ ನೀಡುವ ಪ್ರಶ್ನೆಯೇ ಇಲ್ಲ. ಈ ಹಿಂದೆ ಅವರ ನಾಯಕರ ವಿರುದ್ಧ ಆರೋಪ ಕೇಳಿಬಂದಾಗ ಅವರೇನು ಮಾಡಿದ್ದರು? ಸಿದ್ದರಾಮಯ್ಯ ಅವರ ವಿರುದ್ಧ ತನಿಖೆಗೆ ನೀಡಿರುವ ರಾಜ್ಯಪಾಲರ ಕ್ರಮವನ್ನು ಮಾತ್ರ ಹೈಕೋರ್ಟ್ ಸಮ್ಮತಿಸಿದೆ ಹೊರತು, ವಿಚಾರಣೆ ನಡೆಸಲು ಹೇಳಿಲ್ಲ.

ರಾಮಲಿಂಗಾರೆಡ್ಡಿ
ಸಾರಿಗೆ ಸಚಿವ

ಸಿಎಂ ಸಿದ್ದರಾಮಯ್ಯ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು. ಈ ಭಂಡತನ ಸರಿಯಲ್ಲ. ಸಿಎಂ ಸಾಚಾ ಆಗಿದ್ದರೇ ರಾಜೀನಾಮೆ ನೀಡಲಿ. ಈ ಕೂಡಲೇ ಕಾಂಗ್ರೆಸ್ ಹೈಕಮಾಂಡ್ ಸಿಎಂ ರಾಜೀನಾಮೆ ಪಡೆಯಬೇಕು. ನಂತರ ಇವರು ತನಿಖೆ ಎದುರಿಸಲಿ. ಅಧಿಕಾರದಲ್ಲಿದ್ದು, ತನಿಖೆ ಎದುರಿಸುವುದು ನ್ಯಾಯ ಸಮ್ಮತವಾಗಲ್ಲ.

ಜಗದೀಶ್ ಶೆಟ್ಟರ್
ಸಂಸದ

ಬಿಜೆಪಿಯವರು ರಾಜ್ಯಪಾಲರ ಕಚೇರಿಯನ್ನು ಬಿಜೆಪಿಯವರು ಈ ರೀತಿ ಬಳಸಿಕೊಳ್ಳುತ್ತಿರುವುದರ ಬಗ್ಗೆ ನನಗೇನು ಅಚ್ಚರಿಯಿಲ್ಲ. ರಾಜ್ಯಪಾಲರು ಕಾನೂನು ಮೀರಿ ಅಭಿಯೋಜನೆಗೆ ಅವಕಾಶ ನೀಡಿರುವುದು ಸರಿಯಲ್ಲ. ಈ ಹಿಂದೆ ಬಿಜೆಪಿಯೇತರ ಹಲವು ರಾಜ್ಯದಲ್ಲಿ ರಾಜಭವನವನ್ನು ಯಾವ ರೀತಿ ದುರ್ಬಳಕೆ ಮಾಡಿಕೊಳ್ಳಲಾಗಿದೆ ಎನ್ನುವುದನ್ನು ನೋಡಿದ್ದೇವೆ. ಇದರ ಅದರ ಮುಂದುವರಿದ ಭಾಗ.

ಪ್ರಿಯಾಂಕ್ ಖರ್ಗೆ
ಐಟಿ-ಬಿಟಿ ಸಚಿವ

ರಾಜ್ಯ, ಜನರು, ಪಕ್ಷದ ಕಾರ್ಯಕರ್ತರು ನನ್ನೊಂದಿಗಿದ್ದಾರೆ | ಕಾನೂನು ತಜ್ಞರೊಂದಿಗೆ ಚರ್ಚಿಸಿದ ಬಳಿಕ ಮುಂದಿನ ತೀರ್ಮಾನ

ಬಿಜೆಪಿ ಪಿತೂರಿಗೆ ಹೆದರಲ್ಲ: ರಾಜೀನಾಮೆ ನೀಡಲ್ಲ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ಸುಭದ್ರ ಸರಕಾರವನ್ನು ಅಸ್ಥಿರಗೊಳಿಸುವ ಉದ್ದೇಶದಿಂದ ಹಾಗೂ ನನ್ನ ಸುದೀರ್ಘ ರಾಜಕೀಯ ಜೀವನಕ್ಕೆ ಮಸಿ ಬಳಿಯುವ ಕಾರಣಕ್ಕೆ ಬಿಜೆಪಿ, ಜೆಡಿಎಸ್‌ನವರು ಪಿತೂರಿ ಹೂಡಿದ್ದಾರೆ. ಇಂತ ಪಿತೂರಿಗೆ ನಾನೆಂದು ಹೆದರುವುದಿಲ್ಲ. ಹೈಕೋರ್ಟ್ ನೀಡಿರುವ ತೀರ್ಪನ್ನು ಸ್ವಾಗತಿಸುವುದರೊಂದಿಗೆ, ಮುಂದಿನ ಕಾನೂನು ಹೋರಾಟದ ಬಗ್ಗೆ ತಜ್ಞರೊಂದಿಗೆ ಚರ್ಚಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ನಾಗಪ್ರಸನ್ನ ಅವರಿದ್ದ ಹೈಕೋರ್ಟ್ ಏಕಸದಸ್ಯ ನೀಡಿದ ಆದೇಶಕ್ಕೆ ಸಂಬಂಧಿಸಿದಂತೆ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಸರಕಾರವನ್ನು ಅಭದ್ರಗೊಳಿಸಿ, ಕಪ್ಪು ಮಸಿ ಬಳಿಯಲು ಬಿಜೆಪಿ ಜೆಡಿಎಸ್ ನಡೆಸುತ್ತಿರುವ ಪ್ರಯತ್ನಕ್ಕೆ ಸೋಲು ಖಚಿತ. ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿಯ ಈ ಪಿತೂರಿ ಯಶಸ್ವಿಯಾಗುವುದಿಲ್ಲ. ಹೈಕೋರ್ಟ್ ನೀಡಿರುವ ತೀರ್ಪುನ್ನು ಪೂರ್ಣ ಅಧ್ಯಯನ ನಡೆಸಿದ ಬಳಿಕ ಮುಂದಿನ ಕಾನೂನು ಹೋರಾಟದ ಬಗ್ಗೆ ಕಾನೂನು ತಜ್ಞರೊಂದಿಗೆ ಚರ್ಚಿಸಲಾಗುವುದು ಎಂದರು.

ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ, ಬಿಎನ್‌ಎಸ್ ಪ್ರಕಾರ 218 ಹಾಗೂ ಪಿಸಿ ಕಾಯಿದೆ 19ರಂತೆ ತನಿಖೆಗೆ ಅನುಮತಿ ನೀಡುವುದನ್ನು ತಿರಸ್ಕರಿಸಿ, ಪಿಸಿ ಕಾಯಿದೆಯ 17 ಎ ಪ್ರಕಾರ ತನಿಖೆಗೆ ಹೈಕೋರ್ಟ್ ಆದೇಶ ನೀಡಿದೆ. ಈ ತೀರ್ಪಿನ ಮೇಲೆ ಕಾನೂನು ಹೋರಾಟದ ಬಗ್ಗೆ ಕಾನೂನು ತಜ್ಞರೊಂದಿಗೆ ಚರ್ಚೆ ಮಾಡಿ, ಮುಂದಿನ ಕ್ರಮದ ಬಗ್ಗೆ ತೀರ್ಮಾನ ಮಾಡಲಾಗುವುದು ಎಂದರು.

ಬಿಜೆಪಿ ಜೆಡಿಎಸ್‌ನ ಪಿತೂರಿಗೆ ಹೆದರುವುದಿಲ್ಲ: ಬಿಜೆಪಿ ಜೆಡಿಎಸ್‌ನ ಪಿತೂರಿಗೆ ನಾನು ಎಂದೂ ಹೆದರುವುದಿಲ್ಲ. ಬಿಜೆಪಿ- ಜೆಡಿಎಸ್ ಸಂಚು, ರಾಜಭವನ ದುರುಪಯೋಗ ಹಾಗೂ ದುರ್ಬಳಕೆಗೆ ನಾನು ಹೆದರುವುದಿಲ್ಲ. ರಾಜ್ಯದ ಜನ, ಪಕ್ಷದ ಹೈಕಮಾಂಡ್, ಶಾಸಕರು, ಸಚಿವರು, ಕಾರ್ಯಕರ್ತರು ನನ್ನೊಂದಿಗಿದ್ದಾರೆ. ಕಾನೂನು ಹೋರಾಟಕ್ಕೆ ಹೈಕಮಾಂಡ್ ಸಹಕಾರ ನೀಡಲಿದೆ. ನರೇಂದ್ರ ಮೋದಿಯವರ ಬಿಜೆಪಿ ಸರಕಾರ, ಕೇವಲ ನನ್ನ ಮೇಲಷ್ಟೇ ಅಲ್ಲ, ಇಡೀ ದೇಶದ ವಿರೋಧಪಕ್ಷಗಳ ವಿರುದ್ಧ ಮೇಲೆ ಸೇಡಿನ ರಾಜಕೀಯ ಮಾಡುತ್ತಿದ್ದಾರೆ ಎಂದರು.

ಆಪರೇಷನ್ ಕಮಲದ ಪ್ರಯತ್ನ ವಿಫಲ: ಬಿಜೆಪಿ ಹಾಗೂ ಜೆಡಿಎಸ್‌ನವರು ಸ್ವಂತ ಶಕ್ತಿಯ ಮೇಲೆ ಅಧಿಕಾರಕ್ಕೆ ಬಂದಿಲ್ಲ. ವಿಧಾನಸಭೆ ಚುನಾವಣೆಯಲ್ಲಿಯೂ ಸೋತಿದ್ದಾರೆ. ಅವರು ಹಣಬಲದಿಂದ, ಆಪರೇಷನ್ ಕಮಲ ಮಾಡಿ ಹಿಂಬಾಗಿಲಿನಿಂದ ಅಧಿಕಾರಕ್ಕೆ ಬಂದರೇ ಹೊರತು, ಜನರ ಆಶೀರ್ವಾದ ದೊಂದಿಗೆ ಎಂದಿಗೂ ಬಿಜೆಪಿ-ಜೆಡಿಎಸ್ ಅಧಿಕಾರಕ್ಕೆ ಬಂದಿಲ್ಲ. ವಿಧಾನಸಭಾ ಚುನಾವಣೆಯಲ್ಲಿ 136 ಸ್ಥಾನ ಗೆದ್ದಿರುವ ಕಾಂಗ್ರೆಸ್ ಪಕ್ಷ ಬಂದಿದ್ದರಿಂದ ಆಪರೇಷನ್ ಕಮಲ ಮಾಡಲು ಅವರಿಗೆ ಸಾಧ್ಯವಾಗಲಿಲ್ಲ. ದುಡ್ಡನ್ನು ಕೊಟ್ಟು ಶಾಸಕರನ್ನು ಖರೀದಿಸುವ ಪ್ರಯತ್ನ ಮಡಿದರು. ನಮ್ಮ ಯಾವ ಶಾಸಕರೂ ದುಡ್ಡಿನ ಹಿಂದೆ ಹೋಗದ ಕಾರಣ,ಅವರ ಪ್ರಯತ್ನ ವಿಫಲವಾಯಿತು ಎಂದರು.

ಸುದ್ದಿಗೋಷ್ಠಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಎಚ್.ಕೆ.ಪಾಟೀಲ್, ಎಚ್.ಸಿ.ಮಹದೇವಪ್ಪ, ಚಲುವರಾಯಸ್ವಾಮಿ ಇದ್ದರು.

ಸಚಿವ ಕುಮಾರಸ್ವಾಮಿಯವರಿಗೆ ಅನ್ವಯವಾಗುವುದಿಲ್ಲವೇ

ಬಿಜೆಪಿಯವರು ಮುಖ್ಯಮಂತ್ರಿಗಳು ರಾಜೀನಾಮೆ ಕೊಡಲು ಒತ್ತಾಯಿಸಿ ಪ್ರತಿಭಟನೆ ಮಾಡುತ್ತಾರೆ ಎಂಬ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿ, ಅವರನ್ನು ನಾವು ಎದುರಿಸುತ್ತೇವೆ. ರಾಜಿನಾಮೆ ಏಕೆ ಕೊಡಬೇಕು ಎಂದು ಪ್ರಶ್ನಿಸಿದರು. ರಾಜಿನಾಮೆ ಕೇಳುವುದಿಲ್ಲ ಎಂದು ಕೇಂದ್ರ ಸಚಿವ ಕುಮಾರಸ್ವಾಮಿಯವರಿಗೆ ಹೇಳಿಕೆಗೆ ಪ್ರತಿಕ್ರಿಯಿಸಿ ಅವರ ಮೇಲೆ ಎಫ್‌ಐಆರ್ ಆಗಿದ್ದು ಅವರು ಜಾಮೀನಿನ ಮೇಲೆ ಇದ್ದಾರೆ.ಅವರು ರಾಜೀನಾಮೆ ಕೊಟ್ಟಿದ್ದಾರೆಯೇ? ಇದು ಅವರಿಗೆ ಅನ್ವಯವಾಗುವುದಿಲ್ಲವೇ? ತನಿಖೆ ಹಂತದಲ್ಲಿಯೇ ರಾಜೀನಾಮೆ ಕೊಡುವ ಬಗ್ಗೆ ಕುಮಾರಸ್ವಾಮಿಯವರನ್ನು ಕೇಳಿ ಎಂದು ಮುಖ್ಯಮಂತ್ರಿಗಳು ಪ್ರಶ್ನಿಸಿದರು.

ಬಿಜೆಪಿಗರು ಬಡವರ ವಿರೋಧಿಗಳು

ಕಾಂಗ್ರೆಸ್ ಸರಕಾರದ ಬಡವರ ಪರ ಕಾರ್ಯಕ್ರಮಗಳನ್ನು ಬಿಜೆಪಿ ವಿರೋಧಿಸುತ್ತಾ ಬಂದಿದ್ದಾರೆ. ಶೂಭಾಗ್ಯ, ಪಶುಭಾಗ್ಯ, ಶಾದಿಭಾಗ್ಯ , ಕ್ಷೀರಭಾಗ್ಯ ಸೇರಿದಂತೆ ಹಲವು ಜನಪರ ಯೋಜನೆಗಳು ಹಾಗೂ ಈಗಿನ ಗ್ಯಾರಂಟಿ ಯೋಜನೆಗಳನ್ನು ಸಹ ವಿರೋಧಿಸುತ್ತಿದ್ದಾರೆ. ಬಿಜೆಪಿಯವರು ಸಾಮಾಜಿಕ ನ್ಯಾಯ, ಬಡವರ ವಿರೋಧಿಗಳು. ಸರಕಾರಕ್ಕೆ ಕಪ್ಪು ಮಸಿ ಬಳಿಯುವುದು ಅವರ ದುರಾಲೋಚನೆ. ಹೈಕೋರ್ಟ್ ಆದೇಶದ ಪ್ರತಿಯನ್ನು ಸಂಪೂರ್ಣ ಪರಿಶೀಲಿಸಿ, ಮುಂದಿನ ಪ್ರತಿಕ್ರಿಯೆಯನ್ನು ನೀಡುತ್ತೇನೆ. ಇಡೀ ದೇಶದಲ್ಲಿ ಪಿತೂರಿ ಮಾಡಿದಂತೆ ಕರ್ನಾಟಕದಲ್ಲಿಯೂ ನನ್ನ ಹಾಗೂ ಸರಕಾರದ ವಿರುದ್ಧ ಪಿತೂರಿ ಮಾಡಲಾಗಿದೆ ಎಂದು ಆರೋಪಿಸಿದರು.

- ನನ್ನ ಸುದೀರ್ಘ ರಾಜಕೀಯ ಜೀವನಕ್ಕೆ ಮಸಿ ಬಳಿಯಲು ಬಿಜೆಪಿ, ಜೆಡಿಎಸ್‌ನವರು ಪಿತೂರಿ
- ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿಯ ಈ ಪಿತೂರಿ ಯಶಸ್ವಿಯಾಗುವುದಿಲ್ಲ.
- ಬಿಜೆಪಿಯಿಂದ ಇಡೀ ದೇಶದ ವಿರೋಧಪಕ್ಷಗಳ ವಿರುದ್ಧ ಮೇಲೆ ಸೇಡಿನ ರಾಜಕೀಯ
- ಮುಂದಿನ ಕಾನೂನು ಹೋರಾಟದ ಬಗ್ಗೆ ತಜ್ಞರೊಂದಿಗೆ ಚರ್ಚೆ

ತೀರ್ಪು ಬರುತ್ತಿದ್ದಂತೆ ಡಿಸಿಎಂ ಸೇರಿ ಹಿರಿಯ ಸಚಿವರ ಭೇಟಿ

ಮುಂದಿನ ಕಾನೂನು ಹೋರಾಟದ ಬಗ್ಗೆ ಚರ್ಚೆ ನಡೆಸಿದ ಹಿರಿಯ ನಾಯಕರು

ಸಿಎಂ ಪರ ನಿಂತ ಸಚಿವರು

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗಿದ್ದ ಬಿಎನ್‌ಎಸ್ 218 ಎನ್ನುವ ತೂಗುಗತ್ತಿಯಿಂದ ಪಾರಾಗಿದ್ದರೂ, 17'ಎ'ನಲ್ಲಿ ತನಿಖೆಗೆ ರಾಜ್ಯಪಾಲರು ನೀಡಿರುವ ಕ್ರಮವನ್ನು ಹೈಕೋರ್ಟ್ ಊರ್ಜಿತಗೊಳಿಸುತ್ತಿದ್ದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಬಲಕ್ಕೆ ಇಡೀ ಸಂಪುಟ ನಿಂತಿದೆ.

ಹೈಕೋರ್ಟ್ ತೀರ್ಪು ಪ್ರಕಟವಾಗುತ್ತಿದ್ದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗೃಹ ಕಚೇರಿ ಕೃಷ್ಣಾದಲ್ಲಿ ಹಿರಿಯ ಸಚಿವರು ಹಾಗೂ ಆಪ್ತರೊಂದಿಗೆ ಚರ್ಚೆ ನಡೆಸಿದರು. ಈ ವೇಳೆ ಎಲ್ಲ ಸಚಿವರು, ಈ ಪ್ರಕರಣದಲ್ಲಿ ಸಿದ್ದರಾಮಯ್ಯ ಬೆನ್ನಿಗೆ ನಿಲ್ಲುವ ಭರವಸೆ ನೀಡಿದ್ದಾರೆ. ಕೇವಲ ರಾಜ್ಯ ನಾಯಕರು ಮಾತ್ರವಲ್ಲದೇ, ದೆಹಲಿ ನಾಯಕರು ಸಿದ್ದರಾಮಯ್ಯಗೆ ಕರೆ ಮಾಡಿ ಚರ್ಚೆ ನಡೆಸಿದ್ದಾರೆ.

ಮುಖ್ಯಮಂತ್ರಿಗಳ ನಿವಾಸಕ್ಕೆ ಮಂಗಳವಾರ ಮಧ್ಯಾಹ್ನ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಸಚಿವ ಎಚ್.ಸಿ ಮಹದೇವಪ್ಪ, ಕೆ.ಜೆ ಜಾರ್ಜ್, ಕೃಷ್ಣ ಬೈರೇಗೌಡ, ಬೈರತಿ ಸುರೇಶ್, ಅಡ್ವೊಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ಭೇಟಿ ನೀಡಿ ಮುಂದಿನ ರಾಜಕೀಯ ಹಾಗೂ ಕಾನೂನಾತ್ಮಕ ಹೋರಾಟಕ್ಕೆ ಸಂಬಂಧಿಸಿದಂತೆ ಚರ್ಚಿಸಿದರು.

ಸಿಎಂ ಹೈಕಮಾಂಡ್ ದೂರವಾಣಿ ಕರೆ: ತನಿಖೆಗೆ ನೀಡಿರುವ ಪ್ರಾಸಿಕ್ಯೂಷನ್ ಕ್ರಮ ಸರಿಯಿದೆ ಎನ್ನುವ ಆದೇಶ ಹೊರಬೀಳುತ್ತಿದ್ದಂತೆ ಪಕ್ಷದ ವರಿಷ್ಠರು ಯಾವ ರೀತಿಯ ಕ್ರಮವಹಿಸಲಿದೆ ಎನ್ನುವ ಗೊಂದಲವಿತ್ತು. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ದೆಹಲಿ ನಾಯಕರು ಕರೆ ಮಾಡಿ, ಪ್ರಕರಣದ ಮಾಹಿತಿ ಪಡೆಯುತ್ತಿದ್ದಾರೆ. ಇದರೊಂದಿಗೆ ನಿಮ್ಮೊಂದಿಗೆ ಪಕ್ಷವಿರಲಿದೆ ಎನ್ನುವ ಮಾತುಗಳನ್ನು ಹೇಳುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಇದೇ ವಿಷಯಕ್ಕೆ ಸಂಬಂಧಿಸಿದಂತೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣು ಗೋಪಾಲ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕರೆ ಮಾಡಿ ಸುದೀರ್ಘ ಚರ್ಚೆ ನಡೆಸಿದ್ದಾರೆ ಎಂದು ತಿಳಿದುಬಂದಿದೆ.

ಗೃಹ ಕಚೇರಿ ಕೃಷ್ಣಾದಲ್ಲಿ ಸಿಎಂ ಸಿದ್ದರಾಮಯ್ಯ ಜತೆ ಕಾಂಗ್ರೆಸ್ ನಾಯಕರು.

ಯಾವುದೇ ಶಾಸಕಾಂಗ ಪಕ್ಷದ ಸಭೆಯಿಲ್ಲ

ಈ ನಡುವೆ ಹೈಕೋರ್ಟ್ ತೀರ್ಪಿಗೆ ಬೆನ್ನಲ್ಲೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬುಧವಾರ ಶಾಸಕರೊಂದಿಗೆ ಚರ್ಚೆ ನಡೆಸುವ ಸಾಧ್ಯತೆಯಿದೆ ಎನ್ನುವ ಮಾತುಗಳು ಕೇಳಿ ಬಂದಿತ್ತು. ಈ ಸಭೆಯಲ್ಲಿ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಪ್ರಯತ್ನ ನಡೆಸಲಿದ್ದಾರೆ ಎನ್ನಲಾಗಿತ್ತು. ಆದರೆ ಈ ಬಗ್ಗೆ ಸರಕಾರದ ಮುಖ್ಯ ಸಚೇತಕ ಅಶೋಕ್ ಪಟ್ಟಣ್ ಸ್ಪಷ್ಟನೆ ನೀಡಿದ್ದು, ಬುಧವಾರ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಕರೆಯಲಾಗಿದೆ ಎನ್ನುವ ಸುದ್ದಿ ಪ್ರಸಾರವಾಗುತ್ತಿದೆ. ಆ ರೀತಿಯ ಚರ್ಚೆಯೇ ನಡೆದಿಲ್ಲ, ಶಾಸಕಾಂಗ ಸಭೆ ಕರೆದಿದ್ದೇವೆ ಎನ್ನುವ ಸುದ್ದಿ ಸತ್ಯಕ್ಕೆ ದೂರವಾದದ್ದು ಎಂದು ಸ್ಪಷ್ಟಪಡಿಸಿದ್ದಾರೆ.

ಬೆನ್ನಿಗೆ ನಿಲ್ಲುವಂತೆ ಹೈಕಮಾಂಡ್ ಸೂಚನೆ

ಈ ನಡುವೆ ಹೈಕೋರ್ಟ್ ತೀರ್ಪು ಹೊರಬೀಳುತ್ತಿದ್ದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬೆನ್ನಿಗೆ ನಿಲ್ಲುವಂತೆ ಪಕ್ಷದ ಹೈಕಮಾಂಡ್ ರಾಜ್ಯ ನಾಯಕರಿಗೆ ಸೂಚನೆ ನೀಡಿದ್ದಾರೆ. ರಾಜಕೀಯ ಹಾಗೂ ಕಾನೂನಾತ್ಮಕವಾಗಿ ಪಕ್ಷದವರು ಸಿಎಂ ಜತೆ ನಿಲ್ಲಬೇಕು ಎನ್ನುವ ಸ್ಪಷ್ಟ ಸಂದೇಶ ರವಾನಿಸಿದ್ದಾರೆ ಎಂದು ತಿಳಿದುಬಂದಿದೆ.

ಸಿಎಂ ಟಾರ್ಗೆಟ್: ಕೆಪಿಸಿಸಿ ಟ್ವೀಟ್

ಕೆಪಿಸಿಸಿ ಅಧಿಕೃತ ಖಾತೆಯಿಂದ ಟ್ವೀಟ್‌ನಲ್ಲಿ, ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಅಕ್ರಮವಾಗಿದೆ ಎಂದಾದರೆ ತನಿಖೆ ಎದುರಿಸಬೇಕಾಗಿರುವುದು ಮುಡಾ, ಅದರ ಅಧಿಕಾರಿಗಳು. ದೂರಿನಲ್ಲಿ ಪಾರ್ಟಿಯಾಗಬೇಕಾಗಿರುವುದು ಅವರೇ. ಆದರೆ ಈ ಪ್ರಕರಣದಲ್ಲಿ ಯಾವುದೇ ಪಾತ್ರವಿಲ್ಲದ ಮುಖ್ಯ ಮಂತ್ರಿಗಳನ್ನೇ ಗುರಿಯಾಗಿಸಿ ದೂರು ನೀಡಲಾಗಿದೆ ಎಂದಾದರೆ ಇದು ರಾಜಕೀಯ ದುರುದ್ದೇಶವಲ್ಲದೆ ಇನ್ನೇನೂ ಅಲ್ಲ ಎಂದಿದೆ.

ಹಲವು ನ್ಯಾಯಾಧೀಶರು ಹಲವಾರು ಕೇಸ್‌ಗಳ ತೀರ್ಪಿನಲ್ಲಿ ಉಲ್ಲೇಖ

ನಾಗಪ್ರಸನ್ನ ಪ್ರಸ್ತಾಪಿಸಿದ ಬೆಂಜಮಿನ್ ಯಾರು?



ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪ್ರಕರಣದ ತೀರ್ಪು ಓದುವಾಗ ನ್ಯಾಯಧೀಶ ನಾಗಪ್ರಸನ್ನ ಅವರು ಬೆಂಜಮಿನ್ ಡಿಸರೇಲಿ ಅವರ ಮಾತೊಂದನ್ನು ಪ್ರಸ್ತಾಪಿಸಿದರು. ಅದೇನೆಂದರೆ, 'Before I say omega , I deem it appropriate to quote what BENJAMIN DISRAELI had to say: I repeat , All power is a trust && that we are accountable for its exercise && that, from the people, and for the people, all springs, and all must exist.'

ನ್ಯಾಯಾಧೀಶರು ಉಲ್ಲೇಖಿಸಿದ ಈ ಹೇಳಿಕೆಯನ್ನು ಅರ್ಥ ಮಾಡಿಕೊಳ್ಳುವ ಮೊದಲು ಈ ಹೇಳಿಕೆ ನೀಡಿದ ಬೆಂಜಮಿನ್ ಡಿಸರೇಲಿ 19ನೇ ಶತಮಾನದ ಬ್ರಿಟಿಷ್ ಮುತ್ಸದ್ದಿ ಹಾಗೂ ಕಾದಂಬರಿಕಾರ, (1804-1881) ಕೇವಲ ಲೇಖಕನಾಗಿ ಮಾತ್ರವಲ್ಲ ಯುನೈಟೆಡ್ ಕಿಂಗ್‌ಡಂನ ಎರಡು ಅವಧಿಗೆ ಪ್ರಧಾನಮಂತ್ರಿಯೂ ಆಗಿದ್ದ ಈತನ ರಾಜಕೀಯ ಹಾಗೂ ಅಧಿಕಾರ ಕುರಿತ ಮಹತ್ವದ ಹೇಳಿಕೆಗಳಿಗಾಗಿ ಜಗತ್ತಿನ ಎಲ್ಲರೂ ಅದರಲ್ಲೂ ವಿಶೇಷವಾಗಿ ನ್ಯಾಯಾಲಯಗಳಲ್ಲಿ ಉಲ್ಲೇಖಿಸುತ್ತಲೇ ಬಂದಿದ್ದಾರೆ.

ಬೆಂಜಮಿನ್ ಡಿಸರೇಲಿ ಎರಡನೇ ಅವಧಿಗೆ ಬ್ರಿಟನ್ನಿನ ಪ್ರಧಾನಿ ಅಗುವ ಮೊದಲು 1826-27ರಲ್ಲಿ ನಾಲ್ಕು ಸಂಪುಟಗಳ 'ವಿವಿಯನ್ ಗ್ರೇ' ಎಂಬ ಕಾದಂಬರಿ ಬರೆಯುತ್ತಾನೆ ಮತ್ತು ಈ ಕಾದಂಬರಿ ಆ ದೇಶದ ಸಾಮಾಜಿಕ ವಲಯದಲ್ಲಿ ಬಹಳ ತಲ್ಲಣ ಉಂಟು ಮಾಡುತ್ತದೆ. ಆದರೆ ಬೆಂಜಮಿನ್ ಈ ಕಾದಂಬರಿಯಲ್ಲಿ ತನ್ನ ಹೆಸರು ಹಾಕಿಕೊಳ್ಳುವುದಿಲ್ಲ ಬದಲಿಗೆ 'ಮ್ಯಾನ್ ಆಫ್ ಫ್ಯಾಶನ್' ಎಂಬ ಅನಾಮಿಕ ಕಾವ್ಯನಾಮ ಕೊಟ್ಟಿರುತ್ತಾನೆ. ಕಾದಂಬರಿಯ ಪಾತ್ರ ವಿವಿಯನ್ ಗ್ರೇ ಎಂಬ ದಿಕ್ಕುತಪ್ಪಿದ, ಉದ್ಧಟ ಹಾಗು ನಿರ್ದಯಿ ಯುವಕ ರಾಜಕಾರಣದಲ್ಲಿ ಮೇಲೇರುವ ಸಲುವಾಗಿ ಏನೆಲ್ಲ ಅವಾಂತರ ಮಾಡುತ್ತಾನೆ ಎಂಬ ಚಿತ್ರಣ ಬೆಂಜಮಿನ್ ನೀಡುತ್ತಾನೆ. ಬೆಂಜಮಿನ್ ವಿವಿಯನ್ ಗ್ರೇ ಹೆಸರಲ್ಲಿ ಹೇಳುವ ಎಲ್ಲವೂ ಅವತ್ತಿನ ಸಮಕಾಲೀನ ರಾಜಕಾರಣದ ಕೈಗನ್ನಡಿಯೇ ಆಗಿರುತ್ತದೆ. ಮತ್ತು ಇವತ್ತಿಗೂ ರಾಜಕಾರಣದ ಮೂಲಭೂತ ಅಂಶಗಳಲ್ಲಿ ಅಂಥ ಮಹತ್ವದ ಬದಲಾವಣೆಗಳೇನೂ ಆಗಿಲ್ಲ ಎನ್ನುವುದೂ ಸತ್ಯದ ಮತ್ತೊಂದು ಮುಖವೇ ಆಗಿದೆ.

ಒಂದು ಅವಧಿಗಾಗಲೇ ಬ್ರಿಟನ್ ದೇಶವನ್ನು ಪ್ರಧಾನಿಯಾಗಿ ಆಳ್ವಿಕೆ ಮಾಡಿದ್ದ ಬೆಂಜಮಿನ್ ಡಿಸ್ರೇಲಿಗೆ ಸೂಕ್ಷ್ಮ ಮನದ ಲೇಖಕನೂ ಆಗಿ, ಅರಮನೆಯ ಸಿಂಹಾಸನ ಹಿಡಿಯಲು ನಡೆಯುತ್ತಿದ್ದ ಪಿತೂರಿ, ಷಡ್ಯಂತ್ರಗಳ ಅರಿವು ಸಾಕಷ್ಟು ಚೆನ್ನಾಗಿಯೇ ಆಗಿರುತ್ತದೆ. ಜೊತೆಗೆ ಆತ ಕೂಡಾ ಸಂಸದನಾಗಲು ಸಾಧ್ಯವಾಗಿದ್ದು ಬಹಳಷ್ಟು ವಿಫಲ ಯತ್ನಗಳನ್ನು ನಡೆಸಿದ ಮೇಲೆಯೇ. ಹಾಗಾಗಿ ತನ್ನ ಹೆಸರನ್ನು ನಮೂದಿಸದೇ ಅನಾಮಿಕನಾಗಿ ಬರೆದ ಕಾದಂಬರಿಯಲ್ಲಿ ಆಡಳಿತಗಾರ ಹೇಗಿರಬೇಕು ಎನ್ನುವುದನ್ನು ವಿವರಿಸುತ್ತಾನೆ. ಬೆಂಜಮಿನ್ ಡಿಸರೇಲಿಯ ಈ ಹೆಸರಾಂತ ಹೇಳಿಕೆಯನ್ನು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ವಿ.ಆರ್. ಕೃಷ್ಣಯ್ಯರ್ ಸೇರಿದಂತೆ ಹಲವಾರು ನ್ಯಾಯಾಧೀಶರು ಹಲವಾರು ಕೇಸ್‌ಗಳ ತೀರ್ಪಿನಲ್ಲಿ ಉಲ್ಲೇಖಿಸಿದ್ದಾರೆ.

ನಿಶ್ಶಬ್ದ

ತೀರ್ಪಿನ ಅಂತಿಮ ಖಂಡಿಕೆಯ ನಿರ್ಧಾರದ ವಾಕ್ಯಗಳನ್ನು ಮುಕ್ತ ನ್ಯಾಯಾಲಯದಲ್ಲಿ ಉಲ್ಲೇಖಿಸುವ ಮುನ್ನ 'ನಿಶ್ಶಬ್ದ' ಎಂದು ಎಲ್ಲರಿಗೂ ಎಚ್ಚರಿಸಿ ತೀರ್ಪು ಪ್ರಕಟಿಸಿದ ನ್ಯಾಯಧೀಶರು, ಕಾಲಂ 17 'ಎ' ಅಡಿ ಅನುಮತಿ ಕೋರಿದ್ದು ಸರಿಯಾಗಿದೆ. ಖಾಸಗಿ ದೂರುದಾರರೇ ಅನುಮತಿ ಕೋರಬಹುದು. ಸಚಿವ ಸಂಪುಟದ ಶಿಫಾರಸನ್ನು ರಾಜ್ಯಪಾಲರು ತಿರಸ್ಕರಿಸುವುದು ಸರಿಯಾಗಿದೆ ಎಂದರು. ರಾಜ್ಯಪಾಲರು ತಮ್ಮ ವಿವೇಚನೆ ಬಳಸಿ ಸೂಕ್ತ ತೀರ್ಮಾನ ಕೈಗೊಂಡಿದ್ದಾರೆ. ಹಾಗಾಗಿ ಅರ್ಜಿದಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಸಲ್ಲಿಸಿರುವ ಅರ್ಜಿ ವಜಾ ಮಾಡಲಾಗುತ್ತಿದೆ ಎಂದರು. ಇದೇ ವೇಳೆ ಸಿದ್ದರಾಮಯ್ಯ ಅವರ ಪರ ಸುಪ್ರೀಂ ಕೋರ್ಟ್ ವಕೀಲ ಅಭಿಷೇಕ್ ಮನು ಸಿಂಘ್ವಿ ಅವರು ತೀರ್ಪಿನ ಅನುಷ್ಠಾನಕ್ಕೆ ತಾತ್ಕಾಲಿಕ ತಡೆ ನೀಡಲು ಮಾಡಿದ ಮನವಿಯನ್ನು ತಿರಸ್ಕರಿಸಿದ ಪೀಠ, ಮುಖ್ಯಮಂತ್ರಿಗಳ ಕುಟುಂಬದ ಸದಸ್ಯರು ಈ ಪ್ರಕರಣದಲ್ಲಿ ಫಲಾನುಭವಿಗಳಿದ್ದಾರೆ. ಹೀಗಾಗಿ ರಾಜ್ಯಪಾಲರ ಕ್ರಮ ಸೂಕ್ತವಾಗಿದೆ ಎಂದು ತಿಳಿಸಿದೆ. ಈ ತೀರ್ಪಿನಿಂದಾಗಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿರುವ ಸಿದ್ದರಾಮಯ್ಯ ವಿರುದ್ಧದ ಖಾಸಗಿ ದೂರಿಗೆ ಸಂಬಂಧಿತ ವಿಚಾರಣೆಯ ನ್ಯಾಯಿಕ ಪ್ರಕ್ರಿಯೆಗೆ ಇದ್ದ ಮಧ್ಯಂತರ ತಡೆ ಆದೇಶ ತೆರವುಗೊಂಡಿದೆ.

ರಾಜ್ಯಾದ್ಯಂತ ಕಟ್ಟೆಚ್ಚರ | ಸಿದ್ದರಾಮಯ್ಯ ನಿವಾಸದ ಬಳಿ ಹೆಚ್ಚುವರಿ ಭದ್ರತೆ ನಿಯೋಜನೆ

ಪ್ರಾಸಿಕ್ಯೂಷನ್ ಬಿಸಿ ಎದುರಿಸಲು ಪೊಲೀಸ್ ಬಿಗಿ ಬಂದೋಬಸ್ತ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮುಡಾ ಅಕ್ರಮವಾಗಿ ತಮ್ಮ ಕುಟುಂಬಸ್ಥರಿಗೆ ನಿಯಮ ಬಾಹಿರವಾಗಿ ನಿವೇಶನಗಳನ್ನು ಪಡೆದ ಆರೋಪ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವ ರಾಜ್ಯಪಾಲರ ಕ್ರಮವನ್ನು ಹೈಕೋರ್ಟ್ ಎತ್ತಿ ಹಿಡಿದಿದೆ. ಈ ಹಿನ್ನಲೆಯಲ್ಲಿ ರಾಜ್ಯಾದ್ಯಂತ ಕಟ್ಟೆಚ್ಚರವಹಿಸಲಾಗಿದ್ದು, ಪೊಲೀಸ್ ಇಲಾಖೆ ಬಿಗಿ ಬಂದೋಬಸ್ತ್ ಕೈಗೊಂಡಿದೆ.

- ರಾಜ್ಯದ ಎಲ್ಲ ಜಿಲ್ಲೆಗಳು ಹಾಗೂ ಕಮಿಷನರೇಟ್ ವ್ಯಾಪ್ತಿಗಳಲ್ಲಿ ವಿಶೇಷ ಭದ್ರತೆ ವಹಿಸುವಂತೆ ಎಸ್‌ಪಿ, ಡಿಸಿಪಿಗಳಿಗೆ ಡಿಜಿ ಮತ್ತು ಐಜಿಪಿ ಅಲೋಕ್ ಮೋಹನ್ ಸೂಚನೆ

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಹೈಕೋರ್ಟ್ ತೀರ್ಪು ನೀಡಿರುವ ಕಾರಣ ಪ್ರತಿಪಕ್ಷಗಳಾದ ಬಿಜೆಪಿ, ಜೆಡಿಎಸ್ ರಾಜೀನಾಮೆಗೆ ಆಗ್ರಹಿಸಿ ಪ್ರತಿಭಟನೆ ನಡೆಸುವ ಸಾಧ್ಯತೆಯಿದೆ. ಪ್ರತಿಪಕ್ಷಗಳ ವಿವಿಧ ನಾಯಕರು ಈಗಾಗಲೇ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸುತ್ತಿವೆ. ಆದ್ದರಿಂದ ಸಿದ್ದರಾಮಯ್ಯ ಸರಕಾರಿ ನಿವಾಸಕ್ಕೆ ಪ್ರತಿಪಕ್ಷದವರು ಮುತ್ತಿಗೆ ಹಾಕುವ ಸಾಧ್ಯತೆ ಇರುವುದರಿಂದ ನಿವಾಸಕ್ಕೆ ಪೊಲೀಸ್ ಭದ್ರತೆ ಹೆಚ್ಚಿಸಲಾಗಿದೆ.

ಹೆಚ್ಚುವರಿ ಕೆಎಸ್‌ಆರ್‌ಪಿ ತುಕಡಿ ನಿಯೋಜನೆ ಮಾಡಲಾಗಿದ್ದು, ಪ್ರತಿಭಟನೆ ನಡೆಸುವವರನ್ನು ವಶಕ್ಕೆ ಪಡೆದು ಕರೆದುಕೊಂಡು ಹೋಗಲು ಎರಡು ಬಿಎಂಟಿಸಿ ಬಸ್‌ಗಳನ್ನು ಸಿದ್ಧಪಡಿಸಲಾಗಿದೆ. ಬೆಂಗಳೂರು ನಗರದಲ್ಲಿಯೂ ವಿವಿಧ ಕಡೆ ಪ್ರತಿಭಟನೆ ನಡೆಯುವ ಸಾಧ್ಯತೆ ಇದ್ದು, ನಗರ ಪೊಲೀಸರು ಅಲರ್ಟ್ ಆಗಿ ಇರುವಂತೆ ನಗರ ಪೊಲೀಸ್ ಆಯುಕ್ತ ಬಿ. ದಯಾನಂದ ಎಲ್ಲಾ ವಿಭಾಗದ ಡಿವೈಎಸ್‌ಪಿಗಳಿಗೆ ಸೂಚನೆ ನೀಡಿದ್ದಾರೆ. ರಾಜ್ಯದ ಎಲ್ಲ ಜಿಲ್ಲೆಗಳು ಹಾಗೂ ಕಮಿಷನರೇಟ್ ವ್ಯಾಪ್ತಿಗಳಲ್ಲಿ ಹೆಚ್ಚಿನ ಭದ್ರತೆ ವಹಿಸುವಂತೆ ಎಸ್‌ಪಿ ಹಾಗೂ ಡಿಸಿಪಿಗಳಿಗೆ ಡಿಜಿ ಮತ್ತು ಐಜಿಪಿ ಅಲೋಕ್ ಮೋಹನ್ ಸೂಚಿಸಿದ್ದಾರೆ. ಹೈಕೋರ್ಟ್ ತೀರ್ಪಿನ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕಾ ಕ್ರಮವಾಗಿ ಬೆಂಗಳೂರು ಸೇರಿದಂತೆ ರಾಜ್ಯಾದ್ಯಂತ ಪೊಲೀಸರು ಕಟ್ಟೆಚ್ಚರ ವಹಿಸಿದ್ದಾರೆ. ರಾಜ್ಯದ ಎಲ್ಲ ಜಿಲ್ಲೆಗಳು ಹಾಗೂ ಕಮಿಷನರೇಟ್ ವ್ಯಾಪ್ತಿಗಳಲ್ಲಿ ವಿಶೇಷ ಭದ್ರತೆ ವಹಿಸುವಂತೆ ಎಸ್‌ಪಿ ಹಾಗೂ ಡಿಸಿಪಿಗಳಿಗೆ ಡಿಜಿ ಮತ್ತು ಐಜಿಪಿ ಅಲೋಕ್ ಮೋಹನ್ ಸೂಚಿಸಿದ್ದಾರೆ. ರಾಜ್ಯಾದ್ಯಂತ ಯಾವುದೇ ಅಹಿತಕರ ಘಟನೆ ನಡೆಯದಂತೆ ಎಚ್ಚರವಹಿಸಲು ಜಿಲ್ಲಾ ಪೊಲೀಸರಿಗೆ ತಿಳಿಸಲಾಗಿದೆ. ರಾಜ್ಯಪಾಲರ ಪ್ರಾಸಿಕ್ಯೂಷನ್ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ ನಡೆಸಲಿದ್ದು, ಬಿಜೆಪಿ-ಜೆಡಿಎಸ್ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜೀನಾಮೆ ನೀಡುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಯುವ ಸಾಧ್ಯತೆ ಇದೆ. ಆದ್ದರಿಂದ ಪೊಲೀಸ್ ಪಡೆ ರಾಜ್ಯಾದ್ಯಂತ ಕಣ್ಗಾವಲು ಇರಲಿದೆ.

ರಾಜಭವನಕ್ಕೆ ಸರ್ಪಗಾವಲು

ಮುಡಾ ಹಗರಣದ ಕುರಿತು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವ ರಾಜ್ಯಪಾಲರ ಕ್ರಮವನ್ನು ಹೈಕೋರ್ಟ್ ಎತ್ತಿ ಹಿಡಿದು, ಸಿಎಂ ಸಿದ್ದರಾಮಯ್ಯ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿತು. ಈ ತೀರ್ಪಿನ ನಂತರ ರಾಜಭವನದ ಬಳಿ ಹೆಚ್ಚಿನ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಿರೀಕ್ಷೆಗೆ ವ್ಯತಿರಿಕ್ತವಾಗಿ ಹೈಕೋರ್ಟ್ ತೀರ್ಪು ಪ್ರಕಟವಾಗಿರುವ ಹಿನ್ನೆಲೆಯಲ್ಲಿ ಬೆಂಬಲಿಗರು, ಕಾಂಗ್ರೆಸ್ ಕಾರ್ಯಕರ್ತರು ರಾಜಭವನದ ಬಳಿ ಪ್ರತಿಭಟನೆ ಮಾಡುವ ಸಾಧ್ಯತೆ ಇದೆ. ಆದ್ದರಿಂದ ಮುಂಜಾಗ್ರತಾ ಕ್ರಮವಾಗಿ ಕೆಎಸ್‌ಆರ್‌ಪಿ ತುಕಡಿಗಳನ್ನು ನಿಯೋಜಿಸಲಾಗಿದೆ.

ಸಿಎಂ ಸಿದ್ದರಾಮಯ್ಯ ಸರಕಾರಿ ನಿವಾಸಕ್ಕೆ ಪ್ರತಿಪಕ್ಷದವರು ಮುತ್ತಿಗೆ ಹಾಕುವ ಸಾಧ್ಯತೆ ಇರುವುದರಿಂದ ನಿವಾಸಕ್ಕೆ ಪೊಲೀಸ್ ಭದ್ರತೆ ಹೆಚ್ಚಿಸಲಾಗಿದೆ.

ಯಡಿಯೂರಪ್ಪ ಮನೆಗೂ ಭದ್ರತೆ

ಶಿವಮೊಗ್ಗದ ವಿನೋಬ ನಗರದಲ್ಲಿರುವ ಬಿ.ಎಸ್. ಯಡಿಯೂರಪ್ಪ ನಿವಾಸಕ್ಕೆ ಪೊಲೀಸ್ ಭದ್ರತೆ ನೀಡಲಾಗಿದೆ. ಸಿಎಂ ಸಿದ್ದರಾಮಯ್ಯ ವಿರುದ್ಧ ತನಿಖೆಗೆ ನ್ಯಾಯಾಲಯ ತೀರ್ಪು ನೀಡಿರುವ ಹಿನ್ನೆಲೆಯಲ್ಲಿ ಯಡಿಯೂರಪ್ಪ ನಿವಾಸದ ಮುಂದೆ ಯಾರಾದರೂ ಪ್ರತಿಭಟನೆ ನಡೆಸುವ ಸಾಧ್ಯತೆ ಇರುತ್ತದೆ. ಈ ಹಿನ್ನೆಲೆಯಲ್ಲಿ ಯಾವುದೇ ಅವಘಡ ಆಗಬಾರದು ಎಂಬ ಕಾರಣಕ್ಕಾಗಿ ಮುನ್ನೆಚ್ಚರಿಕೆ ಕ್ರಮವಾಗಿ ಈ ಕ್ರಮ ಕೈಗೊಳ್ಳಲಾಗಿದೆ. ಪ್ರಸ್ತುತ ಯಡಿಯೂರಪ್ಪ ಅವರ ಶಿವಮೊಗ್ಗ ನಿವಾಸದ ಮುಂದೆ ಎಎಸ್‌ಐ ಸೇರಿ ಐದು ಜನ ಹೆಚ್ಚುವರಿ ಪೊಲೀಸರನ್ನು ನಿಯೋಜನೆ ಮಾಡಲಾಗಿದೆ.

ವಿಶ್ವವಾಣಿ

ಸಂಪಾದಕೀಯ

ರಕ್ತದ ದಾಹ ಇನ್ನೂ ತೀರಿಲ್ಲವೇ?

ಹೇ ಯುದ್ಧ.. ನೀನೇಕೆ ಬರುವೆ ಈ ಭೂಮಿಗೆ, ತೊಲಗಾಚೆ ನೀನು ಧರೆಯಾಚೆಗೆ, ಮಾನವನ ಮಾರಣಹೋಮಕ್ಕೆ ಸಿದ್ಧ, ಜಗ ನುಂಗೋ ಯಮದೂತ! ಜನ ನುಂಗೋ ರಣಭೂತ! ನಿನಗಿನ್ನೂ ದಾಹ ಹಿಂಗಿಲ್ವಾ?' ಎನ್ನುತ್ತದೆ ಒಂದು ಚಲನಚಿತ್ರಗೀತೆ. ಒಂದೆಡೆ, ಉಕ್ರೇನ್ ಮತ್ತು ರಷ್ಯಾ ನಡುವೆ ವರ್ಷಗಳ ಹಿಂದೆ ಶುರುವಾದ ಹಣಾಹಣಿ ಇನ್ನೂ ನಿಂತಿಲ್ಲ. ಮತ್ತೊಂದೆಡೆ, ಇಸ್ರೇಲ್ ಮತ್ತು ಹಮಾಸ್ ಉಗ್ರರ ನಡುವೆ ಶುರುವಾದ ಸಂಘರ್ಷ ಇನ್ನೂ ಮುಂದುವರಿದಿದೆ. ಇವೆರಡು ಕಾಳಗಗಳಿಂದ ಸಂಭವಿಸಿದ ಸಾವು-ನೋವುಗಳು, ಸ್ವತ್ತುನಷ್ಟಗಳ ಸುದ್ದಿಗಳನ್ನು ಜನರು ಇನ್ನೂ ಜೀರ್ಣಿಸಿಕೊಳ್ಳುತ್ತಿರುವಾಗಲೇ, ಲೆಬನಾನ್ ಮೇಲೆ ಇಸ್ರೇಲ್ ಮುರಕೊಂಡು ಬಿದ್ದಿದೆ. ಅಲ್ಲಿನ ಹಿಜ್ಬುಲ್ಲಾ ನೆಲೆಗಳನ್ನು ಕೇಂದ್ರೀಕರಿಸಿ ಇಸ್ರೇಲ್ ವಾಯುಪಡೆಯು ನಡೆಸಿದ ಕ್ಷಿಪಣಿಗಳ ತೀವ್ರದಾಳಿಯಿಂದಾಗಿ 550ಕ್ಕೂ ಹೆಚ್ಚು ಜನರು ಸಾವಿಗೀಡಾಗಿ, 2000ಕ್ಕೂ ಹೆಚ್ಚು ಮಂದಿ ಗಾಯಗೊಂಡ ಸುದ್ದಿ ಈಗಾಗಲೇ ಜಗಜ್ಜಾಹೀರು. ಇಂಥ ಸಂಘರ್ಷ, ದಾಳಿಗಳಿಗೆ ಕಾರಣವೇನೇ ಇರಲಿ ಮತ್ತು ಅವಕ್ಕೆ ಚಿತಾವಣೆ ನೀಡಿದ್ದು ಯಾರೇ ಆಗಿರಲಿ, ಅವುಗಳಿಂದ ಬಹುತೇಕವಾಗಿ ನರಳುವವರು ಅಮಾಯಕರು ಎಂಬುದು ಅಪ್ರಿಯಸತ್ಯ. ಈ ಪ್ರಪಂಚದಲ್ಲಿ, ಸಂಧಾನ ಅಥವಾ ಶಾಂತಿ ಮಾತುಕತೆಗಳ ಮೂಲಕ ಪರಿಹರಿಸಲಾಗದ ಸಮಸ್ಯೆ ಯಾವುದೂ ಇಲ್ಲ. ಆದರೆ ಇಂಥ ನಿರುಪದ್ರವಿ ಹೆಜ್ಜೆಗಳು ರಕ್ತಪಿಪಾಸುಗಳಿಗೆ ಬೇಕಾಗಿಲ್ಲ; ತಮ್ಮ ಶಸ್ತ್ರಾಸ್ತ್ರಬಲ ತೋರಿಸಿಯೇ ಇಷ್ಟಾರ್ಥ ನೆರವೇರಿಸಿಕೊಳ್ಳಬೇಕೆಂಬ ಅಹಮಿಕೆಯೇ ಇಂಥವರಿಗೆ ಪ್ರಿಯವಾಗಿಬಿಟ್ಟಿದೆ. ಈ ಬಯಕೆಯ ಬೆಂಕಿಗೆ ತಿದಿ ಊದಲು ಶಸ್ತ್ರಾಸ್ತ್ರಗಳ ಮಾರಾಟಗಾರರು ಇದ್ದೇ ಇರುತ್ತಾರೆ! ಹೀಗಿದ್ದಾಗ, ಯುದ್ಧೋನ್ಮಾದಕ್ಕೆ ಕೊನೆಯೆಲ್ಲಿ? ಈಗಾಗಲೇ ಎರಡು ಮಹಾಯುದ್ಧಗಳನ್ನು ಕಂಡಿರುವ ಪ್ರಪಂಚ, ಮತ್ತೊಂದನ್ನು ಮಡಿಲು ತುಂಬಿಸಿಕೊಳ್ಳುವ ಸ್ಥಿತಿಯಲ್ಲಿಲ್ಲ. ಇದು ಗೊತ್ತಿದ್ದೂ ಕೆಲವರನ್ನು ಯುದ್ಧದ ಭೂತ ಮೆಟ್ಟಿಕೊಂಡಂತಿದೆ. ಮಹಾಯುದ್ಧದ ವೇಳೆ ಹಿರೋಷಿಮಾ-ನಾಗಾಸಾಕಿ ನಗರಗಳ ಮೇಲೆ ಬಾಂಬು ಹಾಕಿಸಿಕೊಂಡ ಜಪಾನ್, ಅದರ ದುಷ್ಪರಿಣಾಮಗಳಿಂದ ಚೇತರಿಸಿಕೊಳ್ಳಲು ದಶಕಗಳೇ ಹಿಡಿಯಿತು ಎಂಬ ಜ್ಞಾನವೂ ಇಂಥ ರಕ್ತಪಿಪಾಸುಗಳಿಗೆ ಇಲ್ಲವಾಯಿತೇ?

ಸೊಂಪಾದಕೀಯ

ಮಂಗಗಳ ಮಂಗಳಕಾರ್ಯ

ನಾವು ಅನೇಕ ಸಿನಿಮಾಗಳಲ್ಲಿ, ಕಥಾನಾಯಕನು ಕಷ್ಟದಲ್ಲಿರುವವರ ರಕ್ಷಣೆ ಮಾಡುವ ದೃಶ್ಯಗಳನ್ನು ನೋಡಿದ್ದೇವೆ. 'ಅಯ್ಯೋ, ಈ ಅನ್ಯಾಯನಾ ತಡೆಯೋಕೆ ಯಾರೂ ಇಲ್ವಾ..?' ಅಂತ ಚಿತ್ರದ ಪಾತ್ರವೊಂದು ಕೂಗಿ ಹೇಳಿದಾಗ ನಾಯಕ ನಟನ ಎಂಟ್ರಿ ಆಗೋದು, ಅವನು ಬಂದು ಅನ್ಯಾಯನ ನಿಲ್ಲಿಸೋದು ಎಲ್ಲವನ್ನೂ ನೋಡಿದ್ದೇವೆ. ಇದು ಮುಂದುವರಿದು, ಅನೇಕ ಪ್ರಾಣಿಪ್ರಧಾನ ಚಿತ್ರಗಳಲ್ಲಿ ನಾಯಿ, ಕೋತಿ, ಹಸು ಮುಂತಾದ ಪ್ರಾಣಿಗಳು ಸಂಕಷ್ಟದಲ್ಲಿರುವವರನ್ನು ಪಾರುಮಾಡಿದ ಉದಾಹರಣೆಗಳನ್ನೂ ನಾವು ನೋಡಿದ್ದೇವೆ. ಇದು ಅಂಥದ್ದೇ ಒಂದು ಪ್ರಸಂಗ. ಸೆಕ್ಸ್ ಅನ್ನೋ ವಿಷಯಕ್ಕೆ ಬಂದ್ರೆ ಮನುಷ್ಯ ಕ್ರೂರಮೃಗ ಆಗ್ತಾನೆ ಅನ್ನೋದಕ್ಕೆ ಅನೇಕ ಉದಾಹರಣೆಗಳಿವೆ. ಇತ್ತೀಚೆಗಂತೂ ಮನುಷ್ಯನನ್ನು ಕೊಂದು, ದೇಹವನ್ನು ಕತ್ತರಿಸಿ, ಅದರ ತುಂಡುಗಳನ್ನು ಫ್ರಿಜ್‌ನಲ್ಲಿ ಶೇಖರಿಸಿಡುವವರೆಗೆ ಈ ಕ್ರೂರತನ ಮುಂದುವರಿದಿರೋದ್ರಿಂದ ಇದು ಶೀತಲ ಸಮರವಾಗಿ ಉಳಿದಿಲ್ಲ. ಮನುಷ್ಯನೊಳಗಿನ ಮೃಗ ಒಂದು ಕಡೆ ಆದರೆ, ಮೃಗಗಳಲ್ಲಿರೋ ಮನುಷ್ಯತ್ವ ಇನ್ನೊಂದು ಕಡೆ. ಅಂಥ ಮೃಗಗಳ ಮಾನವೀಯತೆ ಸಾರುವಂಥ ವಿಷಯ ಇದು. ಉತ್ತರಪ್ರದೇಶದಲ್ಲಿ ಮಂಗಗಳು, ಅತ್ಯಾಚಾರಕ್ಕೆ ಒಳಗಾಗುತ್ತಿದ್ದ ಬಾಲಕಿಯನ್ನು ರಕ್ಷಣೆ ಮಾಡಿ, ಮನುಷ್ಯ ಮೇಲೋ, ಪ್ರಾಣಿ ಮೇಲೋ ಎಂಬ ಪ್ರಶ್ನೆಗೆ ಉತ್ತರ ನೀಡಿವೆ. ಆರು ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ಎಸಗುವ ಪ್ಲ್ಯಾನ್ ಮಾಡಿ, ಆಕೆಯ ಜತೆ ನಯವಾಗಿ ಮಾತಾಡಿ ಪಾಳುಬಿದ್ದ ಮನೆಯೊಂದಕ್ಕೆ ಕರೆದೊಯ್ದಿದ್ದ ಕಾಮುಕ, ಇನ್ನೇನು ಆಕೆಯ ಮೇಲೆ ಅತ್ಯಾಚಾರಕ್ಕೆ ಸಿದ್ಧವಾಗಿದ್ದಾಗ ಅವನ ಮೇಲೆ ಅಟ್ಯಾಕ್ ಮಾಡಿದ ಮಂಗಗಳು ಆತನನ್ನು ಅಲ್ಲಿಂದ ಓಡಿಸಿ ಮಂಗಗಳಿಗೂ ಮಾನವೀಯತೆ ಇದೆ ಅಂತ ಪ್ರೂವ್ ಮಾಡಿವೆ. ಬಾಲಕಿಯ ಚೀರಾಟ ಕೇಳಿ ಅಲ್ಲಿದ್ದ ಮಂಗಗಳ ಹಿಂಡು ಈ ಕಾಮುಕನ ಮೇಲೆ ದಾಳಿ ಮಾಡಿದೆ. ಮಂಗಗಳ ಸಂಖ್ಯೆ ಜಾಸ್ತಿ ಇದ್ದಿದ್ದರಿಂದ ಅವನು ಬೇರೆ ದಾರಿ ಕಾಣದೆ ಅಲ್ಲಿಂದ ಪೇರಿ ಕಿತ್ತಿದ್ದಾನೆ. ಈಗ ಬಾಲಕಿಯ ಮನೆಯವರು ಸಾಕ್ಷಾತ್ ಹನುಮಂತನೇ ಬಂದು ನಮ್ಮ ಮಗಳನ್ನು ರಕ್ಷಿಸಿದ್ದಾನೆ ಅಂತ ನಿಟ್ಟುಸಿರು ಬಿಟ್ಟಿದ್ದಾರೆ. ಒಟ್ಟಿನಲ್ಲಿ ಮಂಗಗಳು ಅಂದ್ರೆ, ಬರೀ ಕಪಿಚೇಷ್ಟೆ ಮಾಡಲು ಮಾತ್ರ ಅಂದುಕೊಂಡಿದ್ದವರಿಗೆ ಮಂಗಗಳಿಂದ ಮಂಗಳಕರ ಕೆಲಸಗಳೂ ಆಗುತ್ತವೆ ಅಂತ ಪ್ರೂವ್ ಮಾಡಿವೆ ಈ ಕೋತಿಗಳು.

ಸಂಪಾದಕರ ಸದ್ಯಶೋಧನೆ

ಬುಖಾರಾದಲ್ಲಿ ಮುಲ್ಲಾ ನಸ್ರುದ್ದೀನ್

ಇತ್ತೀಚಿನ ದಿನಗಳಲ್ಲಿ ಉಜ್ಬೆಕಿಸ್ತಾನಕ್ಕೆ ಹಲವರು ಹೋಗುತ್ತಾರೆ. ಅವರಲ್ಲಿ ಅನೇಕರು ತಾಷ್ಕೆಂಟ್ ನಗರವನ್ನು ನೋಡಿ ಬರುತ್ತಾರೆ. ಆದರೆ, ಅಲ್ಲಿನ ಐತಿಹಾಸಿಕ ಮತ್ತು ಪುರಾತನ ನಗರವಾದ 'ಬುಖಾರ'ಕ್ಕೆ ಹೋಗುವುದೇ ಇಲ್ಲ. ನಾನು ಉಜ್ಬೆಕಿಸ್ತಾನಕ್ಕೆ ಹೋದಾಗ, ಬುಖಾರಾ ನಗರಕ್ಕೆ ಹೋಗಲೇಬೇಕೆಂದು ನಿರ್ಧರಿಸಿದ್ದೆ. ಮಧ್ಯ ಏಷ್ಯಾದಲ್ಲಿ ಪುರಾತನ ನಾಗರಿಕತೆ ಹೊಂದಿದ ಅಪರೂಪದ ನಗರಗಳಲ್ಲಿ ಅದೂ ಒಂದು. ತಾಷ್ಕೆಂಟ್ ಮತ್ತು ಸಮರಕಂಡದ ಬಳಿಕ ಬುಖಾರಾ ಪ್ರಮುಖ ನಗರವಾಗಿದೆ. 2000 ವರ್ಷಗಳ ಹಿಂದೆ ಆ ನಗರ ತಲೆ ಎತ್ತಿರಬಹುದು ಎಂದು ಅಂದಾಜಿಸಲಾಗಿದೆ. ಆ ನಗರ ವಾಣಿಜ್ಯ, ಶಿಕ್ಷಣ, ಸಾಂಸ್ಕೃತಿಕ ಮತ್ತು ಧಾರ್ಮಿಕ ಚಟುವಟಿಕೆಗಳ ಕೇಂದ್ರವಾಗಿತ್ತು. ಆ ನಗರಕ್ಕೆ ವರ್ತಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಿದ್ದರು. ಸೂಫಿ ಸಂತರು ಸಹ ಬುಖಾರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನೆಲೆಸಿದ್ದರು. ಬುಖಾರಾದಲ್ಲಿ ಎಲ್ಲಿಯೇ ನಡೆದಾಡಿದರೂ ಇತಿಹಾಸದ ಮೇಲೆ ನಡೆದಾಡಿದಂತೆ ಎಂಬ ಮಾತಿದೆ. ಅದಕ್ಕೆ ಕಾರಣ ಆ ನಗರದಲ್ಲಿ ಸಾವಿರಕ್ಕೂ ಹೆಚ್ಚು ಐತಿಹಾಸಿಕ ತಾಣಗಳಿವೆ. 140ಕ್ಕೂ ಹೆಚ್ಚು ಮಿನಾರುಗಳು, ಮಸೀದಿಗಳು, ಪುರಾತನ ಮಹಲುಗಳಿವೆ. ಇವೆಲ್ಲವುಗಳನ್ನೂ ಜಾಗತಿಕ ಪಾರಂಪರಿಕ ತಾಣಗಳೆಂದು ಯುನೆಸ್ಕೋ ಘೋಷಿಸಿದೆ. ಒಂದು ದಿನದಲ್ಲಿ ಆ ನಗರವನ್ನು ನೋಡಲು ಸಾಧ್ಯವೇ ಇಲ್ಲ. ಕಾರಣ ಪ್ರತಿ ಕಟ್ಟಡವೂ ಕಥೆಯನ್ನು ಹೇಳುತ್ತದೆ. ಬುಖಾರಾಕ್ಕೆ ಹೋದಾಗ ನನಗೊಂದು ಅಚ್ಚರಿ ಕಾದಿತ್ತು. ನಮ್ಮೊಂದಿಗಿದ್ದ ಗೈಡ್, 'ನೀವು ಮುಲ್ಲಾ ನಸ್ರುದ್ದೀನ್ ಹೆಸರನ್ನು ಕೇಳಿರಬಹುದು. ಇಲ್ಲಿ ಅವನ ಪ್ರತಿಮೆಯಿದೆ' ಎಂದು ಹೇಳಿದ. ನಾನು ಓಶೋ ಪುಸ್ತಕಗಳಲ್ಲಿ ಮುಲ್ಲಾ ನಸ್ರುದ್ದೀನನ ಹಾಸ್ಯ ಪ್ರಸಂಗಗಳನ್ನು ಓದಿದವನು. ಮುಲ್ಲಾ ಕಥೆಗಳನ್ನು ಓಶೋನಷ್ಟು ಪರಿಣಾಮಕಾರಿಯಾಗಿ ಬೇರಾರೂ ಕಟ್ಟಿಕೊಟ್ಟಿಲ್ಲ. ನಾನು ಅನೇಕ ಸಂದರ್ಭಗಳಲ್ಲಿ ಮುಲ್ಲಾ ನಸ್ರುದ್ದೀನನ ಜೋಕುಗಳನ್ನು ನನ್ನ ಬರಹಗಳಲ್ಲಿ ಬಳಸಿದ್ದಿದೆ. ಅಸಲಿಗೆ ಮುಲ್ಲಾ ನಸ್ರುದ್ದೀನ್ ಎಂಬ ವ್ಯಕ್ತಿಯೇ ಇಲ್ಲ. ಅದೊಂದು ಕಾಲ್ಪನಿಕ ಪಾತ್ರ. ಈ ಪಾತ್ರ ಇಸ್ಲಾಮಿಕ್ ದೇಶಗಳಲ್ಲಿ ಮಾತ್ರ ಅಲ್ಲ, ಜಗತ್ತಿನಲ್ಲಿಯೇ ಸುಪರಿಚಿತ. ಮುಲ್ಲಾನ ಜೋಕುಗಳು ಟರ್ಕಿ, ಇರಾನ್, ಇರಾಕ್, ಮಧ್ಯ ಏಷ್ಯಾ ಮುಂತಾದ ದೇಶಗಳಲ್ಲಿ ಬಹು ಜನಪ್ರಿಯ. ಅನೇಕರಿಗೆ ಅದೊಂದು ಕಾಲ್ಪನಿಕ ಪಾತ್ರ ಎಂಬುದೂ ಗೊತ್ತಿಲ್ಲ. ಆ ಹೆಸರಿನ ವ್ಯಕ್ತಿ ಬದುಕಿದ್ದ ಎಂದೇ ಅನೇಕರು ಭಾವಿಸಿದ್ದಾರೆ. ಸುಮಾರು 30 ವರ್ಷಗಳ ಹಿಂದೆ, ದೂರದರ್ಶನದಲ್ಲಿ ಆತನ ಹಾಸ್ಯ ಪ್ರಸಂಗಗಳ ಧಾರಾವಾಹಿ ಕೂಡ ಪ್ರಸಾರವಾಗಿತ್ತು. 1943ರಲ್ಲಿಯೇ 'ಬುಖಾರಾದಲ್ಲಿ ನಸ್ರುದ್ದೀನ್' (Nasruddin in Bukhara) ಎಂಬ ಹಾಸ್ಯ ಸಿನಿಮಾ ಕೂಡ ತೆರೆ ಕಂಡಿದ್ದನ್ನು ಕೇಳಿದ್ದೆ. ಯಾವಾಗ ಗೈಡ್ ಮುಲ್ಲಾ ನಸ್ರುದ್ದೀನನ ಪ್ರತಿಮೆ ಬಗ್ಗೆ ಹೇಳಿದನೋ, ಅದನ್ನು ನೋಡಲೇಬೇಕು ಎಂಬ ಆಸೆಯಾಯಿತು. ಬುಖಾರಾ ನಗರಕ್ಕೆ ನೀರನ್ನು ಪೂರೈಸುವ ಲಿಯಾಬಿ ಹೌಜ್ ಎನ್ನುವ ಕೊಳದ ಪಕ್ಕದಲ್ಲಿಯೇ ಮುಲ್ಲಾನ ಕಂಚಿನ ಪ್ರತಿಮೆಯನ್ನು ನಿಲ್ಲಿಸಲಾಗಿದೆ. ಮುಲ್ಲಾ ಕತ್ತೆಯ ಮೂಲಕ ಊರಿಂದ ಊರಿಗೆ ಪ್ರಯಾಣ ಮಾಡುತ್ತಿದ್ದುದರಿಂದ, ಕತ್ತೆಯ ಮೇಲೆ ಕುಳಿತ ಮುಲ್ಲಾನ ಪ್ರತಿಮೆಯನ್ನು ಸ್ಥಾಪಿಸಲಾಗಿದೆ. ಟರ್ಕಿಯಲ್ಲಿ ಮುಲ್ಲಾ ನಸ್ರುದ್ದೀನ್ ಬಹಳ ಪ್ರಸಿದ್ಧ. ಅಲ್ಲಿನ ಸಾಹಿತ್ಯದಲ್ಲೂ ಆತನ ಪ್ರಸ್ತಾಪ ದಟ್ಟವಾಗಿದೆ. ಆದರೆ ಟರ್ಕಿಯಲ್ಲಿ ಆತನ ನೆನಪಿಗಾಗಿ ಒಂದು ಸ್ಮಾರಕವಿಲ್ಲ ಅಥವಾ ಪ್ರತಿಮೆಯೂ ಇಲ್ಲ. ಆದರೆ ಬುಖಾರಾ ನಗರದಲ್ಲಿ ಆತನನ್ನು ನೆನಪಿಸಿಕೊಂಡಿರುವುದು ಗಮನಾರ್ಹ. ತಲೆ ಮೇಲೆ ಸದಾ ಬಟ್ಟೆಯ ಗಂಟು ಹೊತ್ತ ಮುಲ್ಲಾನ ಚಿತ್ರ ಸಾಮಾನ್ಯ. ಆದರೆ ಕಂಚಿನ ಪ್ರತಿಮೆಯಲ್ಲಿ ತಲೆ ಮೇಲೆ ಗಂಟನ್ನು ಇಟ್ಟಿಲ್ಲ. ಕತ್ತೆಯ ಮೇಲೆ ಕುಳಿತ ಮುಲ್ಲಾನ ಒಂದು ಕಾಲಿನ ಚಪ್ಪಲಿ ನೆಲಕ್ಕೆ ತಾಕುತ್ತಿದೆ. ಮತ್ತೊಂದು ಕಾಲು ಗಾಳಿಯಲ್ಲಿದೆ. ಒಂದು ಕೈಯನ್ನು ಮುಲ್ಲಾ ಎದೆಯ ಮೇಲೆ ಇಟ್ಟುಕೊಂಡಿದ್ದಾನೆ, ಮತ್ತೊಂದು ಕೈ 'ಎಲ್ಲವೂ ಚೆನ್ನಾಗಿದೆ, ಸುಂದರವಾಗಿದೆ' ಎಂಬ ಸೂಚನೆ ನೀಡುತ್ತಿರುವಂತಿದೆ. ಒಂದು ವೇಳೆ ಬುಖಾರಾಕ್ಕೆ ಹೋಗಿಯೂ ಮುಲ್ಲಾ ನಸ್ರುದ್ದೀನ್‌ನ ಪ್ರತಿಮೆಯನ್ನು ನೋಡಿರದಿದ್ದರೆ ನನಗೆ ಅತೀವ ಬೇಸರವಾಗುತ್ತಿತ್ತು. ಈಗಲೂ ಬುಖಾರಾ ಅಂದ್ರೆ, ಸಾಕು ಮುಲ್ಲಾ ನಸ್ರುದ್ದೀನನೇ ಕಣ್ಮುಂದೆ ಬರುತ್ತಾನೆ.

ಸ್ಫೂರ್ತಿ ಸೆಲೆಯೋ, ಕ್ರೂರ ರಕ್ಕಸಿಯೋ?

ಹಿಂದಿರುಗಿ ನೋಡಿದಾಗ

ಡಾ. ನಾ.ಸೋಮೇಶ್ವರ
vveditoped@gmail.com

ಆಗಸ್ಟ್ 1905. ಸ್ವಿಜರ್ಲೆಂಡ್ ದೇಶದ ವಾಡ್ ಪ್ರಾಂತ. ನ್ಯೊನ್ ಜಿಲ್ಲೆಯ ಒಂದು ಪುಟ್ಟ ಹಳ್ಳಿ ಕಮ್ಯೂಗ್ನಿ. ಅಲ್ಲಿ ಮೂರು ಶವಪೆಟ್ಟಿಗೆಗಳು ಆಕಾಶಕ್ಕೆ ಬಾಯ್ತೆರೆದುಕೊಂಡಿದ್ದವು. ಮೊದಲನೆಯದು ದೊಡ್ಡ ಪೆಟ್ಟಿಗೆ. ಅದರಲ್ಲಿ ತಾಯಿಯ ಶವವಿತ್ತು. ಅದರ ಪಕ್ಕದಲ್ಲಿ ಒಂದು ಮಧ್ಯಮ ಗಾತ್ರದ ಶವಪೆಟ್ಟಿಗೆ. ಅದರಲ್ಲಿ 4 ವರ್ಷ ವಯಸ್ಸಿನ ರೋಸ್ ಎಂಬ ಹೆಣ್ಣು ಮಗುವಿನ ಶವವಿತ್ತು. ಕೊನೆಯದು ಚಿಕ್ಕ ಪೆಟ್ಟಿಗೆ, ಎರಡು ವರ್ಷ ವಯಸ್ಸಿನ ಹೆಣ್ಣು ಮಗು ಬ್ಲಾಂಚಳದ್ದು. ಈ ಶವಪೆಟ್ಟಿಗೆಗಳ ಮುಂದೆ ನಿಂತಿದ್ದ ಜೀನ್ ಲ್ಯಾನ್‌ಫ್ರೆ, ಓರ್ವ ದಢೂತಿ ಫ್ರೆಂಚ್ ಕಾರ್ಮಿಕ. ಅವನ ಮುಂದೆ ಅವನ ಮೃತ ಕುಟುಂಬವಿತ್ತು. 'ನಾನು ಅವರನ್ನು ಕೊಲ್ಲಲಿಲ್ಲ...' ಎಂದು ಅಂಗಲಾಚಿ ಬೇಡುತ್ತಿದ್ದ, ಗೋಗರೆಯುತ್ತಿದ್ದ. 'ನಾನು ಅವರನ್ನು ಗುಂಡು ಹಾರಿಸಿ ಕೊಲ್ಲುವಷ್ಟು ಕಟುಕನಲ್ಲ' ಎಂದು ಒಂದೇ ಸಮನೆ ಕಣ್ಣೀರುಗರೆಯುತ್ತಿದ್ದ. 'ನಾನು ನನ್ನ ಕುಟುಂಬವನ್ನು ನನ್ನ ಜೀವಕ್ಕಿಂತಲೂ ಹೆಚ್ಚು ಪ್ರೀತಿಸುತ್ತಿದ್ದೆ. ಹಾಗಿರುವಾಗ ನಾನು ಅವರನ್ನು ಹೇಗೆ ತಾನೆ ಕೊಲ್ಲಲು ಸಾಧ್ಯ? ಈ ಕೊಲೆಗಳನ್ನು ನಾನು ಮಾಡಲಿಲ್ಲವೆಂದು ದಯವಿಟ್ಟು ಹೇಳಿ. ಈ ಕೊಲೆಗಳ ಆರೋಪವನ್ನು ನನ್ನ ಮೇಲೆ ಹೊರಿಸಬೇಡಿ...' ಎಂದು ಅಂಗಲಾಚುತ್ತಿದ್ದ.

ಲ್ಯಾನ್‌ಫ್ರೆ ಹಿಂದಿನ ದಿವಸ ಕುಡಿದಿದ್ದ. ಬೆಳ್ಳಂಬೆಳಗ್ಗೆ ಕುಡಿಯಲು ಆರಂಭಿಸಿದ್ದ. ಮೊದಲು ನೀರು ಬೆರೆಸಿದ ಅಬ್ಸಿಂಥ್ ಪಾನೀಯ. ಅದಾದ ನಂತರ ಸ್ವಲ್ಪ ಹೊತ್ತಿನಲ್ಲಿಯೇ ಮತ್ತೊಂದು ಅಬ್ಸಿಂಥ್ ಪಾನೀಯ. ಕೆಲಸಕ್ಕೆಂದು ದ್ರಾಕ್ಷಾರಸವನ್ನು ತಯಾರಿಸುವ ಕಾರ್ಖಾನೆಯ ಕಡೆಗೆ ನಡೆದ. ಮಧ್ಯಾಹ್ನದ ಊಟದ ಹೊತ್ತಿಗೆ ಆರು ಗ್ಲಾಸ್ ವೈನ್ ಕುಡಿದ. ಕೆಲಸ ಮುಗಿಸಿಕೊಂಡು ಮನೆಗೆ ಹೋಗುವಾಗ ಮತ್ತೊಂದು ಗ್ಲಾಸ್ ವೈನ್ ಕುಡಿದ. ದಾರಿಯಲ್ಲಿ ಬರುತ್ತಾ ಬ್ಲಾಕ್ ಕಾಫಿಗೆ ಬ್ರಾಂದಿ ಬೆರೆಸಿ ಕುಡಿದ. ಮನೆಗೆ ಬಂದ ಲ್ಯಾನ್‌ಫ್ರೆ, ಮತ್ತೊಂದು ಲೀಟರ್ ವೈನನ್ನು ಕೈಯಲ್ಲಿ ಹಿಡಿದುಕೊಂಡು ಕುಡಿಯಲು ಕುಳಿತ. ಅದನ್ನು ನೋಡಿ ಅವನ ಹೆಂಡತಿ 'ದಿನವೆಲ್ಲ ಕುಡಿದದ್ದು ಸಾಲದು ಅಂತ ಮನೆಯಲ್ಲೂ ಕುಡಿಯಲಿಕ್ಕೆ ಆರಂಭಿಸಿದೆಯಲ್ಲ' ಎಂದು ಆಕ್ಷೇಪಿಸಿದಳು. 'ಬಾಯ್ಮುಚ್ಚು ನೀನು' ಎಂದು ಕೂಗಿದ. 'ನೀನು ಕುಡಿಯೋದನ್ನು ಮೊದಲು ನಿಲ್ಲಿಸು' ಎಂದಳು ಹೆಂಡತಿ. ಕೂಡಲೇ, ಗೋಡೆಯ ಮೇಲೆ ತೂಗುಹಾಕಿದ್ದ ಗುಂಡು ತುಂಬಿದ್ದ ರೈಫಲನ್ನು ಕೈಗೆತ್ತಿಕೊಂಡ. ಹೆಂಡತಿಯ ಹಣೆಗೆ ಸರಿಯಾಗಿ ಗುರಿಯಿಟ್ಟು 'ಢಂ' ಎಂದು ಗುಂಡು ಹಾರಿಸಿದ. ಶಬ್ದವನ್ನು ಕೇಳಿದ ಕೂಡಲೇ ಹಿರಿಯ ಮಗಳು 'ರೋಸ್' ಬಂದಳು. ತಾಯಿಯನ್ನು ಆಕೆ ನೋಡುತ್ತಿರುವಂತೆ ಅವಳಿಗೂ ಗುರಿಯಿಟ್ಟು ಗುಂಡು ಹೊಡೆದ. ಆಕೆ ಅಲ್ಲಿಯೇ ಕುಸಿದುಬಿದ್ದಳು. ಒಳಗೆ ತೊಟ್ಟಿಲಲ್ಲಿ ಮಲಗಿದ್ದ ಚಿಕ್ಕಮಗಳು ಬ್ಲಾಂಚ್, ಬೆಚ್ಚಿಬಿದ್ದು ಅಳಲಾರಂಭಿಸಿದಳು. ಕೂಡಲೇ ಲ್ಯಾನ್‌ಫ್ರೆ ಒಳಕ್ಕೆ ಹೋಗಿ ಅಳುತ್ತಿದ್ದ ಮಗುವಿಗೆ ಗುಂಡಿಟ್ಟು ಹೊಡೆದ. ಮಗು ತನ್ನ ಅಳುವನ್ನು ಸದಾಕಾಲಕ್ಕೆ ನಿಲ್ಲಿಸಿತು.

ಈ ಕೌಟುಂಬಿಕ ದಾರುಣ ಕೊಲೆಯನ್ನು ಕಂಡು ಕಮ್ಯೂಗ್ನಿ ನಡುಗಿಹೋಯಿತು. ಊರಿನವರೆಲ್ಲ, 'ಈ ಹತ್ಯಾಕಾಂಡಕ್ಕೆ ಲ್ಯಾನ್‌ಫ್ರೆ ಕಾರಣನಲ್ಲ, ಅವನ ಹೊಟ್ಟೆಯಲ್ಲಿದ್ದ ಅಬ್ಸಿಂಥ್ ಪಾನೀಯವೇ ಕಾರಣ' ಎಂದು ಘೋಷಿಸಿದರು. ಕಮ್ಯೂಗ್ನಿಯ ಮೇಯರ್ 'ನಮ್ಮ ದೇಶದಲ್ಲಿ ನಡೆಯುತ್ತಿರುವ ಸರಣಿ ಹತ್ಯಾಕಾಂಡಗಳಿಗೆ ಈ ಅಬ್ಸಿಂಥ್ ಪಾನೀಯವೇ ಕಾರಣ' ಎಂದು ಬಹಿರಂಗ ಹೇಳಿಕೆಯನ್ನು ನೀಡಿದ. ಮನುಷ್ಯನನ್ನು ರಾಕ್ಷಸನನ್ನಾಗಿ ಮಾಡುವ ಈ ಅಬ್ಸಿಂಥ್ ಪಾನೀಯವನ್ನು ನಿಷೇಧಿಸಬೇಕೆಂದು ಒಂದು ಅಹವಾಲನ್ನು ಸಿದ್ಧಪಡಿಸಿದ. ಕೆಲವೇ ದಿನಗಳಲ್ಲಿ 82,000 ಜನರು ಆ ಅಹವಾಲಿಗೆ ತಮ್ಮ ಸಹಿಯನ್ನು ಹಾಕಿದರು.

ಅಬ್ಸಿಂಥ್ ಎನ್ನುವುದು ಒಂದು ಮಾದಕ ಪಾನೀಯ. ಇದರಲ್ಲಿ ಶೇ.50-75ರಷ್ಟು ಮದ್ಯಸಾರ ಅಥವಾ ಆಲ್ಕೋಹಾಲ್ ಇರುತ್ತದೆ. ಇದಕ್ಕೆ ಸೋಂಪು ಸಾರವನ್ನು ಬೆರೆಸುತ್ತಾರೆ. ಇದು ಪಾನೀಯಕ್ಕೆ ಒಂದು ಹಿತಕರವಾದ ಸುವಾಸನೆಯನ್ನು ನೀಡುತ್ತದೆ. ನಂತರ ಇದಕ್ಕೆ ಮಾಚಿಪತ್ರೆಯ ಸಾರವನ್ನು ಸೇರಿಸುತ್ತಾರೆ. ಇಂಗ್ಲಿಷಿನಲ್ಲಿ ಮಾಚಿಪತ್ರೆಯ ಹೆಸರು ವರ್ಮ್‌ವುಡ್. ವೈಜ್ಞಾನಿಕ ನಾಮಧೇಯ 'ಆರ್ಟಿಮೀಸಿಯ ಆಬ್ಸೆಂಥಿಯಮ್'. ನಮ್ಮ ದವನದ ಜಾತಿಗೆ ಸೇರಿದ ಸಸ್ಯ. ಇದರ ಎಲೆಗಳಲ್ಲಿ 'ಥುಜೋನ್' ಎಂಬ ರಾಸಾಯನಿಕವಿರುತ್ತದೆ. ಮಾಚಿಪತ್ರೆಯ ಸಾರವನ್ನು ಬೆರೆಸುತ್ತಿದ್ದಂತೆಯೇ ಪಾನೀಯವು ಅತ್ಯಾಕರ್ಷಕ ಹಸಿರು ಬಣ್ಣವನ್ನು ತಳೆಯುತ್ತದೆ. ಹಾಗಾಗಿ ಈ ಪಾನೀಯವನ್ನು 'ಹಸಿರು ಕಿನ್ನರಿ' ಅಥವಾ 'ಗ್ರೀನ್ ಫೇರಿ' ಎಂದು ಕರೆಯುತ್ತಿದ್ದರು. ಈ ಹಸಿರು ಕಿನ್ನರಿಯನ್ನು ಮೊದಲ ಬಾರಿಗೆ ರೂಪಿಸಿದವನು 18ನೆಯ ಶತಮಾನದ ವೈದ್ಯ ಪಿಯರಿ ಆರ್ಡಿನೇರ್. ಈ ಪಾನೀಯವು 19 ಮತ್ತು 20ನೆಯ ಶತಮಾನದ ಫ್ರಾನ್ಸ್ ದೇಶದಲ್ಲಿ ಅಪಾರ ಜನಪ್ರಿಯತೆಯನ್ನು ಪಡೆಯಿತು. ಫ್ರಾನ್ಸ್ ದೇಶದ, ಅದರಲ್ಲೂ ಪ್ಯಾರಿಸ್ ನಗರದಲ್ಲಿದ್ದ ಸಾಹಿತಿಗಳು ಮತ್ತು ಕಲಾವಿದರು ಹಸಿರು ಕಿನ್ನರಿಯನ್ನು ಇನ್ನಿಲ್ಲದಂತೆ ಮೆಚ್ಚಿಕೊಂಡರು ಹಾಗೂ ಆ ಪಾನೀಯದ ಪರಮ ಭಕ್ತರಾದರು. ಹಸಿರು ಕಿನ್ನರಿಯನ್ನು ಸೇವಿಸುತ್ತಿರುವಂತೆ ತಮ್ಮ ತಿಳಿವು ನಿಚ್ಚಳವಾಗುತ್ತದೆ, ಸ್ಪಷ್ಟವಾಗುತ್ತದೆ, ಹೊಸ ಹೊಸ ವಿಚಾರಗಳು ಬರುತ್ತವೆ, ಇನ್ನಿಲ್ಲದ ಸ್ಫೂರ್ತಿಯು ಉಕ್ಕಿ ಬರುತ್ತದೆ, ತಮ್ಮ ಸೃಜನಶೀಲತೆಗೆ ಇನ್ನಿಲ್ಲದ ಹಾಗೆ ಇಂಬು ಕೊಡುತ್ತದೆ ಎಂದೆಲ್ಲ ವರ್ಣಿಸಿದರು. ಅರ್ನೆಸ್ಟ್ ಹೆಮ್ಮಿಂಗ್ವೇ, ಜೇಮ್ಸ್ ಜಾಯ್ಸ್, ಲೆವಿಸ್ ಕ್ಯಾರಲ್, ಚಾರ್ಲ್ಸ್ ಬೊದಿಲೇರ್, ಪಾಲ್ ವೆರ್ಲೈನ್, ಆರ್ಥರ್ ರಿಂಬಾಡ್, ಹೆನ್ರಿ ದ ತೌಲೋಸ್-ಲಾಟ್ರೆಕ್, ಪಿಕಾಸೊ, ವಿನ್ಸೆಂಟ್ ವ್ಯಾನ್ ಗಾಗ್, ಆಸ್ಕರ್ ವೈಲ್ಡ್, ಎಮಿಲಿ ಝೋಲ, ಗಯ್ ದ ಮುಪ್ಪಾಸ ಮುಂತಾದ ಬೌದ್ಧಿಕ ವಲಯವೇ

ಹಸಿರು ಕಿನ್ನರಿಯ ದಾಸರಾದರು. ಒಂದು ಸಮಾಜದ ಮೇಲೆ ಅಪಾರ ಪರಿಣಾಮವನ್ನು ಬೀರಬಲ್ಲ ಗಣ್ಯವ್ಯಕ್ತಿಗಳು ಹಸಿರು ಕಿನ್ನರಿಯನ್ನು ಹಾಡಿ ಹೊಗಳುವಾಗ, ಅವರು ಹೇಳುವುದನ್ನು ಜನಸಾಮಾನ್ಯರು ನಂಬಿ, ಅವರನ್ನು ಅನುಸರಿಸುವುದು ಸಹಜವೇ ಆಗಿತ್ತು. ಹಾಗಾಗಿ ಅತ್ಯಲ್ಪ ಕಾಲದಲ್ಲಿ ಹಸಿರು ಕಿನ್ನರಿಯು ಫ್ರಾನ್ಸ್ ದೇಶದಲ್ಲಿ ಜನಪ್ರಿಯವಾಯಿತು. ನಂತರ ಬ್ರಿಟನ್ನಿಗೆ ಹರಡಿತು. ಇತರ ಯುರೋಪಿಯನ್ ದೇಶಗಳಿಗೆ ವ್ಯಾಪಿಸಿತು. ಅಮೆರಿಕದಲ್ಲೂ ಜನಪ್ರಿಯತೆಯನ್ನು ಪಡೆಯಿತು.

ಮಾಚಿಪತ್ರೆಯು ಇತಿಹಾಸಪೂರ್ವ ಕಾಲದಿಂದಲೂ ವೈದ್ಯಕೀಯ ಚಿಕಿತ್ಸೆಯಲ್ಲಿ ಬಳಕೆಯಲ್ಲಿತ್ತು. ಕ್ರಿ.ಪೂ.1550ರ ಕಾಲದ ಈಜಿಪ್ಷಿಯನ್ 'ಈಬರ್ಸ್ ಪ್ಯಾಪಿರಸ್'ನಲ್ಲಿ ಮಾಚಿಪತ್ರದ ವೈದ್ಯಕೀಯ ಉಪಯೋಗದ ಬಗ್ಗೆ ಉಲ್ಲೇಖವಿದೆ. ಮಾಚಿಪತ್ರೆಯ ಸಾರವನ್ನು ಅಥವಾ ಮದ್ಯಸಾರದಲ್ಲಿ ನೆನೆಯಿಸಿದ ಮಾಚಿಪತ್ರೆಯ ಎಲೆಗಳನ್ನು ಚಿಕಿತ್ಸೆಯಲ್ಲಿ ಗ್ರೀಕರು ಬಳಸುತ್ತಿದ್ದರು. ಮಾಚಿಪತ್ರೆ ಬೆರೆತ ವೈನ್ ಅನ್ನು 'ಅಬ್ಸಿಂಥೈಟಿಸ್ ಓಯಿನೋಸ್' ಎಂದು ಕರೆಯುತ್ತಿದ್ದರು. ಹಿಪ್ಪೋಕ್ರೇಟ್ಸ್, ಮಾಚಿಪತ್ರೆಯಿಂದ ತಯಾರಿಸಿದ ಔಷಧವನ್ನು ಋತುಸಂಬಂಧಿತ ಕಾಲದ ನೋವನ್ನು ಕಡಿಮೆ ಮಾಡಲು, ಕಾಮಾಲೆ, ರಕ್ತಹೀನತೆ ಹಾಗೂ ಕೀಲುನೋವನ್ನು ಕಡಿಮೆ ಮಾಡಲು ಬಳಸುತ್ತಿದ್ದ. ರೋಮನ್ ವಿದ್ವಾಂಸನಾದ ಪ್ಲೀನಿ ದಿ ಎಲ್ಡರ್, ರೋಮನ್ ರಥಸ್ಪರ್ಧೆಯಲ್ಲಿ ಪಾಲುಗೊಳ್ಳುವ ಸ್ಪರ್ಧಿಗಳು, ಮೊದಲು ಮಾಚಿಪತ್ರೆಯಿರುವ ಅಬ್ಸಿಂಥಿಯಮ್ ಮಾದಕ ಪಾನೀಯವನ್ನು ಸೇವಿಸುತ್ತಿದ್ದರು ಎಂದು ದಾಖಲಿಸಿದ್ದಾನೆ. ಕ್ರಿ.ಶ. 2ನೆಯ ಶತಮಾನದಲ್ಲಿ ಗ್ಯಾಲನ್, ಹೊಟ್ಟೆನೋವನ್ನು ಕಡಿಮೆ ಮಾಡಲು, ಕರುಳು ಹುಳುಗಳನ್ನು ನಿವಾರಿಸಲು ಹಾಗೂ ತಲೆತಿರುಗಿ ಬೀಳುವುದನ್ನು ನಿಗ್ರಹಿಸಲು ಮಾಚಿಪತ್ರೆಯನ್ನು ಬಳಸಬಹುದು ಎಂದಿದ್ದಾನೆ. 17-18ನೆಯ ಶತಮಾನದಲ್ಲಿ ಪ್ಲೇಗ್ ಯುರೋಪನ್ನು ಕಾಡುವಾಗ, ಜನರು ಮಾಚಿಪತ್ರೆಯ ಧೂಪವನ್ನು ಮನೆಯಲ್ಲಿ ಹಾಕುತ್ತಿದ್ದರು. ಇದು ಪ್ಲೇಗ್ ಸೋಂಕನ್ನು ತಡೆಗಟ್ಟುತ್ತದೆ ಎಂದು ಅವರು ನಂಬಿದ್ದರು.

ಸ್ವಿಜರ್ಲೆಂಡ್‌ನ ಕುವೆಟ್ ಪ್ರದೇಶದಲ್ಲಿ ವಾಸವಾಗಿದ್ದ ಡಾ. ಪಿಯರಿ ಆರ್ಡಿನೇರ್ (1797-1915) ಎಂಬ ಫ್ರೆಂಚ್ ವೈದ್ಯನು 'ಅಧಿಕ ಮದ್ಯಸಾರಯುಕ್ತ ಅಬ್ಸಿಂಥ್ ಅಮೃತ' (ಹೈಲಿ ಆಲ್ಕೋಹಾಲಿಕ್ ಎಲಿಕ್ಸರ್ ಅಬ್ಸಿಂಥ್) ವನ್ನು 1792ರ ಆಸುಪಾಸಿನಲ್ಲಿ ರೂಪಿಸಿದ. ಕುವೆಟ್‌ನಲ್ಲಿ ಹೆನ್ರಿಯಾಡ್ ಸೋದರಿಯರು ಹಸಿರು ಕಿನ್ನರಿಯನ್ನು ತಯಾರಿಸುವ ಸೂತ್ರವನ್ನು ಪಿಯರಿಯಿಂದ ರಹಸ್ಯವಾಗಿ ಪಡೆದುಕೊಂಡರು. ನಂತರ ಈ ರಹಸ್ಯವು ಮೇಜರ್ ಡುಬೀದ್ ಎಂಬುವವನಿಗೆ ಹಸ್ತಾಂತರವಾಯಿತು. ಅವನು ಕುವೆಟ್‌ನಲ್ಲಿ 'ಡುಬೀದ್ ಪಿಯರಿ ಎಟ್ ಫಿಲ್' ಎಂಬ ಹೆಸರಿನಲ್ಲಿ ಹಸಿರು ಕಿನ್ನರಿಯನ್ನು ವ್ಯಾಪಾರಿ ಮಟ್ಟದಲ್ಲಿ ಭಟ್ಟಿಯಿಳಿಸಬಲ್ಲ ಕಾರ್ಖಾನೆಯನ್ನು (ಡಿಸ್ಟಿಲರಿ) ಆರಂಭಿಸಿದ. ಅತ್ಯಲ್ಪ ಕಾಲದಲ್ಲಿಯೇ ಫ್ರಾನ್ಸಿನ 'ಪಾಂಟೆಲಿಯರ್' ಎಂಬ ಸ್ಥಳದಲ್ಲಿ ಎರಡನೆಯ ಡಿಸ್ಟಿಲರಿ ಆರಂಭಿಸಿದ. 1914ರಲ್ಲಿ ಫ್ರಾನ್ಸ್ ಸರಕಾರವು ಹಸಿರು ಕಿನ್ನರಿಯನ್ನು ನಿರ್ಬಂಧಿಸುವವರೆಗೆ ಈ ಎರಡೂ ಕಾರ್ಖಾನೆಗಳಲ್ಲಿ ಹಸಿರು ಕಿನ್ನರಿಯ ಉತ್ಪಾದನೆಯು ನಿರಂತರವಾಗಿ ಸಾಗಿತು.

ಯುರೋಪಿನ ಬೌದ್ಧಿಕ ಜಗತ್ತು ಹಸಿರು ಕಿನ್ನರಿಯ ಸೇವನೆಯಿಂದ ದೊರೆಯುವ ಸೃಜನಶೀಲ ಹೊಳಹುಗಳ ಬಗ್ಗೆ ಹಾಡಿ ಹೊಗಳುತ್ತಿರುವ ಅವಧಿಯಲ್ಲಿ, ಹಸಿರು ಕಿನ್ನರಿಯಲ್ಲಿರುವ 'ಥುಜೋನ್' ಒಂದು ಭ್ರಮಾಜನಕ, ಅಪಾಯಕಾರಿ ವಸ್ತು, ಮನಸ್ಸು ಮತ್ತು ಮಿದುಳನ್ನು ಕೊಳೆಯಿಸಿ, ಮಾನವೀಯತೆಯನ್ನು ಮರೆಯಿಸುವ ಉಗ್ರವಿಷವೆಂದು ಜನಜನಿತವಾಯಿತು. ಫ್ರೆಂಚ್ ಮನೋವೈದ್ಯ ವ್ಯಾಲೆಂಟಿನ್ ಮ್ಯಾಗ್ನನ್ (1835-1916) ಹಸಿರು ಕಿನ್ನರಿಯ ಮೇಲಿದ್ದ ಆರೋಪಕ್ಕೆ ಋಜುವಾತನ್ನು ಒದಗಿಸಲು ಹತ್ತು ಹಲವು ಪ್ರಯೋಗಗಳನ್ನು ಕೈಗೊಂಡ, 1867ರಲ್ಲಿ ಫ್ರಾನ್ಸಿನ 'ಸೈಂಟ್ ಅನ್'ನಲ್ಲಿರುವ ಹುಚ್ಚರ ಆಸ್ಪತ್ರೆಯ (ಅಸೈಲಮ್) ವೈದ್ಯಾಧಿಕಾರಿಯಾಗಿ ಆಯ್ಕೆಯಾದ. ಅವನು ಆಲ್ಕೋಹಾಲ್ ಸೇವನೆಯ ದುಷ್ಪರಿಣಾಮಗಳಿಗಿಂತ, ಹಸಿರು ಕಿನ್ನರಿಯ ಸೇವನೆಯು ಹೆಚ್ಚು ದುಷ್ಪರಿಣಾಮಗಳನ್ನು ಬೀರುತ್ತದೆ ಎನ್ನುವುದಕ್ಕೆ ಪುರಾವೆಯನ್ನು ಒದಗಿಸಲು ಮುಂದಾದ. ಇವನು ಒಂದು ಗಾಜಿನ ಗೋಳದ ಒಳಗೆ ಒಂದು ಗಿನಿಪಿಗ್ ಇಟ್ಟ. ಅದರ ಪಕ್ಕದಲ್ಲಿ ಶುದ್ಧ ಆಲ್ಕೋಹಾಲನ್ನು ಒಂದು ಬಟ್ಟಲಲ್ಲಿ ಇರಿಸಿದ. ಮತ್ತೊಂದು ಗಾಜಿನ ಗೋಳದಲ್ಲಿ ಮತ್ತೊಂದು ಗಿನಿಪಿಗ್ ಇಟ್ಟ, ಅದರ ಪಕ್ಕದಲ್ಲಿ ಒಂದು ಬಟ್ಟಲಲ್ಲಿ ಮಾಚಿಪತ್ರೆಯ ಶುದ್ಧ ತೈಲವನ್ನು ಇರಿಸಿದ. ಹೀಗೆಯೇ ಎರಡನೆಯ ಪ್ರಯೋಗದಲ್ಲಿ ಬೆಕ್ಕನ್ನು, ಮೂರನೆಯ ಪ್ರಯೋಗದಲ್ಲಿ ಮೊಲವನ್ನು ಬಳಸಿದ. ಎಲ್ಲ ಪ್ರಯೋಗಗಳಲ್ಲಿ, ಮಾಚಿಪತ್ರೆ ತೈಲವನ್ನು ಸೇವಿಸಿದ ಪ್ರಾಣಿಗಳು ತಕ್ಷಣವೇ ಕೆಳಕ್ಕೆ ಬಿದ್ದವು. ಸೆಳವು ಬಂದು ಒದ್ದಾಡಲಾರಂಭಿಸಿದವು. ಸಾಯುವ ಸ್ಥಿತಿಗೆ ಬಂದವು. ಆಲ್ಕೋಹಾಲ್ ಆವಿಯನ್ನು ಸೇವಿಸಿದ ಪ್ರಾಣಿಗಳಿಗೆ ಯಾವುದೇ ರೀತಿಯ ಸೆಳವು ಬರಲಿಲ್ಲ, ಅವು ಸ್ವಸ್ಥವಾಗಿದ್ದವು. ಇದನ್ನು ಕಂಡ ಮ್ಯಾಗ್ನನ್, 'ಮಾಚಿಪತ್ರ ತೈಲವು ಅತ್ಯಂತ ಅಪಾಯಕಾರಿ' ಎಂದು ಸಾರಿದ.

ಫ್ರಾನ್ಸ್ ದೇಶದ ಪತ್ರಿಕೆಗಳು ಲ್ಯಾನ್‌ಫ್ರೆ ಪ್ರಕರಣಕ್ಕೆ ಆದ್ಯತೆಯನ್ನು ನೀಡಿದವು. ಅವನು ನಡೆಸಿದ ಕೌಟುಂಬಿಕ ಹತ್ಯೆಯನ್ನು 'ದಿ ಅಬ್ಸಿಂಥ್ ಮರ್ಡರ್' ಎಂದು ಕರೆದವು. ಪತ್ರಿಕೆಯ ಸಂಪಾದಕರು ಹಾಗೂ ಓದುಗರು, ಹಸಿರು ಕಿನ್ನರಿಯನ್ನು ಸೇವಿಸುವ ಜನರು ತಮ್ಮ ಬುದ್ಧಿಯನ್ನೇ ಕಳೆದುಕೊಂಡು, ಯೋಚಿಸುವ ಸಾಮರ್ಥ್ಯವನ್ನೇ ಕಳೆದುಕೊಂಡು, ತನ್ನವರು ಎನ್ನುವ ಪರಿಜ್ಞಾನವನ್ನೇ ಲೆಕ್ಕಿಸದೆ, ಅವರನ್ನು ಕೊಲೆಗೆ ಪ್ರೇರೇಪಿಸುವ ಈ ಹಸಿರು ಕಿನ್ನರಿಯನ್ನು ಸದಾ ಕಾಲಕ್ಕೆ ನಿರ್ಬಂಧಿಸಬೇಕೆಂದು ಒತ್ತಡವನ್ನು ಹಾಕಿದರು. ಲ್ಯಾನ್‌ಫ್ರೆ ವಿಚಾರಣೆಯು ನಡೆಯಿತು. 'ಅಬ್ಸಿಂಥ್ ಮ್ಯಾಡ್ನೆಸ್' ಈ ಬರ್ಬರ ಕೊಲೆಗೆ ಕಾರಣ ಎಂದರು ವಕೀಲರು. ಆಲ್ಬರ್ಟ್ ಮಾಹೈಮ್ ಎಂಬ ಸ್ವಿಸ್ ಮನೋವೈದ್ಯನನ್ನು ಸಾಕ್ಷಿಗೆ ಕರೆದರು. ಅವನು 'ಎಳೇ ಕಂದಮ್ಮಗಳ ಹತ್ಯೆಗೆ ಹಸಿರು ಕಿನ್ನರಿಯೇ ಕಾರಣ' ಎಂದು ತನ್ನ ಅಭಿಪ್ರಾಯವನ್ನು ನೀಡಿದ. ವಿಚಾರಣೆಯು ಒಂದೇ ದಿನದಲ್ಲಿ ಮುಗಿಯಿತು. ಲ್ಯಾನ್‌ಫ್ರೇ ಮೇಲಿದ್ದ ಆರೋಪವು ಅಪರಾಧವೆಂದು ಸಿದ್ಧವಾಯಿತು. ಅವನನ್ನು ಜೈಲಿಗಟ್ಟಿದರು. ಮೂರು ದಿನ ಬಂಧನದಲ್ಲಿದ್ದ ಲ್ಯಾನ್‌ಫ್ರೇ, ಜೈಲಿನಲ್ಲಿಯೇ ಆತ್ಮಹತ್ಯೆಯನ್ನು ಮಾಡಿಕೊಂಡ. ಕೂಡಲೇ ಸ್ವಿಜರ್ಲೆಂಡ್‌ನ ವಾಡ್ ಪ್ರಾಂತದವರು ಹಸಿರು ಕಿನ್ನರಿಯನ್ನು ನಿಷೇಧಿಸಿದರು. ಸ್ವಿಜರ್ಲೆಂಡ್ ಹಿಂದೆಯೇ ಅನೇಕ ದೇಶಗಳು ಹಸಿರು ಕಿನ್ನರಿಯನ್ನು ನಿಷೇಧಿಸಿದವು. ನಂತರದ ದಿನಗಳಲ್ಲಿ ಹಸಿರು ಕಿನ್ನರಿಯ ಬಗ್ಗೆ ಹಲವು ಅಧ್ಯಯನಗಳು ನಡೆದು, ಒಂದೊಂದೇ ದೇಶಗಳು ತಮ್ಮ ನಿಷೇಧವನ್ನು ಹಿಂತೆಗೆದುಕೊಂಡವು. ಸ್ವಿಜರ್ಲೆಂಡ್ ಮಾತ್ರ ಇಂದಿಗೂ ಹಸಿರು ಕಿನ್ನರಿಯನ್ನು ನಿಷೇಧಿಸಿದೆ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಸ್ಥಗಿತ ಸರಿಯಲ್ಲ

ನ್ಯಾಯಮೂರ್ತಿಯೊಬ್ಬರ ಹೇಳಿಕೆಗಳು ಗೊಂದಲಕ್ಕೆ ಕಾರಣವಾದ ಬೆನ್ನಲ್ಲೇ, ನ್ಯಾಯಾಲಯದ ಕಲಾಪಗಳ ನೇರಪ್ರಸಾರ ಸ್ಥಗಿತಗೊಳಿಸುವಂತೆ ಕೋರಿ ಬೆಂಗಳೂರಿನ ವಕೀಲರ ಸಂಘದ ಅಧ್ಯಕ್ಷರು ಉಚ್ಚ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುವ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ನ್ಯಾಯಾಲಯದ ಕಲಾಪಗಳು ಸಾರ್ವಜನಿಕರಿಗೆ ಮುಕ್ತವಾಗಿದ್ದು, ಅವನ್ನು ಕೆಲ ಸಾಮಾಜಿಕ ಮಾಧ್ಯಮಗಳು ವಿರೂಪಗೊಳಿಸುವುದನ್ನು ನಿಷೇಧಿಸಬಹುದೇ ಹೊರತು, ಸಾರಾಸಗಟಾಗಿ ಸ್ಥಗಿತಗೊಳಿಸುವಂತೆ ಕೋರುವುದು ಸರಿಯಲ್ಲ. ಕಕ್ಷಿಗಾರರ ಖಾಸಗಿ ಮತ್ತು ಗೌಪ್ಯ ಪ್ರಕರಣಗಳ ಕಲಾಪಗಳಲ್ಲಿ ಕೇವಲ ಉಭಯ ಪಕ್ಷಸ್ಥರಿಗೆ ಮತ್ತು ಅವರ ವಕೀಲರುಗಳಿಗೆ ಅವಕಾಶವಿರುತ್ತದೆ; ಮಾಧ್ಯಮ ಅಥವಾ ಇತರೆ ಯಾರಿಗೂ ಅವಕಾಶವಿಲ್ಲದೆ ಗುಪ್ತವಾಗಿ- ಇನ್ ಕ್ಯಾಮರಾ ವ್ಯವಸ್ಥೆಯನ್ನು ಪಾಲಿಸಲಾಗುತ್ತದೆ.

'ನೆಗಡಿ ಬಂತೆಂದು ಮೂಗನ್ನೇ ಕೊಯ್ಯಲು ಹೋಗುವುದು' ಎಷ್ಟು ಸರಿ? ಹಾಗಾಗಿ ನ್ಯಾಯಾಧೀಶರೊಬ್ಬರ ಹೇಳಿಕೆಗಳನ್ನು ಆಧರಿಸಿ ಕೋರ್ಟ್ ಕಲಾಪದ ನೇರಪ್ರಸಾರವನ್ನು ಸ್ಥಗಿತಗೊಳಿಸುವುದು ಸರಿಯಲ್ಲ. ನೇರಪ್ರಸಾರ ಇದ್ದುದರಿಂದಲೇ ನ್ಯಾಯಾಧೀಶರ ಹೇಳಿಕೆ ಪಾರದರ್ಶಕವಾಗಿ ಗಮನ ಸೆಳೆದಿದ್ದು. ಇದರಿಂದ, ತಮ್ಮ ಘನಹುದ್ದೆಯಲ್ಲಿ ಒಂದೊಮ್ಮೆ ವ್ಯಾಪ್ತಿ ಮೀರಿದ್ದರೆ ಸರಿಪಡಿಸಿಕೊಳ್ಳಲು ನ್ಯಾಯಾಧೀಶರಿಗೂ ಅನುಕೂಲವಾಗುತ್ತದೆ. ಕೋರ್ಟ್‌ನ ವಿಚಾರಣಾ ಕೊಠಡಿಗಳು ಸಣ್ಣದಾಗಿರುವ ಸಂದರ್ಭದಲ್ಲಿ ಸಾರ್ವಜನಿಕರು, ಕಕ್ಷಿಗಾರರು ಮತ್ತು ಆಸಕ್ತರು ಕಲಾಪವನ್ನು ವೀಕ್ಷಿಸಲಾಗದು; ನೇರಪ್ರಸಾರದ ವ್ಯವಸ್ಥೆಯಿದ್ದಲ್ಲಿ ಇದು ಸಾಧ್ಯ ಮತ್ತು ನ್ಯಾಯವಾದಿಗಳ ವಾದಕೌಶಲವನ್ನು ಅರಿಯಲೂ ಇದು ಪೂರಕ.

ನ್ಯಾಯಾಲಯದ ಕಲಾಪಗಳನ್ನು ವೀಕ್ಷಿಸುವುದು ಪ್ರಜೆಯ ಹಕ್ಕು. ಗೌಪ್ಯ ಹಾಗೂ ವಿಶೇಷ ಸಂದರ್ಭಗಳನ್ನು ಹೊರತುಪಡಿಸಿ ಕಲಾಪ ವೀಕ್ಷಣೆ ಎಲ್ಲರಿಗೂ ಮುಕ್ತವಾಗಿರಬೇಕು. ಇದರಿಂದಾಗಿ ವಕೀಲರು ಸಹ ಪ್ರಕರಣವನ್ನು ಮುಂದೂಡುವಂತೆ ವಿನಾಕಾರಣ ಕೋರದೆ, ಪೂರ್ವತಯಾರಿ ನಡೆಸಿ ಕಕ್ಷಿಗಾರನ ಪರವಾಗಿ ಸಮರ್ಥವಾಗಿ ವಾದಿಸಲು ಸಾಧ್ಯವಾಗುತ್ತದೆ ಹಾಗೂ ಪ್ರಕರಣದ ಶೀಘ್ರ ವಿಲೇವಾರಿಯೂ ಆಗುತ್ತದೆ.

- ಬೆಳ್ಳಿ ಚಂದ್ರಶೇಖರ ಶೆಟ್ಟಿ, ಬೆಂಗಳೂರು

ಸುಪ್ರೀಂ ತೀರ್ಪು ಸ್ವಾಗತಾರ್ಹ

ಮಕ್ಕಳ ಅಶ್ಲೀಲ ಚಿತ್ರಗಳನ್ನು ಡೌನ್‌ಲೋಡ್ ಮಾಡುವುದು, ವೀಕ್ಷಿಸುವುದು, ಹಂಚಿಕೊಳ್ಳುವುದು ಮಾತ್ರವಲ್ಲದೆ, ಅವನ್ನು ಯಾವುದೇ ಡಿಜಿಟಲ್ ಸಾಧನಗಳಲ್ಲಿ ಇರಿಸಿಕೊಂಡಿರುವುದು ಕೂಡ 'ಪೋಕ್ಸೋ' ಕಾಯ್ದೆ ಮತ್ತು

ಮಾಹಿತಿ ತಂತ್ರಜ್ಞಾನ ಕಾಯ್ದೆ ಅಡಿ ಅಪರಾಧ ಎಂದು ಸುಪ್ರೀಂ ಕೋರ್ಟ್ ನೀಡಿರುವ ಮಹತ್ವದ ತೀರ್ಪು ಸ್ವಾಗತಾರ್ಹ. ಮಕ್ಕಳಲ್ಲಿ ಲೈಂಗಿಕ ಆಸಕ್ತಿಗಳನ್ನು ಬಿಂಬಿಸಿ, ಚಿತ್ರಿಸಿ, ಪ್ರದರ್ಶಿಸುವುದು ಹಾಗೂ ಅವುಗಳನ್ನು ಎಲ್ಲೆಡೆ ಹಂಚುವುದು ನಿಜಕ್ಕೂ ಅಪರಾಧವೇ ಸರಿ.

ಮಕ್ಕಳ ಲೈಂಗಿಕ ದುರುಪಯೋಗವು ಅವರ ನಂತರದ ಜೀವನದಲ್ಲಿ ಅಲ್ಪಾವಧಿ ಮತ್ತು ದೀರ್ಘಾವಧಿಯ ಹಾನಿಗೆ ಕಾರಣವಾಗಬಹುದು. ಖಿನ್ನತೆ, ಆತಂಕ, ಅಸ್ವಸ್ಥತೆ, ನಿದ್ರಾಭಂಗ ಸೇರಿದಂತೆ ಅವರಲ್ಲಿ ಆಘಾತಕಾರಿ ನಡವಳಿಕೆಗಳು ಬೇರೂರಬಹುದು. ಇಂಥ ಮಗುವು ತನ್ನ ಶಾಲಾ ಮತ್ತು ಸಾಮಾಜಿಕ ಚಟುವಟಿಕೆಗಳಿಂದ ಹಿಂದೆ ಸರಿಯಬಹುದು ಹಾಗೂ ಪ್ರಾಣಿಗಳ ಮೇಲಿನ ಕ್ರೌರ್ಯ ಸೇರಿದಂತೆ ನಡವಳಿಕೆಯ ಸಮಸ್ಯೆಗಳನ್ನು ಪ್ರದರ್ಶಿಸಬಹುದು. ಅಲ್ಲದೇ, ಲೈಂಗಿಕವಾಗಿ ಹರಡುವ ಸೋಂಕುಗಳಿಗೂ ತುತ್ತಾಗಬಹುದು ಅಥವಾ ಸೋಂಕಿನ ಸಾಧ್ಯತೆಗಳು ಹೆಚ್ಚಾಗಬಹುದು. ಹೀಗಾಗಿ ಮಕ್ಕಳನ್ನು ಲೈಂಗಿಕವಾಗಿ ಬಳಸುವ ದುರುಳರಿಗೆ ಕಾನೂನಿನ ಅಡಿಯಲ್ಲಿ ತಕ್ಕ ಶಿಕ್ಷೆ ಆಗಲೇಬೇಕಿದೆ. ಈ ನಿಟ್ಟಿನಲ್ಲಿ ಸುಪ್ರೀಂಕೋರ್ಟ್ ಉತ್ತಮವಾದ ತೀರ್ಪನ್ನೇ ನೀಡಿದೆ.

- ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ಓದುಗರ ಓಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಕೌಟುಂಬಿಕ ದೌರ್ಜನ್ಯದ ವಿಭಿನ್ನ ಆಯಾಮಗಳು

ನ್ಯೂನ ಕಾನೂನು

ತಿಮ್ಮಣ್ಣ ಭಾಗ್ವತ್
vveditoped@gmail.com

ಭಾಗ-1

ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಯರ ಬಗ್ಗೆ ಇರುವ ಗೌರವ ಮತ್ತು ಆದರ ವಿಶೇಷವಾದದ್ದು. ವಿವಾಹದ ಸಮಯದಲ್ಲಿ ಗಂಡನು ಹೆಂಡತಿಗೆ ಅಗ್ನಿಸಾಕ್ಷಿಯಾಗಿ 'ಧರ್ಮೇಚ ಅರ್ಥೇಚ ಕಾಮೇಚ ನಾತಿಚರಾಮಿ' ಎಂಬ ವಚನ ನೀಡಬೇಕೆಂಬ ಪದ್ಧತಿಯಿದ್ದು, ಪುರುಷ-ಮಹಿಳೆಯರ ನಡುವಿನ ಸಮಾನತೆಯು ಸನಾತನ ಧರ್ಮದಲ್ಲಿ ಶಾಸ್ತ್ರವಿದಿತ ಎಂಬುದನ್ನು ಇದು ಸೂಚಿಸುತ್ತದೆ. ಆದರೆ, ವಾಸ್ತವದಲ್ಲಿ ನಮ್ಮದು ಪುರುಷ ಪ್ರಧಾನ ಸಮಾಜ. ಆದ್ದರಿಂದ ಮಹಿಳೆಯರು ಕುಟುಂಬದ ಒಳಗೆ ಮತ್ತು ಹೊರಗೆ ಎರಡನೇ ದರ್ಜೆಯ ನಾಗರಿಕರಾಗಿದ್ದಾರೆ ಎಂಬ ಭಾವನೆ ಬಹಳ ಕಡೆ ಇದೆ ಮತ್ತು ಈ ಕಾರಣಕ್ಕೆ ಮಹಿಳೆಯರು ದೌರ್ಜನ್ಯಕ್ಕೆ ಒಳಗಾಗುತ್ತಾರೆ ಎಂಬುದು ಬಹಳ ಸಲ ವಾಸ್ತವ ಕೂಡ.

ಮಹಿಳೆಯರ ಅದರಲ್ಲೂ ವಿವಾಹಿತೆಯರ ಮೇಲೆ ನಡೆಯುವ ದೌರ್ಜನ್ಯದ ಇತಿಹಾಸವು ಸತಿಪದ್ಧತಿ, ವೈಧವ್ಯದ ಆಚರಣೆಯಂಥ ಮೌಢ್ಯಗಳಿಂದ ಮೊದಲ್ಗೊಂಡು ವರದಕ್ಷಿಣೆ, ದುಡಿಯುವ ಮಹಿಳೆಯ ಸಂಬಳದ ವಿಷಯ, ಸಂತಾನವಾಗಲು ವಿಳಂಬ, ಗಂಡು ಮಕ್ಕಳಾಗದಿರುವುದು ಮುಂತಾದ ಅನೇಕ ಕಾರಣಗಳಿಗೆ ವ್ಯಾಪಿಸುತ್ತದೆ. 'ವಧುದಹನ'ದಂಥ ಕ್ರೂರ ಪ್ರಕರಣಗಳು ಇನ್ನೂ ನಡೆಯುತ್ತಿವೆ ಎಂದರೆ ಅದು ನಾಗರಿಕ ಸಮಾಜವು ನಾಚಿಕೆಯಿಂದ ತಲೆ ತಗ್ಗಿಸುವ ವಿಚಾರ. ಕೌಟುಂಬಿಕ ಹಿಂಸೆಯು ಒಂದು ಜಾಗತಿಕ ಸಮಸ್ಯೆ. ಜಗತ್ತಿನ ವಿವಿಧ ದೇಶಗಳಲ್ಲಿ 19ನೇ ಶತಮಾನದ ಆರಂಭದವರೆಗೂ, 'ಹೆಂಡತಿಯನ್ನು ಹೊಡೆಯುವುದು ಗಂಡನ ಕಾಯ್ದೆಬದ್ಧ ಹಕ್ಕು' ಎಂದೇ ಪರಿಗಣಿಸಲಾಗುತ್ತಿತ್ತು. 16ನೇ ಶತಮಾನದಲ್ಲಿ ಇಂಗ್ಲಿಷ್ ಕಾಯ್ದೆಯಲ್ಲಿ ಅದನ್ನು ಸಮಾಜದ ಶಾಂತಿ ಕದಡುವ ಸಮಸ್ಯೆ ಎಂದು ಪರಿಗಣಿಸಲಾಗುತ್ತಿತ್ತು. 20ನೇ ಶತಮಾನದ ಆರಂಭದಲ್ಲಿ ಅಮೆರಿಕದಲ್ಲಿ ಅಂಥ ಪ್ರಕರಣಗಳಲ್ಲಿ ಪೊಲೀಸರು ಬರುತ್ತಿದ್ದರಾದರೂ, ಆಪಾದಿತರನ್ನು ಸಾಮಾನ್ಯವಾಗಿ ಬಂಧಿಸಲಾಗುತ್ತಿರಲಿಲ್ಲ. 1980ರ ನಂತರವಷ್ಟೇ ಕೌಟುಂಬಿಕ ದೌರ್ಜನ್ಯಕ್ಕೆ ಕಾಯ್ದೆ ಮೂಲಕ ಶಿಕ್ಷೆ ನೀಡುವ ಮತ್ತು ಹಕ್ಕುಗಳ ರಕ್ಷಣೆಯ ವ್ಯವಸ್ಥೆ ಜಾರಿಗೆ ಬಂತು.

ಅಂತಾರಾಷ್ಟ್ರೀಯ ಉಪಕ್ರಮಗಳು

ವಿಶ್ವ ಆರೋಗ್ಯ ಸಂಸ್ಥೆಯ 25.03.2024ರ ವರದಿಯ ಪ್ರಕಾರ, ಮಹಿಳೆಯರ ಮೇಲಾಗುವ ಹಿಂಸೆಯು, ವಿಶೇಷವಾಗಿ ಗಂಡ ಅಥವಾ ಜತೆಗಾರನಿಂದ ನಡೆಯುವ ಲೈಂಗಿಕ ಹಿಂಸೆ, ದೈಹಿಕ ಹಿಂಸೆ ಅಥವಾ ಮಾನಸಿಕ ಹಿಂಸೆಯು ಒಂದು ಪ್ರಮುಖ ಸಮಸ್ಯೆಯಾಗಿದೆ ಮತ್ತು ಅದು ಮಹಿಳೆಯರ ಮಾನವೀಯ ಹಕ್ಕುಗಳ ಉಲ್ಲಂಘನೆಯಾಗುತ್ತದೆ. ಪಶ್ಚಿಮ ಪೆಸಿಫಿಕ್ ವಲಯದಲ್ಲಿ ಇದು 20 ಪ್ರತಿಶತ ಇದ್ದರೆ, ಆಫ್ರಿಕಾ ಮತ್ತು ಆಗ್ನೇಯ ಏಷ್ಯಾ ವಲಯಗಳಲ್ಲಿ 33 ಪ್ರತಿಶತ ಮಹಿಳೆಯರು ಒಂದಲ್ಲಾ ಒಂದು ರೀತಿಯಲ್ಲಿ ಅಂಥ ದೌರ್ಜನ್ಯಕ್ಕೆ ಒಳಗಾಗುತ್ತಾರೆ ಎಂದು ವಿಶ್ವಸಂಸ್ಥೆಯ ವರದಿ ಹೇಳುತ್ತದೆ.

ಈ ಪಿಡುಗನ್ನು ನಿವಾರಿಸುವತ್ತ ವಿಶ್ವಸಂಸ್ಥೆಯು ಅನೇಕ ಕ್ರಮಗಳನ್ನು ಕೈಗೊಂಡಿದೆ. ಮಹಿಳೆಯರ ವಿರುದ್ಧದ ಎಲ್ಲಾ ರೀತಿಯ ತಾರತಮ್ಯ ನಿವಾರಣೆಗಾಗಿ, 1979ರಲ್ಲಿ ನಡೆದ ಅಂತಾರಾಷ್ಟ್ರೀಯ ಸಮಾವೇಶದ ಘೋಷಣೆ ಮತ್ತು 1993ರಲ್ಲಿ ಇದೇ ವಿಷಯದಲ್ಲಿ ಮಾಡಲಾದ ಅಂತಾರಾಷ್ಟ್ರೀಯ ಘೋಷಣೆ ಈ ಪೈಕಿ ಪ್ರಮುಖವಾ ದಂಥವು. ವಿಶ್ವಸಂಸ್ಥೆಯ ಎಲ್ಲಾ ಅಂಗಸಂಸ್ಥೆಗಳು ಈ ಕುರಿತು ನಿರ್ದಿಷ್ಟ ಕಾರ್ಯಸೂಚಿಗಳನ್ನು ಅನುಷ್ಠಾನ ಮಾಡುತ್ತಿವೆ ಮತ್ತು ಅಂತಾರಾಷ್ಟ್ರೀಯ ಘೋಷಣೆಗಳನ್ವಯ ಸದಸ್ಯ ರಾಷ್ಟ್ರಗಳು ಕೈಗೊಂಡ ಕ್ರಮಗಳ ಕುರಿತು ನಿಗಾ ವಹಿಸುವುದು, ಕಾಲಕಾಲಕ್ಕೆ ಮಾರ್ಗದರ್ಶನ ನೀಡುವುದು ಮತ್ತು ಸಮನ್ವಯ ಸಾಧಿಸುವುದು ಮುಂತಾದ ಪರಿಣಾಮಕಾರಿ ಕ್ರಮಗಳ ಮೂಲಕ ಈ ಸಮಸ್ಯೆಗೆ ದೀರ್ಘಕಾಲೀನ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಲಾಗುತ್ತಿದೆ.

ಭಾರತದಲ್ಲಿ ಕಾನೂನು ಸುರಕ್ಷೆ

ಭಾರತದಲ್ಲಿ ಸಹ ಈ ಸಮಸ್ಯೆ ತೀವ್ರವಾಗಿದೆ. 2019-21ರ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ ಪ್ರಕಾರ, ನಮ್ಮ ದೇಶದಲ್ಲಿ ಶೇ.32ರಷ್ಟು ವಿವಾಹಿತೆಯರು (18ರಿಂದ 49 ವರ್ಷ ವಯಸ್ಸಿನವರು) ಗಂಡನ ಕಡೆಯಿಂದ ಒಂದು ಸಲವಾದರೂ ದೈಹಿಕ, ಲೈಂಗಿಕ ಅಥವಾ ಮಾನಸಿಕ ದೌರ್ಜನ್ಯವನ್ನು ಅನುಭವಿಸಿದ್ದಾರೆ (ಈ ಪೈಕಿ 3.1 ಪ್ರತಿಶತ ಗರ್ಭಿಣಿಯರು). ಇನ್ನೂ ಬೇಸರದ ಸಂಗತಿಯೆಂದರೆ, ಸುಸಂಸ್ಕೃತಿಗೆ ಹೆಸರಾದ ಕರ್ನಾಟಕದಲ್ಲಿ ಈ ಪ್ರಮಾಣ ಶೇ.44.4ರಷ್ಟಿದೆ.

ವಿವಾಹಿತೆಯರ ಮೇಲೆ ಗಂಡನ ಮನೆಯಲ್ಲಿ ನಡೆಯುವ ದೌರ್ಜನ್ಯಗಳನ್ನು ತಡೆಯುವ ಉದ್ದೇಶದಿಂದ 1983ರಲ್ಲಿ ಭಾರತೀಯ ದಂಡಸಂಹಿತೆ 1860ರ (ಹೊಸ ಭಾರತೀಯ ನ್ಯಾಯಸಂಹಿತೆ 2023) 498ನೇ ಕಲಮಿಗೆ 'ಎ' ಉಪಕಲಮನ್ನು ಸೇರಿಸಲಾಯಿತು. ಅದರ ಪ್ರಕಾರ, ''ಯಾವುದೇ ಮಹಿಳೆಯ ಗಂಡ ಅಥವಾ ಅವನ ಸಂಬಂಧಿಕರು, ಅಂಥ ಮಹಿಳೆಯನ್ನು ಕ್ರೌರ್ಯಕ್ಕೆ ಗುರಿಪಡಿಸಿದರೆ ಅಂಥವರಿಗೆ 3 ವರ್ಷದವರೆಗಿನ ಜೈಲುಶಿಕ್ಷೆ ಅಥವಾ ದಂಡ ಅಥವಾ ಎರಡನ್ನೂ ವಿಧಿಸಲಾಗುವುದು''. ಈ ಅಪರಾಧವು ಕಾಗ್ನಿಜೇಬಲ್ (ಗುರುತಿಸಲಾದ) ಅಪರಾಧವಾಗಿರುತ್ತಿದ್ದು ಆರೋಪಿಗಳನ್ನು ಬಂಧಿಸಲು ಪೊಲೀಸರಿಗೆ ಬಂಧನ ವಾರಂಟ್‌ನ ಅಗತ್ಯವಿರುವುದಿಲ್ಲ. ಇದು ಜಾಮೀನುರಹಿತ ಕೂಡ ಆಗಿದೆ.

ಭಾರತೀಯ ಸಾಕ್ಷ್ಯ ಕಾಯ್ದೆಯ 113-ಎ ಮತ್ತು 113-ಬಿ ಕಲಮುಗಳು 1986ರಲ್ಲಿ ಸೇರಿಸಲ್ಪಟ್ಟವು. ವರದಕ್ಷಿಣೆ ಸಾವುಗಳ ವಿಷಯದಲ್ಲಿನ ಪೂರ್ವಕಲ್ಪನೆ (presumption) ಕುರಿತು ಅವು ವಿವರಿಸುತ್ತವೆ. 113-ಎ ಪ್ರಕಾರ, ಯಾವುದೇ ವಿವಾಹಿತೆಯು ವಿವಾಹವಾದ 7 ವರ್ಷಗಳ ಒಳಗೆ ಆತ್ಮಹತ್ಯೆ ಮಾಡಿಕೊಂಡರೆ ಮತ್ತು ಆಕೆಯ ಗಂಡ ಅಥವಾ ಅವನ ಸಂಬಂಧಿ ಅವಳನ್ನು ಯಾವುದೇ ರೀತಿಯ ಕ್ರೌರ್ಯಕ್ಕೆ ಗುರಿಪಡಿಸಿದ್ದರು ಎಂಬುದು ತೋರಿಸಲ್ಪಟ್ಟರೆ, ಅಂಥ ಗಂಡ ಅಥವಾ ಅವನ ಸಂಬಂಧಿಯು ಆ ಮಹಿಳೆಯ ಆತ್ಮಹತ್ಯೆಗೆ ಪ್ರಚೋದನೆ ನೀಡಿದ್ದರು ಎಂದು ಕೋರ್ಟು ಊಹಿಸುತ್ತದೆ. 113-ಬಿ ಪ್ರಕಾರ, ಯಾವುದೇ ಮಹಿಳೆಯ ಸಾವಿಗೆ ಮೊದಲು, ಅವಳನ್ನು ಯಾವುದೇ ವ್ಯಕ್ತಿಯು ವರದಕ್ಷಿಣೆಗಾಗಿ ಅಥವಾ ಅದಕ್ಕೆ ಸಂಬಂಧಿಸಿದ ಕ್ರೌರ್ಯ ಅಥವಾ ಕಿರುಕುಳಕ್ಕೆ ಗುರಿಪಡಿಸಿದ್ದ ಎಂಬುದು ತೋರಿಸಲ್ಪಟ್ಟರೆ, ಅಂಥ ವ್ಯಕ್ತಿಯು ಆ ಮಹಿಳೆಯನ್ನು ವರದಕ್ಷಿಣೆಗಾಗಿ ಕೊಂದಿದ್ದಾನೆ ಎಂದು ಕೋರ್ಟು ಊಹೆ ಮಾಡುತ್ತದೆ. ಈ ಕುರಿತಾದ ಇನ್ನಷ್ಟು ಕಲಮುಗಳು ಹೀಗಿವೆ-

- **ಐಪಿಸಿ ಸೆಕ್ಷನ್ 304-ಬಿ:** ಯಾವುದೇ ಮಹಿಳೆಯ ಸಾವು ಸುಟ್ಟಗಾಯಗಳಿಂದ ಅಥವಾ ಶಾರೀರಿಕ ಗಾಯಗಳಿಂದ ಆದರೆ ಮತ್ತು ಅಂಥ ಅಸಹಜ ಸಾವು ವಿವಾಹವಾದ 7 ವರ್ಷಗಳ ಒಳಗೇ ಸಂಭವಿಸಿದರೆ ಹಾಗೂ ಸಾವಿಗೆ ಮೊದಲು ಅವಳ ಗಂಡ ಅಥವಾ ಗಂಡನ ಸಂಬಂಧಿಗಳಿಂದ ಅವಳ ಮೇಲೆ ವರದಕ್ಷಿಣೆ ವಿಷಯದಲ್ಲಿ ಕ್ರೌರ್ಯ ಅಥವಾ ಹಿಂಸೆ ನಡೆದಿತ್ತೆಂದು ತೋರಿಸಲ್ಪಟ್ಟರೆ, ಅಂಥ ಸಾವು 'ವರದಕ್ಷಿಣೆ ಸಾವು' ಎಂದೂ, ಅಂಥ ಗಂಡ ಅಥವಾ ಆತನ ಸಂಬಂಧಿಗಳೇ ಆ ಸಾವಿಗೆ ಕಾರಣರು ಎಂದೂ ಪರಿಗಣಿಸಲ್ಪಡುತ್ತದೆ.
- **ಐಪಿಸಿ 354-ಎ:** 2013ರಲ್ಲಿ ಭಾರತೀಯ ದಂಡ ಸಂಹಿತೆಯ 354ನೇ ಕಲಮಿಗೆ 'ಎ' ಉಪಕಲಮನ್ನು ಸೇರಿಸಿ, ಯಾವುದೇ ರೀತಿಯ ಲೈಂಗಿಕ ದೌರ್ಜನ್ಯವನ್ನು ಪರಿಭಾಷಿಸಲಾಯಿತು ಮತ್ತು ಅಂಥ ಅಪರಾಧಗಳಿಗೆ 3 ವರ್ಷದವರೆಗಿನ ಕಠಿಣ ಜೈಲುಶಿಕ್ಷೆ ಅಥವಾ ದಂಡ ಅಥವಾ ಎರಡನ್ನೂ ವಿಧಿಸುವ ತಿದ್ದುಪಡಿಯನ್ನು ಮಾಡಲಾಯಿತು.
- **ಬಾಲಾಪರಾಧಿಗಳ ಸಂರಕ್ಷಣೆ ಮತ್ತು ರಕ್ಷಣೆ ಕಾಯ್ದೆ 2015:** ಬಾಲಾಪರಾಧಿಗಳ ಮೇಲೆ ನಡೆಯಬಹುದಾದ ಲೈಂಗಿಕ ದೌರ್ಜನ್ಯವನ್ನು ತಡೆಯಲು ಕಾಯ್ದೆಯಲ್ಲಿ ಸೂಕ್ತವಾಗಿ ಅನುವುಮಾಡಿಕೊಡಲಾಯಿತು.
- **ರಾಷ್ಟ್ರೀಯ ಮಹಿಳಾ ಆಯೋಗ ಕಾಯ್ದೆ 1990:** ಮಹಿಳೆಯರ ಹಕ್ಕುಗಳ ರಕ್ಷಣೆಗಾಗಿ ರಾಷ್ಟ್ರೀಯ ಆಯೋಗವನ್ನು ಸ್ಥಾಪಿಸುವುದು ಮತ್ತು ಕೌಟುಂಬಿಕ ಕ್ರೌರ್ಯದ ಪ್ರಕರಣಗಳನ್ನು ಅದರಡಿಯಲ್ಲಿ ತರುವುದು.
- **ಬಾಲ್ಯವಿವಾಹ ನಿಷೇಧ ಕಾಯ್ದೆ 2006:** ಬಾಲ್ಯವಿವಾಹವನ್ನು ಸಂಪೂರ್ಣವಾಗಿ ನಿಷೇಧಿಸುವ ಮೂಲಕ ಬಾಲಕಿಯರು ವಿವಾಹದ ನಂತರದ ಕೌಟುಂಬಿಕ ದೌರ್ಜನ್ಯಕ್ಕೆ ಒಳಗಾಗುವುದನ್ನು ತಡೆಯುವುದು.
- **ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ರಕ್ಷಣೆ ಕಾಯ್ದೆ 2005:** ಕುಟುಂಬದೊಳಗೆ ಯಾವುದೇ ರೀತಿಯ ಹಿಂಸೆಗೆ ತುತ್ತಾದ ಮಹಿಳೆಯರ ಸಂವಿಧಾನದತ್ತ ಹಕ್ಕುಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಸಂರಕ್ಷಿಸುವ ಹಾಗೂ ಇನ್ನಿತರ ಸಂಬಂಧಿತ ವಿಷಯಗಳ ಕುರಿತಾದ ಸಮಗ್ರ ಮತ್ತು ಪ್ರಗತಿಪರ ಕಾಯ್ದೆಯನ್ನು ಸಂಸತ್ತು ಅಂಗೀಕರಿಸಿತು. ಒಂದೇ ಮನೆಯಲ್ಲಿ ವಾಸಿಸುವ ಹೆಂಡತಿ, ಜತೆಗಾರ್ತಿ, ಸಹೋದರಿ, ತಾಯಿ, ಹೆಣ್ಣು ಮಗು ಮುಂತಾದ ಎಲ್ಲಾ ಮಹಿಳೆಯರೂ ಈ ಕಾಯ್ದೆಯಡಿಯಲ್ಲಿ ರಕ್ಷಣೆಗೆ ಅರ್ಹರಿರುತ್ತಾರೆ. ಈ ಕಾಯ್ದೆಯಲ್ಲಿ ಸಿವಿಲ್ ಮತ್ತು ಕ್ರಿಮಿನಲ್ ಎರಡೂ ಪರಿಹಾರಗಳು ಇವೆಯಾದರೂ, ಕ್ಷಿಪ್ರವಾಗಿ ಸಿವಿಲ್ ಪರಿಹಾರವನ್ನು ದೊರಕಿಸುವುದು ಇಲ್ಲಿನ ಮುಖ್ಯ ಉದ್ದೇಶ. ಅಲ್ಲದೆ, ಕೇವಲ ಗಂಡನನ್ನಲ್ಲದೆ ಗಂಡನ ಇತರ ಸಂಬಂಧಿಗಳನ್ನೂ ಪ್ರತಿವಾದಿಗಳಾಗಿ ದಾವೆಯಲ್ಲಿ ಹೆಸರಿಸಬಹುದು. ವಿವಾಹಿತೆಯು ತನ್ನ ಪತಿಗೃಹದಲ್ಲಿ ಹಿಂಸೆರಹಿತ ವಾತಾವರಣದಲ್ಲಿ ಬದುಕುವ ಹಕ್ಕನ್ನು ಈ ಕಾಯ್ದೆಯು ರಕ್ಷಿಸುತ್ತದೆ. ಆರ್ಥಿಕ ದೌರ್ಜನ್ಯದ ವಿರುದ್ಧ ರಕ್ಷಣೆ, ಮೌಖಿಕ ಮತ್ತು ಮಾನಸಿಕ ಹಿಂಸೆಯಿಂದ ರಕ್ಷಣೆ, ಮಗುವಿನ ಪಾಲನೆಯ ತಾತ್ಕಾಲಿಕ ವ್ಯವಸ್ಥೆ, ಮನೆಯಲ್ಲಿ ವಾಸಿಸುವ ಹಕ್ಕು, ಆರ್ಥಿಕ ಪರಿಹಾರ ಮುಂತಾದ ಸೌಲಭ್ಯಗಳನ್ನು ಈ ಕಾಯ್ದೆಯಡಿ ನೀಡಲಾಗಿದೆ. ಅಲ್ಲದೆ, ನ್ಯಾಯಾಲಯದಿಂದ ರಕ್ಷಣಾ ಆದೇಶ ನೀಡಲಾಗುತ್ತದೆ. ಸರಕಾರವು ರಕ್ಷಣಾ ಅಧಿಕಾರಿಗಳನ್ನು ಮತ್ತು ಸೇವೆ ಒದಗಿಸುವವರನ್ನು ನೇಮಿಸಬೇಕೆಂಬ ನಿಯಮ ಕೂಡ ಈ ಕಾಯ್ದೆಯಲ್ಲಿದೆ. ಕಾಯ್ದೆ ರೀತ್ಯಾ ಮದುವೆಯಾಗದಿದ್ದರೂ, ಸಂಬಂಧದಲ್ಲಿ ಪತಿ-ಪತ್ನಿಯರಂತೆ ಒಂದೇ ಮನೆಯಲ್ಲಿ ವಾಸಿಸುವ (Live-in relationship) ಮಹಿಳೆ ಕೂಡ ಈ ಕಾಯ್ದೆಯನ್ವಯ ರಕ್ಷಣೆಗೆ ಅರ್ಹಳಾಗಿರುತ್ತಾಳೆ. ಇಷ್ಟೆಲ್ಲ ಕಾಯ್ದೆಗಳ ರಕ್ಷಣೆಯು ಸಂಕೀರ್ಣ ಸಾಮಾಜಿಕ ವ್ಯವಸ್ಥೆಯಲ್ಲಿ ನೈಜ ಆರೋಪಗಳ ಪ್ರಕರಣಗಳಲ್ಲಿ ಅವಶ್ಯಕ ಮತ್ತು ಅನಿವಾರ್ಯ ಕೂಡ)

(ಲೇಖಕರು ಕಾನೂನು ತಜ್ಞರು ಮತ್ತು ಕೆವಿಜಿ ಬ್ಯಾಂಕ್‌ನ ನಿವೃತ್ತ ಎಜಿಎಂ)

ಭಟ್ಟರ್ ಸ್ಕಾಚ್

- **ಚಂದ್ರಶೇಖರ ನಾಗೂರ, (ಇಮೇಲ್ ಮೂಲಕ)**
ಸರ್, ಗಂಡನಿಗೆ ಬಿಪಿ, ಸಕ್ಕರೆ ಕಾಯಿಲೆ ಬರಲು ಹೆಂಡತಿ ಕಾರಣನಾ?
- ತಲೆನೋವಿಗೆ ಮಾತ್ರ ಕಾರಣ ಎಂಬುದಷ್ಟೇ ಇಲ್ಲಿ ತನಕ ಗೊತ್ತಿರುವ ಸಂಗತಿ!

- **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, ತಿರುಪತಿ ಲಡ್ಡು ತನ್ನ ಪಾವಿತ್ರ್ಯ ಕಳೆದುಕೊಂಡ್ತಾ?
- ಅದರಲ್ಲಿ ಏನೇ ಹಾಕಿದರೂ ಜನ ಆಸೆಪಟ್ಟು ತಿನ್ನುವುದನ್ನು ಬಿಟ್ಟಿಲ್ಲವಲ್ಲ!?

- **ನಂಜಪ್ಪ ಗೌಡ, ಮದ್ದೂರು**
ಭಟ್ರೇ, ದರ್ಶನ್ ಬಗ್ಗೆ ಸಹಾನುಭೂತಿ ತೋರುವವರ ಸಂಖ್ಯೆ ಜಾಸ್ತಿ ಆಗ್ತಾ ಇದೆಯಂತೆ?
- ಮುನಿರತ್ನ ಬಗ್ಗೆ ಕೂಡ!

- **ರಾಘವೇಂದ್ರ ಕಾಮನಹಳ್ಳಿ, (ಇಮೇಲ್ ಮೂಲಕ)**
ಭಟ್ರೇ, ಪ್ರಶಸ್ತಿ ಪಡೆದುಕೊಳ್ಳುವುದು ಹೇಗೆ ಎನ್ನೋದು ಗೊತ್ತಾಗ್ತಾ ಇಲ್ವಲ್ಲ?
- ಪ್ರಶಸ್ತಿ ಹೊಡೆದುಕೊಳ್ಳೋದು ಹೇಗೆ ಎಂದು ಯೋಚಿಸಬೇಕಿತ್ತು!

- **ಸಂದೀಪ ಕೆ.ಜಿ., (ಇಮೇಲ್ ಮೂಲಕ)**
ಭಟ್ರೇ, ತೀರಾ ದಡ್ಡರು ಹೇಗಿರುತ್ತಾರೆ?
- ನಂದಿನಿ ಬೂತಿಗೆ ಹೋಗಿ, ವೋಡ್ಕಾ ಸಿಗುತ್ತಾ ಅಂತ ಕೇಳ್ತಾರಪ!

- **ರಮೇಶ ಗೌಡ, ಮಳವಳ್ಳಿ**
ಭಟ್ರೇ, ನಾನು ಉತ್ತಮ ಹಾಡುಗಾರನಾಗಬೇಕು, ನಿಮ್ಮ ಸಲಹೆ?
- ಬಾತ್‌ರೂಮ್‌ನಲ್ಲಿ ಹಾಡಿ, ಅಲ್ಲಿ ಯಾರೇ ಹಾಡಿದರೂ ಉತ್ತಮವಾಗಿಯೇ ಕೇಳಿಸುತ್ತದೆ!

- **ಸಂಪಿಗೆ ಜಗದೀಶ, ಬೆಂಗಳೂರು**
ಭಟ್ರೇ, ಆರ್.ಜಿ.ಹಳ್ಳಿ ನಾಗರಾಜನಿಗೆ ಇನ್ನೂ ಯಾಕೆ ಗೌರವ ಡಾಕ್ಟರೇಟ್ ಕೊಟ್ಟಿಲ್ಲ?
- ಗಂಡಸರ ಕೋಟಾ ಮುಗಿಯಿತು ಅಂತ ಅಂದುಕೊಂಡಿರಬೇಕು!

- **ಕೊಟ್ಟೂರು ರುದ್ರೇಶ, ಮೊಳಕಾಲ್ಮೂರು**
ಭಟ್ರೇ, ಬಡವನಾಗಿರುವ ಒಂದು ಉತ್ತಮ ಅಂಶ ಅಂದ್ರೆ ಏನು?
- ಯಾವತ್ತೂ ಇರುವಷ್ಟರಲ್ಲಿ ನೆಮ್ಮದಿಯಿಂದ ಇರಬಹುದು!

- **ಎಂ.ಎಂ.ವಾದಿರಾಜ, ಉತ್ತರಹಳ್ಳಿ**
ಭಟ್ರೇ, ಕನ್ನಡ ಸಿನಿಮಾ ನಟರು ಸುಖಾಸುಮ್ಮನೆ ಮರ್ಯಾದೆ ಕಳೆದುಕೊಳ್ತಾರಲ್ಲ?
- ಅವರು ಇಂಗ್ಲಿಷಿನಲ್ಲಿ ಮಾತಾಡುವುದನ್ನು ನೀನು ಈ ರೀತಿ ಅಂದುಕೊಳ್ಳಬಾರದಿತ್ತು!

- **ಸುರೇಶ ಬಾಬು, ಕತ್ರಿಗುಪ್ಪೆ**
ಭಟ್ರೇ, ನಾನು ಅವಳನ್ನು ಪ್ರೀತಿಸಿಲ್ಲ, ಆದರೆ ಅರ್ಥ ಮಾಡಿಕೊಳ್ಳಬೇಕಿದೆ, ಏನು ಮಾಡಲಿ?
- ಒಮ್ಮೆ ಪ್ರೀತಿಸಿದ್ದರೂ ಅರ್ಥವಾಗುತ್ತಿರಲಿಲ್ಲ, ಬಿಡು!

ಬದುಕೇ ಕಲಬೆರಕೆ, ತುಪ್ಪವೇನು ಮಹಾ?!

ಲೋಕಮತ
ಲೋಕೇಶ್ ಕಾಯರ್ಗ
vveditoped@gmail.com

ಏಳುಕೊಂಡಲವಾಡ, ತಿರುಪತಿ ತಿಮ್ಮಪ್ಪ ಕೋಪಿಸಿಕೊಳ್ಳುವುದಾದರೆ ಕಾರಣಗಳು ನೂರೆಂಟಿವೆ. ಆದರೆ ಸದ್ಯಕ್ಕೆ ಭಕ್ತರು ಕೋಪಿಸಿಕೊಂಡಿದ್ದಾರೆ. ತಿಮ್ಮಪ್ಪನ ಪ್ರಸಾದ ರೂಪದ ಲಡ್ಡುವಿಗೆ ಪ್ರಾಣಿಜನ್ಯ ಕೊಬ್ಬು ಬಳಸುವುದೇ ?, ಛೆ, ಇಂಥ ಅಪಚಾರವನ್ನು ದೇವರು ಕ್ಷಮಿಸುವನೇ ಎನ್ನುವುದು ಅನುಯಾಯಿಗಳ ಪ್ರಶ್ನೆ. ಇಲ್ಲಿ ಭಕ್ತರ ಧಾರ್ಮಿಕ ಭಾವನೆಗಳಿಗೆ, ನಂಬಿಕೆಗಳಿಗೆ ಘಾಸಿಯಾಗಿರುವುದು ನಿಜ. ಇದೇ ಕೋಪದಲ್ಲಿ ಧಾರ್ಮಿಕ ಕ್ಷೇತ್ರಗಳ ಶುದ್ಧೀಕರಣವೂ ಆರಂಭವಾಗಿದೆ. ಆದರೆ ಈ ಶುದ್ಧೀಕರಣದ ವ್ಯಾಪ್ತಿ ಹಿರಿದಾಗಬೇಕಿದೆ. ಕೊಬ್ಬಿನ ವಿಚಾರ ನಮ್ಮ ದೇಶದ ಮೊದಲ ಸ್ವಾತಂತ್ರ್ಯ ಸಂಗ್ರಾಮಕ್ಕೆ ನಾಂದಿ ಹಾಡಿದ್ದು ಇತಿಹಾಸದಲ್ಲಿ ಓದಿದ ವಿಷಯ. ಇದೇ ಮತ್ತದೇ ಕೊಬ್ಬಿನ ನೆಪದಲ್ಲಿ ನಮ್ಮ ಜೀವನದ ಕಲಬೆರಕೆಗಳಿಗೆ ನಮಗೆ ನಾವೇ ತಡೆ ಹಾಕಿಕೊಳ್ಳಬೇಕಾಗಿದೆ.

ಒಂದಂತೂ ಸ್ಪಷ್ಟ, ಕೊಬ್ಬೊಂದು ವಿಚಾರಗಳಲ್ಲಿ ನಮ್ಮನ್ನು ಎಚ್ಚರಿಸಲು 'ದೇವರೇ' ಬರಬೇಕು. ನಮ್ಮ ನಂಬಿಕೆಗಳು ಅಲುಗಾಡಬೇಕು. ಇಲ್ಲದೇ ಹೋಗಿದ್ದರೆ ಈ ದೇಶದಲ್ಲಿ ಕಲಬೆರಕೆ ಒಂದು ವಿಷಯವೇ ಅಲ್ಲ, ನಾವು ಪ್ರತಿದಿನ ತಿನ್ನುವ ಆಹಾರ ಕಲಬೆರಕೆ ಎನ್ನುವುದು ಗೊತ್ತು. ಅಡುಗೆ ಮನೆಯಲ್ಲಿ ನಾವು ದಿನನಿತ್ಯ ಬಳಸುವ ಪದಾರ್ಥಗಳನ್ನು ಪ್ರಯೋಗಾಲಯದಲ್ಲಿ ಪರೀಕ್ಷೆಗೊಳಪಡಿಸಿದರೆ, ಬೆಚ್ಚಿಬೀಳುವಂತಹ ಪದಾರ್ಥಗಳು ಸಿಗದೇ ಇರುವುದು ಗಿರಿಕೆ ಹೊಡೆಯುವ ಪರಿಸ್ಥಿತಿ ಬರಬಹುದು. ಆದರೂ ನಾವು ಕಮಕ್, ಕಿಮಕ್ ಎನ್ನದೇ ಅನ್ನಪೂರ್ಣೇಶ್ವರಿಯನ್ನು ನೆನೆದು ಆಹಾರ ಸೇವಿಸುತ್ತೇವೆ. ಮುಂದೆ ನಮ್ಮ ಕಲಬೆರಕೆ ಆಹಾರದ ಕಾರಣಕ್ಕೆ ಬರಬಹುದಾದ ರೋಗಗಳನ್ನು ಬರಮಾಡಿಕೊಂಡು ಸಾಯುವವರೆಗೂ ಮಾತ್ರೆಗಳನ್ನು ನುಂಗುತ್ತೇವೆ. ಇಲ್ಲೂ ಅಸಲಿ ಮಾತ್ರೆ ಯಾವುದು, ನಕಲಿ ಮಾತ್ರೆ ಯಾವುದೆಂದು ತಿಳಿಯದೇ ಬೇಸ್ತು ಬೀಳುತ್ತೇವೆ. ಆದರೆ ಈ ಯಾವ ವಿಷಯಗಳೂ ನಮ್ಮನ್ನು ರೊಚ್ಚಿಗೆಬ್ಬಿಸುವುದಿಲ್ಲ.

ಕಳೆದ ಮೇ ತಿಂಗಳಲ್ಲಿ ನಮ್ಮ ನೆರೆಯ ದೇಶ ನೇಪಾಳದಲ್ಲಿ ಎವರೆಸ್ಟ್, ಎಂಡಿಎಚ್ ಮೊದಲಾದ ನಮ್ಮ ದೇಶದ ಪ್ರಸಿದ್ಧ ಕಂಪನಿಗಳ ಮಸಾಲೆ ಪದಾರ್ಥಗಳಿಗೆ ನಿಷೇಧ ಹೇರಲಾಯಿತು. ಇದಕ್ಕೂ ಮೊದಲು ಸಿಂಗಾಪುರ ಮತ್ತು ಹಾಂಕಾಂಗ್‌ನಲ್ಲೂ ಈ ಕಂಪನಿಗಳ ಮಸಾಲೆ ಪದಾರ್ಥಗಳ ಆಮದಿಗೆ ನಿರ್ಬಂಧ ಹೇರಲಾಗಿತ್ತು. ಈ ಎರಡು ಕಂಪನಿಗಳ ಮಸಾಲೆ ಉತ್ಪನ್ನಗಳಲ್ಲಿ ಕ್ಯಾನ್ಸರ್‌ಕಾರಕ ಕೀಟನಾಶಕ, ಎಥಿಲೀನ್ ಆಕ್ಸೈಡ್ ಅಂಶ ಇದೆ ಎಂದು ಅಲ್ಲಿನ ಪ್ರಯೋಗಾಲಗಳ ವರದಿ ತಿಳಿಸಿತ್ತು. ಈ ಘಟನೆ ನಡೆದ ಬೆನ್ನಿಗೇ ಅಮೆರಿಕ, ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಮೊದಲಾದ ದೇಶಗಳಲ್ಲೂ ಭಾರತದ ಕಂಪನಿಗಳ ಮಸಾಲೆ ಪದಾರ್ಥಗಳನ್ನು ಅಲ್ಲಿನ ಪ್ರಯೋಗಾಲಯಗಳಲ್ಲಿ ಪರೀಕ್ಷೆಗೆ ಒಳಪಡಿಸಲಾಯಿತು. ತನ್ನ ಮೇಲೆ ಟೀಕೆಗಳು ಬರುತ್ತಿರುವುದನ್ನು ಕಂಡು ಕಾರಣಕ್ಕೆ ಭಾರತದ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರವೂ ಈ ಸಂಬಂಧ ತನಿಖೆಗೆ ಆದೇಶ ನೀಡಿತು. ಇದಾಗಿ ನಾಲ್ಕು ತಿಂಗಳು ಕಳೆದಿವೆ. ಈ ಕಂಪನಿಗಳ ಉತ್ಪನ್ನಗಳು ನಮ್ಮ ಮಾಲ್, ದಿನಸಿ ಅಂಗಡಿಗಳ ರ್‍ಯಾಕ್‌ಗಳಲ್ಲಿ ಭದ್ರವಾಗಿ ಕುಳಿತಿವೆ. ನಾವು ಎಂದಿನಂತೆ, ಒಂದಕ್ಕೊಂದು ಫ್ರೀ ಎಂದು ಖುಷಿಯಲ್ಲಿ ಒಂದೇ ಬಾರಿಗೆ ಎರಡು ಮೂರು ಪ್ಯಾಕೆಟ್‌ಗಳನ್ನು ಖರೀದಿಸಿ ಸಂಭ್ರಮಿಸುತ್ತಿದ್ದೇವೆ. ನೇಪಾಳದಂತಹ ಸಣ್ಣ ರಾಷ್ಟ್ರಕ್ಕೆ ವಿಷವಾಗಿ ಕಂಡಿದ್ದು, ನಮಗೆ ಕಾಣಲಿಲ್ಲ, ಏಕೆಂದರೆ ಇಲ್ಲಿ ದೇವರ ವಿಷಯ ಬರಲಿಲ್ಲ.

ಎಣ್ಣೆ ಮಾಫಿಯಾ !: ನಮ್ಮ ಅಡುಗೆ ಮನೆಯಲ್ಲಿ ದಿನನಿತ್ಯ ಬಳಸುವ ಖಾದ್ಯ ತೈಲಗಳು ಕಲಬೆರಕೆಯುಕ್ತ ಎನ್ನುವ ವಿಚಾರ ನಮಗೆ ತಿಳಿಯದ್ದೇನಲ್ಲ. ಈ ಸಂಬಂಧ ಅದೆಷ್ಟೋ ವಿಡಿಯೋಗಳನ್ನು, ತಜ್ಞರ ವರದಿಗಳನ್ನು ನಾವೇ ನಮ್ಮ ಮೊಬೈಲ್‌ನಲ್ಲಿ ನೋಡಿ, ಬೇರೆಯವರಿಗೂ ಫಾರ್ವರ್ಡ್ ಮಾಡಿದ್ದೇವೆ. ನಾವು ಮಾತ್ರ ಅದೇ ಬ್ರಾಂಡಿನ ಸೂರ್ಯಕಾಂತಿ, ಶೇಂಗಾ, ಸಾಸಿವೆ, ರೈಸ್ ಆಯಿಲ್‌ಗಳನ್ನು ಬಳಸುತ್ತಿದ್ದೇವೆ. ಒಂದು ಲೀಟರ್ ಶೇಂಗಾ ಎಣ್ಣೆ ತಯಾರಿಸಬೇಕಾದರೆ ಕನಿಷ್ಠ ಮೂರರಿಂದ ನಾಲ್ಕು ಕಿಲೋ ಕಡಲೆ ಬೀಜ ಬೇಕು. ಕಿಲೋಗೆ ಸದ್ಯದ 140ರ ದರದಲ್ಲಿ ಲೆಕ್ಕ ಹಾಕಿದರೆ 560 ರು.ಬೇಕು. ಸೂರ್ಯಕಾಂತಿ ಸೇರಿದಂತೆ ಬೇರೆ ಎಲ್ಲ ಖಾದ್ಯ ತೈಲಗಳ ನೈಜ ತಯಾರಿ ವೆಚ್ಚವನ್ನು ಲೆಕ್ಕ ಹಾಕಿದರೆ ಧಾರಣೆ 500 ರು. ಮೇಲಿರಬೇಕು. ಆದರೆ ಇವೆಲ್ಲವೂ 120ರಿಂದ 200 ರು. ಒಳಗೆ ಸಿಗಬೇಕಾದರೆ ಕಲಬೆರಕೆ ಆಗಿರಲೇಬೇಕೆನ್ನುವುದು ನಮಗೂ ಗೊತ್ತು. ಇವು ಶುದ್ಧಾತಿಶುದ್ಧ ಎಂದು ಕ್ಯಾನ್ ಹಿಡಿದು ಪ್ರಚಾರ ಮಾಡುವ ನಮ್ಮ ಸಿನಿಮಾ ತಾರೆಯರಿಗೂ ಗೊತ್ತು. ಕಲಬೆರಕೆ ಮೇಲೆ ಕಣ್ಣಿಡಬೇಕಾದ ಕೇಂದ್ರ ಮತ್ತು ರಾಜ್ಯದ ಆಹಾರ ಸುರಕ್ಷತೆ ಅಧಿಕಾರಿಗಳಿಗೂ ಗೊತ್ತು. ಆದರೂ ಲಡ್ಡು ವಿಚಾರದಲ್ಲಿ ಬಂದ ಸಿಟ್ಟು ಇಲ್ಲಿ ಬರುವುದೇ ಇಲ್ಲ. ಏಕೆಂದರೆ ಇಲ್ಲಿ ದೇವರ ವಿಷಯ ಬಂದಿಲ್ಲ.

ಬೇರೆ ಎಣ್ಣೆಗಳ ಗೊಡವೆ ಬೇಡವೆಂದು ನಮ್ಮ ಊರಿನ ಗಿರಣಿಗಳಿಂದ 'ಶುದ್ಧ ತೆಂಗಿನ ಎಣ್ಣೆ' ತರಲು ಹೋದರೆ ಅಲ್ಲೂ ಮೋಸದ ಜಾಲ ಕಾಲಿಟ್ಟಿದೆ. ತೆಂಗಿನ ಎಣ್ಣೆಯ ಬಿಳಿ ಕ್ಯಾನ್‌ಗಳ ಜತೆ ಬಣ್ಣರಹಿತ ಪೆಟ್ರೋಲಿಯಂ ತ್ಯಾಜ್ಯ ತುಂಬಿಸಿದ ಕ್ಯಾನ್‌ಗಳು ಕಣ್ಣಿಗೆ ರಾಚುತ್ತವೆ. ಹಾಗೆ ನೋಡಿದರೆ ನಮ್ಮದೇ ಅಂಗಳದಲ್ಲಿ ಬೆಳೆದ ತೆಂಗಿನ ಕಾಯಿಯನ್ನು ಒಣಗಿಸಿ ಗಾಣಕ್ಕೆ ಕೊಟ್ಟರೂ 200 ರು. ಒಳಗೆ ಶುದ್ಧ ಕೊಬ್ಬರಿ ಎಣ್ಣೆ ಮಾಡಿಟ್ಟುಕೊಳ್ಳಬಹುದು. ಆದರೆ ಈ ಎಣ್ಣೆ ಮೇಲೆ ಆರೋಪಿಸಿದ ಕೊಲೆಸ್ಟ್ರಾಲ್ ಭೂತ ನಮ್ಮ ದೇಹವಿಡೀ ಆವರಿಸಿದೆ.

ಹಾಲಲ್ಲ ಹಾಲಾಹಲ: ಕಲಬೆರಕೆ ವಿಚಾರದಲ್ಲಿ ಕಂಪನಿಗಳನ್ನಷ್ಟೇ ದೂರಬೇಕಿಲ್ಲ. ಹಾಲಿಗೆ ಸ್ವಲ್ಪವಾದರೂ ನೀರು ಸೋಕಿಸದೇ ಮಾರಾಟ ಮಾಡಿದರೆ ಹಸುವಿಗೆ ದೃಷ್ಟಿಯಾಗುತ್ತದೆ ಎಂಬ ನಂಬಿಕೆಯ ನಾವು ಈಗ ಹಸುಗಳಿಲ್ಲದೆಯೇ ಹಾಲು ಕರೆಯಲು ಕಲಿತಿದ್ದೇವೆ. ನೆರೆ ರಾಜ್ಯಗಳ ದೊಡ್ಡ ಡೈರಿಗಳ ಹೆಸರಿನಲ್ಲಿ ಬರುತ್ತಿರುವ ಹಾಲಿನಲ್ಲಿ ಮೊದಲು ಗೆಣಸಿನ ಪೌಡರ್, ಚಾಕ್ ಪೀಸ್ ಮಿಕ್ಸ್ ಆಗುತ್ತಿತ್ತು. ಈಗ ಇನ್ನೂ ಮುಂದುವರಿದು ಯೂರಿಯಾ, ಕಾಸ್ಟಿಕ್ ಸೋಡಾ, ಹೈಡ್ರೋಜನ್ ಪೆರೋಕ್ಸೈಡ್‌ನಂತಹ ರಾಸಾಯನಿಕಗಳೊಂದಿಗೆ ಹಾಲು ನಿಜಕ್ಕೂ ಹಾಲಾಹಲವಾಗಿದೆ. ಕೋಯಾ ತಯಾರಿಸಬೇಕೆಂದರೆ ಈಗ ರದ್ದಿ ಪೇಪರ್ ಇದ್ದರೆ ಸಾಕು. ಬೆಣ್ಣೆ, ಐಸ್‌ಕ್ರೀಮ್ ತಯಾರಿಸಲು ತಾಳೆ ಎಣ್ಣೆ, ಸೋಯಾ ಎಣ್ಣೆ ಇದ್ದರೂ ಸಾಕು !

ಇನ್ನು ಪ್ರಕೃತಿದತ್ತವಾಗಿ ದೊರೆಯುತ್ತಿದ್ದ ಜೇನುತುಪ್ಪವೂ ಈಗ ನಾಲ್ಕು ಗೋಡೆಗಳ ಮಧ್ಯೆ ತಯಾರಾಗುತ್ತಿದೆ. ಕೆಲ ತಿಂಗಳ ಹಿಂದೆ ಪತ್ರಕರ್ತೆ ವಿಜಯಲಕ್ಷ್ಮೀ ಅವರು ಕರಾವಳಿ ಮತ್ತು ಮಲೆನಾಡು ಭಾಗದ 'ಶುದ್ಧ ಜೇನುತುಪ್ಪ'ದ ಅಸಲಿ ಕಥೆಯನ್ನು ಬಯಲಿಗೆಳೆದಿದ್ದರು. ಕರಾವಳಿ, ಮಲೆನಾಡು, ಕೊಡಗಿನಲ್ಲಿ ಜೇನು ವ್ಯವಸಾಯಗಾರರೇ ಕಟ್ಟಿಕೊಂಡ ಸಂಘಗಳಿವೆ. ಇಲ್ಲಿ ಸಿಗುವ ಜೇನುತುಪ್ಪ ಶುದ್ಧ ಎಂಬ ನಂಬಿಕೆಯಿಂದ ಈ ಭಾಗದ ದೇಗುಲಗಳಿಗೆ ಭೇಟಿ ಕೊಡುವವರು ತೀರ್ಥದ ಬಾಟಲಿ ಜತೆ ಜೇನುತುಪ್ಪದ ಬಾಟಲಿಯನ್ನೂ ತರುವುದು ವಾಡಿಕೆ. ಆದರೆ ಇಲ್ಲೂ ನಕಲಿ ಜೇನುತುಪ್ಪ ಬಿಕರಿಯಾಗುತ್ತಿರುವ ದೂರುಗಳಿವೆ. ದಿನ ಬೆಳಗಾಗುವುದರೊಳಗೆ ಲೀಟರ್‌ಗಟ್ಟಲೆ ಜೇನುತುಪ್ಪ ತಯಾರಿಗೆ ಬೇಕಾದ ಸಕ್ಕರೆ ಮತ್ತು ಕೊಳೆತ ಬೆಲ್ಲದ ಪಾಕ ಪೂರೈಸುವ ಏಜೆಂಟರಿದ್ದಾರೆ. ಈ ನಕಲಿ ಜೇನಿನಲ್ಲಿ ನಮ್ಮ ಎಷ್ಟೊಂದು ದೇವರುಗಳಿಗೆ ಪಂಚಾಮೃತ ಅಭಿಷೇಕ ನಡೆದಿರಬಹುದು ಯೋಚಿಸಿ ?

ಮಂಡ್ಯ ಮೂಲದ ಪತ್ರಕರ್ತ ಗೆಳೆಯರೊಬ್ಬರ ಬಳಿ ಇತ್ತೀಚೆಗೆ ಸಾವಯವ ಬೆಲ್ಲದ ಬಗ್ಗೆ ವಿಚಾರಿಸಿದ್ದೆ. ಸಾವಯವ ಬೆಲ್ಲದ ಹೆಸರಿನಲ್ಲಿ ನಡೆಯುತ್ತಿರುವ ದಂಧೆಯ ಪ್ರತ್ಯಕ್ಷದರ್ಶಿಯಾಗಿರುವ ಅವರು ಅಂಗಡಿಯಲ್ಲಿ ದೊರೆಯುವ ಮಾಮೂಲಿ ಬೆಲ್ಲವೇ ಎಷೋ ವಾಸಿ ಅಂದಿದ್ದರು. ಸಾವಯವದ ಹೆಸರಿನಲ್ಲಿ ನಾವು ಕಣ್ಣು ಮುಚ್ಚಿ ಖರೀದಿಸುತ್ತಿರುವ ಅದೆಷ್ಟೋ ಉತ್ಪನ್ನಗಳು ಅದೆಷ್ಟು ಸಾವಯವ ಎಂದು ಪರೀಕ್ಷಿಸಿದರಷ್ಟೇ ತಿಳಿಯಬಹುದು.

ವೆನಿಲ್ಲಾದ ದುರಂತ ಕಥೆ: 20 ವರ್ಷಗಳ ಹಿಂದಿನ ಮಾತು. ಪತ್ರಿಕೆಗಳಲ್ಲಿ 'ವೆನಿಲ್ಲಾ ಬೆಳೆಯಿರಿ, ಲಕ್ಷಾಧೀಶರಾಗಿ' ಎಂಬ ಹೆಡ್‌ಲೈನ್‌ಗಳು ರಾರಾಜಿಸುತ್ತಿದ್ದವು. ಅಂದು ಒಂದು ಕಿಲೋ ವೆನಿಲ್ಲಾ ಕೋಡಿಗೆ 20 ಸಾವಿರ ರು.ಗಳಿಗಿಂತ ಹೆಚ್ಚಿನ ಧಾರಣೆ ಇತ್ತು. ಆದರೆ ರಾತ್ರೋರಾತ್ರಿ ಲಕ್ಷಾಧೀಶರಾಗಲು ಹೊರಟ ಕೆಲವರು ವೆನಿಲ್ಲಾ ಕೋಡಿನೊಳಗೆ ಕಬ್ಬಿಣದ ತಂತಿ ಸುರಿದು ಕಳುಹಿಸಿದ್ದರು. ಅಮೆರಿಕ ಮತ್ತು ಐರೋಪ್ಯ ರಾಷ್ಟ್ರಗಳಿಗೆ ವೆನಿಲ್ಲ ಹೊತ್ತು ಹೊರಟ ನಾಲ್ಕೈದು ಹಡಗುಗಳನ್ನು ಬಂದರು ಪ್ರವೇಶಿಸಲೂ ಅವಕಾಶ ನೀಡದೇ ವಾಪಸ್ ಕಳುಹಿಸಲಾಗಿತ್ತು. ಅಂದು ಕುಸಿದ ವೆನಿಲ್ಲಾ ಧಾರಣೆ ಇದುವರೆಗೂ ಚೇತರಿಕೆ ಕಂಡಿಲ್ಲ. ಈಗ ನಾವು ತಿನ್ನುವ ಐಸ್‌ಕ್ರೀಮ್ ನಲ್ಲಿ ಬಳಸುವ ಕೃತಕ ವೆನಿಲ್ಲಾಕ್ಕೆ ಪೇಪರ್ ಮಿಲ್‌ನ ತ್ಯಾಜ್ಯ, ಕಲ್ಲಿದ್ದಲು ಟಾರ್ ಇದ್ದರೆ ಸಾಕು! ಹಾಗೆಂದು ಉತ್ತಮ ಗುಣಮಟ್ಟದ ವೆನಿಲ್ಲಾಗೆ ಹೆಸರಾದ ಮಡಗಾಸ್ಕರ್‌ನ ಆರ್ಥಿಕತೆ ಇಂದಿಗೂ ವೆನಿಲ್ಲಾವನ್ನೇ ಅವಲಂಬಿಸಿದೆ.

ಕರಾವಳಿ ಮತ್ತು ಮಲೆನಾಡ ಗಡಿ ಮೀರಿ ಬಯಲು ಸೀಮೆಯನ್ನು ಪ್ರವೇಶಿಸಿರುವ ಅಡಿಕೆಗೂ ಈಗ ಕಲಬೆರಕೆ ಕಾಟ ಶುರುವಾಗಿದೆ. ಇತ್ತೀಚೆಗೆ ಗುಜರಾತಿನ ವ್ಯಾಪಾರಸ್ಥರು ಕೃತಕ ಬಣ್ಣ ಹಚ್ಚಿದ ಟನ್‌ಗಟ್ಟಲೆ ಅಡಿಕೆಯನ್ನು ವಾಪಸ್ ಕಳುಹಿಸಿದ್ದರು. ಧಾರಣೆ ಹೆಚ್ಚಿದಂತೆಲ್ಲಾ, ಕಲಬೆರಕೆ, ನಕಲಿಗಳ ಪ್ರಮಾಣವೂ ಏರತೊಡಗುತ್ತವೆ. ಕೆಲ ತಿಂಗಳ ಹಿಂದೆ ಬ್ಯಾಡಗಿ ಒಣಮೆಣಸಿನ ಬೆಲೆ 800 ರು. ತಲುಪಿತ್ತು. ಮಿಕ್ಸಿಯಲ್ಲಿ ರುಬ್ಬಿದ ಮಸಾಲೆ ಕೆಂಬಣ್ಣಕ್ಕೆ ತಿರುಗಿದಾಗ, 'ಬ್ಯಾಡಗಿ'ಯ ಅಸಲಿ ಬಣ್ಣವೂ ಬಯಲಾಯಿತು. ಸೋನಾಮಸೂರಿ ಅಕ್ಕಿ ಹೆಸರಿನಲ್ಲಿ ನಾವು ಖರೀದಿಸುತ್ತಿರುವ ಬ್ರಾಂಡೆಡ್ ಅಕ್ಕಿ ಕೂಡ ಪಾಲಿಷ್ ಮಾಡಿದ ಪಡಿತರ ಅಕ್ಕಿಯಾಗಿರಬಹುದು. 'ಕಜೆ ಅಕ್ಕಿ' ಹೆಸರಿನಲ್ಲಿ ಕರಾವಳಿಗರು ಬಳಸುವ ಕುಚ್ಚಲಕ್ಕಿಗೂ ಬಣ್ಣ ಬೆರೆಸಿರಬಹುದು. ಜೀರಿಗೆ, ಕೊತ್ತಂಬರಿ, ಸಾಸಿವೆ, ಮೆಂತ್ಯೆ, ಹಿಂಗು ಕಾಳುಮೆಣಸು ಹೀಗೆ ನಾವು ದಿನ ನಿತ್ಯದ ಬಳಸುವ ಸಾಂಬಾರ ಪದಾರ್ಥಗಳಲ್ಲಿ ಕಲಬೆರಕೆ ಆಗಿರುವುದು ಆಗಾಗ ನಮ್ಮ ಗಮನಕ್ಕೆ ಬರುತ್ತಲೇ ಇರುತ್ತದೆ. ಆದರೆ ಒಗ್ಗರಣೆಯಲ್ಲಿ ಸಿಡಿಯದ ಈ ಕಲಬೆರಕೆ ವಸ್ತುಗಳ ಬಗ್ಗೆ ನಾವೆಂದೂ ಸಿಡುಕು ತೋರಿಸಿಲ್ಲ. ಇದೇ ಮಸಾಲೆಯಿಂದ ತಯಾರಾದ ಕೋಳಿ ಸಾರು, ಕಜೆ ಅಕ್ಕಿ ಅನ್ನ ಉಂಡ ಕರಾವಳಿಯ ಭೂತಗಳೂ ಆಕ್ಷೇಪ ಸೂಚಿಸಿಲ್ಲ !

ಇನ್ನು ದೇವರು ಮುನಿಸುಕೊಳ್ಳುವುದಾದರೆ, ವೆಂಕಟೇಶನಾದಿಯಾಗಿ ಎಲ್ಲ ಮುಕ್ಕೋಟಿ ದೇವರೂ, ನಾವು ಸಮರ್ಪಿಸುವ ಹಣ್ಣು, ಹಂಪಲುಗಳನ್ನು ಕಂಡು ಮುಖ ಸಿಂಡರಿಸಿಕೊಳ್ಳಬೇಕಿತ್ತು. ನಮ್ಮ ರೈತರೂ ಕ್ರಿಮಿನಾಶಕ ಮತ್ತು ರಸಗೊಬ್ಬರ ಚೆಲ್ಲದೆ ಸೊಪ್ಪು, ತರಕಾರಿ, ಹೂವು ಮತ್ತು ಹಣ್ಣು-ಹಂಪಲು ಬೆಳೆಯಲು ಸಾಧ್ಯವೇ ಇಲ್ಲ ಎನ್ನುವ ತೀರ್ಮಾನಕ್ಕೆ ಬಂದಿದ್ದಾರೆ. ತರಕಾರಿ ಬೀಜಗಳನ್ನು ರಾಸಾಯನಿಕದಲ್ಲಿ ಅದ್ದಿದ ಬಳಿಕವೇ ನಾಟಿ ಮಾಡುತ್ತಾರೆ. ಹೂವು, ಹಣ್ಣುಗಳಿಗೆ ಕೀಟ ಬಾಧೆ ಎಂದು ಹಲವು ಸುತ್ತಿನ ಕ್ರಿಮಿನಾಶಕ ಸಿಂಪಡಿಸುತ್ತಾರೆ. ಬಾಳೆ, ದ್ರಾಕ್ಷಿ, ದಾಳಿಂಬೆಯಂತಹ ಹಣ್ಣುಗಳಿಗೆ ಬಳಕೆಯಾಗುವ ರಾಸಾಯನಿಕದ ಬಹುಭಾಗ ನಮ್ಮ ಹೊಟ್ಟೆ ಸೇರುತ್ತಿದೆ. ಪರಿಣಾಮ ಭೂಮಿ ತಾಯಿಯ ಜತೆ ನಮ್ಮ ಹೆಣ್ಣು ಮಕ್ಕಳೂ ಬಂಜೆತನದ ಸಮಸ್ಯೆ ಎದುರಿಸುತ್ತಿದ್ದಾರೆ. ತರಕಾರಿ ಗೊಡವೆ ಬೇಡವೆಂದರೂ ಮಾಂಸಾಹಾರದತ್ತ ಹೊರಳಿದರೆ ಅಲ್ಲಿ ಇಂಜೆಕ್ಷನ್, ಮಾತ್ರೆಗಳ ದರ್ಬಾರು. ಕುರಿ, ಕೋಳಿಗಳಿಗೆ ನೇರವಾಗಿ ಹಾರ್ಮೋನ್ ಇಂಜೆಕ್ಷನ್ ಚುಚ್ಚಿ ಕೆಲವೇ ತಿಂಗಳಲ್ಲಿ ತೂಕ ದುಪ್ಪಟ್ಟು ಮಾಡಲಾಗುತ್ತದೆ. ಕೆರೆ ಮೀನುಗಳಿಗೆ ಮಾಂಸದ ತ್ಯಾಜ್ಯ ಉಣಿಸಲಾಗುತ್ತಿದೆ. ಸಮುದ್ರ ಮೀನನ್ನು ದೀರ್ಘ ಕಾಲ ಕಾಪಿಡಲು ರಾಸಾಯನಿಕ ಬೆರೆಸಲಾಗುತ್ತದೆ. ಇವೆಲ್ಲವೂ ನಮ್ಮ ಹೊಟ್ಟೆ ಸೇರುತ್ತಿರುವುದು ಗೊತ್ತಿಲ್ಲದ ವಿಷಯವೇನಲ್ಲ.

ಕೊಳೆತ ಶುಂಠಿ, ಜಿಂಜರ್ ಪೇಸ್ಟ್: ಪಿರಿಯಾಪಟ್ಟಣದ ವಾರದ ಸಂತೆಯಲ್ಲಿ ಸಂಜೆ ವೇಳೆಗೆ ಕೊಳೆತ ಶುಂಠಿ, ಸಿಪ್ಪೆ ಖರೀದಿಸಲೆಂದೇ ದಲ್ಲಾಳಿಗಳು ಬರುತ್ತಾರೆ. ಇವೆಲ್ಲವೂ ನಾವು ಬಳಸುವ ಗಾರ್ಲಿಕ್- ಜಿಂಜರ್ ಪೇಸ್ಟ್‌ಗೆ, ರುಚಿಕರ ಉಪ್ಪಿನಕಾಯಿಗೆ ಬಳಕೆಯಾಗುತ್ತದೆ. ಕಿಲೋ ಟೊಮೇಟೊಗೆ 100 ರು. ಧಾರಣೆ ಇದ್ದಾಗಲೂ ಒಂದಕ್ಕೊಂದು ಫ್ರೀ ಸಿಗುವ ಟೊಮೆಟೋ ಜಾಮ್ ಬಾಟಲಿಗಳಲ್ಲಿ ಯಾವ ಟೊಮೆಟೋ ಬಳಕೆಯಾಗಿದೆ ಎಂದು ಹೇಳುವವರಾರು ? ಹೋಟೇಲ್‌ಗಳಲ್ಲಿ, ಬೀದಿ ಬದಿಯ ತಳ್ಳುಗಾಡಿಗಳಲ್ಲಿ ಬಾಯಲ್ಲಿ ನೀರೂರಿಸಿಕೊಂಡು ತಿನ್ನುವ ಖಾದ್ಯಗಳಿಗೆ ಟೇಸ್ಟ್ ಪೌಡರ್, ಕಲರ್ ಹಾಕದೇ ಹೋದರೆ ಆ ರುಚಿ, ಬಣ್ಣ ಬರಲಾರದು ಎಂದು ನಮಗೂ ಗೊತ್ತು. ಆದರೂ ನಮಗೆ ಆರೋಗ್ಯಕ್ಕಿಂತ ನಾಲಿಗೆ ಚಪಲ ತಣಿಸುವುದೇ ಮುಖ್ಯವಾಗುತ್ತದೆ.

ಸಿಹಿ ತಿಂಡಿಗಳ ತಯಾರಿಕೆಗೆ ಬಳಸುವ ಮೈದಾ, ತುಪ್ಪ, ಎಣ್ಣೆ, ಸಕ್ಕರೆ ಮತ್ತು ಬೆಲ್ಲದಲ್ಲಿ ಕಲಬೆರಕೆಯಾಗಿರುವ ವಿಚಾರ ನಮಗೆ ಗೊತ್ತಿಲ್ಲದ್ದೇನಲ್ಲ. ಆದರೂ ಇವುಗಳನ್ನು ಧೈರ್ಯವಾಗಿ ದೇವರಿಗೆ ಸಮರ್ಪಿಸುತ್ತೇವೆ. ಶುದ್ಧ ಎಳ್ಳೆಣ್ಣೆ ದುಬಾರಿ ಎಂದು ಹಲವು ಎಣ್ಣೆಗಳನ್ನು ಬೆರಕೆ ಮಾಡಿದ ದೀಪದೆಣ್ಣೆ ಬಳಸಿ ದೀಪ ಹಚ್ಚುವ ನಾವು ದೇವರ ವಿಚಾರದಲ್ಲಿ ಈಗಾಗಲೇ ಸಾಕಷ್ಟು ರಾಜಿ ಮಾಡಿಕೊಂಡಿದ್ದೇವೆ. ಹಾಗೆಯೇ ಕಲಬೆರಕೆ ವಿಚಾರದಲ್ಲೂ. ಕಲಬೆರಕೆ ನಮ್ಮ ಜೀವನದ ಅವಿಭಾಜ್ಯ ಭಾಗ. ಉಪ್ಪಿನಕಾಯಿಯಿಂದ ಹಿಡಿದು ಕೋಟ್ಯಂತರ ರು. ವ್ಯಯಿಸಿ ನಾವು ಕಟ್ಟಿದ ಮನೆಗೆ ಬಳಸಿದ ಸಿಮೆಂಟ್, ಕಬ್ಬಿಣ, ಮರಳು... ಎಲ್ಲವೂ ಕಲಬೆರಕೆ. ನಮ್ಮ ಆಡಳಿತ ವ್ಯವಸ್ಥೆ , ರಾಜಕಾರಣವೂ ಕಲಬೆರಕೆ. ಇದೀಗ 'ತಿಮ್ಮಪ್ಪನ ಪ್ರಸಾದ'ದ ಹೆಸರಿನಲ್ಲಿ ನಾವು ತಯಾರಿಸಿ ಹಂಚುತ್ತಿದ್ದ ಲಡ್ಡುವಿಗೂ ಬೆರಕೆಯ ತುಪ್ಪ ಸೇರಿಸಿದ್ದೇವೆ. ನಮ್ಮ ಕಲಬೆರಕೆ ಬದುಕಿಗೆ ಒಗ್ಗಿಕೊಂಡಿರುವ ದೇವರು ಸಿಟ್ಟು ಮಾಡಿಕೊಳ್ಳುವ ಸಾಧ್ಯತೆ ಇಲ್ಲ. ಸಿಟ್ಟು ಮಾಡಿಕೊಳ್ಳಲೇಬೇಕಿದ್ದರೆ ಕಾರಣಗಳು ನೂರೆಂಟಿವೆ. ಆದರೆ ಎಲ್ಲದಕ್ಕೂ ಒಗ್ಗಿಕೊಳ್ಳುವ ನಮಗೆ ನಮ್ಮ ಬಗ್ಗೆಯೇ ಸಿಟ್ಟು ಬಾರದೇ ಹೋದರೆ ನಾವೂ ಮನುಷ್ಯರೆನಿಸಿಕೊಳ್ಳಲೂ ನಾಲಾಯಕ್ಕುಗಳೆನಿಸಿಕೊಳ್ಳುತ್ತೇವೆ.

ತನ್ನಿಮಿತ್ತ
ಡಾ. ಮುರಲೀಮೋಹನ್ ಚೂಂತಾರು

ಸ್ವಾಸ್ಥ್ಯ ಸಂರಕ್ಷಕರಿಗೆ ನಮನ

ಪ್ರತಿ ವರ್ಷದ ಸೆಪ್ಟೆಂಬರ್ 25ರಂದು 'ವಿಶ್ವ ಫಾರ್ಮಸಿಸ್ಟರ ದಿನ'ವನ್ನು ಆಚರಿಸಲಾಗುತ್ತದೆ. 2009ರಲ್ಲಿ 'ಇಂಟರ್‌ನ್ಯಾಷನಲ್ ಫಾರ್ಮಾಸ್ಯೂಟಿಕಲ್ ಫೆಡರೇಷನ್'ನ ಆದೇಶದಂತೆ ಈ ಆಚರಣೆಯನ್ನು ಜಾರಿಗೆ ತರಲಾಯಿತು. ಆರೋಗ್ಯ ಕ್ಷೇತ್ರದ ಅವಿಭಾಜ್ಯ ಅಂಗವಾದ 'ಫಾರ್ಮಸಿ' ಅಥವಾ 'ಔಷಧಾಲಯ' ವಿಭಾಗದ ತಜ್ಞರು ತಮ್ಮ ವೃತ್ತಿಜೀವನದ ಏಳು-ಬೀಳುಗಳನ್ನು ವಿಮರ್ಶಿಸಿ, ಕುಂದುಕೊರತೆಗಳನ್ನು ಪರಾಮರ್ಶಿಸಿ, ಮಗದೊಮ್ಮೆ ವೃತ್ತಿಗೆ ತಮ್ಮನ್ನು ಸಮರ್ಪಿಸಿಕೊಂಡು ಪರಸ್ಪರ ಶುಭಾಶಯಗಳನ್ನು ವಿನಿಮಯ ಮಾಡಿಕೊಳ್ಳುವ ಸುದಿನವಿದು. 'ಫಾರ್ಮಸಿಸ್ಟರು ನಿಮ್ಮ ಆರೋಗ್ಯದ ಒಡನಾಡಿ' ಎಂಬುದು 2024ರ ವರ್ಷದ ಈ ದಿನಾಚರಣೆಯ ತಿರುಳು.

ಜನರಲ್ಲಿ ಮತ್ತು ವೃತ್ತಿಬಾಂಧವರಲ್ಲಿ ಔಷಧಿಗಳ ಬಗ್ಗೆ ಹೆಚ್ಚಿನ ಅರಿವು-ಜಾಗೃತಿ-ಕಾಳಜಿ ಮೂಡಿಸುವ ಉದ್ದೇಶ ಈ ದಿನಾಚರಣೆಯದ್ದು. ಆರೋಗ್ಯಕ್ಷೇತ್ರ ಮತ್ತು ಫಾರ್ಮಸಿ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಒಬ್ಬ ಯಶಸ್ವಿ ವೈದ್ಯರ ಹಿಂದೆ ಖಂಡಿತವಾಗಿಯೂ ಒಂದು ಪರಿಣಾಮಕಾರಿ ಔಷಧಿ ಮತ್ತು ನಿಷ್ಠಾವಂತ ಫಾರ್ಮಸಿಸ್ಟರ ಅಸ್ತಿತ್ವ ಇದ್ದೇ ಇರುತ್ತದೆ. ಗುಣಮಟ್ಟದ/ಪರಿಣಾಮಕಾರಿ ಔಷಧಿಯ ತಯಾರಿಕೆ, ಸಂಸ್ಕರಣೆ, ಶೇಖರಣೆ ಮತ್ತು ಸಂಶೋಧನೆ ಎಲ್ಲವೂ ವೈದ್ಯಕೀಯ ಕ್ಷೇತ್ರದ ಉನ್ನತಿಗೆ ಅನಿವಾರ್ಯವೆನಿಸಿವೆ.

ಎಲ್ಲವೂ ವ್ಯಾಪಾರೀಕರಣಗೊಳ್ಳುತ್ತಿರುವ ಕಾಲಘಟ್ಟವಿದು, ಔಷಧಿ ಕ್ಷೇತ್ರವೂ ಇದಕ್ಕೆ ಹೊರತಾಗಿಲ್ಲ. ದಿನಕ್ಕೊಂದರಂತೆ ಹೊಸ ಹೊಸ ಅಣುಜೀವಿಗಳು/ಬ್ಯಾಕ್ಟೀರಿಯಾಗಳು, ವೈರಸ್‌ಗಳು ಹುಟ್ಟಿಕೊಳ್ಳುತ್ತಿವೆ. ಅಂತೆಯೇ ಹೊಸ ಔಷಧಿಗಳೂ ಸೃಷ್ಟಿಯಾಗುತ್ತಿವೆ. 'ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಬದುಕಬಲ್ಲೆ, ಆದರೆ ಔಷಧವಿಲ್ಲದೆ ಬದುಕಲಾರೆ' ಎಂಬ ಅನಿವಾರ್ಯತೆಗೆ ಮನುಷ್ಯ ತಲುಪಿದ್ದಾನೆ. ಹಲವಾರು ರೋಗಗಳನ್ನು ಔಷಧಿಗಳ ಬಳಕೆಯಿಲ್ಲದೆ ಆಹಾರ ನಿಯಂತ್ರಣ, ನಿಯತ ವ್ಯಾಯಾಮ, ಶುದ್ಧ ಗಾಳಿ-ನೀರು-ಆಹಾರದ ಸೇವನೆಗಳಿಂದ ತಡೆಗಟ್ಟಬಹುದು ಎಂಬುದು ತಿಳಿದಿದ್ದರೂ, ನಾವೆಲ್ಲಾ ಒಂದಲ್ಲಾ ಒಂದು ರೀತಿಯಲ್ಲಿ ಔಷಧಿಗಳಿಗೆ ದಾಸರಾಗುತ್ತಿದ್ದೇವೆ ಎಂಬುದೇ ವಿಪರ್ಯಾಸ. ಔಷಧಿಗಳ ಸದ್ಬಳಕೆಗಿಂತ ದುರ್ಬಳಕೆಯಾಗುತ್ತಿರುವುದೇ ದೊಡ್ಡ ದುರಂತ. ಔಷಧಿಯೊಂದು ಮಾರುಕಟ್ಟೆಗೆ ಬರುವ ಮೊದಲು, ಸಾಕಷ್ಟು ಸಂಶೋಧನೆ ನಡೆದು, ಗುಣಮಟ್ಟದ ಪರೀಕ್ಷೆಗಳಲ್ಲಿ ಉತ್ತೀರ್ಣವಾಗಿ, ಪ್ರಯೋಗಕ್ಕೆ ಒಡ್ಡಿಕೊಳ್ಳುವ ಪ್ರಾಣಿ ಮತ್ತು ಮನುಷ್ಯರ ಮೇಲೆ ಅವನ್ನು ಪ್ರಯೋಗಿಸಿ, 'ಸುರಕ್ಷಿತವಾಗಿದೆ' ಎಂದು ಸಾಬೀತಾದಲ್ಲಿ ಮಾತ್ರವೇ ವ್ಯಾಪಕ ಮಾನವ ಬಳಕೆಗೆ ಅನುಮತಿಸಲಾಗುತ್ತದೆ. ಹೀಗಾಗಿ, ಔಷಧಿಯೊಂದು ಕಾರ್ಖಾನೆಯಲ್ಲಿ ತಯಾರಾಗಿ, ಮೆಡಿಕಲ್ ಸ್ಟೋರ್‌ಗಳ ಮುಖಾಂತರ ಗ್ರಾಹಕರ ಕೈಸೇರುವವರೆಗೆ, ವಿಜ್ಞಾನಿಗಳು, ವೈದ್ಯರು, ಸಂಶೋಧಕರು ಮತ್ತು ಫಾರ್ಮಸಿಸ್ಟ್‌ಗಳು ವಹಿಸುವ ಪಾತ್ರಗಳು ಗಣನೀಯವಾಗಿರುತ್ತವೆ, ಪವಿತ್ರವಾಗಿರುತ್ತವೆ. ಆದ್ದರಿಂದ, ರೋಗಿಗಳ ಸ್ವಾಸ್ಥ್ಯವನ್ನು ಕಾಪಾಡುವಲ್ಲಿ ಈ ಎಲ್ಲರ ಹೊಣೆಗಾರಿಕೆ ಗುರುತರವಾಗಿರುತ್ತದೆ ಎನ್ನಲಡ್ಡಿಯಿಲ್ಲ. ಈ ಎಲ್ಲರೂ ತಂತಮ್ಮ ಹೊಣೆಗಾರಿಕೆಯನ್ನು ಅರಿತು ಸಮರ್ಥವಾಗಿ ನಿಭಾಯಿಸಿದಲ್ಲಿ ಮಾತ್ರವೇ ಔಷಧಿಗಳ ದುರ್ಬಳಕೆಯನ್ನು ತಡೆಗಟ್ಟಬಹುದು. ಇಲ್ಲವಾದಲ್ಲಿ ಮುಂದೊಂದು ದಿನ ಅಣುಜೀವಿಗಳು, ಬ್ಯಾಕ್ಟೀರಿಯಾಗಳು, ವೈರಸ್‌ಗಳು ಮನುಕುಲವನ್ನು ನುಂಗಿ ನೀರುಕುಡಿಯಲೂಬಹುದು. 'ಅತಿಯಾದರೆ ಅಮೃತವೂ ವಿಷವಾಗಬಲ್ಲದು' ಎಂದಿದ್ದಾರೆ ನಮ್ಮ ಹಿರಿಯರು. ಇದು ಔಷಧಿಗಳಿಗೂ ಅನ್ವಯಿಸುವ ಮಾತು. ಔಷಧಿಗಳ ವಿಷಯದಲ್ಲೂ ನಾವು ಜಾಗೃತರಾಗಬೇಕಾದ ಅನಿವಾರ್ಯ ಸನ್ನಿವೇಶ ಬಂದೊದಗಿದೆ. ಏಕೆಂದರೆ, ಹಲವಾರು ಔಷಧಿಗಳು ನಿರ್ದಿಷ್ಟ ರೋಗವನ್ನು ಗುಣಪಡಿಸುವುದರ ಜತೆಗೆ, ಇನ್ನಿತರ ರೋಗಗಳಿಗೆ ರಹದಾರಿ ಮಾಡಿಕೊಡುತ್ತವೆ. ಆದ್ದರಿಂದ, ಅತ್ಯಗತ್ಯವಿದ್ದರೆ ಮಾತ್ರವೇ ಔಷಧಿಗಳಿಗೆ ಮೊರೆಹೋಗಬೇಕು. ಔಷಧಿಗಳಿಗೆ ದಾಸರಾದಲ್ಲಿ, ಜೀವನಪರ್ಯಂತ ಔಷಧಿಯಿಲ್ಲದೆ ಬದುಕಲಾರದಂಥ ಸನ್ನಿವೇಶಕ್ಕೆ ಸಾಕ್ಷಿಯಾಗಬೇಕಾಗುತ್ತದೆ. ಆದ್ದರಿಂದ, ವೈದ್ಯರಿಗೆ ಮತ್ತು ಫಾರ್ಮಸಿಸ್ಟರಿಗೆ ಹೆಚ್ಚಿನ ಸಾಮಾಜಿಕ ಹೊಣೆಗಾರಿಕೆಯಿದೆ. ಇವರು ತಮ್ಮ ವೃತ್ತಿಧರ್ಮವನ್ನು ಬಲಿಗೊಡದೆ, ವೃತ್ತಿಯ ಘನತೆ-ಗಾಂಭೀರ್ಯಗಳನ್ನು ಎತ್ತಿಹಿಡಿದು, ಮೌಲ್ಯಾಧಾರಿತ ಧ್ಯೇಯದಿಂದ ಕಾರ್ಯನಿರ್ವಹಿಸಿದಲ್ಲಿ ಜನರ ಸ್ವಾಸ್ಥ್ಯ ವೃದ್ಧಿಸುವುದರಲ್ಲಿ ಸಂಶಯವಿಲ್ಲ. ಹಾಗಾದಲ್ಲಿ ಮಾತ್ರವೇ ಈ ದಿನಾಚರಣೆಗೆ ಹೆಚ್ಚಿನ ಮೌಲ್ಯ ಬಂದೀತು. ಅದರಲ್ಲಿಯೇ ಮನುಕುಲದ ಹಿತ ಮತ್ತು ಉನ್ನತಿ ಅಡಗಿದೆ. ಈ ಶುಭಸಂದರ್ಭದಲ್ಲಿ ಎಲ್ಲಾ ವೃತ್ತಿ ಬಾಂಧವರಿಗೆ ಮತ್ತು ಫಾರ್ಮಸಿಸ್ಟ್‌ಗಳಿಗೆ ಶುಭವಾಗಲಿ.

(ಲೇಖಕರು ವೈದ್ಯರು)

ಕನ್ನಡಪರ ಚಳವಳಿಗಳು ಎಡವುತ್ತಿರುವುದು ಎಲ್ಲಿ?



ಆಂದೋಲನ
ಎಸ್. ಶ್ರೀನಿವಾಸ್
vveditoped@gmail.com

ಅ.ನ.ಕೃಷ್ಣರಾವ್, ಮ.ರಾಮಮೂರ್ತಿ, ಕೆ.ಪ್ರಭಾಕರ್ ಮುಂತಾದವರು 1962ರಲ್ಲಿ 'ಕರ್ನಾಟಕ ಸಂಯುಕ್ತ ರಂಗ' ಸ್ಥಾಪಿಸುವ ಮೂಲಕ ಕರ್ನಾಟಕದಲ್ಲಿ, ಅದರಲ್ಲೂ ನಿರ್ದಿಷ್ಟವಾಗಿ ಬೆಂಗಳೂರಿನಲ್ಲಿ ಕನ್ನಡ ಚಳವಳಿಗೆ ನಾಂದಿ ಹಾಡಿದರು. ಅಲ್ಲಿಗೆ, ಕನ್ನಡ ಚಳವಳಿ ಪ್ರಾರಂಭವಾಗಿ ಈ ವರ್ಷಕ್ಕೆ 62 ವರ್ಷವಾಗಲಿದೆ. ಕನ್ನಡ ಭಾಷೆಗೆ ಮತ್ತು ಕನ್ನಡಿಗರಿಗೆ ಅನ್ಯಾಯವಾದಾಗೆಲ್ಲ ಅದರ ವಿರುದ್ಧ ದನಿಯೆತ್ತಿ, ಕನ್ನಡಿಗರಲ್ಲಿ ಜಾಗೃತಿ ಮೂಡಿಸುವ ಕೆಲಸವನ್ನು ಕನ್ನಡ ಚಳವಳಿಗಾರರು ಪ್ರಾಮಾಣಿಕವಾಗಿ ಮಾಡಿಕೊಂಡು ಬಂದಿದ್ದಾರೆ; ಆದರೆ ಇತ್ತೀಚಿನ ಕೆಲ ದಶಕಗಳಿಂದ ಕೆಲ ಚಳವಳಿಗಾರರ ನಡೆ ಹಾಗೂ ಧೋರಣೆ ನೋಡಿದರೆ, ಅವರು ತಮ್ಮ ಮುಖ್ಯಗುರಿಯನ್ನೇ ಮರೆತಂತೆ ತೋರುತ್ತದೆ.

ಯಾವುದೇ ಗುರಿಯನ್ನು ತಲುಪಬೇಕಾದರೆ ವಿಷಯದ ಬಗೆಗಿನ ಸಂಪೂರ್ಣ ಮಾಹಿತಿಯನ್ನು ಅರಿತಿರಬೇಕು, ಇಲ್ಲದಿದ್ದರೆ ನಮ್ಮ ಎಲ್ಲ ಪ್ರಯತ್ನವೂ ವಿಫಲವಾಗುವುದು. ಮೊದಲನೆಯದಾಗಿ, ಹಿಂದಿಯ ಹೇರಿಕೆಯಾಗುತ್ತಿದೆ ಎಂಬ ಭ್ರಮೆಯನ್ನು ನಮ್ಮ ಚಳವಳಿಗಾರರು ಹೊಂದಿದ್ದಾರೆ. ಆದರೆ, ಕರ್ನಾಟಕದಲ್ಲಿನ ಕನ್ನಡೇತರರು ಕನ್ನಡವನ್ನು ಕಲಿಯಲು ಔದಾಸೀನ್ಯವನ್ನು ತೋರುತ್ತಿರುವುದು ಮತ್ತು ಕನ್ನಡಿಗರಿಗೆ ಕನ್ನಡದಲ್ಲಿ ಸೇವೆಗಳು ದೊರಕದಿರುವುದು ಇಲ್ಲಿನ ಕಹಿವಾಸ್ತವವೆನ್ನಬೇಕು.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಹಿಂದಿ ಭಾಷೆಯಲ್ಲಿ ಮಾತಾಡುವವರೆಲ್ಲರ ಮಾತೃಭಾಷೆ ಹಿಂದಿಯಲ್ಲ. ನಮ್ಮಲ್ಲಿ ನೆಲೆಸಿರುವ ಉತ್ತರ ಭಾರತ ಮೂಲದ ಎಲ್ಲರಿಗೂ ಹಿಂದಿ ಬರುತ್ತದೆ ಹಾಗೂ ನಮ್ಮೊಂದಿಗೆ ಮಾತನಾಡುವಾಗ ಅವರು ಹಿಂದಿಯಲ್ಲಿ ಮಾತನಾಡುತ್ತಾರೆ. ಇಂಥವರಲ್ಲಿ ಉತ್ತರಪ್ರದೇಶ ಮತ್ತು ಬಿಹಾರದ ಜನರು ಮಾತ್ರವಲ್ಲದೆ ಬೆಂಗಾಲಿಗಳು, ಪಂಜಾಬಿಗಳು, ಗುಜರಾತಿಗಳೂ ಇದ್ದಾರೆ ಎಂಬುದನ್ನು ನಾವು ಅರಿಯಬೇಕು. ಉತ್ತರ ಭಾರತೀಯರಷ್ಟೇ ಕನ್ನಡ ಕಲಿಯಲು ಆಸಕ್ತಿ ತೋರುತ್ತಿಲ್ಲ ಎಂಬುದು ತಪ್ಪುಕಲ್ಪನೆ; ಬೆಂಗಳೂರಿನಲ್ಲಿ ದಶಕದಿಂದ ವಾಸಿಸುತ್ತಿರುವ ತಮಿಳರು ಮತ್ತು ಮಲಯಾಳಿಗಳಲ್ಲಿ ಅನೇಕರು ಕೂಡ ಕನ್ನಡದಲ್ಲಿ ಮಾತನಾಡುವುದಿಲ್ಲ.

ದಶಕಗಳ ಹಿಂದೆ ಬೆಂಗಳೂರಿನಲ್ಲಿ, ಮನೆಗಳಲ್ಲಿ ಗೊಂಬೆಗಳನ್ನು ಕೂರಿಸುವ ಮೂಲಕ ದಸರಾ ಹಬ್ಬವನ್ನು ಸಂಭ್ರಮಿಸುತ್ತಿದ್ದುದುಂಟು; ಆದರೆ ಇತ್ತೀಚೆಗೆ ನೂರಾರು ಕಡೆಗಳಲ್ಲಿ ದುರ್ಗಾದೇವಿಯ ಮೂರ್ತಿಯನ್ನು ಸಾರ್ವಜನಿಕವಾಗಿ ಪ್ರತಿಷ್ಠಾಪಿಸಿ ಅನೇಕ ದಿನಗಳವರೆಗೆ ಬೇರೆ ಭಾಷೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸುವುದನ್ನು ನಾವು ಕಾಣುತ್ತಿದ್ದೇವೆ. ಮಾತ್ರವಲ್ಲ, ದೇವಿಯ ಮೂರ್ತಿಯನ್ನು ತಯಾರಿಸುವ ಕಲಾವಿದ, ಪೂಜೆಮಾಡುವ ಪುರೋಹಿತ, ಪ್ರಸಾದ ತಯಾರಿಸುವ ಬಾಣಸಿಗರು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಸಂಗೀತಗಾರರನ್ನೂ ತಮ್ಮ ರಾಜ್ಯದಿಂದಲೇ ಆಮಂತ್ರಿಸುತ್ತಾರೆ. ಕಾರ್ಯಕ್ರಮ ಮುಗಿದ ನಂತರ ಮೂರ್ತಿಯನ್ನು ಬೆಂಗಳೂರಿನ ಅಲಸೂರು ಕೆರೆಗೆ ಹಾಕಿ, ಕೆರೆ ಸ್ವಚ್ಛಗೊಳಿಸುವ ಕೆಲಸವನ್ನು ಕನ್ನಡಿಗರಿಗೆ ಕೊಡುತ್ತಾರೆ. ನೆನಪಿರಲಿ, ಇದನ್ನೆಲ್ಲ ಮಾಡುವವರು ಹಿಂದಿ ಭಾಷಿಕರಲ್ಲ. ಹಾಗೆಯೇ ಹೊರರಾಜ್ಯದಿಂದ ಬಂದ ಎಲ್ಲ ಜನರೂ ಕನ್ನಡ ವಿರೋಧಿಗಳು ಎಂದು ಸಾರಾಸಗಟಾಗಿ ದೂಷಿಸುವುದು ಸರಿಯಲ್ಲ. ಏಕೆಂದರೆ, ಮಾರವಾಡಿ ವ್ಯಾಪಾರಸ್ಥರು ಮತ್ತು ಮಲಯಾಳಿ ಮುಸಲ್ಮಾನ ವ್ಯಾಪಾರಸ್ಥರು ಕನ್ನಡದ ಗ್ರಾಹಕರಿಗೆ ಕನ್ನಡದಲ್ಲಿಯೇ ಸೇವೆ ಒದಗಿಸುತ್ತಾರೆ.

ಆದ್ದರಿಂದ ಕನ್ನಡ ಚಳವಳಿಗಾರರು ಮುಖ್ಯವಾಗಿ, ಬೆಂಗಳೂರಿನಲ್ಲಿರುವ ಅನ್ಯಭಾಷಿಕರ ಅಂಕಿ-ಅಂಶವನ್ನು ಮೊದಲು ಪಡೆದುಕೊಳ್ಳಬೇಕು. ಅಂದರೆ, ಯಾವ ಭಾಷೆ ಮಾತಾಡುವವರು ಯಾವ ಪ್ರದೇಶದಲ್ಲಿ ಎಷ್ಟು ಸಂಖ್ಯೆಯಲ್ಲಿದ್ದಾರೆ, ಇವರಲ್ಲಿ ಎಷ್ಟು ಜನ ಕನ್ನಡ ಕಲಿತಿದ್ದಾರೆ ಎಂಬ ಮಾಹಿತಿ. ಇದು ಲಭ್ಯವಾದಲ್ಲಿ, ಯಾವ ರೀತಿಯ ಕ್ರಮ ಕೈಗೊಂಡರೆ ಇವರು ಕನ್ನಡವನ್ನು ಕಲಿಯುವಂತೆ ಮಾಡಬಹುದು ಎಂದು ಯೋಜಿಸಬಹುದು. ರಸ್ತೆಯಲ್ಲಿ ಪಾನಿಪುರಿ ಮಾರುವಾತ ಕನ್ನಡದಲ್ಲಿ ಮಾತನಾಡದಿದ್ದರೂ ಅವನಿಂದ ಕನ್ನಡಕ್ಕೆ ಏನೂ ಹಾನಿಯಿಲ್ಲ; ಆದರೆ ಕಂಪನಿಗಳಲ್ಲಿ ಕೆಲಸ ಮಾಡುವ ಶ್ರೀಮಂತ ವಲಸೆಗಾರರು ಕಾಯಮ್ಮಾಗಿ ಬೆಂಗಳೂರಿನಲ್ಲಿ ನೆಲೆಸಲು ತೀರ್ಮಾನಿಸಿದ ನಂತರವೂ ಕನ್ನಡವನ್ನು ಕಲಿಯದಿರುವ, ಕನ್ನಡಿಗರೆಡೆಗೆ ತಾತ್ಸಾರ ತೋರುವ ಹಾಗೂ ತಮ್ಮ ಮಕ್ಕಳಿಗೂ ಶಾಲೆಗಳಲ್ಲಿ ಕನ್ನಡವನ್ನು ಕಲಿಸಬಾರದೆಂದು ನ್ಯಾಯಾಲಯದಲ್ಲಿ ಅರ್ಜಿ ಹಾಕುವ ಧೋರಣೆಯೇ ಕನ್ನಡಿಗರಿಗೆ ಭಾರಿ ಕಿರಿಕಿರಿ ಉಂಟುಮಾಡುತ್ತಿದೆ.

ಸುಮಾರು 80-90ರ ದಶಕದವರೆಗೂ ಬೆಂಗಳೂರಿನಲ್ಲಿ ಕನ್ನಡಿಗರ ಮೇಲೆ ತಮಿಳರ ದಬ್ಬಾಳಿಕೆ ನಡೆಯುತ್ತಿತ್ತು. ಅಲಸೂರು, ರಾಮಚಂದ್ರಾಪುರ, ಶ್ರೀರಾಮಪುರ ಮುಂತಾದ ಪ್ರದೇಶಗಳಲ್ಲಿ 'ದ್ರಾವಿಡ ಕಳಗಂ' ಬಾವುಟ ರಾರಾಜಿಸುತ್ತಿತ್ತು. ಆ ತಲೆಮಾರಿನ ಅನೇಕ ತಮಿಳರು ಕನ್ನಡವನ್ನು ಕಲಿಯದೇ, ತಮಿಳು ಮತ್ತು ಇಂಗ್ಲಿಷ್ ಮೂಲಕವೇ ಬೆಂಗಳೂರಿನಲ್ಲಿ ಬದುಕುತ್ತಿದ್ದರು. ಕಾಲಕ್ರಮೇಣ ಕನ್ನಡಿಗರ ಪ್ರಭಾವ ಹೆಚ್ಚಾದಂತೆ, ಕನ್ನಡ-ವಿರೋಧಿ ತಮಿಳರೆಲ್ಲರೂ ಪ್ರಗತಿಪರ/ದಲಿತಪರ ಮುಖವಾಡವನ್ನು ಧರಿಸಲಾರಂಭಿಸಿದರು. ಪ್ರಸ್ತುತ ಕೆಲ ಚಳವಳಿಗಾರರು ತಾವು ದ್ರಾವಿಡರು, ಪೆರಿಯಾರ್ ತಮ್ಮ ಆದರ್ಶ ಎಂದು ಬಿಂಬಿಸಿಕೊಳ್ಳುತ್ತಾರೆ. ಆದರೆ ತಮಿಳರು, ಅದರಲ್ಲೂ ದ್ರಾವಿಡ ಕಳಗಂನ ಸದಸ್ಯರು ನಮ್ಮ ಬಸವೇಶ್ವರರನ್ನು 'ಆದರ್ಶ ಪುರುಷ'ನೆಂದು ಒಪ್ಪುವುದಿಲ್ಲ. ಮೂಲತಃ ಅವರೊಬ್ಬ ಬ್ರಾಹ್ಮಣ ಎಂಬುದು ಇದಕ್ಕೆ ಕಾರಣ. ಒಂದೆಡೆ ತನ್ನ ಜನಿವಾರವನ್ನು ತ್ಯಜಿಸಿ, ಬ್ರಾಹ್ಮಣ ಹಾಗೂ ದಲಿತರ ನಡುವೆ ಮದುವೆ ಮಾಡಿಸಿದ ಬಸವಣ್ಣನಾದರೆ, ಮತ್ತೊಂದೆಡೆ ತನ್ನ ಮುಸಲ್ಮಾನ ಶಿಷ್ಯನಿಗೆ ಜನಿವಾರ ಹಾಕಿದ ಗೋವಿಂದ ಭಟ್ಟ- ಇದು ಕರ್ನಾಟಕದ ಬ್ರಾಹ್ಮಣರ ಪ್ರಗತಿಪರ ಚಿಂತನೆಯ ಪರಿ. ಆದ್ದರಿಂದಲೇ, ಬಿಜಾಪುರದ ಸುಲ್ತಾನನು ವ್ಯಾಸರಾಯರನ್ನು, ಅದೋನಿಯ ಸುಲ್ತಾನನು ರಾಘವೇಂದ್ರ ಸ್ವಾಮಿಗಳನ್ನು ಹಾಗೂ ಹೈದರಾಲಿ-ಟಿಪ್ಪು ಸುಲ್ತಾನರು ಶೃಂಗೇರಿ ಸ್ವಾಮಿಗಳನ್ನು ಪೂಜ್ಯ ಭಾವನೆಯಿಂದ ಕಾಣುತ್ತಿದ್ದುದು. ಬಾಬಾ ಸಾಹೇಬ್ ಅಂಬೇಡ್ಕರ್ ಹಾಗೂ ಗಾಂಧೀಜಿ, ದಲಿತರ ಬಗ್ಗೆ ದನಿಯೆತ್ತುವ ಮೊದಲೇ ಕರ್ನಾಟಕದ ಕುದ್ಮಲ್ ರಂಗರಾವ್ ಹಾಗೂ ಗೋಪಾಲ ಸ್ವಾಮಿ ಅಯ್ಯರ್ ದಲಿತರ ಏಳಿಗೆಗಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದರು. ಆದ್ದರಿಂದ ಚಳವಳಿಗಾರರು ಎಲ್ಲ ಸಮುದಾಯದ ಪ್ರಭಾವಶಾಲಿ ವ್ಯಕ್ತಿಗಳನ್ನು ಕನ್ನಡದ ಕೆಲಸಕ್ಕೆ ಹೇಗೆ ಬಳಸಿಕೊಳ್ಳಬಹುದು ಎಂಬುದನ್ನು ಯೋಚಿಸಬೇಕು; ಪೆರಿಯಾರ್‌ರನ್ನು ಮಾದರಿಯಾಗಿಟ್ಟುಕೊಳ್ಳುವ ಬದಲು ಬಸವ, ಕನಕ ಹಾಗೂ ಕುವೆಂಪುರನ್ನು ಆದರ್ಶವಾಗಿ ಪರಿಗಣಿಸಬೇಕು. ಇವರೆಲ್ಲ ಕನ್ನಡ ಭಾಷೆಯನ್ನು ಶ್ರೀಮಂತಗೊಳಿಸಿದ್ದಲ್ಲದೆ ಮೌಢ್ಯ, ಅಸಮಾನತೆಯ ವಿರುದ್ಧ ದನಿಯೆತ್ತಿದ ಕನ್ನಡದ ಪ್ರವಾದಿಗಳೆಂಬುದನ್ನು ಮರೆಯಬಾರದು.

ಪ್ರಸ್ತುತ ಬೆಂಗಳೂರಿನಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ಬಾಂಗ್ಲಾದೇಶೀಯರು ವಾಸಿಸುತ್ತಿದ್ದಾರೆ. ಕೇಂದ್ರ ಹಾಗೂ ರಾಜ್ಯ ಸರಕಾರದವರೇ ಅವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಹೀಗಿರುವಾಗ, ಭಾರತದ ಇತರೆ ಭಾಗಗಳಿಂದ ಬೆಂಗಳೂರಿಗೆ ಬರುವ ಜನರನ್ನು ನಾವು ತಡೆಯಲಾದೀತೇ? ಹಿಂದಿ ಭಾಷೆಯನ್ನು ವಿರೋಧಿಸಿದ್ದರಿಂದ ಇದುವರೆಗೂ ಹೇಳಿಕೊಳ್ಳುವಂಥ ಪರಿಣಾಮವಾಗಿಲ್ಲ. ಆದ್ದರಿಂದ ಹಿಂದಿಯನ್ನು ವಿರೋಧಿಸುವ ಬದಲು ಕನ್ನಡವನ್ನು ಬೆಳೆಸುವೆಡೆಗೆ ನಮ್ಮ ಗಮನ ಹರಿಸಬೇಕಿದೆ. ಹಾಗೆ ನೋಡಿದರೆ, ಪಂಜಾಬಿಗಳು, ಗುಜರಾತಿಗಳು, ಮಾರವಾಡಿಗಳು, ಬೆಂಗಾಲಿಗಳು ಮುಂತಾದವರು ಹಿಂದಿಯ ನೆರವಿನಿಂದಲೇ ಬೆಂಗಳೂರು, ಮುಂಬೈ ಮುಂತಾದೆಡೆ ನೆಲೆಸಲು ಸಾಧ್ಯವಾಗಿದೆ. ಈ ನಗರಗಳಲ್ಲಿ ತಂತಮ್ಮ ಭಾಷೆಯನ್ನು ಬಳಸಿ ಬದುಕಲು ಅವರಿಗೆ ಆಗುತ್ತಿರಲಿಲ್ಲ. ಅದೇ ರೀತಿ, ನಮ್ಮ ಕರಾವಳಿ ಕನ್ನಡಿಗರು ಕೂಡ ಮುಂಬೈ ಮುಂತಾದೆಡೆ ವ್ಯಾಪಾರ-ವ್ಯವಹಾರ ಮಾಡಲು ಹಿಂದಿ ನೆರವಾಗಿದೆ. ಮುಂಬೈನಲ್ಲಿ ಹಿಂದಿ ಚಿತ್ರೋದ್ಯಮವು ಅನೇಕ ಮರಾಠಿಗರಿಗೆ ಬದುಕು ಮತ್ತು ಕೀರ್ತಿಯನ್ನು ಕೊಟ್ಟಿದೆ, ಲತಾ ಮುಂಗೇಶ್ಕರ್ ಇದಕ್ಕೊಂದು ಮುಖ್ಯ ಉದಾಹರಣೆ. ಮರಾಠಿ ಭಾಷಿಕರು ಹಿಂದಿ ಬಲ್ಲವರಾಗಿದ್ದ ಕಾರಣ ಇದು ಸಾಧ್ಯವಾಗಿದೆ. ನಮ್ಮವರೇ ಆದ ಶಂಕರ್‌ನಾಗ್ ಅವರು 'ಮಾಲ್ಗುಡಿ ಡೇಸ್' ಎಂಬ ಧಾರಾವಾಹಿಯನ್ನು ಹಿಂದಿಯಲ್ಲಿ ನಿರ್ದೇಶಿಸಿದಾಗ ಕನ್ನಡದ ಅನೇಕ ಕಲಾವಿದರಿಗೆ ವೃತ್ತಿ ಹಾಗೂ ವೇದಿಕೆಯನ್ನು ಒದಗಿಸಿದ್ದನ್ನು ಮರೆಯಲಾದೀತೇ?

ಆದ್ದರಿಂದ ಹಿಂದಿ ಭಾಷೆಯನ್ನು ತಮಿಳರಂತೆ ದ್ವೇಷಿಸುವ ಬದಲು, ನಮ್ಮಲ್ಲಿ ನೆಲೆಸಿರುವ ಕನ್ನಡೇತರರಿಗೆ ಕನ್ನಡ ಕಲಿಸುವೆಡೆಗೆ ಗಮನಹರಿಸಬೇಕಾಗಿದೆ. ಪ್ರಸ್ತುತ ಎಲ್ಲ ರಾಷ್ಟ್ರೀಯ ಮಾಧ್ಯಮಗಳೂ ಕನ್ನಡ ಚಳವಳಿಗಾರರನ್ನು 'ಹಿಂದಿ ವಿರೋಧಿಗಳು' ಎಂದು ಬಿಂಬಿಸುತ್ತಿರುವಾಗ, ''ಇಲ್ಲ, ನಾವು ಕನ್ನಡಿಗರು ತ್ರಿಭಾಷಾ ಸೂತ್ರವನ್ನು ಸ್ವಾಗತಿಸುತ್ತೇವೆ; ಹಿಂದಿ ಸಂಪರ್ಕ ಭಾಷೆಯಾಗಿ ಭಾರತೀಯರನ್ನು ಒಂದುಗೂಡಿಸಿರುವುದರಿಂದ ನಾವು ಹಿಂದಿಯನ್ನು ವಿರೋಧಿಸುವುದಿಲ್ಲ; ನಮ್ಮಲ್ಲಿ ನೆಲೆಸಿರುವ ಕನ್ನಡೇತರರು ಕನ್ನಡದ ಬಗ್ಗೆ ತಿರಸ್ಕಾರದಿಂದ ನೋಡುವ, ಕನ್ನಡವನ್ನು ಕಲಿಯದಿರುವ ಬಗ್ಗೆ ಹಾಗೂ ಕನ್ನಡಿಗರಿಗೆ ಕನ್ನಡದಲ್ಲಿ ಸೇವೆ ಸಿಗದಿರುವುದರ ಬಗ್ಗೆ ನಮ್ಮ ವಿರೋಧವಿರುವುದು'' ಎಂದು ನಮ್ಮ ನಿಲುವನ್ನು ಪ್ರದರ್ಶಿಸಿದರೆ ಕನ್ನಡ ವಿರೋಧಿಗಳೆಲ್ಲರೂ ತಬ್ಬಿಬ್ಬಾಗುತ್ತಾರೆ. ನಾವು ಹಿಂದಿಯನ್ನು ದ್ವೇಷಿಸುತ್ತೇವೆ ಎಂದರೆ, ಹಿಂದಿ ಮಾತಾಡುವವರು ಕನ್ನಡವನ್ನು ದ್ವೇಷಿಸಲು ಶುರುಮಾಡುತ್ತಾರೆ. ಆದ್ದರಿಂದ, ಹಿಂದಿಯನ್ನು ನಾವು ಸಂಪರ್ಕ ಭಾಷೆಯಾಗಿ ಸ್ವಾಗತಿಸುತ್ತೇವೆ ಎಂದರೆ, ಇಲ್ಲಿ ವಾಸಿಸುವ ಕನ್ನಡ ಕಲಿಯದ ಜನರಿಗೂ ಹೊರಗಿನವರ ಸಹಾನುಭೂತಿ ಇಲ್ಲದಂತಾಗುತ್ತದೆ ಹಾಗೂ ಕನ್ನಡವನ್ನು ವಿರೋಧಿಸುವುದನ್ನು ಅವರು ಬಿಡಬೇಕಾಗುತ್ತದೆ.

ಒಂದಷ್ಟು ಅಪವಾದಗಳನ್ನು ಹೊರತುಪಡಿಸಿದರೆ, ಪ್ರಸ್ತುತ ಎಲ್ಲ ರಾಜಕೀಯ ಪಕ್ಷಗಳ ಸದಸ್ಯರು ಬಹುತೇಕವಾಗಿ ಇತರ ಪಕ್ಷದಲ್ಲೂ ಹಿಂದೊಮ್ಮೆ ಗುರುತಿಸಿಕೊಂಡಿದ್ದಾರೆ ಹಾಗೂ ಯಾವ ಪಕ್ಷವೂ ಸಿದ್ಧಾಂತದ ಮೇಲೆ ನಡೆಯುತ್ತಿಲ್ಲ. ಅಲ್ಲದೆ ಕನ್ನಡದ ಬಗ್ಗೆ ಅಭಿಮಾನವಿರುವ ಜನರು ಎಲ್ಲ ಪಕ್ಷದಲ್ಲೂ ಇದ್ದಾರೆ. ಹಾಗಾಗಿ ಕನ್ನಡ ಚಳವಳಿಗಾರರು ಒಂದು ಪಕ್ಷದೊಂದಿಗೆ ಗುರುತಿಸಿಕೊಂಡು ಇನ್ನೊಂದನ್ನು ವಿರೋಧಿಸುವುದರಿಂದ, ಕನ್ನಡದ ಕೆಲಸಕ್ಕೆ ಧಕ್ಕೆಯಾಗುತ್ತದೆ. ಆದ್ದರಿಂದ ಯಶಸ್ಸನ್ನು ಪಡೆಯಬೇಕಾದರೆ ಕನ್ನಡ ಚಳವಳಿಗಾರರು ಒಂದು ಲಕ್ಷ್ಯವನ್ನಷ್ಟೇ ಇಟ್ಟುಕೊಂಡು ಹೋರಾಡಬೇಕು. ಅದೇನೆಂದರೆ- ಕರ್ನಾಟಕದಲ್ಲಿ ಕನ್ನಡಕ್ಕೆ ಸಾರ್ವಭೌಮತೆಯನ್ನು ತಂದುಕೊಡುವುದು.

(ಲೇಖಕರು ಇತಿಹಾಸಕಾರರು ಹಾಗೂ ಸಂಶೋಧಕರು)



ನಾರದ ಸಂಚಾರ
ಕಲಹಪ್ರಿಯ
naadigru@gmail.com

ಕುಸಿಯಲೆಂದೇ ಕಟ್ಟಿದ್ದಾ?!

ಬಿಹಾರ ರಾಜ್ಯಕ್ಕೂ ಸೇತುವೆಗಳಿಗೂ ಆಗಿಬರೋದಿಲ್ವಾ?'- ಮಕ್ಕಳು ಆಟವಾಡುವಾಗ ಖಾಲಿ ಸಿಗರೇಟ್ ಪ್ಯಾಕುಗಳಿಂದ ಕಟ್ಟಿದ ಮನೆಗಳನ್ನು ಹಾಗೇ ಸುಮ್ಮನೆ ಮುಟ್ಟಿದರೆ ಸಾಕು 'ತುಪುತುಪು' ಎಂದು ಕೆಳಗೆ ಬೀಳುವ ರೀತಿಯಲ್ಲಿ ಅಲ್ಲಿನ ಸೇತುವೆಗಳು ಕುಸಿಯುತ್ತಿರುವ ಸುದ್ದಿಯನ್ನು ಓದಿದಾಗ ಬಹುತೇಕರಲ್ಲಿ ಇಂಥ ಪ್ರಶ್ನೆ ಹುಟ್ಟಿದ್ದರೆ ಅಚ್ಚರಿಯೇನಿಲ್ಲ. ಇದಕ್ಕೆ ಕಾರಣವಾಗಿರುವುದು, ನಿರ್ಮಾಣ ಹಂತದಲ್ಲಿದ್ದ ಸೇತುವೆಯ ಭಾಗವೊಂದು ಮೊನ್ನೆ ಭಾನುವಾರ ಕುಸಿದು ಬಿದ್ದಿದ್ದು. ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು 2011ರ ಜೂನ್‌ನಲ್ಲಿ ಶಂಕುಸ್ಥಾಪನೆ ಮಾಡಿದ್ದ ಮತ್ತು 'ಭಕ್ತಿಯಾರ್‌ಪುರ-ತಾಜ್‌ಪುರ ಗಂಗಾ ಮಹಾಸೇತು' ಎಂದೇ ಹೆಸರಾಗಿದ್ದ, 5.57 ಕಿ.ಮೀ. ಉದ್ದದ ಈ ಸೇತುವೆಯ ನಿರ್ಮಾಣದ ಒಟ್ಟು ಯೋಜನಾವೆಚ್ಚ ಎಷ್ಟು ಗೊತ್ತೇ, ಬರೋಬ್ಬರಿ 1,602.74 ಕೋಟಿ ರುಪಾಯಿಗಳು!

ಈ ಸೇತುವೆಯ ಭಾಗವೊಂದು ಕುಸಿದ ನಂತರ ಮತ್ತೊಂದು ಸಂಗತಿ ಬಯಲಾಗಿದೆ. ಅದೆಂದರೆ, ಕಳೆದ ಜೂನ್‌ನಿಂದ ಬಿಹಾರದ ಹಲವು ಜಿಲ್ಲೆಗಳಲ್ಲಿ ಹೀಗೆ ಕುಸಿದ ಸೇತುವೆಗಳ ಸಂಖ್ಯೆ 17ಕ್ಕೆ ಏರಿದೆಯಂತೆ! ಕಳೆದ ವಾರ ಮತ್ತೊಂದು ನದಿಸೇತುವೆಯು ಒಂದು ಪಕ್ಕಕ್ಕೆ ವಾಲಿಕೊಂಡಿದ್ದ ಸುದ್ದಿಯನ್ನೂ ನೀವು ಕೇಳಿರಬಹುದು. ಬಿಹಾರದಲ್ಲಿನ ಸೇತುವೆಗಳು ಹೀಗೆ ಸರಣಿಯೋಪಾದಿಯಲ್ಲಿ ಕುಸಿಯುತ್ತಿರುವುದನ್ನು ಕಂಡ 'ಕಿತಾಪತಿ'ವೀರರೊಬ್ಬರು, ''ನಮ್ಮ ನಿತೀಶ್ ಕುಮಾರರು ಪಕ್ಷನಿಷ್ಠೆ ಅಥವಾ ಮೈತ್ರಿಕೂಟ-ನಿಷ್ಠೆಯನ್ನು ಪದೇಪದೆ ಬದಲಿಸುವ ಮೂಲಕ 'ಪಲ್ಟು ರಾಮ್' ಎಂದೇ ಹೆಸರಾಗಿದ್ದಾರೆ; ಹೀಗಾಗಿ ಅವರ ದರ್ಬಾರಿನಲ್ಲಿ ಸೇತುವೆಗಳು ಹೀಗೆ 'ಪಲ್ಟಿ' ಹೊಡೆಯುತ್ತಿರುವುದರಲ್ಲಿ ಅಚ್ಚರಿಯೇನಿಲ್ಲ ಬಿಡಿ. 'ಯಥಾ ರಾಜ್, ತಥಾ ಬ್ರಿಜ್ (Bridge)' ಅನ್ನೋ ಹೊಸ ಜಾಣನುಡಿಯಂತೆ, ಅವೂ ವರ್ತಿಸುತ್ತಿವೆ'' ಎಂದು ಗೇಲಿಮಾಡಿದರಂತೆ.

ಇದನ್ನು ಕೇಳಿಸಿಕೊಂಡ ಆರ್‌ಜೆಡಿ ನಾಯಕ ಮತ್ತು ಬಿಹಾರ ವಿಧಾನಸಭೆ ವಿಪಕ್ಷ ನಾಯಕ ತೇಜಸ್ವಿ ಯಾದವ್ ಅವರು, ''ಎನ್‌ಡಿಎ ಸರಕಾರದ ಅಡಿಪಾಯವು ಕಮಿಷನ್, ಲಂಚ, ಸಾಂಸ್ಥಿಕ ಭ್ರಷ್ಟಾಚಾರ, ಹಣಕಾಸು ಅಕ್ರಮಗಳು, ಸುಲಿಗೆಗಳ ಮೇಲೆ ಆಧರಿತವಾಗಿದೆ ಎಂಬುದನ್ನು ಈ ಘಟನೆ ಸಾಬೀತುಪಡಿಸುತ್ತದೆ'' ಎಂಬುದಾಗಿ 'ಎಕ್ಸ್' (ಟ್ವಿಟರ್) ಮಾಧ್ಯಮದಲ್ಲಿ ಪಕ್ಕವಾದ್ಯ ನುಡಿಸಿದ್ದಾರೆ!

ನೀವೇನೇ ಹೇಳಿ, ಇಂಥ ಘಟನೆಗಳು ಆಗಾಗ ನಡೆಯುತ್ತಿರಬೇಕು, ವಿರೋಧಿಗಳು ಅದಕ್ಕೆ ಟಾಂಗ್ ನೀಡುತ್ತಿರಬೇಕು; ಆಗಲೇ ಗಾಳಿಸುದ್ದಿ ಪ್ರವೀಣ ಮತ್ತು ಕಲಹಪ್ರಿಯ ನಾರದರಿಗೆ ಒಂದಷ್ಟು ವರ್ಕೌಟ್ ಆಗೋದು!!

ನಾರಾಯಣ ನಾರಾಯಣ!

ತಿರುಪತಿಯ ಪವಿತ್ರ ಪ್ರಸಾದ 'ಲಡ್ಡು' ಕಲಬೆರಕೆಯಾಗಿದ್ದರ ಬಗ್ಗೆ ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು ಹೇಳಿಕೆ ನೀಡಿದ್ದೇ ನೀಡಿದ್ದು, ಭಕ್ತಜನರಲ್ಲಿ ಸಾಕಷ್ಟು ಗೊಂದಲ, ಬೇಸರ ಮತ್ತು ಅಸಮಾಧಾನ ಮೂಡಿದ್ದು ನಿಜ. ಮತ್ತೊಂದೆಡೆ, ಗುಣಮಟ್ಟಕ್ಕೆ ಹೆಸರಾದ ಕರ್ನಾಟಕದ 'ನಂದಿನಿ' ತುಪ್ಪದ ಬಗ್ಗೆ ಇಡೀ ದೇಶವೇ ಮಾತಾಡುವಂತಾಗಿದೆ, ಬೇಡಿಕೆಯೂ ಹೆಚ್ಚಾಗಿದೆ ಎಂದಿದ್ದಾರೆ ಕೆಎಂಎಫ್‌ನ ಮಾಜಿ ಅಧ್ಯಕ್ಷರಾದ ಶಾಸಕ ಬಾಲಚಂದ್ರ ಜಾರಕಿಹೊಳಿ ಅವರು. ಹೀಗಾಗಿ ಕೆಎಂಎಫ್‌ನವರು 'ತುಪ್ಪ ಬೇಕಾ ತುಪ್ಪಾ...' ಎಂದು ಹಾಡುತ್ತಾ ಯಾರನ್ನೂ ಕೇಳುವ ಅಗತ್ಯವೇ ಇಲ್ಲ, ಆರ್ಡರ್‌ಗಳು ತಾವಾಗಿಯೇ ಹರಿದುಬರಲಿವೆ ಎನ್ನೋಣವೇ?!

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 140

ಸಮಾಚಾರ ಸಣ್ಣದಲ್ಲ

ಲಂಕಾ ಪ್ರಧಾನಿ ಹರಿಣಿ

ಕೊಲಂಬೊ: ದ್ವೀಪ ರಾಷ್ಟ್ರ ಶ್ರೀಲಂಕಾದಲ್ಲೀಗ ಬದಲಾವಣೆ ಕಾಲ ಶುರುವಾದಂತಿದೆ. ನೂತನ ಅಧ್ಯಕ್ಷರಾಗಿ ಅನುರಾ ಕುಮಾರ ದಿಸ್ಸಾನಾಯಕೆ ಅವರ ಆಯ್ಕೆಯಾದ ಬಳಿಕ ನೂತನ ಪ್ರಧಾನಿಯಾಗಿ

ಹರಿಣಿ ಅಮರಸೂರಿಯಾ ಮಂಗಳವಾರ ಅಧಿಕಾರ ಸ್ವೀಕರಿಸಿದರು. ಲಂಕಾದ 16ನೇ ಪ್ರಧಾನ ಮಂತ್ರಿಯಾಗಿರುವ ಹರಿಣಿ, ಈ ಹುದ್ದೆ ಅಲಂಕರಿಸಿದ 3ನೇ ಮಹಿಳೆಯಾಗಿದ್ದಾರೆ. ವಿಶ್ವವಿದ್ಯಾಲಯದ ನಿವೃತ್ತ ಉಪನ್ಯಾಸಕಿ ಹರಿಣಿ, ಕಾನೂನು, ಕಾರ್ಖಾನೆ, ವಿಜ್ಞಾನ-ತಂತ್ರಜ್ಞಾನ, ಆರೋಗ್ಯ ಮತ್ತು ಬಂಡವಾಳ ಹೂಡಿಕೆ ಖಾತೆಗಳನ್ನೂ ನಿರ್ವಹಿಸಲಿದ್ದಾರೆ. ಅಧ್ಯಕ್ಷ ಅನುರಾ ಮತ್ತು ಹರಿಣಿ ಇಬ್ಬರೂ ನ್ಯಾಷನಲ್ ಪೀಪಲ್ಸ್ ಪವರ್(ಎನ್‌ಪಿಪಿ) ಒಕ್ಕೂಟದ ನಾಯಕರು. ಈ ಮಧ್ಯೆ, ಕೆಲ ತಿಂಗಳಲ್ಲೇ ಸಂಸತ್ ವಿಸರ್ಜಿಸಿ, ಚುನಾವಣೆ ನಡೆಸಲು ಅಧ್ಯಕ್ಷ ದಿಸ್ಸಾನಾಯಕೆ ಸಿದ್ಧತೆ ನಡೆಸಿದ್ದಾರೆ ಎಂದು ತಿಳಿದು ಬಂದಿದೆ.

ತ್ರಿಪುರಾ: ಶಸ್ತ್ರಾಸ್ತ್ರ ತ್ಯಜಿಸಿ 500 ಉಗ್ರರು ಶರಣು

ಅಗರ್ತಲಾ: ತ್ರಿಪುರಾದಲ್ಲಿನ ನಿಷೇಧಿತ ಉಗ್ರಗಾಮಿ ಸಂಘಟನೆಗಳಾದ ನ್ಯಾಷನಲ್ ಲಿಬರೇಶನ್ ಫ್ರಂಟ್ ಆಫ್ ತ್ರಿಪುರಾ(ಎನ್‌ಎಲ್‌ಎಫ್‌ಟಿ) ಮತ್ತು ಆಲ್ ತ್ರಿಪುರಾ ಟೈಗರ್ ಫೋರ್ಸ್(ಎಟಿಟಿಎಫ್)ಗೆ ಸೇರಿದ 500 ಉಗ್ರರು ಸೆಪಹಿಜಾಲಾ ಜಿಲ್ಲೆಯಲ್ಲಿ ಮುಖ್ಯಮಂತ್ರಿ ಮಾಣಿಕ್ ಸಹಾ ಎದುರು ಮಂಗಳವಾರ ಶಸ್ತ್ರಾಸ್ತ್ರ ತ್ಯಜಿಸಿ ಶರಣಾಗಿದ್ದಾರೆ. ಶರಣಾಗತರ ಪುನರ್ವಸತಿಗಾಗಿ ಕೇಂದ್ರ ಸರಕಾರ 250 ಕೋಟಿ ರು. ಪ್ಯಾಕೇಜ್ ಘೋಷಿಸಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಸಮ್ಮುಖ ಕೇಂದ್ರ-ರಾಜ್ಯ ಸರಕಾರಗಳ ಜತೆ ಶರಣಾಗತಿ ಒಪ್ಪಂದಕ್ಕೆ ಎರಡೂ ಸಂಘಟನೆಗಳವರು ಸೆ.4ರಂದು ದೆಹಲಿಯಲ್ಲಿ ಸಹಿ ಹಾಕಿದ್ದರು. 500 ಉಗ್ರರು ಜಂಪೂಯಿಜಾಲಾದಲ್ಲಿರುವ ತ್ರಿಪುರಾ ಸ್ಟೇಟ್ ರೈಫಲ್ಸ್(ಟಿಎಸ್‌ಆರ್)ನ 7ನೇ ಬೆಟಾಲಿಯನ್ ಪ್ರಧಾನ ಕಚೇರಿಯಲ್ಲಿ ಶಸ್ತ್ರಾಸ್ತ್ರ ಕೆಳಗಿಟ್ಟು ಶರಣಾದರು. ಶಾಶ್ವತ ಶಾಂತಿಗೆ ದಾರಿ ಮಾಡಲು 2 ಸಂಘಟನೆಗಳವರೂ ಶಸ್ತ್ರ ತ್ಯಜಿಸಿದ್ದಾರೆಂದು ಗೃಹ ಇಲಾಖೆ ಸುದ್ದಿಗಾರರಿಗೆ ತಿಳಿಸಿದೆ.

ವೈಎಸ್‌ಆರ್ ಸಂಸದ ಕೃಷ್ಣಯ್ಯ ರಾಜೀನಾಮೆ

ದೆಹಲಿ: ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ರಾಜ್ಯಸಭಾ ಸದಸ್ಯ ಆರ್.ಕೃಷ್ಣಯ್ಯ ಮಂಗಳವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಆಂಧ್ರಪ್ರದೇಶ ವಿಧಾನ



ಸಭಾ ಚುನಾವಣೆಯಲ್ಲಿ ವೈಎಸ್‌ಆರ್‌ಸಿಪಿ ಹೀನಾಯ ಸೋಲು ಕಂಡ ಬಳಿಕ ಪಕ್ಷಾಂತರ ಪರ್ವ ಆರಂಭವಾಗಿದೆ. ಈವರೆಗೆ ಮೂವರು ರಾಜ್ಯಸಭಾ ಸದಸ್ಯರು ರಾಜೀನಾಮೆ ನೀಡಿ ಪಕ್ಷ ತೊರೆದಿದ್ದಾರೆ. ರಾಜ್ಯಸಭೆ ಸಭಾಪತಿ ಜಗದೀಪ್ ಧನಕರ್, ಕೃಷ್ಣಯ್ಯ ಅವರ ರಾಜೀನಾಮೆ ಅಂಗೀಕರಿಸಿದ್ದಾರೆ. ಸದ್ಯದಲ್ಲೇ ಕೃಷ್ಣಯ್ಯ ಬಿಜೆಪಿ ಸೇರಲಿದ್ದಾರೆ ಎನ್ನಲಾಗಿದೆ.

ದೇಶದ ನೂತನ ವಿತ್ತ ಸಚಿವ ಆಂಟೋನಿಯಿನ್ ಅರ್ಮಾಂಡ್ ಕಳವಳ | ದೇಶದ ಬಜೆಟರಿ ಪರಿಸ್ಥಿತಿ ಬಹಳ ಗಂಭೀರವಾಗಿದೆ: ಪ್ರಧಾನಿ ಬಾರ್ನಿಯರ್

ಅತಿಕೆಟ್ಟ ಆರ್ಥಿಕ ಸ್ಥಿತಿಯಲ್ಲಿ ರಫೇಲ್ ದೇಶ ಫ್ರಾನ್ಸ್

ಪ್ಯಾರಿಸ್: ಯೂರೋಪ್ ಒಕ್ಕೂಟದ ಭಾಗವಾಗಿರುವ ಫ್ರಾನ್ಸ್, ಸದ್ಯ ತೀವ್ರ ಸ್ವರೂಪದ ಆರ್ಥಿಕ ಸಂಕಷ್ಟಕ್ಕೆ ತುತ್ತಾಗಿ ಪರಿತಪಿಸುತ್ತಿದೆ.

ಸಾಲದ ಹೊರೆ ಅತೀವವಾಗಿದೆ. ಸರಕಾರದ ಆಡಳಿತ ವೆಚ್ಚವೂ ಯೂರೋಪ್ ಒಕ್ಕೂಟ ನಿಗದಿಪಡಿಸಿದ್ದ ಮಿತಿಯನ್ನೂ ಮೀರಿ ಬೆಳೆಯುತ್ತಿದೆ. ದೇಶದ ಒಟ್ಟಾರೆ ಆಂತರಿಕ ಉತ್ಪನ್ನ(ಜಿಡಿಪಿ)ಕ್ಕಿಂತಲೂ ಆಡಳಿತ ವೆಚ್ಚ ಅತ್ಯಧಿಕ ಪ್ರಮಾಣದ್ದಾಗಿದೆ. ಈ ಸಾಲ-ಮಿತಿ ಮೀರಿದ ವೆಚ್ಚದ ಸುಳಿಯಿಂದ ಪಾರಾಗುವುದು ಹೇಗೆ ಎಂಬ ಚಿಂತೆಯಲ್ಲಿ ಫ್ರೆಂಚರ ದೇಶ ಬಳಲುತ್ತಿದೆ.

ದೇಶದ ಬಜೆಟರಿ ಪರಿಸ್ಥಿತಿ ಬಹಳ ಗಂಭೀರವಾಗಿದೆ ಎಂದು ನೂತನ ಪ್ರಧಾನಿ ಮೈಕೆಲ್ ಬಾರ್ನಿಯರ್ ಆತಂಕ ಹೊರಹಾಕಿದ್ದರೆ, ನೂತನ ವಿತ್ತ ಸಚಿವ ಆಂಟೋನಿಯಿನ್ ಅರ್ಮಾಂಡ್, ಹಳಿ ತಪ್ಪಿರುವ ಅರ್ಥ ವ್ಯವಸ್ಥೆಯನ್ನು ಮರಳಿ ದಾರಿಗೆ ತರುವುದೇ ದೊಡ್ಡ ಸವಾಲಾಗಿದೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

ದೇಶದ ಆಡಳಿತ ಮತ್ತು ನಿರ್ವಹಣಾ ವೆಚ್ಚಗಳ ಲೆಕ್ಕಪತ್ರಗಳಿಗೆ ಸಂಬಂಧಿಸಿದ ಉನ್ನತ ಸಂಸ್ಥೆಯಾದ 'ಕೋರ್ಟ್ ಆಫ್ ಆಡಿಟರ್ಸ್'ನ ಮುಖ್ಯಸ್ಥರು ಫ್ರಾನ್ಸ್ ಸಂಸತ್ತಿಗೆ ಲೆಕ್ಕಪತ್ರಗಳ ವಿವರ ಸಲ್ಲಿಸಿದಾಗಲೇ ಫ್ರಾನ್ಸ್ ಆಡಳಿತಗಾರರಿಗೆ ಪರಿಸ್ಥಿತಿಯ ಗಂಭೀರತೆ ಅರಿವಾಗಿದ್ದು. ಪ್ರಧಾನಿ ಮೈಕೆಲ್ ಬಾರ್ನಿಯರ್ ನೇತೃತ್ವದ ಹೊಸ ಸರಕಾರ ಮುಂಬರುವ ತಿಂಗಳುಗಳಲ್ಲಿ ಹೊಸ ಬಗೆಯ ಸಂಸದೀಯ ಸವಾಲುಗಳನ್ನು ಎದುರಿಸಬೇಕಾಗಿ ಬಂದಿದೆ.

ಹೊರಲಾಗದಷ್ಟಿದೆ ಸಾಲದ ಹೊರೆ!

ಭಾರತಕ್ಕೆ ರಫೇಲ್ ಯುದ್ಧ ವಿಮಾನಗಳನ್ನು ಮಾರಾಟ ಮಾಡಿದ್ದ ಫ್ರಾನ್ಸ್, ತಾಂತ್ರಿಕವಾಗಿ ಬಲಿಷ್ಠ ದೇಶ. ಈ ವರ್ಷ ಕೂಡಾ ಭಾರತದ ನೌಕಾಪಡೆಗಾಗಿ 26 ರಫೇಲ್ ಯುದ್ಧ ವಿಮಾನಗಳನ್ನು ಮಾರಾಟ ಮಾಡುವ 50 ಸಾವಿರ ಕೋಟಿ ರು. ಮೊತ್ತದ ಒಪ್ಪಂದವನ್ನೂ ಫ್ರಾನ್ಸ್ ಮಾಡಿಕೊಂಡಿದೆ. ಹಾಗಿದ್ದೂ ಫ್ರಾನ್ಸ್‌ನ ಸಾಲದ ಹೊರೆ ಅದಕ್ಕೆ ಅತಿಭಾರವಾಗಿದೆ. ಸದ್ಯದ ಫ್ರಾನ್ಸ್‌ನ ಸಾಲ ಮೊತ್ತ 3 ಲಕ್ಷ ಕೋಟಿ 'ಯೂರೋ'(280 ಲಕ್ಷ ಕೋಟಿ ರು.) ಗಳಷ್ಟಿದೆ. ಅಂದರೆ, ದೇಶದ ಜಿಡಿಪಿಗಿಂತಲೂ ಶೇ.110ರಷ್ಟು ಹೆಚ್ಚಿನ ಪ್ರಮಾಣದ್ದಾಗಿದೆ. ಸಾಲ ಪ್ರಮಾಣದಲ್ಲಿ ಫ್ರಾನ್ಸ್ ದೇಶ, ನೆರೆಹೊರೆಯ ಗ್ರೀಸ್ ಮತ್ತು ಇಟಲಿ ದೇಶಗಳ ನಂತರದ ಸ್ಥಾನದಲ್ಲಿದೆ. ಐಫೆಲ್ ಟವರ್ ದೇಶ, ಯೂರೋಪ್ ಒಕ್ಕೂಟದಲ್ಲೇ ದೊಡ್ಡ ಸಾಲ ದೇಶಗಳಲ್ಲಿ 3ನೇ ಸ್ಥಾನದಲ್ಲಿದೆ.

ಅಲ್ಲದೇ, ಸಾಲದ ಬಡ್ಡಿ ಕಟ್ಟುವುದಕ್ಕೇ ವರ್ಷಕ್ಕೆ 8000 ಕೋಟಿ 'ಯೂರೋ'(7.46 ಲಕ್ಷ ಕೋಟಿ ರು.)ಗಳನ್ನು ಫ್ರಾನ್ಸ್ ಸರಕಾರ ವ್ಯಯಿಸುತ್ತಿದೆ.

ದೇಶದ ವಿತ್ತೀಯ ಕೊರತೆಯಂತೂ 15,400 ಕೋಟಿ ಯೂರೋ(14.36 ಲಕ್ಷ ಕೋಟಿ ರು.)ಗಳಷ್ಟಿದೆ. ಅಂದರೆ, ದೇಶದ ಆರ್ಥಿಕ ಉತ್ಪಾದನೆಯ ಶೇ.5.5ರಷ್ಟು ಪ್ರಮಾಣದ ವಿತ್ತೀಯ ಕೊರತೆಯಲ್ಲಿ ಫ್ರಾನ್ಸ್ ಇದೆ. ಯೂರೋಪ್ ಒಕ್ಕೂಟ ನಿಗದಿಪಡಿಸಿರುವ ಶೇ.3ರ ಮಿತಿಯನ್ನು ಮೀರಿದಂತಾಗಿದೆ.

ಪಾರಾಗುವುದು ಹೇಗೆ?: ಪ್ರಧಾನಿ ಚಿಂತೆ

ಅಧ್ಯಕ್ಷ ಎಮ್ಯಾನ್ಯುವಲ್ ಮ್ಯಾಕ್ರಾನ್‌ರಿಂದ ನೂತನ ಪ್ರಧಾನಿಯಾಗಿ ಸೆಪ್ಟೆಂಬರ್‌ನಲ್ಲಷ್ಟೇ ನೇಮಕಗೊಂಡಿರುವ ಮೈಕೆಲ್ ಬಾರ್ನಿಯರ್‌ಗೆ ಆರಂಭದಲ್ಲೇ ಗಂಟಲಿ ತುತ್ತು ಸಿಕ್ಕಿಕೊಂಡಂತಾಗಿದೆ. 'ಸದ್ಯ ದೇಶದ ಬಜೆಟರಿ ಪರಿಸ್ಥಿತಿ ಬಹಳ ಗಂಭೀರವಾಗಿದೆ ಎಂಬುದು ಸತ್ಯ. ಮೊದಲಿಗೆ ಅದರಿಂದ ಬಚಾವಾಗುವುದು ಹೇಗೆ? ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ಸದ್ಯ ಚಿಂತಿಸುತ್ತಿರುವೆ ಎಂದು ಬಾರ್ನಿಯರ್ ಹೇಳಿದ್ದಾರೆ.

ಮರಳಿ ಹಳಿಗೆ ತರಲು ಯತ್ನ: ವಿತ್ತ ಸಚಿವ

ಫ್ರಾನ್ಸ್‌ನ ನೂತನ ಹಣಕಾಸು ಸಚಿವ ಆಂಟೊ ಯಿನ್ ಅರ್ಮಾಂಡ್ ದೇಶ ಇತಿಹಾ ಸದಲ್ಲೇ ಅತ್ಯಂತ ಕೆಟ್ಟ ಆರ್ಥಿಕ ಕೊರತೆ ಎದುರಿಸುತ್ತಿದೆ ಎಂದು ಕಳವಳ

ವ್ಯಕ್ತಪಡಿಸಿದ್ದಾರೆ.

ಇದೇ ವೇಳೆ, ಸಂಪದ್ಭರಿತ ದೇಶವಾಗಿದ್ದ ಫ್ರಾನ್ಸ್ ಆರ್ಥಿಕತೆಯನ್ನು ಮೊದಲಿನ ಸುಭದ್ರ ಸ್ಥಿತಿಗೆ ಮರಳಿ ತರುವುದಕ್ಕೆ ಎಲ್ಲಾ ರೀತಿಯ ಪ್ರಯತ್ನಗಳನ್ನೂ ಮಾಡಲಾಗುವುದು ಎಂದು ಸಚಿವ ಆಂಟೊಯಿನ್ ಭರವಸೆಯ ಮಾತನಾಡಿದ್ದಾರೆ.

ಇದಾಗಬೇಕೆಂದರೆ ಮೊದಲಿಗೆ 11000 ಕೋಟಿ 'ಯೂರೋ'ಗಳಷ್ಟು(ಭಾರತದ ಕರೆನ್ಸಿ ಲೆಕ್ಕದಲ್ಲಿ 10.26 ಲಕ್ಷ ಕೋಟಿ ರು.) ಬೃಹತ್ ಮೊತ್ತವು ದೇಶದ ಉಳಿತಾಯ ಖಾತೆಯಲ್ಲಿರುವಂತೆ ನೋಡಿಕೊಳ್ಳಬೇಕಿದೆ. ಯೂರೋಪ್ ಒಕ್ಕೂಟ ಮತ್ತು ಬೃಹತ್ ಸರಕಾರಿ ಸಂಸ್ಥೆಗಳನ್ನು ಒಳಗೊಂಡಂತೆ ಆರ್ಥಿಕತೆಗೆ ಸಂಬಂಧಪಟ್ಟ ಮೇಲಧಿಕಾರಿಗಳ ಜತೆಗೆ ಸಮಾಲೋಚನೆ ನಡೆಸುವುದಾಗಿ ಆಂಟೊಯಿನ್ ಹೇಳಿದ್ದಾರೆ. ಸರಕಾರದ ವೆಚ್ಚ ಒಟ್ಟಾರೆ ರಾಷ್ಟ್ರೀಯ ಉತ್ಪಾದನೆ (ಜಿಡಿಪಿ)ಯ ಶೇ.5.6ರಷ್ಟು ಅಥವಾ ಅದಕ್ಕಿಂತಲೂ ಹೆಚ್ಚು ಇದೆ. ಅದು ಯುರೋಪ್ ಒಕ್ಕೂಟದಲ್ಲಿನ ಮಾರ್ಗಸೂಚಿ ಮಿತಿಗಿಂತಲೂ ಎರಡು ಪಟ್ಟು ಹೆಚ್ಚಿನದಾಗಿದೆ. ಸದ್ಯದ ಆಡಳಿತದಲ್ಲಿ ಮಿತಿ ಮೀರಿರುವ ಕೆಲವು ವೆಚ್ಚಗಳನ್ನು ತಗ್ಗಿಸುವ ಪ್ರಯತ್ನಕ್ಕೆ ಸಚಿವರ ಯತ್ನಿಸಲಿದ್ದಾರೆ. ಆ ಮೂಲಕ ಹಳಿತಪ್ಪುತ್ತಿರುವ ದೇಶದ ಆರ್ಥಿಕ ವ್ಯವಸ್ಥೆಯನ್ನು ಮರಳಿ ಹಳಿಗೆ ತರಲು ಶ್ರಮಿಸಲಿದ್ದಾರೆ ಎನ್ನಲಾಗಿದೆ.

ಅಲ್ಲದೇ, ದೇಶದಲ್ಲಿನ ದೊಡ್ಡ ಉದ್ಯಮಿಗಳು, ಸಿರಿವಂತರಿಗೆ ಹೆಚ್ಚಿನ ಪ್ರಮಾಣದ ತೆರಿಗೆ ವಿಧಿಸುವ ಸಾಧ್ಯತೆಗಳಿವೆ ಎಂಬ ಸುಳಿವನ್ನೂ ಹೊಸ ವಿತ್ತ ಸಚಿವರು ನೀಡಿದ್ದಾರೆ. ಕಳೆದ 50 ವರ್ಷಗಳಲ್ಲಿ ಆರ್ಥಿಕ ಬಿಕ್ಕಟ್ಟಿನ ಒಂದೆರಡು ಸಂದರ್ಭಗಳನ್ನು ಹೊರತುಪಡಿಸಿ ಫ್ರಾನ್ಸ್ ಆರ್ಥಿಕವಾಗಿ ಸುಭದ್ರವಾಗಿತ್ತು. ಆದರೆ, ಈಗಿನ ಸ್ಥಿತಿ ಇತಿಹಾಸದಲ್ಲಿ ಅತ್ಯಂತ ಕೆಟ್ಟ ಪರಿಸ್ಥಿತಿಯದ್ದಾಗಿದೆ ಎಂದು ಸಚಿವರು ಸರಕಾರಿ ವಾರ್ತಾ ಪ್ರಸಾರ ಸಂಸ್ಥೆಗೆ ಮಾಹಿತಿ ನೀಡಿದ್ದಾರೆ.

ಉದಯನಿಧಿ ಡಿಸಿಎಂ: ಸಿಎಂ ಸ್ಟಾಲಿನ್ ಸುಳಿವು

ಚೆನ್ನೈ: ಯುವಜನ ಕಲ್ಯಾಣ ಮತ್ತು ಕ್ರೀಡಾ ಅಭಿವೃದ್ಧಿ ಸಚಿವ ಉದಯನಿಧಿ ಸ್ಟಾಲಿನ್ ಸದ್ಯದಲ್ಲೇ ತಮಿಳುನಾಡು ಉಪ ಮುಖ್ಯಮಂತ್ರಿ(ಡಿಸಿಎಂ) ಆಗಲಿದ್ದಾರೆಯೇ? ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಈ ಬಗ್ಗೆ ಮಂಗಳವಾರ ಸುಳಿವು ನೀಡಿದ್ದಾರೆ. ಸ್ವಂತದ ವಿಧಾನಸಭಾ ಕ್ಷೇತ್ರ ಕೊಳತ್ತೂರಿಗೆ ಭೇಟಿ

- ಮೊದಲು ದೆಹಲಿ ಭೇಟಿ, ಬಳಿಕ ಸಂಪುಟ ಪುನಾರಚನೆ ಸಾಧ್ಯತೆ
- ಡಿಸಿಎಂ ನೇಮಕ ವಿಚಾರವಾಗಿ ಪಕ್ಷದ ಹಿರಿಯರ ಜತೆ ಚರ್ಚೆ

ನೀಡಿದ್ದಾಗ ಭೇಟಿ ಯಾದ ಸುದ್ದಿಗಾರರು, ಸಚಿವ ಸಂಪುಟ ಪುನಾರಚನೆ ಮತ್ತು ಉದಯನಿಧಿ ಅವರನ್ನು ಡಿಸಿಎಂ ಮಾಡುವ ಸಾಧ್ಯತೆ ಕುರಿತು ಕೇಳಿದ ಪ್ರಶ್ನೆಗೆ ಸಿಎಂ ಸ್ಟಾಲಿನ್, 'ಉದಯನಿಧಿ ಅವರಿಗೆ ನಿರಾಶೆ ಆಗದು. ಈ ವಿಚಾರದಲ್ಲಿ ಬೇಡಿಕೆ ಜೋರಾಗಿದೆ. ಆದರೆ ಅದಕ್ಕಿನ್ನೂ ಸಮಯ ಪಕ್ವವಾಗಿಲ್ಲ. ಸಂಪುಟದಲ್ಲಿ ಬದಲಾವಣೆ ಆಗಲಿದೆ' ಎಂದು ಉತ್ತರಿಸಿದ್ದಾರೆ.

ಸಿಎಂ ಸ್ಟಾಲಿನ್ ಇತ್ತೀಚೆಗೆ ಪಕ್ಷದ ಉಪ ಪ್ರಧಾನ ಕಾರ್ಯದರ್ಶಿ ಎ.ರಾಜಾ, ಖಜಾಂಚಿ ಡಿ.ಆರ್.ಬಾಲು, ಸಂಘಟನಾ ಕಾರ್ಯದರ್ಶಿ ಆರ್.ಎಸ್. ಭಾರತಿ, ಸಂಸದ ತಿರುಚ್ಚಿ ಶಿವ ಜತೆ ಪುತ್ರ ಉದಯನಿಧಿಯನ್ನು ಡಿಸಿಎಂ ಮಾಡುವ ಬಗ್ಗೆ ಚರ್ಚಿಸಿದ್ದರು. ನಾಯಕರೂ ಸಮ್ಮತಿ ಸೂಚಿಸಿದ್ದರು. ಸಿಎಂ ದೆಹಲಿ ಭೇಟಿ ನಿಗದಿಯಾಗಿದ್ದು, ನಂತರದಲ್ಲಿ ಡಿಸಿಎಂ ಘೋಷಣೆ ಆಗಬಹುದು ಎನ್ನಲಾಗಿದೆ.

ಪ್ರತಿಪಕ್ಷ ಟೀಕೆ: ವಂಶಪಾರಂಪರ್ಯ ರಾಜಕಾರಣ ಮಾಡಲು ತಮ್ಮ ಪಕ್ಷವೇನೂ ಶಂಕರಮಠ ಅಲ್ಲ ಎಂದು ಡಿಎಂಕೆ ಹಿರಿಯ ನಾಯಕ ಎಂ. ಕರುಣಾನಿಧಿ ಹಿಂದೊಮ್ಮೆ ಕಿಡಿಕಾರಿದ್ದರು. ಬಳಿಕ ಅವರೇ ಪುತ್ರ ಎಂ. ಕೆ.ಸ್ಟಾಲಿನ್‌ಗೆ ಪಕ್ಷದಲ್ಲಿ ದೊಡ್ಡ ಹುದ್ದೆ ನೀಡಿದರು. ಈಗ ಉದಯನಿಧಿ ಡಿಸಿಎಂ ವಿಚಾರ ಚರ್ಚೆಯಾಗುತ್ತಿದೆ. ಇತಿಹಾಸ ಮರುಕಳಿಸಲಿದೆ ಎಂದು ಎಐಎಡಿಎಂಕೆ ಸಂಘಟನಾ ಕಾರ್ಯದರ್ಶಿ ಡಿ.ಜಯಕುಮಾರ್ ಟೀಕಿಸಿದ್ದಾರೆ.

ಮೂರೂವರೆ ಗಂಟೆಗಳ ವಿಚಾರಣೆ

ನಟ, ಶಾಸಕ ಮುಖೇಶ್ ಬಂಧನ-ಬಿಡುಗಡೆ

ತಿರುವನಂತಪುರಂ: ನಟಿಯೊಬ್ಬರ ಮೇಲೆ ಅತ್ಯಾಚಾರ ಎಸಗಿದ ಆರೋಪದ ಮೇಲೆ ಆಡಳಿತಾರೂಢ ಪಕ್ಷವಾದ ಸಿಪಿಐ-ಎಂನ ನಾಯಕ, ಕೊಲ್ಲಂ ಕ್ಷೇತ್ರದ ಶಾಸಕರೂ ಆಗಿರುವ ಹಿರಿಯ ಚಿತ್ರನಟ ಮುಖೇಶ್ ಬಂಧನವಾಗಿದೆ. ಆದರೆ ನಂತರದ ಕೆಲ ಗಂಟೆಗಳಲ್ಲೇ ಜಾಮೀನು ಮೇಲೆ ನಟ ಬಿಡುಗಡೆಗೊಂಡರು.

ಮುಖೇಶ್ ವಿರುದ್ಧ ವಡಕ್ಕಂಚೇರಿ ಪೊಲೀಸ್ ಠಾಣೆ ಮತ್ತು ಮರಡು ಪೊಲೀಸ್ ಠಾಣೆಯಲ್ಲಿ 2 ಪ್ರಕರಣ ದಾಖಲಾಗಿವೆ. ಕಾಲಿವುಡ್ ಕಲಾವಿದೆಯರು, ಮಹಿಳಾ ಸಿಬ್ಬಂದಿಗಳ ಲೈಂಗಿಕ ದೌರ್ಜನ್ಯ-ತಾರತಮ್ಯ ಪ್ರಕರಣಗಳ ಕುರಿತು ತನಿಖೆ ನಡೆಸಿದ ನ್ಯಾ.ಹೇಮಾ ಸಮಿತಿ ಸರಕಾರಕ್ಕೆ ಸಲ್ಲಿಸಿದ ವರದಿ ಆಧರಿಸಿ ಸಮಗ್ರ ತನಿಖೆಗೆ ರಾಜ್ಯ ಸರಕಾರ ರಚಿಸಿದ 'ವಿಶೇಷ ತನಿಖಾ ದಳ'(ಎಸ್‌ಐಟಿ) ಪೊಲೀಸರು ಮುಕೇಶ್‌ರನ್ನು ಬಂಧಿಸಿದ್ದರು. ಮಂಗಳವಾರ ಬೆಳಗ್ಗೆ 9.45ರಿಂದ ಕರಾವಳಿ ಪೊಲೀಸ್ ಪ್ರಧಾನ ಕಚೇರಿಯಲ್ಲಿರುವ ಎಸ್‌ಐಟಿ ವಿಭಾಗದಲ್ಲಿ ಆರೋಪಿ ಮುಕೇಶ್ ವಿಚಾರಣೆ ಮೂರೂವರೆ ಗಂಟೆ ನಡೆಸಲಾಗಿದೆ. ಇದೇ ವೇಳೆ ಆರೋಪಿಯ ವೈದ್ಯಕೀಯ ತಪಾಸಣೆ ಮತ್ತು ಪುರುಷತ್ವ ಪರೀಕ್ಷೆಯನ್ನೂ ಪೂರ್ಣಗೊಳಿಸಲಾಗಿದೆ. ನಂತರದ ಕೆಲ ಗಂಟೆಗಳಲ್ಲೇ ವಕೀಲರು ಕೋರ್ಟ್‌ನಿಂದ ಜಾಮೀನು ಆದೇಶ ತಂದು ನಟ ಮುಕೇಶ್‌ರ ಬಿಡುಗಡೆಗೊಳಿಸಿ ಕರೆದೊಯ್ದರು.

ಸಿದ್ದಿಕಿ ಜಾಮೀನು ಅರ್ಜಿ ವಜಾ

ಇನ್ನೊಂದೆಡೆ ಇದೇ ಪ್ರಕರಣಗಳಲ್ಲಿ ಆರೋಪ ಹೊತ್ತಿರುವ ಚಿತ್ರರಂಗದ 'ಅಮ್ಮ' ಸಂಘಟನೆಯ ಮಾಜಿ ಪ್ರಧಾನ ಕಾರ್ಯದರ್ಶಿ, ಚಿತ್ರನಟ ಸಿದ್ದಿಕಿ ನಿರೀಕ್ಷಣಾ ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಕೇರಳ ಹೈಕೋರ್ಟ್ ಮಂಗಳವಾರ ವಜಾಗೊಳಿಸಿದೆ. ಸಿದ್ದಿಕಿಗೆ ಬಂಧನ ಭೀತಿ ಎದುರಾಗಿದೆ. ಮಲಯಾಳಂ ಚಿತ್ರರಂಗದ ಮಾಜಿ ನಟಿಯೊಬ್ಬರು ಮುಕೇಶ್ ವಿರುದ್ಧ ಅತ್ಯಾಚಾರ ಆರೋಪ ಮಾಡಿದ್ದರು. 2010ರಲ್ಲಿ ತನ್ನ ಮೇಲೆ ಕೊಚ್ಚಿಯ ಫ್ಲಾಟ್‌ವೊಂದರಲ್ಲಿ ಲೈಂಗಿನ ದೌರ್ಜನ್ಯ ನಡೆಸಿದ್ದರು ಎಂದು ಪೊಲೀಸರಿಗೆ ದೂರು ನೀಡಿದ್ದರು.

ಶಿವಮೊಗ್ಗದಲ್ಲಿ ಐಸಿಸ್ ಉಗ್ರ ಕೃತ್ಯಕ್ಕೆ ಸಂಚು

ಮತ್ತಿಬ್ಬರು ಉಗ್ರರ ಮೇಲೆ ಎನ್‌ಐಎ ದೋಷಾರೋಪ

ದೆಹಲಿ: ಶಿವಮೊಗ್ಗದಲ್ಲಿ ಐಎಸ್‌ಐಎಸ್ ಉಗ್ರರ ಸಂಚು ಪ್ರಕರಣದಲ್ಲಿ 'ರಾಷ್ಟ್ರೀಯ ತನಿಖಾ ಸಂಸ್ಥೆ'(ಎನ್‌ಐಎ) ಮತ್ತಿಬ್ಬರು ಆರೋಪಿಗಳ ಮೇಲೆ ಮಂಗಳವಾರ ದೋಷಾರೋಪ ಪಟ್ಟಿ ಸಲ್ಲಿಸಿದೆ. ಇದರೊಂದಿಗೆ ಪ್ರಕರಣದಲ್ಲಿನ ಒಟ್ಟು ಆರೋಪಿಗಳ ಸಂಖ್ಯೆ 10ಕ್ಕೆ ಏರಿಕೆಯಾಗಿದೆ.

ಬೆಂಗಳೂರಿನ ರಾಮೇಶ್ವರಂ ಕೆಫೆ ಸ್ಫೋಟ ಪ್ರಕರಣದಲ್ಲಿ ಭಾಗಿಯಾದವರೇ ಶಿವಮೊಗ್ಗದಲ್ಲಿನ ಐಸಸ್ ಉಗ್ರ ಚಟುವಟಿಕೆಗಳಲ್ಲೂ ಭಾಗಿಯಾಗಿದ್ದಾರೆ ಎಂದು ಬೆಂಗಳೂರಿನ ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಲಾದ ದೋಷಾರೋಪ ಪಟ್ಟಿಯಲ್ಲಿ ವಿವರಿಸಲಾಗಿದೆ. ಶಿವಮೊಗ್ಗ ಉಗ್ರ ಕೃತ್ಯ ಸಂಚು ಪ್ರಕರಣದಲ್ಲಿ ಇದು 3ನೇ ಹೆಚ್ಚುವರಿ ಚಾರ್ಜ್‌ಶೀಟ್ ಆಗಿದೆ.ಐಸಸ್ ಸಂಘಟನೆಯ ಉಗ್ರರಾದ ಅಬ್ದುಲ್ ಮತೀನ್ ಅಹ್ಮದ್ ತಾಹ ಅಲಿಯಾಸ್ ತಾಹ ಮತ್ತು ಮುಸಾವಿರ್ ಹುಸೇನ್ ಶಾಜಿಬ್ ಅಲಿಯಾಸ್ ಶಾಜಿಬ್ ಶಿವಮೊಗ್ಗ ಪ್ರಕರಣಕ್ಕೆ ಹೊಸದಾಗಿ ಸೇರ್ಪಡೆಯಾದ ಆರೋಪಿಗಳಾಗಿದ್ದಾರೆ. ಇಬ್ಬರ ಹೆಸರನ್ನು ಬೆಂಗಳೂರಿನಲ್ಲಿ ನಡೆದ ರಾಮೇಶ್ವರಂ ಕೆಫೆ ಸ್ಫೋಟ ಪ್ರಕರಣದಲ್ಲಿಯೂ ಎನ್‌ಐಎ ಚಾರ್ಜ್‌ಶೀಟ್‌ನಲ್ಲಿ ಉಲ್ಲೇಖಿಸಿದೆ ಎಂದು ಹೇಳಲಾಗಿದೆ. ತಾಹ ಹಾಗೂ ಶಾಜಿಬ್ 2020ರಿಂದಲೇ ನಾಪತ್ತೆಯಾಗಿದ್ದು ಅನೇಕ ಉಗ್ರ ಚಟುವಟಿಕೆಯಲ್ಲಿ ಭಾಗಿಯಾಗಿದ್ದರು. ಈ ಇಬ್ಬರೂ ಆರೋಪಿಗಳು ಬೆಂಗಳೂರು ಮೂಲದ ಮೆಹಬೂಬ್ ಪಾಶಾ ಮತ್ತು ತಮಿಳುನಾಡು ಮೂಲದ ಖಾಜಾ ಮೊಯಿದ್ದೀನ್ ನೇತೃತ್ವದ 'ಎಐ-ಹಿಂದ್ ಐಸಸ್' ತಂಡದ 20 ಸದಸ್ಯರ ಗುಂಪಿಗೆ ಸೇರಿದವರಾಗಿದ್ದಾರೆ ಎಂದು ದೋಷಾರೋಪ ಪಟ್ಟಿಯಲ್ಲಿ ಅಧಿಕಾರಿಗಳು ತಿಳಿಸಿದ್ದಾರೆ.

ಐಎಸ್‌ಐಎಸ್ ಸಂಘಟನೆಯ ಭಾಗ

ಆರೋಪಿಗಳು ಸ್ಫೋಟದ ಪ್ರಯೋಗ, ರಾಷ್ಟ್ರ ಧ್ವಜ ತಿರಂಗಕ್ಕೆ ಬೆಂಕಿ ಹಚ್ಚಿದ ಕೃತ್ಯ, ಭಯೋತ್ಪಾದಕ ಚಟುವಟಿಕೆಗಳಿಗೆ ಸದಸ್ಯರ ನೇಮಕ ಹಾಗೂ ಉಗ್ರ ಕೃತ್ಯಗಳಿಗೆ ನಿಧಿ ಸಂಗ್ರಹ ಸೇರಿದಂತೆ ದೇಶದ ವಿವಿಧೆಡೆ ಭಯೋತ್ಪಾದನೆ ಹರಡುವ ಐಸಸ್ ಉಗ್ರ ಸಂಘಟನೆಯ ಪಿತೂರಿಯ ಭಾಗವಾಗಿ ಕಾರ್ಯ ನಿರ್ವಹಿಸುತ್ತಿದ್ದರು ಎಂದು ಆರೋಪಿಸಲಾಗಿದೆ.

ಕರ್ನಾಟಕ ರಾಜ್ಯ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಳಗಾವಿ

ಕ್ರ.ಸಂ.:ಬಿಜಿಎಂ:ಡಿಯುಡಿಸಿ:5:ಸಿಆರ್-25:2021-22 ದಿನಾಂಕ : 24-09-2024

ಅಲ್ಪಾವಧಿ ಟೆಂಡರ್ ಅಧಿಸೂಚನೆ

ಬೆಳಗಾವಿ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-4 ಯೋಜನೆಯಡಿ ಈ ಕೆಳಕಂಡ ಕಾಮಗಾರಿಗಳಿಗೆ KW-1, 2, 3 ಮತ್ತು 4 ಡಾಕುಮೆಂಟ್ ಉಪಯೋಗಿಸಿ ಟೆಂಡರ್ ಆಹ್ವಾನಿಸಲಾಗಿದೆ. ಬಿಡ್‌ದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಟೆಂಡರ್ ಡೌನ್‌ಲೋಡ್ ಹಾಗೂ ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ ಹಾಗೂ ಟೆಂಡರ್ ಪ್ರೋಸೆಸಿಂಗ್ ಫೀ ಯನ್ನು ಸಹ ವಿದ್ಯುನ್ಮಾನ ಮೂಲಕ ಸಲ್ಲಿಸುವುದು. ವಿವರ ಈ ಕೆಳಗಿನಂತಿದೆ.

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ಹೊರತು ಪಡಿಸಿ)	ಇ.ಎಂ.ಡಿ. ಮೊತ್ತ	ಕರೆ ನಂ.
01	ಸದಲಗಾ ಪುರಸಭೆ ವ್ಯಾಪ್ತಿಯಲ್ಲಿ ಪೌರಕಾರ್ಮಿಕರ ವಿಶ್ರಾಂತಿ ಗೃಹ, ಸಾರ್ವಜನಿಕ ಶೌಚಾಲಯ, ಅಂಗನವಾಡಿ, ಸಮುದಾಯ ಭವನ, ಕಂಪೌಂಡ ಗೋಡೆ ನಿರ್ಮಾಣ ಮತ್ತು ಪೈಪಲೈನ್ ಕಾಮಗಾರಿ ಊ. (Tender No. DMA/2024-25/BD/WORK_INDENT16061/Call-3)	132.06	1.98	4ನೇ ಕರೆ
02	ರಾಯಬಾಗ ಪ.ಪಂ ವ್ಯಾಪ್ತಿಯಲ್ಲಿ ವಾನಂ.12ರ ಎಂ.ಜೆ.ನಗರ ಸಾಯಿ ಮಂದಿರದ/ಅಯ್ಯಪ್ಪಾ ಸ್ವಾಮಿ ದೇವಸ್ಥಾನದ ಹತ್ತಿರ ಓವರ ಹೆಡ್ ಟ್ಯಾಂಕ್ (ಓ.ಎಚ್.ಟಿ) ನಿರ್ಮಾಣ ಮಾಡುವುದು, ವಾನಂ.05ರ ಯುನಿಯನ್ ಬ್ಯಾಂಕ್ ಹಿಂದಿನ ಪಿಡಬ್ಲ್ಯೂಡಿ ಕ್ವಾರ್ಟರ್ಸ ಹತ್ತಿರ ಆರ್.ಓ. ಪ್ಲ್ಯಾಂಟ್ ಅಳವಡಿಸುವುದು. ವಾನಂ.02ರ ಮಾಳಿ ಗಲ್ಲಿ/ಕುಂಬಾರಗಲ್ಲಿ ಯಲ್ಲಿ ಆರ್.ಓ. ಪ್ಲ್ಯಾಂಟ್ ಅಳವಡಿಸುವುದು. (Tender No. DMA/2023-24/CT/WORK_INDENT16667/Call-2)	56.56	1.13	4ನೇ ಕರೆ
03	ಕಾಗವಾಡ ಪ.ಪಂ. ವ್ಯಾಪ್ತಿಯ ಸಿಡಿಪಿಓ ಕಛೇರಿಯಿಂದ ಮಹಾದೇವ ಉದಗಾವೆ ಮನೆವರೆಗೆ ಮತ್ತು ಗಣೇಶ ದೇವಸ್ಥಾನದಿಂದ ಮಂಜುನಾಥ ಹೂಗಾರ ಮನೆಯವರೆಗೆ ರಸ್ತೆ ನಿರ್ಮಿಸುವುದು. (Tender No. DMA/2024-25/RD/WORK_INDENT18506/Call-2)	27.64	0.56	2ನೇ ಕರೆ
04	ಕಬ್ಬೂರ ಪ.ಪಂ. ವ್ಯಾಪ್ತಿಯಲ್ಲಿ ಓವರ್ ಹೆಡ್ ವಾಟರ್ ಟ್ಯಾಂಕ್ (ಓ.ಹೆಚ್.ಟಿ.) ನಿರ್ಮಿಸುವುದು (Tender No. DMA/2023-24/WS/WORK_INDENT15384/Call-2)	16.90	0.42	4ನೇ ಕರೆ
05	ಕಲ್ಲೋಳಿ ಪ.ಪಂ ವ್ಯಾಪ್ತಿಯ ವಾರ್ಡ್ ಸಂಖ್ಯೆ 10ರ ಫಿಲ್ಟರ್ ಹೌಸ್ ಅಭಿವೃದ್ಧಿಪಡಿಸುವುದು. (Tender No. DMA/2023-24/WS/WORK_INDENT15395/Call-4)	14.05	0.35	4ನೇ ಕರೆ
06	ಕಲ್ಲೋಳಿ ಪ.ಪಂ ವ್ಯಾಪ್ತಿಯ ವಿದ್ಯುತ್ ಕಂಬ ಮತ್ತು ಟಿ.ಸಿ ಅಳವಡಿಸುವುದು. (Tender No. DMA/2023-24/EL/WORK_INDENT15392/Call-4)	6.35	0.16	4ನೇ ಕರೆ
07	ನಿಪ್ಪಾಣಿ ನಗರಸಭೆ ವ್ಯಾಪ್ತಿಯಲ್ಲಿ ಮಟಣ ಮಾರುಕಟ್ಟೆ, ಮೀನು ಮಾರುಕಟ್ಟೆ, ಅಂಗನವಾಡಿ, ತಿನಿಸು ಕಟ್ಟೆ ಮತ್ತು ಶೌಚಾಲಯ ನಿರ್ಮಿಸುವುದು. (Tender No. DMA/2023-24/BD/WORK_INDENT16117/Call-3)	272.29	4.09	4ನೇ ಕರೆ

ಟೆಂಡರ್ ವೇಳಾಪಟ್ಟಿ

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	:	10-10-2024ರಂದು 17-00 ಘಂಟೆವರೆಗೆ
ಟೆಂಡರ್ ತೆರೆಯುವ ದಿನಾಂಕ (ತಾಂತ್ರಿಕ ಬಿಡ್)	:	14-10-2024ರಂದು 10-30 ಘಂಟೆ ನಂತರ

ಅವಧಿ ವಿಸ್ತರಣೆ ಇದ್ದಲ್ಲಿ KPP Portal ಮೂಲಕ ಮಾತ್ರ ತಿಳಿಸಲಾಗುವುದು. ದಿನಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/-
ಕಾರ್ಯಪಾಲಕ ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಳಗಾವಿ

DIPR/BGM/RO-NO-857/2023-24

ನ್ಯೂಯಾರ್ಕ್‌ನಲ್ಲಿ ಝೆಲೆನ್ಸ್ಕಿ-ಮೋದಿ ಮಾತುಕತೆ | ಉಕ್ರೇನ್ ಸಮಸ್ಯೆಗೆ ಶಾಂತಿಯುತ ಪರಿಹಾರ ಭರವಸೆ

ಶಾಂತಿ-ಸ್ಥಿರತೆಗೆ ಭಾರತ ಸಹಕಾರ

ನ್ಯೂಯಾರ್ಕ್: ಪ್ರಧಾನಿ ನರೇಂದ್ರ ಮೋದಿ ಮೂರು ದಿನಗಳ ಅಮೆರಿಕ ಪ್ರವಾಸ ಕಾಲದಲ್ಲಿ ವಿವಿಧ ರಾಷ್ಟ್ರಗಳ ನಾಯಕರ ಜತೆ ಮಹತ್ವದ ಮಾತುಕತೆ ನಡೆಸಿದರು. ಉಕ್ರೇನ್ ಅಧ್ಯಕ್ಷ ವ್ಲಾದಿಮಿರ್ ಝೆಲೆನ್ಸ್ಕಿ ಅವರನ್ನೂ ಭೇಟಿಯಾದ ಮೋದಿ, ಉಕ್ರೇನ್-ರಷ್ಯಾ ಸಂಘರ್ಷ ಶಾಂತಿಯುತವಾಗಿ ಕೊನೆಗೊಂಡು ಸ್ಥಿರತೆ ಸ್ಥಾಪನೆ ಆಗುವುದಕ್ಕೆ ಭಾರತ ಎಲ್ಲಾ ರೀತಿಯ ಸಹಕಾರ ನೀಡಲು ಸಿದ್ಧ ಎಂದು ಪುನರುಚ್ಚರಿಸಿದರು.

ಭಾರತ, ಚೀನಾ ಅಥವಾ ಬ್ರೆಜಿಲ್ ಮಧ್ಯಸ್ಥಿಕೆಯಲ್ಲಿ ಉಕ್ರೇನ್ ಜತೆ ಮಾತು ಕತೆಗೆ ರಷ್ಯಾ ಸಿದ್ಧ ಎಂದು ಅಧ್ಯಕ್ಷ ವ್ಲಾಡಿ ಮಿರ್ ಪುಟಿನ್ ಇತ್ತೀಚೆಗೆ ಹೇಳಿದ್ದರು. ಈ ದಿಸೆಯಲ್ಲಿ ಮೋದಿ-ಝೆಲೆನ್ಸ್ಕಿ ಭೇಟಿ ಮಹತ್ವ ಪಡೆದಿದೆ. ಕಳೆದ ಬಾರಿಯ ಉಕ್ರೇನ್ ಭೇಟಿ ವೇಳೆಯ ಮಾತುಕತೆ ಯನ್ನು ಸಮರ್ಥವಾಗಿ ಜಾರಿಗೊಳಿಸಲು ಬದ್ಧರಿದ್ದೇವೆ. ಉಕ್ರೇನ್-ರಷ್ಯಾ ಸಮಸ್ಯೆಗೆ ಬೇಗ ಪರಿಹಾರ ಕಂಡುಕೊಳ್ಳಲು ಭಾರತ ನೆರವಾಗಲಿದೆ ಎಂದು ಮೋದಿ ಹೇಳಿದ್ದಾರೆ.

ಯೋಧರಿದ್ದ ರೈಲು ಗುರಿಯಾಗಿಸಿ ಸ್ಫೋಟ ಸಂಚು | ಆರೋಪಿ ಶಬ್ಬೀರ್ ಮಧ್ಯಪ್ರದೇಶದಲ್ಲಿ ಬಂಧನ

ಹಳಿ ಸ್ಫೋಟ ಸಂಚು-ಸಿಬ್ಬಂದಿ ಸೆರೆ

ಭೋಪಾಲ್: ಕಾಶ್ಮೀರದಿಂದ ಕರ್ನಾಟಕಕ್ಕೆ ಭಾರತೀಯ ಸೇನೆಯ ಯೋಧರನ್ನು ಕರೆತರುತ್ತಿದ್ದ ಭಾರತೀಯ ರೈಲ್ವೆ ನಿಗಮದ ವಿಶೇಷ ರೈಲನ್ನು ಮಧ್ಯಪ್ರದೇಶದಲ್ಲಿ ಸ್ಫೋಟಿಸುವುದಕ್ಕೆ ಸಂಚು ರೂಪಿಸಿ ಹಳಿಗಳಿಗೆ 10 ಡಿಟೋನೇಟರ್‌ಗಳನ್ನು ಅಳವಡಿಸಿದ್ದ ಪ್ರಕರಣದಲ್ಲಿ ರೈಲ್ವೆ ಸಿಬ್ಬಂದಿ ಶಬ್ಬೀರ್ (40) ಎಂಬಾತನನ್ನು ರೈಲ್ವೆ ಪೊಲೀಸರು ಬಂಧಿಸಿದ್ದಾರೆ.

ಭಾರತೀಯ ರೈಲ್ವೆಯ ಇಂಜಿನಿಯರಿಂಗ್ ವಿಭಾಗದ ಉದ್ಯೋಗಿಯಾದ ಶಬ್ಬೀರ್, ರೈಲ್ವೆ ಹಳಿ ಗಸ್ತು ಹಾಗೂ ಸುರಕ್ಷತೆ ನಿರ್ವಹಣೆ ಕಾರ್ಯಕ್ಕೆ ನಿಯೋಜನೆಗೊಂಡಿದ್ದ. ಇಲಾಖೆಯ ಗೋದಾಮಿನಲ್ಲಿದ್ದ ಡಿಟೋನೇಟರ್‌ಗಳನ್ನೇ ಕದ್ದು ತಂದು ಹಳಿಗಳಿಗೆ ಅಳವಡಿಸಿ ಸ್ಫೋಟಗೊಳ್ಳುವಂತೆ ಮಾಡಲು ಸಂಚು ನಡೆಸಿದ್ದ ಎಂದು ಆರೋಪಿಸಲಾಗಿದೆ. ಆರೋಪಿಯನ್ನು ಸೋಮವಾರ ಸಂಜೆ ಬಂಧಿಸಿದ ರೈಲ್ವೆ ಭದ್ರತಾ ಪಡೆ(ಆರ್‌ಪಿಎಫ್) ಅಧಿಕಾ ರಿಗಳು ತೀವ್ರ ವಿಚಾರಣೆಗೆ ಒಳಪಡಿಸಿದ್ದಾರೆ. ಸೆ.18ರಂದು ಮಧ್ಯಪ್ರದೇಶದ ಬುರ್ಹಾನ್‌ಪುರ ಜಿಲ್ಲೆಯಲ್ಲಿನ ಸಗ್ಫಾತಾ ರೈಲ್ವೆ ನಿಲ್ದಾಣದ ಸಮೀಪದಲ್ಲೇ ಹಳಿಗಳಿಗೆ ಡಿಟೋನೇಟರ್ ಅಳವಡಿಸಿ ಸ್ಫೋಟಿಸಲು ಯತ್ನಿಸಿದ್ದ. ಸಣ್ಣ ಪ್ರಮಾಣದ ಸ್ಫೋಟ ನಡೆದಿದ್ದರಿಂದ ಹಳಿಗ ಳಿಗೆ ಹೆಚ್ಚಿನ ಹಾನಿ ಆಗಿರಲಿಲ್ಲ. ಯಾವುದೇ ಜೀವಹಾನಿಯೂ ಸಂಭವಿಸಿರಲಿಲ್ಲ.

ಜಮ್ಮು-ಕಾಶ್ಮೀರ 2ನೇ ಹಂತದ ಮತ ಇಂದು

ಶ್ರೀನಗರ: ಜಮ್ಮು-ಕಾಶ್ಮೀರದ ವಿಧಾನಸಭಾ ಚುನಾವಣೆಗೆ ಬುಧವಾರ 2ನೇ ಹಂತದ ಮತದಾನ ನಡೆಯಲಿದೆ.

ಆರು ಜಿಲ್ಲೆಗಳ 26 ಕ್ಷೇತ್ರಗಳಿಗೆ ಚುನಾವಣೆ ನಡೆಯಲಿದ್ದು,



ಒಟ್ಟು 239 ಅಭ್ಯರ್ಥಿಗಳು ಕಣದಲ್ಲಿದ್ದಾರೆ. 25 ಲಕ್ಷ ಮತದಾರರು ಹಕ್ಕು ಚಲಾಯಿಸಲಿದ್ದಾರೆ. ಚುನಾವಣಾ ಪ್ರಕ್ರಿಯೆ ಸುಗಮವಾಗಿರಲೆಂದು ಚುನಾವಣಾ ಆಯೋಗ 1,056 ನಗರ ಮತಕೇಂದ್ರ, ಹಾಗೂ 2446 ಗ್ರಾಮೀಣ ಮತಗಟ್ಟೆ ಸೇರಿ ಒಟ್ಟು 3,502 ಮತಗಟ್ಟೆಗಳನ್ನು ಸ್ಥಾಪಿಸಿದೆ. ಬುಧವಾರ ಬೆಳಗ್ಗೆ 7ರಿಂದ ಸಂಜೆ 6ರವರೆಗೆ ಮತದಾನ ನಡೆಯಲಿದೆ. ಮಾಜಿ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ, ಜೆಕೆಪಿಸಿಸಿ ಅಧ್ಯಕ್ಷ ತಾರಿಕ್ ಹಮೀದ್ ಕರ್ರಾ, ಬಿಜೆಪಿ ಜಮ್ಮು-ಕಾಶ್ಮೀರ ಘಟಕ ಮುಖ್ಯಸ್ಥ ರವಿಂದರ್ ರೈನಾ, ಮಾಜಿ ಸಚಿವ ಮೊಹ ಮ್ಮದ್ ಸಾಗರ್, ಸೈಯದ್ ಮುಶ್ತಾಕ್ ಬುಖಾರಿ ಕಣದಲ್ಲಿರುವ ಪ್ರಮುಖರು. ಜತೆಗೆ ಜೈಲಿನಲ್ಲಿರುವ ಪ್ರತ್ಯೇಕತಾವಾದಿ ಸರ್ಜನ್ ಅಹ್ಮದ್ ವಾಗೆ ಅಲಿಯಾಸ್ ಬಾರ್ಕುತಿ, ಬೀರ್‌ವಾ ಮತ್ತು ಗಂಧೇರ್‌ಬಾಲ್ ಕ್ಷೇತ್ರಗಳಿಂದ ಸ್ಪರ್ಧಿಸುತ್ತಿದ್ದು, ಎರಡೂ ಕ್ಷೇತ್ರಗಳಲ್ಲಿ ತೀವ್ರ ನಿಗಾ ವಹಿಸಲಾಗಿದೆ.

ಅಮಿತ್ ಶಾ ಹೇಳಿಕೆಗೆ ಬಾಂಗ್ಲಾದೇಶ ಆಕ್ರೋಶ

ದೆಹಲಿ: ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರುದ್ಧ ಬಾಂಗ್ಲಾದೇಶದ ಮಧ್ಯಂತರ ಸರಕಾರ ಮಂಗಳವಾರ ಆಕ್ರೋಶ ವ್ಯಕ್ತಪಡಿಸಿದೆ. ಢಾಕಾದಲ್ಲಿನ ಭಾರತ ರಾಯಭಾರಿ ಕಚೇರಿಗೆ ಪ್ರತಿಭಟನಾ ಪತ್ರ ತಲುಪಿಸಿರುವ ಯೂನುಸ್ ಸರಕಾರ, ಭಾರತ

ಸರಕಾರವು ಉನ್ನತ ಮಟ್ಟದ ರಾಜಕಾರಣಿಗಳ ಹೇಳಿಕೆಗಳ ಮೇಲೆ ನಿಗಾ ವಹಿಸಬೇಕು ಎಂದು ಆಗ್ರಹಿಸಿದೆ.

ಜಾರ್ಖಂಡ್‌ನಲ್ಲಿ ಚುನಾವಣಾ ರ‍್ಯಾಲಿಯಲ್ಲಿ ಅಮಿತ್ ಶಾ, ಬಾಂಗ್ಲಾ ನುಸುಳುಕೋರರನ್ನು ಉಲ್ಟಾ ನೇತು ಹಾಕಿ ಪಾಠ ಕಲಿಸುತ್ತೇವೆ ಎಂದು ಗುಡುಗಿದ್ದರು. ಈ ಮಾತಿಗೆ ಸಿಟ್ಟಾಗಿರುವ ಬಾಂಗ್ಲಾದೇಶ, ಅಮಿತ್ ಶಾ ಹೇಳಿಕೆಯನ್ನು 'ತೀವ್ರ ಖಂಡನೀಯ' ಎಂದಿದೆ. ಬಾಂಗ್ಲಾದೇಶದ ಜನರ ಭಾವನೆಗೆ ಇದರಿಂದ ತೀವ್ರವಾಗಿ ಘಾಸಿಯಾಗಿದೆ ಎಂದೂ ಪತ್ರದಲ್ಲಿ ಬರೆಯಲಾಗಿದೆ.

ನೆರೆ ರಾಷ್ಟ್ರದ ಬಗ್ಗೆ ಆಕ್ಷೇಪಾರ್ಹ ಹೇಳಿಕೆ ನೀಡದಂತೆ ಭಾರತ ತನ್ನ ರಾಜಕಾರಣಿಗಳನ್ನು ತಡೆಯಬೇಕು. ಇಲ್ಲದಿದ್ದರೆ ಇಂತಹ ಹೇಳಿಕೆಗಳು ಪರಸ್ಪರ ಗೌರವ ಮತ್ತು ತಿಳಿವಳಿಕೆಯನ್ನು ಕುಗ್ಗಿಸುತ್ತವೆ ಎಂದು ಢಾಕಾ ಹೇಳಿದೆ. ಬಾಂಗ್ಲಾದೇಶಿ ನುಸುಳುಕೋರರು ಜಾರ್ಖಂಡ್ ಮುಕ್ತಿ ಮೋರ್ಚಾ ಮತ್ತು ರಾಹುಲ್ ಗಾಂಧಿಯ ಕಾಂಗ್ರೆಸ್ ಪಕ್ಷದ ಮತ ಬ್ಯಾಂಕ್ ಆಗಿದ್ದಾರೆ. ಬಿಜೆಪಿಗೆ ಅಧಿಕಾರ ನೀಡಿದರೆ ನುಸುಳುಕೋರರನ್ನು ತಲೆಕೆಳಗಾಗಿ ನೇತು ಹಾಕಿ ಶಿಕ್ಷಿಸುತ್ತೇವೆ' ಎಂದಿದ್ದರು.

150 ವರ್ಷ ಇತಿಹಾಸದ ಕೋಲ್ಕತ್ತ ಟ್ರಾಮ್ ಬಂದ್

ಕೋಲ್ಕತ್ತ: 150 ವರ್ಷಗಳ ಇತಿಹಾಸವಿರುವ 'ಎಲೆಕ್ಟ್ರಿಕ್ ಟ್ರಾಮ್'(ವಿದ್ಯುತ್ ಚಾಲಿತ ರಸ್ತೆ ರೈಲು) ಸೇವೆಯನ್ನು ಬಂದ್ ಮಾಡಲು ಪಶ್ಚಿಮ ಬಂಗಾಳ ಸರಕಾರ ನಿರ್ಧರಿಸಿದೆ. ಎಂದಿನಿಂದ ಬಂದ್ ಆಗಲಿದೆ ಎಂಬುದು ಇನ್ನೂ ನಿಗದಿಯಾಗಿಲ್ಲ.

ವಾಹನಗಳ ಸಂಚಾರ ಅಧಿಕವಾಗಿರುವುದರಿಂದ ಟ್ರಾಮ್ ಸಂಚಾರ ವೇಳೆ ಟ್ರಾಫಿಕ್ ಜ್ಯಾಮ್ ಆಗುತ್ತಿದೆ. ಸುಗಮ ರಸ್ತೆ ಸಂಚಾರ ಸಾಧಿಸಲು ಟ್ರಾಮ್ ಸೇವೆ ಪೂರ್ಣ ಬಂದ್ ಮಾಡಲು ನಿರ್ಧರಿಸಲಾಗಿದೆ ಎಂದು ರಾಜ್ಯದ ಸಾರಿಗೆ ಸಚಿವ ಸ್ನೇಹಾಸಿಸ್ ಚಕ್ರವರ್ತಿ ಮಂಗಳವಾರ ತಿಳಿಸಿದ್ದಾರೆ. ಸದ್ಯ ಕೋಲ್ಕತ್ತ ನಗರದಲ್ಲಿ ಮಾತ್ರವೇ ಟ್ರಾಮ್ ಸೇವೆ ಜಾರಿಯಲ್ಲಿದೆ. ಆದರೆ ನಿಧಾನವಾಗಿ ಸಾಗುವ ಈ ಟ್ರಾಮ್‌ನಿಂದಾಗಿ ಸಂಚಾರ ಮಾರ್ಗದಲ್ಲಿ ಸಮಸ್ಯೆಯಾಗುತ್ತಿದೆ. ಆದ ಕಾರಣ ಸೇವೆ ರದ್ದುಪಡಿಸಲು ರಾಜ್ಯ ಸರಕಾರ ನಿರ್ಧರಿಸಿದೆ. ಅದರಲ್ಲೂ ಪೀಕ್ ಅವರ್‌ನಲ್ಲಿ ಸಂಚಾರ ದಟ್ಟಣೆ ಸಮಸ್ಯೆಯಾಗುತ್ತಿದೆ ಎಂದು ಹೇಳಲಾಗಿದೆ.

ಆದರೆ ಟ್ರಾಪ್ ಪ್ರಿಯರು ಸರಕಾರದ ನಿರ್ಧಾರವನ್ನು ಖಂಡಿಸಿದ್ದಾರೆ. ಟ್ರಾಮ್ ಕೋಲ್ಕತ್ತದ ಅಸ್ಮಿತೆ. ಅದನ್ನು ಸಂರಕ್ಷಿಸಬೇಕು ಹಾಗೂ ಸೇವೆಯಲ್ಲಿ ಉಳಿಸಬೇಕು ಎಂದು ಆಗ್ರಹಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಬಿಎಲ್ಡಿಇನಲ್ಲಿ ಕ್ರೀಡಾ ದಿನಾಚರಣೆ

ವಿಜಯಪುರ: ಬಿ.ಎಲ್.ಡಿ.ಇ. ಡೀಮ್ಡ್ ವಿಶ್ವವಿದ್ಯಾಲಯದ ಬಿ.ಎಂ.ಪಾಟೀಲ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಗುರುವಾರ ಜೆನಿತ್- 2024 ವಾರ್ಷಿಕ ಕ್ರೀಡಾ ದಿನ ಆಚರಿಸಲಾಯಿತು. ಬಿ.ಎಂ. ಪಾಟೀಲ್ ವೈದ್ಯಕೀಯ ಕಾಲೇಜು, ಆಸ್ಪತ್ರೆ ಮತ್ತು ಸಂಶೋಧನೆ ಕೇಂದ್ರದ ಗ್ರಂಥಾಲಯ ಕಟ್ಟಡದ ಸಭಾಂಗಣದಲ್ಲಿ ಕ್ರೀಡಾ ವಿಭಾಗ ಆಯೋಜಿಸಿದ್ದ ಈ ಕಾರ್ಯಕ್ರಮವನ್ನು ಖ್ಯಾತ ಟ್ರ್ಯಾಕ್ ಸೈಕ್ಲಿಸ್ಟ್ ವೆಂಕಪ್ಪ ಕೆಂಗಲಗುತ್ತಿ ಉದ್ಘಾಟಿಸಿದರು. ಈ ಕಾರ್ಯಕ್ರಮದಲ್ಲಿ ಸುಮಾರು 500 ವಿದ್ಯಾರ್ಥಿಗಳು ಸಕ್ರೀಯವಾಗಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ವಿವಿ ಕುಲಪತಿ ಡಾ.ಆರ್.ಎಸ್.ಮುಧೋಳ, ಕ್ರೀಡಾ ಸಮಿತಿಯ ಉಪಾಧ್ಯಕ್ಷ ಡಾ.ಗಿರೀಶ್ ಕುಳ್ಳೊಳ್ಳಿ, ವೈದ್ಯಕೀಯ ವಿಭಾಗದ ಡೀನ್ ಡಾ. ತೇಜಸ್ವಿನಿ ವಲ್ಲಭ, ಉಪಪ್ರಾಚಾರ್ಯ ಡಾ. ಎಂ. ಬಿ. ಪಾಟೀಲ, ಡಾ. ಸುಮಂಗಲಾ ಪಾಟೀಲ, ಬಿ.ಎಲ್.ಡಿ.ಇ. ಸಂಘದ ದೈಹಿಕ ಶಿಕ್ಷಣ ನಿರ್ದೇಶಕ ಎಸ್. ಎಸ್. ಕೋರಿ, ಕ್ರೀಡಾ ವಿಭಾಗದ ಸಹಾಯಕ ನಿರ್ದೇಶಕಿ ಡಾ. ಮಹಾದೇವಿ ವಾಲಿ, ವಿದ್ಯಾರ್ಥಿ ಪ್ರತಿನಿಧಿಗಳಾದ ಡಾ. ರುತುಜಾ ನಿಕಮ್, ಡಾ. ಎಸ್. ರಾಹುಲ, ಬೋಧಕ ಹಾಗೂ ಬೋಧಕರ ಹೊರತಾದ ಸಿಬ್ಬಂದಿ ಉಪಸ್ಥಿತರಿದ್ದರು.

ದಸರಾ ಸೈಕ್ಲಿಂಗ್ ಆಯ್ಕೆ ಪ್ರಕ್ರಿಯೆ ನಾಳೆ

ವಿಜಯಪುರ: 2024-25ನೇ ಸಾಲಿನ ಜಿಲ್ಲಾ ಮಟ್ಟದಿಂದ ರಾಜ್ಯಮಟ್ಟಕ್ಕೆ ಆಯ್ಕೆ ಮಾಡುವುದಕ್ಕಾಗಿ ಸೆ.26ರಂದು ಸೋಲಾಪೂರ ಬೈಪಾಸ, ಭರಟಗಿ ರೋಡ, ಸರಸ್ವತಿ ಸ್ಕೂಲ್ ಹತ್ತಿರ ಪುರುಷ ಹಾಗೂ ಮಹಿಳಾ ಸೈಕ್ಲಿಂಗ್ ಕ್ರೀಡಾಪಟುಗಳ ಆಯ್ಕೆ ಪ್ರಕಿಯೆ ನಡೆಯಲಿದೆ. ಭಾಗವಹಿಸುವ ಸೈಕ್ಲಿಂಗ್ ಕ್ರೀಡಾಪಟುಗಳು ನೇರವಾಗಿ ಬೆಳಿಗ್ಗೆ 6 ಗಂಟೆಗೆ ಜಿಲ್ಲಾ ಕ್ರೀಡಾ ವಸತಿ ನಿಲಯದಲ್ಲಿ ವರದಿ ಮಾಡಿಕೊಳ್ಳಬಹುದಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಮೊ:94482 34883, 9742498645ಕ್ಕೆ ಸಂಪರ್ಕಿಸಬಹುದು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರ ಪ್ರಕಟಣೆ ತಿಳಿಸಿದೆ.

ನಾಳೆ ಹಲವೆಡೆ ವಿದ್ಯುತ್ ವ್ಯತ್ಯಯ

ವಿಜಯಪುರ: 110/11 ಕೆವಿ ಹಿರೇನೆವನೂರ, 110/11 ಕೆವಿ ರೋಡಗಿ, 110/11 ಕೆವಿ ಹಿರೆಮಸಳಿ, 110/11 ಕೆವಿ ಇಂಚಗೇರಿ, 110/11 ಕೆವಿ ಚಡಚಣ, 110/11ಕೆವಿ ಮೊರಟಗಿ, 110/11 ಕೆವಿ ದೇವಣಗಾಂವ, 110/11 ಕೆವಿ ಮಲಘಾಣ ವಿದ್ಯುತ್ ವಿತರಣ ಕೇಂದ್ರಗಳಲ್ಲಿ 33ಕೆವಿ ಮತತು 11ಕೆವಿ ಬೇಗಳ ಎರಡನೇ ತ್ರೈಮಾಸಿಕ ಕಾರ್ಯ ಕಾಮಗಾರಿ ಕೈಗೆತ್ತಿಕೊಳ್ಳುವುದರಿಂದ ಸದರಿ ವಿದ್ಯುತ್ ವಿತರಣಾ ಕೇಂದ್ರದ ಮೇಲೆ ಬರುವ ಎಲ್ಲಾ 33ಕೆವಿ, 11ಕೆವಿ ಮಾರ್ಗಗಳಲ್ಲಿ ಸೆಪ್ಟೆಂಬರ್ 26ರಂದು ಬೆಳಿಗ್ಗೆ 9 ಗಂಟೆಯಿಂದ ಮಧ್ಯಾಹ್ನ 3ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಹೆಸ್ಕಾಂ ಇಂಡಿಯ ಕಾರ್ಯನಿರ್ವಾಹಕ ಅಭಿಯಂತರರ ಪ್ರಕಟಣೆ ತಿಳಿಸಿದೆ.

ವಿವಿಧೆಡೆ ವಿದ್ಯುತ್ ವ್ಯತ್ಯಯ ಸೆ.27ಕ್ಕೆ

ವಿಜಯಪುರ: 110/ಕೆವಿ ಲಚ್ಯಾಣ, 110/11 ಕೆವಿ ಧೂಳಖೇಡ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ 33ಕೆವಿ ಮತ್ತು 11 ಕೆವಿ ಬೇಗಳ ಎರಡನೇ ತ್ರೈಮಾಸಿಕ ನಿರ್ವಹಣಾ ಕಾಮಗಾರಿ ಕೈಗೆತ್ತಿಕೊಂಡಿರುವುದರಿಂದ ಸದರಿ ವಿದ್ಯುತ್ ವಿತರಣಾ ಕೇಂದ್ರದ ಮೇಲೆ ಬರುವ ಎಲ್ಲಾ 33ಕೆವಿ, 11ಕೆವಿ ಮಾರ್ಗಗಳಲ್ಲಿ ಸೆ.27ರಂದು ಬೆಳಿಗ್ಗೆ 9 ಗಂಟೆಯಿಂದ ಮಧ್ಯಾಹ್ನ 3ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಇಂಡಿ ಹೆಸ್ಕಾಂನ ಕಾರ್ಯನಿರ್ವಾಹಕ ಅಭಿಯಂತರರ ಪ್ರಕಟಣೆ ತಿಳಿಸಿದೆ.

ರೈತ ಶ್ರೀಮಂತ ದುದ್ದಗಿಗೆ ಅರಸು ಪ್ರಶಸ್ತಿ

ವಿಜಯಪುರ: ಜಿಲ್ಲೆಯ ಆಲಮೇಲ ಪಟ್ಟಣದ ಪ್ರಗತಿಪರ ರೈತ ಶ್ರೀಮಂತ ಆರ್. ದುದ್ದಗಿಯವರನ್ನು ಬೆಂಗಳೂರಿನ ಗಾಂಧಿ

ಭವನದಲ್ಲಿ ಕರ್ನಾಟಕ ರಾಜ್ಯ ಡಿ.ದೇವರಾಜ್ ಅರಸು ಹಿಂದುಳಿದ ವರ್ಗಗಳ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಸಂಘ ಪ್ರತಿ ವರ್ಷ ನೀಡುವ ಹಿಂದುಳಿದ ವರ್ಗಗಳ ರತ್ನ 'ಡಿ.ದೇವರಾಜ್ ಅರಸು ರಾಜ್ಯ ಪ್ರಶಸ್ತಿ 2024' ಅನ್ನು ನೀಡಿ ಗೌರವಿಸಲಾಗಿದೆ.

ಇವರನ್ನು ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಸಲ್ಲಿಸಿರುವ ಸಮಾಜ ಸೇವೆಯನ್ನು ಗುರುತಿಸಿ ಡಿ.ದೇವರಾಜ್ ಅರಸುರವರ ಜಯಂತ್ಯುತ್ಸವದ ಪ್ರಯುಕ್ತ ಈ ಪ್ರಶಸ್ತಿ ಲಭಿಸಿದೆ.

{ಬಿ.ವೈ.ವಿಜಯೇಂದ್ರ } ಬಿಜೆಪಿ ರಾಜ್ಯಾಧ್ಯಕ್ಷ

ಭ್ರಷ್ಟಾಚಾರ ರಹಿತ ಆಡಳಿತ ನೀಡುವುದಾಗಿ ಹೇಳಿದ್ದ ಸಿದ್ದರಾಮಯ್ಯ ಈಗ ಕಳಂಕ ಹೊತ್ತು ಕೂಡಲೇ ರಾಜೀನಾಮೆ ಕೊಡಬೇಕು. ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡುವ ವಿಶ್ವಾಸವಿದೆ. ಪಕ್ಷದ ಮುಂದಿನ ನಡೆಯ ಕುರಿತು ಪ್ರಮುಖರು, ಹಿರಿಯರ ಜತೆ ಚರ್ಚಿಸಿ ನಿರ್ಧರಿಸುತ್ತೇವೆ.



ಮಳೆಗೆ ರೈತರ ಮೊಗದಲ್ಲಿ ಮಂದಹಾಸ | ಸಂಗಮನಾಥ ಗರ್ಭಗುಡಿ ಜಲಾವೃತ | ನಗರದ ಜನ ಜೀವನ ಅಸ್ತವ್ಯಸ್ತ

ವಿಜಯಪುರದಲ್ಲಿ ಇಡೀ ರಾತ್ರಿ ಮಳೆ ಅಬ್ಬರ

ಬಸವರಾಜ್ ಎಸ್. ಉಳ್ಳಾಗಡ್ಡಿ, ವಿಜಯಪುರ

ಸೋಮವಾರ ರಾತ್ರಿಯಿಡಿ ಸುರಿದ ಧಾರಾಕಾರ ಮಳೆಯಿಂದ ಜಿಲ್ಲೆಯ ಕೆರೆ, ಹಳ್ಳಕೊಳ್ಳಗಳು ಉಕ್ಕಿಹರಿದು ರೈತರ ಮೊಗದಲ್ಲಿ ಮಂದಹಾಸ ಮೂಡಿಸಿದರೆ, ನಗರದ ಹಲವಡೆ ಮನೆ, ಅಂಗಡಿಗಳಿಗೆ ಮಳೆನೀರು ನುಗ್ಗಿ, ರಸ್ತೆಗಳು, ಕಟ್ಟಡಗಳು, ವಾಹನಗಳು ಜಲಾವೃತಗೊಂಡು ಜನಜೀವನ ಅಸ್ತವ್ಯಸ್ತಗೊಳಿಸಿದೆ.

ಕಳೆದ ವರ್ಷ ತೀವ್ರ ಬರಗಾಲದಿಂದ ತತ್ತರಿಸಿದ್ದ ಜಿಲ್ಲೆಯ ರೈತರಲ್ಲಿ ಈ ಬಾರಿ ಉತ್ತಮ ಮಳೆಯಾಗುತ್ತಿದ್ದು, ಒಳ್ಳೆಯ ಫಸಲು ಬರುವ ನಿರೀಕ್ಷೆಯಲ್ಲಿದ್ದಾರೆ. ಕಳೆದೊಂದು ವಾರದಿಂದ ಶಾಂತವಾಗಿದ್ದ ವರುಣದೇವ ಸೋಮವಾರ ರಾತ್ರಿಯಿಡಿ ಅಬ್ಬರಿಸಿದ್ದಾನೆ. ಹವಾಮಾನ ಇಲಾಖೆ ಜಿಲ್ಲೆಯಲ್ಲಿ ಮುಂದಿನ ನಾಲ್ಕೈದು ದಿನ ಇನ್ನೂ ಉತ್ತಮ ಮಳೆಯಾಗುವ ಮುನ್ಸೂಚನೆ ನೀಡಿದೆ. ಹಿಂಗಾರಿನಲ್ಲಿ ರೈತರು ಕಷ್ಟಪಟ್ಟು ಬೆಳೆದ ಮೆಕ್ಕೆಜೋಳ, ಕಡಲೆ, ಗೋಧಿ ಹಾಗೂ ಇತರೆ ಬೆಳೆಗಳಿಗೆ ಅತ್ಯಗತ್ಯ ಸಂದರ್ಭದಲ್ಲೇ ಮಳೆಯಾಗಿ ಅನ್ನದಾತರಲ್ಲಿ ಬೆಳೆ ಕೈಹಿಡಿಯುವ ವಿಶ್ವಾಸ ಮೂಡಿದೆ. ರಾತ್ರಿಯಿಡಿ ಐದು ಗಂಟೆಗಳಿಗೂ ಹೆಚ್ಚು ಕಾಲ ಸುರಿದ ಗುಡುಗು ಸಹಿತ ಕುಂಭದ್ರೋಣ ಮಳೆಗೆ ಜಿಲ್ಲೆಯ ಅನೇಕ ಕೆರೆ, ಹಳ್ಳಕೊಳ್ಳಗಳು ಉಕ್ಕಿ ಹರಿದು ಮಲೆನಾಡ ಮೈಸಿರಿ ಮೂಡಿಸಿದೆ.

ಇತ್ತ ಕಳೆದ ರಾತ್ರಿ ಒಂದೇ ದಿನ ಸುರಿದ ಭಾರಿ

ರಾತ್ರಿ ಸುರಿದ ಕುಂಭದ್ರೋಣ ಮಳೆಯಿಂದ ತಿಕೋಟಾ ತಾಲ್ಲೂಕಿನ ಕಳ್ಳಕವಟಗಿ ಗ್ರಾಮದ ಸಂಗಮನಾಥ ಹಳ್ಳ ಉಕ್ಕಿ ಹರಿದು ಸಂಗಮನಾಥ ಗರ್ಭಗುಡಿ ಜಲಾವೃತಗೊಂಡಿರುವುದು.

ಮಳೆಗೆ ಇಡಿ ಗುಮ್ಮಟನಗರಿ ಜನಜೀವನವನ್ನೇ ಅಸ್ತವ್ಯಸ್ತಗೊಳಿಸಿದೆ. ನಗರದ ವಾರ್ಡ್ ನಂ 6, 10, 11, 13, 14, 20, 24, 26, 33 ಹಾಗೂ 33 ಹಾಗೂ ಬಾಗವಾನ ಕಾಲೋನಿ, ಫೈರ್ಮ್ ನಗರ, ಕೆ.ಸಿ.ನಗರ, ಆಲಕುಂಟೆ ನಗರ, ಗಚ್ಚಿನಕಟ್ಟಿ ಕಾಲೋನಿಯ ಮನೆಗಳಿಗೆ ನೀರು ನುಗ್ಗಿ ನಿವಾಸಿಗಳು ಮನೆಯಿಂದ ನೀರು ಎತ್ತಿ ಹೊರ ಹಾಕುವುದರಲ್ಲೇ ರಾತ್ರಿ ಕಳೆದಿದ್ದಾರೆ. ಇನ್ನೂ ರಾಮನಗರ, ರಾಜಾಜಿನಗರ ಮನಗೂಳಿ ಅಗಸಿ ಸುತ್ತಮುತ್ತಲಿನ ಪ್ರದೇಶದ ರಸ್ತೆಗಳು, ಮನೆ,ಅಂಗಡಿ, ವಾಹನಗಳು ಜಲಾವೃತಗೊಂಡು ಜನ ನರಕಯಾತನೆ ಅನುಭವಿಸಿದ್ದಾರೆ.

ಪ್ರತಿ ಬಾರಿ ಮಳೆಯಾದಾಗ ಸಂತಸ ಪಡುವ ಬದಲು ನಗರ ನಿವಾಸಿಗಳು ಸಂಕಷ್ಟಕ್ಕೆ ಸಿಲುಕಿ ನರಕಯಾತನೆ ಅನುಭವಿಸುವುದು ಸಾಮಾನ್ಯವಾಗಿದೆ. ಮಳೆಯಾದಗಷ್ಟೇ ತಾತ್ಕಾಲಿಕ ಪರಿಹಾರ ಕೈಗೊಳ್ಳುವ ಬದಲು ಜನಪ್ರತಿನಿಧಿಗಳು, ಅಧಿಕಾರಿಗಳು ಮಳೆಯಿಂದಾಗುವ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ನೀಡಿ, ನಗರ ನಿವಾಸಿಗಳ ಸಂಕಷ್ಟಗಳಿಗೆ ಮುಕ್ತಿ ನೀಡುವ ಕೆಲಸ ಮಾಡಬೇಕು ಎಂದು ಸಿಟಿಜನ್ ಫೋರಂ ನ ಮುಖ್ಯಸ್ಥ ಮುನ್ನಾ ಭಕ್ಷಿ ಆಗ್ರಹಿಸಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಬಿ.ಪಾಟೀಲ್ ಬೆಳಿಗ್ಗೆ ಜಿಲ್ಲಾಧಿಕಾರಿಗಳಿಗೆ ಕರೆ ಮಾಡಿ ರಾತ್ರಿಯಿಡಿ ಮಳೆಯಿಂದ ಸಮಸ್ಯೆಯಾಗಿರುವ ಸ್ಥಳಗಳಿಗೆ ಖುದ್ದು ಭೇಟಿ ನೀಡಿ, ಪರಿಶೀಲಿಸಬೇಕು. ಸಂತ್ರಸ್ತ ಜನರ ನೆರವಿಗೆ ಧಾವಿಸಿ, ಜಿಲ್ಲೆಯಲ್ಲಾದ ಬೆಳೆಹಾನಿ, ಆಸ್ತಿಪಾಸ್ತಿ ನಷ್ಟದ ಕುರಿತು ಪ್ರಾಥಮಿಕ ವರದಿ ಸಲ್ಲಿಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಅಲ್ಲದೇ ಕಳೆದ ರಾತ್ರಿಯಾದ ಮಳೆಯಿಂದ ಜನ ಆತಂಕಪಡುವ ಅಗತ್ಯವಿಲ್ಲ, ಸರ್ಕಾರ ಸದಾ ಜನಹಿತ ಕಾಯಲು ಬದ್ಧವಾಗಿದೆ ಎಂದು ಸಚಿವರು ಅಭಯ ಹೇಳಿದ್ದಾರೆ.

ಸಚಿವರ ಸೂಚನೆ ಬೆನ್ನಲ್ಲೇ ಡಿಸಿ, ಪಾಲಿಕೆ ಆಯುಕ್ತರು, ಮೇಯರ್, ಉಪಮೇಯರ್ ಮಳೆಯಿಂದ ಸಮಸ್ಯೆ ಎದುರಿಸುತ್ತಿರುವ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಪರಿಹಾರ ಕ್ರಮಕೈಗೊಳ್ಳಲು ಪಾಲಿಕೆ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ತುರ್ತು ಕ್ರಮಕೈಗೊಳ್ಳುವಂತೆ ಡಿಸಿ ಟಿ.ಭೂಬಾಲನ್ ಸೂಚನೆ ನೀಡಿದ್ದಾರೆ.

ಎಲ್ಲೆಲ್ಲಿ ಎಷ್ಟು ಮಳೆ - ಏನೇನು ಹಾನಿ

ಜಿಲ್ಲೆಯ ತಿಕೋಟಾ ತಾಲೂಕಿನಲ್ಲಿ 76 ಎಂಎಂ, ಇಂಡಿ ತಾಲೂಕಿನಲ್ಲಿ ಕನಿಷ್ಠ 7ಎಂಎಂ, ವಿಜಯಪುರ ನಗರ ಸೇರಿದಂತೆ ವಿಜಯಪುರ ತಾಲೂಕಿನಲ್ಲಿ 40ಎಂಎಂ ಮಳೆಯಾಗಿದ್ದು, ವಿಜಯಪುರ ನಗರದಲ್ಲಿ ವಿವಿಧೆಡೆ ನೀರು ನಿಂತಿರುವ ಪ್ರದೇಶಗಳಲ್ಲಿ ಪಾಲಿಕೆಯಿಂದ ಯಂತ್ರಗಳ ಮೂಲಕ ನೀರು ಹೊರ ಹಾಕುವ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಡಿಸಿ ಟಿ.ಭೂಬಾಲನ್ ತಿಳಿಸಿದ್ದಾರೆ. ಜಿಲ್ಲೆಯಲ್ಲಿ 57 ಮನೆಗಳು ಭಾಗಶಃ ಹಾನಿಯಾಗಿವೆ. ಯಾವುದೇ ಸಂಪೂರ್ಣ ಮನೆಹಾನಿ, ಜನ-ಜಾನುವಾರ ಹಾನಿ ಸಂಭವಿಸಿರುವುದಿಲ್ಲ. 2000 ಹೆಕ್ಟೆರಷ್ಟು ಅಂದಾಜು ಬೆಳೆ ಹಾನಿಯಾಗಿದೆ. ಸಮೀಕ್ಷೆ ಕೈಗೊಂಡಿದ್ದು, ಸಮೀಕ್ಷೆ ಮುಗಿದ ನಂತರ ನಿಖರ ಮಾಹಿತಿ ದೊರೆಯಲಿದೆ. ಸೆ. 25 ಜಿಲ್ಲಾ ಉಸ್ತುವಾರಿ ಸಚಿವರು ಮಳೆಯಿಂದ ಹಾನಿಯಾದ ಪ್ರದೇಶಗಳಿಗೆ ಭೇಟಿ ನೀಡಿ, ಸಾರ್ವಜನಿಕರ ಮನವಿ ಹಾಗೂ ಜಿ.ಪಂ ಕಾರ್ಯಾಲಯದಲ್ಲಿ ಪ್ರಗತಿ ಪರಿಶೀಲನೆ ಸಭೆ ನಡೆಸಲಿದ್ದಾರೆ, ಸಚಿವರ ನಿರ್ದೇಶನದಂತೆ ಎಲ್ಲಾ ಮುಂಜಾಗ್ರತ ಕ್ರಮಗಳನ್ನು ಜಿಲ್ಲಾಡಳಿತ ಕೈಗೊಂಡಿದೆ ಎಂದು ಡಿಸಿ ಟಿ.ಭೂಬಾಲನ್ ತಿಳಿಸಿದ್ದಾರೆ.

ಯುವಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಚಾಲನೆ | ಜೆಡಿಎಸ್ ಜಿಲ್ಲಾಧ್ಯಕ್ಷ ಬಸನಗೌಡ

ಜಿಲ್ಲೆಯಲ್ಲಿ ಜೆಡಿಎಸ್ ಸದಸ್ಯತ್ವ ಅಭಿಯಾನ ನಾಳೆ

ವಿಜಯಪುರ: ಜಾತ್ಯತೀತ ಜನತಾ ದಳ (ಜೆಡಿಎಸ್) ಪಕ್ಷವನ್ನು ತಳಮಟ್ಟದಿಂದ ಬಲವರ್ಧನೆ ಮತ್ತು ಸಂಘಟಿಸುವ ನಿಟ್ಟಿನಲ್ಲಿ ಜಿಲ್ಲೆಯಲ್ಲಿ ಸೆ.26 ರಂದು ಪಕ್ಷದ ಸದಸ್ಯತ್ವ ಅಭಿಯಾನ ಹಮ್ಮಿಕೊಳ್ಳಲಾಗಿದ್ದು, ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅಭಿಯಾನಕ್ಕೆ ಚಾಲನೆ ನೀಡಲಿದ್ದಾರೆ ಎಂದು ಪಕ್ಷದ ಜಿಲ್ಲಾಧ್ಯಕ್ಷ ಬಸನಗೌಡ ಮಾಡಗಿ ಮತ್ತು ದೇವರಹಿಪ್ಪರಗಿ ಶಾಸಕ ರಾಜುಗೌಡ ತಿಳಿಸಿದರು.

ನಗರದ ಜೆಡಿಎಸ್ ಜಿಲ್ಲಾ ಕಚೇರಿಯಲ್ಲಿ ಮಂಗಳವಾರ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಪಕ್ಷವನ್ನು ಸದೃಢಗೊಳಿಸುವ ಸಲುವಾಗಿ ಪಕ್ಷದ ವರಿಷ್ಠರು ಸದಸ್ಯತ್ವ ಅಭಿಯಾನಕ್ಕೆ ಕರೆಕೊಟ್ಟಿದ್ದಾರೆ. ಜಿಲ್ಲೆಯಲ್ಲಿ ಬೂತ್ ಮಟ್ಟದಲ್ಲಿ ಪಕ್ಷದ ಸಂಘಟನೆಗೊಳಬೇಕಿದೆ. 2024ರ ಚುನಾವಣೆ ನಂತರ ಪಕ್ಷ ಕುಗ್ಗಿದೆ ಎಂದು ಕಾರ್ಯಕರ್ತರಲ್ಲಿ ಹುಮ್ಮಸ್ಸು ಕುಗ್ಗಿತ್ತು. ಈಗ ಕೇಂದ್ರದಲ್ಲಿ ಹೆಚ್.ಡಿ.ಕುಮಾರಸ್ವಾಮಿ ಸಚಿವರಾಗಿದ್ದಾರೆ. ಅಲ್ಲದೇ, ಯುವ ನಾಯಕರಾದ ನಿಖಿಲ್ ಅವರಿಗೆ ಜವಾಬ್ದಾರಿ ವಹಿಸಲಾಗಿದೆ. ಇದರಿಂದ ಪಕ್ಷ ಮತ್ತೆ ಪುಟಿದೇಳಲು ಸಹಕಾರಿಯಾಗಿದೆ ಎಂದರು.

ರಾಜ್ಯದಲ್ಲಿ ಜೆಡಿಎಸ್‌ಅನ್ನು ಮತ್ತಷ್ಟು ಗಟ್ಟಿಗೊಳಿಸಲು ಸದಸ್ಯತ್ವ ಅಭಿಯಾನ ಆಯೋಜಿಸಲಾಗಿದೆ. ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಅಭಿಯಾನ ನಡೆಯಲಿದೆ. ಜಿಲ್ಲೆಯ ಬೂತ್, ತಾಲೂಕ ಮಟ್ಟದಲ್ಲಿ ಮನೆ-ಮನೆಗೆ ತೆರಳಿ ಸದಸ್ಯತ್ವ ಮಾಡಿಸುತ್ತೇವೆ. ದೇವರಹಿಪ್ಪರಗಿ ಕ್ಷೇತ್ರದಲ್ಲಿ ನಮ್ಮದೇ ಪಕ್ಷದ ಶಾಸಕರಿದ್ದು, ಶೇ.70ರಷ್ಟು ಪಕ್ಷದ ಸದಸ್ಯತ್ವ ಇದೆ. ಕಳೆದ ಚುನಾವಣೆಯಲ್ಲಿ ಬಸವನಬಾಗೇವಾಡಿ, ಇಂಡಿ ಮತಕ್ಷೇತ್ರದಲ್ಲಿ ಎರಡನೇ ಸ್ಥಾನ ಪಡೆದಿದ್ದೇವೆ. ನಾಗಠಾಣ ಕ್ಷೇತ್ರದಲ್ಲೂ ಪಕ್ಷ ಬಲಿಷ್ಠವಾಗಿದೆ. ಈ ನಾಲ್ಕು ಕ್ಷೇತ್ರದಲ್ಲಿ ಸದಸ್ಯತ್ವ ಪಡೆಯುವುದು ಸುಲಭವಿದೆ. ವಿಜಯಪುರ ನಗರ, ಬಬಲೇಶ್ವರ, ಮುದ್ದೇಬಿಹಾಳ, ಸಿಂದಗಿ ಕ್ಷೇತ್ರದಲ್ಲೂ ಸದಸ್ಯತ್ವ ಹೆಚ್ಚಿಸಲು ಶ್ರಮಿಸಲಾಗುವುದು ಎಂದು ತಿಳಿಸಿದರು.

ಶಾಸಕ ರಾಜುಗೌಡ ಪಾಟೀಲ್ ಮಾತನಾಡಿ, ತಾಲೂಕು, ಜಿಲ್ಲಾ ಪಂಚಾಯಿತಿ ಚುನಾವಣೆಗಳು ಬರಲಿವೆ. ಇವು ಕಾರ್ಯಕರ್ತರ ಚುನಾವಣೆಯಾಗಿದ್ದು, ಇದನ್ನು ಎದುರಿಸಬೇಕಿದೆ. ಜನರಿಗೂ ನಮ್ಮ ಪಕ್ಷದ ಬಗ್ಗೆ ಒಲವು ಇದೆ. ಹೀಗಾಗಿ ಗ್ರಾಮೀಣ ಹಾಗೂ ಬೂತ್ ಮಟ್ಟದಲ್ಲಿ ಪಕ್ಷವನ್ನು ಗಟ್ಟಿಗೊಳಿಸುವ ಕೆಲಸ ಮಾಡುತ್ತೇವೆ ಎಂದರು.

ನಗರದ ಜೆಡಿಎಸ್ ಜಿಲ್ಲಾ ಕಚೇರಿಯಲ್ಲಿ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಶಾಸಕ ರಾಜುಗೌಡ ಪಾಟೀಲ್ ಮಾತನಾಡಿದರು.

ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಪಕ್ಷದ ಸದಸ್ಯತ್ವಕ್ಕೆ ನಿಖಿಲ್ ಕುಮಾರಸ್ವಾಮಿ ಚಾಲನೆ ನೀಡುತ್ತಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಅವರು ಚಾಲನೆ ಕೊಟ್ಟ ನಂತರ, ಪಕ್ಷದ ಎಲ್ಲ ನಾಯಕರು ತಮ್ಮ ಕ್ಷೇತ್ರ, ತಾಲೂಕಗಳಲ್ಲಿ ಸದಸ್ಯತ್ವ ಅಭಿಯಾನ ಕೈಗೊಳ್ಳಲಿದ್ದಾರೆ. ಎಲ್ಲ ಕಡೆ ಪ್ರತಿ ಬೂತ್ ಸಮಿತಿಗಳನ್ನು ರಚಿಸಬೇಕು.

-ರಾಜುಗೌಡ ಪಾಟೀಲ್, ಶಾಸಕ

ಸುದ್ದಿಗೋಷ್ಠಿಯಲ್ಲಿ ಹಿರಿಯ ಮಾಜಿ ಶಾಸಕ ಬಿ.ಜಿ.ಪಾಟೀಲ (ಹಲಸಂಗಿ), ರಾಜ್ಯ ಉಪಾಧ್ಯಕ್ಷ ಅಪ್ಪುಗೌಡ ಪಾಟೀಲ, ಸವಿತಾ ಚವ್ಹಾಣ ಸೇರಿ ಹಲವರು ಉಪಸ್ಥಿತರಿದ್ದರು.

ಶಾಖಾ ಕಚೇರಿ ಕುಂಟೋಜಿ ಸಂಘಕ್ಕೆ 6.60 ಲಕ್ಷ ರು. ಲಾಭ

ಮುದ್ದೇಬಿಹಾಳ: ಪ್ರಾಥಮಿಕ ಕೃಷಿ ಪತ್ತಿನ ಸಹಾಕಾರಿ ಸಂಘದ ಎಲ್ಲ ನಿರ್ದೇಶಕರು ಹಾಗೂ ಸದಸ್ಯರ ಸಹಕಾರದಿಂದ ಸಂಘವು ಉತ್ತಮವಾಗಿ ನಡೆಯುತ್ತಿದೆ. 150 ಸದಸ್ಯರಿಂದ ಆರಂಭವಾಗಿ ಈಗ 2 ಸಾವಿರಕ್ಕೂ ಅಧಿಕ ಸದಸ್ಯರನ್ನ ಸಂಘ ಒಳಗೊಂಡಿದೆ. ಈಗಾಗಲೇ 53 ಹೊಸ ಸದಸ್ಯರು ಸಾಲಕ್ಕಾಗಿ ಅರ್ಜಿ ಸಲ್ಲಿಸಿದ್ದಾರೆ. ಸಾಲ ಪಡೆದ ಸದಸ್ಯರು ಸಕಾಲದಲ್ಲಿ ಸಾಲ ಮರು ಪಾವತಿ ಮಾಡಬೇಕು ಎಂದು ತಾಲೂಕು ವ್ಹಿಡಿಸಿಸಿ ಬ್ಯಾಂಕ್ ಕ್ಷೇತ್ರಾಧಿಕಾರಿ ಬಸವರಾಜ ಬಡದಾನಿ ಹೇಳಿದರು.

ತಾಲೂಕಿನ ಕುಂಟೋಜಿ ಗ್ರಾಮದ ಶಾಖಾ ಕಚೇರಿಯಲ್ಲಿ ನಡೆದ ಪ್ರಾಥಮಿಕ ಕೃಷಿ ಪತ್ತಿನ ಸಂಘ ನಿಯಮಿತ ಮುದ್ದೇಬಿಹಾಳ ಸಂಘದ 202324ನೇ ಸಾಲಿನ 49 ನೇ ವಾರ್ಷಿಕ ಮಹಾ ಸಭೆ ಸೋಮವಾರ ನಡೆಯಿತು. ಈ ವೇಳೆ ಮಾತನಾಡಿ, ಬೆಳೆ ಸಾಲ, ಹೈನುಗಾರಿಕೆ, ಟ್ರ್ಯಾಕ್ಟರ್ ಸಾಲ ಕೇವಲ 3% ಬಡ್ಡಿದರದಲ್ಲಿ ನೀಡಲಾಗುತ್ತಿದ್ದು ಇದನ್ನು ಸದುಪಯೋಗಪಡಿಸಿಕೊಳ್ಳಿ ಎಂದರು.

2023-24ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕ ಪತ್ರವನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವಿರೇಶ ಅಗ್ಗಿಮಠ ಅವರು ಓದಿ ಹೇಳುವ ಮೂಲಕ ವರದಿ ಮಂಡಿಸಿ ಮಾತನಾಡಿದ ಅವರು,

ಪ್ರಾಥಮಿಕ ಕೃಷಿ ಪತ್ತಿನ ಸಂಘ ನಿಯಮಿತ ಮುದ್ದೇಬಿಹಾಳ ಸಂಘದ 202324ನೇ ಸಾಲಿನ 49 ನೇ ವಾರ್ಷಿಕ ಮಹಾ ಸಭೆ ನಡೆಯಿತು.

2021-22 ಹಾಗೂ 2022-23 ನೇ ಸಾಲಿನಲ್ಲಿ ಸಂಘಕ್ಕೆ 5.67 ಲಕ್ಷ ರು. ಲಾಭಾಂಶ, 2023-24 ರಲ್ಲಿ 6.60 ಲಕ್ಷ ರು. ಸಂಘಕ್ಕೆ ಲಾಭ ದೊರಕಿದೆ.

ಈ ಸಂದರ್ಭದಲ್ಲಿ ವ್ಹಿಡಿಸಿಸಿ ಬ್ಯಾಂಕ್ ಕ್ಷೇತ್ರಾಧಿಕಾರಿ ಎಲ್.ಹೆಚ್ ರಾಠೋಡ, ಸಂಘದ ಅಧ್ಯಕ್ಷ ಶಿವಾನಂದ ಹುಲಗಣ್ಣಿ, ಸಂಘದ ಉಪಾಧ್ಯಕ್ಷ ಈರಪ್ಪ ಬಿರಾದಾರ, ಸಂಘದ ನಿರ್ದೇಶಕರುಗಳಾದ ಮಲ್ಲನಗೌಡ ಬಿರಾದಾರ, ಪರಶುರಾಮ ಮಡಿವಾಳರ, ಅಪ್ಪಾಜಯ್ಯ ಕೊಡೆಕಲ್ ಮಠ, ನಂದಾ ಬಾಗೇವಾಡಿ, ಸಿಬ್ಬಂದಿಗಳಾದ ಭಾರತಿ ನಾಟೇಕಾರ, ನಿಂಗಪ್ಪ ಮಡಿವಾಳರ ಸೇರಿದಂತೆ ಗ್ರಾಮಸ್ಥರಿದ್ದರು.

ಕೃಷಿ ಸಹಕಾರ ಸಂಘದ 48ನೇ ಮಹಾಸಭೆ

ದೇವರ ಹಿಪ್ಪರಗಿ: ರೈತರ ಸಹಕಾರದಿಂದ ಸಂಘ ಲಾಭದಲ್ಲಿ ಮುನ್ನಡೆಯುತ್ತಿದ್ದು. ರೈತರ ಪ್ರಗತಿಯೇ ದೇಶದ ಪ್ರಗತಿ. ಸಂಘದ ಸರ್ವಾಂಗೀಣ ಅಭಿವೃದ್ಧಿಗೆ ನಿಮ್ಮೆಲ್ಲರ ಸಹಕಾರ ಅಗತ್ಯವಾಗಿದ್ದು ಕಾರಣ ಸದಸ್ಯರು ಸಂಘದಿಂದ ಸಿಗುವ ಸೌಲಭ್ಯಗಳನ್ನು ಸಮರ್ಪಕವಾಗಿ ಬಳಸಿಕೊಂಡು ಹಾಗೂ ಸಕಾಲಕ್ಕೆ ಸಾಲವನ್ನು ಮರುಪಾವತಿಸಿ ಸಂಘದ ಅಭಿವೃದ್ಧಿಗೆ ಕೈಜೋಡಿಸಬೇಕೆಂದು ತಾಲೂಕಿನ ಯಾಳವಾರ ಗ್ರಾಮದ ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ ಅಧ್ಯಕ್ಷ ರಾಜುಗೌಡ ನಾಡಗೌಡ ಹೇಳಿದರು.

ತಾಲೂಕಿನ ಯಾಳವಾರ ಗ್ರಾಮದಲ್ಲಿ ನಡೆದ ವಿವಿಧೋದ್ದೇಶ ಪ್ರಾಥಮಿಕ ಸಹಕಾರಿ ಸಂಘದ 48ನೇ ವಾರ್ಷಿಕ ಸರ್ವಸಾಧಾರಣ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡುತ್ತಾ, ಕೃಷಿ ಸಹಕಾರಿ ಸಂಘಗಳು ರೈತ ಸಮುದಾಯಕ್ಕೆ ಆಧಾರ ಸ್ತಂಭವಾಗಿದೆ.

ಕಾರ್ಯಕ್ರಮ ಸಾನಿಧ್ಯವನ್ನು ಕಡಕೋಳದ ಶ್ರೀರಾಜಗುರು ಮಹಾಲಿಂಗ ಸ್ವಾಮಿಗಳು ವಹಿಸಿದ್ದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಗ್ರಾ ಪಂ. ಅಧ್ಯಕ್ಷರಾದ ಚನ್ನುಗೌಡ ನ್ಯಾಮಣ್ಣವರ ವಹಿಸಿದ್ದರು. ನೂತನವಾಗಿ ಸಂಘದ ನಿರ್ದೇಶಕರಾಗಿ ಆಯ್ಕೆಯಾದ ಕುಪೇಂದ್ರ ಜಾವಡಗಿ ಅವರನ್ನು ಸನ್ಮಾನಿಸಲಾಯಿತು. ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡಿ ಸನ್ಮಾನಿಸಲಾಯಿತು.

ಸಂಘದ ಉಪಾಧ್ಯಕ್ಷ ರಾವ್ ಸಾಹೇಬಗೌಡ ನ್ಯಾಮಣ್ಣವರ, ಮಾಜಿ ಅಧ್ಯಕ್ಷಎಸ್‌ಎಸ್ ಕೆಮಶೆಟ್ಟಿ, ಸಂಘದ ನಿರ್ದೇಶಕ ಶಿವನಗೌಡ ಪಾಟೀಲ, ರವಿ ದೊಡಮನಿ, ಶಿವಾನಂದ ಮೂಲಿಮನಿ, ಸಂಗನಗೌಡ ತಳೆವಾಡ, ಯಲ್ಲಪ್ಪ ಬೂದಿಹಾಳ, ಎಂ.ಬಿ.ಉಮ್ಮಣ್ಣವರ, ಯಾಳವಾರ, ಕಡಕೋಳ, ನಾಗರಾಳ, ಗ್ರಾಮದ ರೈತರು ಪಾಲ್ಗೊಂಡಿದ್ದರು.

ಕಾರ್ಯಕ್ರಮವನ್ನು ಬಿ.ವಾಯ್. ಬಂಟನೂರ ನಿರೂಪಿಸಿ ವಂದಿಸಿದರು. ಸಿ.ಆಯ್. ಲಗಳಿ. ವಾರ್ಷಿಕ ವರದಿ ಮಂಡಿಸಿದರು . ದಯಾನಂದ ಗುರುಮಠ ಸ್ವಾಗತಿಸಿದರು.

ಯಾಳವಾರ ಗ್ರಾಮದಲ್ಲಿ ನಡೆದ ವಿವಿಧೋದ್ದೇಶ ಪ್ರಾಥಮಿಕ ಸಹಕಾರಿ ಸಂಘದ 48ನೇ ವಾರ್ಷಿಕ ಸರ್ವಸಾಧಾರಣ ಸಭೆಯಲ್ಲಿ ರಾಜುಗೌಡ ನಾಡಗೌಡ ಮಾತನಾಡಿದರು.

ಸರಕಾರದಿಂದ ಸಿಗುವ ಶೂನ್ಯ ಬಡ್ಡಿ ದರದ ಸಾಲ ಸೌಲಭ್ಯವನ್ನು ಪ್ರತಿ ರೈತರು ಬಳಸಿಕೊಂಡು ಆರ್ಥಿಕವಾಗಿ ಅಭಿವೃದ್ಧಿ ಹೊಂದಬೇಕೆಂದು. ಸದ್ಯದಲ್ಲೇ ಸಂಘದಲ್ಲಿ ಬೀಜ ವಿತರಣಾ ಕೇಂದ್ರ ಪ್ರಾರಂಭಿಸಲಾಗುವುದು ರೈತರು ಇದರ ಉಪಯೋಗ ಪಡೆದುಕೊಳ್ಳಬೇಕು.

-ರಾಜುಗೌಡ ನಾಡಗೌಡ, ಕೃಷಿ ಸಂಘದ ಅಧ್ಯಕ್ಷ

ರಜತ ಮಹೋತ್ಸವದತ್ತ ಕರ್ನಾಟಕ ಸೊಸೈಟಿ

ವಿಜಯಪುರ: ದಿ.ಕರ್ನಾಟಕ ಕೋ-ಆಪ್ ಕ್ರೆಡಿಟ್ ಸೊಸೈಟಿ ಕಳೆದೊಂದು ವರ್ಷದಲ್ಲೇ ಐದು ನೂತನ ಶಾಖೆಗಳನ್ನು ತೆರೆದು 19.66 ಲಕ್ಷ ನಿವ್ವಳ ಲಾಭ ಗಳಿಸುವ ಜತೆಗೆ ಶೇ. 15 ರಷ್ಟು ಲಾಭಾಂಶ ಸದಸ್ಯರ ಶೇರುಗಳ ಮೇಲೆ ಹಂಚಿಕೆ ಮಾಡುವ ಮೂಲಕ ರಜತ ಮಹೋತ್ಸವದತ್ತ ಯಶಸ್ವಿಯಾಗಿ ದಾಪುಗಾಲಿಡುತ್ತಿದೆ ಎಂದು ಬ್ಯಾಂಕಿನ ಅಧ್ಯಕ್ಷ ಮಲ್ಲಿಕಾರ್ಜುನ ಎಸ್.ಲೋಣಿ ಹರ್ಷ ವ್ಯಕ್ತಪಡಿಸಿದರು.

ನಗರದ ವನಶ್ರೀಮಠದ ಸಭಾಭವನದಲ್ಲಿ ಭಾನುವಾರ ಆಯೋಜಿಸಿದ್ದ ದಿ.ಕರ್ನಾಟಕ ಕೋ-ಆಪ್ ಕ್ರೆಡಿಟ್ ಸೊಸೈಟಿಯ 24 ನೇ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ಉದ್ಘಾಟಿಸಿ, ವರದಿ ವಾಚನ ಮಾಡಿದರು. 2000 ಇಸ್ವಿಯಲ್ಲಿ 400 ಸದಸ್ಯರು ಹಾಗೂ ಕೇವಲ 5 ಲಕ್ಷ ಬಂಡವಾಳದೊಂದಿಗೆ ಆರಂಭವಾದ ದಿ. ಕರ್ನಾಟಕ ಸೊಸೈಟಿ ಕಳೆದ 24 ವರ್ಷಗಳಲ್ಲಿ ಸುಮಾರು 2 ಸಾವಿರಕ್ಕೂ ಅಧಿಕ ಸದಸ್ಯರನ್ನು ಹೊಂದಿ ವರ್ಷದಿಂದ ವರ್ಷಕ್ಕೆ ಲಾಭದಲ್ಲೇ ಮುನ್ನುಗುತ್ತಾ ಚಿಕ್ಕರೂಗಿ, ಚಡಚಣ, ಕೋಲ್ಹಾರ, ನಗರದ ಎರಡು ಸೇರಿ ಐದು ಶಾಖೆಗಳನ್ನು ತೆರೆದು ಪ್ರಸಕ್ತ ವರ್ಷ ಐತಿಹಾಸಿಕ ಪ್ರಗತಿ ಸಾಧಿಸಿದೆ.

ಹಿರಿಯ ನಿರ್ದೇಶಕ ಬಿ.ಜಿ.ಪಾಟೀಲ ಹಲಸಂಗಿ ಅವರು ಮಾತನಾಡಿ, ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಯನ್ನು ಉತ್ತೇಜಿಸುವ ಪ್ರಾಥಮಿಕ ಗುರಿಯೊಂದಿಗೆ ನಮ್ಮ ಬ್ಯಾಂಕು ಆರಂಭಗೊಂಡು ಸತತವಾಗಿ 24 ವರ್ಷಗಳಿಂದ ಜನತೆಯ ಸೇವೆ ಸಲ್ಲಿಸುತ್ತಿರುವದು ಶ್ಲಾಘನೀಯ ಎಂದರು. ನಿರ್ದೇಶಕ ಎಸ್. ಎಸ್. ಶಿರಾಡೋಣ ಮಾತನಾಡಿ, ನಮ್ಮ ಸೊಸೈಟಿಯಲ್ಲಿ ಗ್ರಾಹಕರ ಧರ್ಮ, ಲಿಂಗ ಮತ್ತು ಜಾತಿಯನ್ನು ಲೆಕ್ಕಿಸದೇ, ಸದಸ್ಯತ್ವವು ಎಲ್ಲರಿಗೂ ಮುಕ್ತವಾಗಿದೆ ಎಂದರು. ಜ್ಞಾನಯೋಗಾಶ್ರಮದ ಅದ್ವಿತಾನಂದ ಸ್ವಾಮೀಜಿ ಸಾನಿಧ್ಯ ನುಡಿಗಳಾಡಿದರು. ಉತ್ತಮ ಗ್ರಾಹಕರನ್ನು ಹಾಗೂ ವಿವಿಧ ಶಾಖೆಯ ಗೌರವ ಸಲಹೆಗಾರರನ್ನು ಸನ್ಮಾನಿಸಲಾಯಿತು.

ಸಭೆಯಲ್ಲಿ ಸೊಸೈಟಿ ಉಪಾಧ್ಯಕ್ಷ ಎ. ಆರ್. ಉಕ್ಕಲಿ, ನಿರ್ದೇಶಕರಾದ ಜಿ. ಟಿ. ಪಾಟೀಲ, ಆರ್. ಎಲ್. ಇಂಗಳೇಶ್ವರ, ಎ. ಎಸ್. ಹೊಸಮನಿ, ಎಸ್. ಜಿ. ಗಡಗಿ, ಎಸ್. ಜಿ. ಹಿಟ್ನಳ್ಳಿ, ಎಸ್. ಎಂ. ಕಡಿ, ಶೋಭಾ ಕತ್ನಳ್ಳಿ ಹಾಗೂ ವಿವಿಧ ಶಾಖೆಗಳ ಗೌರವ ಸಲಹೆಗಾರರಾದ ಶರಣಪ್ಪ ಶಾಪೇಟಿ, ಕಾಶೀಬಾಯಿ ವಾಲೀಕಾರ, ವ್ಯವಸ್ಥಾಪಕಿ ಮೇಘಾ ಅರ್ಜುಣಗಿ ಸೇರಿದಂತೆ ಎಲ್ಲ ಶಾಖೆಯ ಸಿಬ್ಬಂದಿ ವರ್ಗದವರು, ಸದಸ್ಯರು ಉಪಸ್ಥಿತರಿದ್ದರು. ಶಿಕ್ಷಕ ಸಂತೋಷ ಬಂಡೆ ನಿರ್ವಹಿಸಿದರು. ಸಂಗೀತ ಶಿಕ್ಷಕ ಬಾಬಾಸಾಹೇಬ ಕಾಂಬಳೆ ಸ್ವಾಗತಿಸಿದರು.

ದಿ.ಕರ್ನಾಟಕ ಕೋ-ಆಪ್ ಕ್ರೆಡಿಟ್ ಸೊಸೈಟಿಯ ವಾರ್ಷಿಕ ಸದಸ್ಯ ವಿವಿಧ ಶಾಖೆಯ ಗೌರವ ಸಲಹೆಗಾರರನ್ನು ಸನ್ಮಾನಿಸಲಾಯಿತು.

ದಿ.ಕರ್ನಾಟಕ ಸೊಸೈಟಿ ಸರ್ವ ಸಮಾಜಗಳನ್ನು ಒಗ್ಗೂಡಿಸಿಕೊಂಡು ಬೆಳವಣಿಗೆ ಹೊಂದುವ ಸೊಸೈಟಿಯಾಗಿದೆ. ಮುಂದೆ ಅವಳಿ ಜಿಲ್ಲೆಯಲ್ಲಿ ಕನಿಷ್ಟ 25 ಶಾಖೆ ಮಾಡುವ ಗುರಿ ಇದೆ. ಕಲಬುರಗಿಯಿಂದಲೂ ಶಾಖೆಗಳಿಗೆ ಬೇಡಿಕೆ ಬಂದಿದ್ದು, ಬೆಂಬಲ ವ್ಯಕ್ತವಾಗುತ್ತಿದೆ, ಸೊಸೈಟಿ ಸರ್ವಾಂಗೀಣ ಪ್ರಗತಿಯಲ್ಲಿ ಸರ್ವ ಸದಸ್ಯರ ಸಹಕಾರ, ನಿರ್ದೇಶಕರ ಶ್ರಮ ದೊಡ್ಡದಿದೆ.

-ಮಲ್ಲಿಕಾರ್ಜುನ ಎಸ್.ಲೋಣಿ, ಬ್ಯಾಂಕಿನ ಅಧ್ಯಕ್ಷ

ಸಾಹಿತ್ಯ ಸಮ್ಮೇಳನ ಯಶಸ್ವಿಗೆ ಸಹಕಾರ

ತಾಳಿಕೋಟಿ: ಪಟ್ಟಣದಲ್ಲಿ ಅಕ್ಟೋಬರ್ 01 ರಂದು ನಡೆಯಲಿರುವ ತಾಳಿಕೋಟೆ ತಾಲೂಕಿನ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಯಶಸ್ವಿಗೆ ಜಮಾತೆ ಇಸ್ಲಾಮಿ ಹಿಂದ್ ಸ್ಥಾನೀಯ ಶಾಖೆಯ ಸಂಪೂರ್ಣ ಸಹಕಾರ ಇರಲಿದೆ ಎಂದು ನಗರ ಅಧ್ಯಕ್ಷ ಮುಜಾಹೀದ ನಮಾಜಕಟ್ಟಿ ಹೇಳಿದರು. ಸೋಮವಾರ ಸಂಜೆ ಪರಿಷತ್ತಿನ ಕಾರ್ಯಾಲಯಕ್ಕೆ ಜಮಾತ್ ನಿಯೋಗದೊಂದಿಗೆ ಭೇಟಿ ನೀಡಿದ ಅವರು ಕಸಾಪ ಅಧ್ಯಕ್ಷರಿಗೆ ಸಹಕಾರದ ಅಭಯ ನೀಡಿ ಮಾತನಾಡಿ, ಕನ್ನಡ ಭಾಷೆ ನಮ್ಮೆಲ್ಲರ ಪ್ರೀತಿಯ ಹಾಗೂ ಅಭಿಮಾನದ ಭಾಷೆಯಾಗಿದೆ. ತಾಲೂಕಿನ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುತ್ತಿರುವುದು ಸಂತೋಷದ ವಿಷಯವಾಗಿದೆ ಎಂದರು. ಪರಿಷತ್ತಿನ ಅಧ್ಯಕ್ಷ ಆರ್.ಎಲ್.ಕೊಪ್ಪದ ಅವರು ಮಾತನಾಡಿ, ಕನ್ನಡಾಂಬೆಯ ತೇರನ್ನು ಸರ್ವ ಸಮಾಜದ ಬಾಂಧವರು ಒಗ್ಗೂಡಿ ಎಳೆಯಬೇಕಾಗಿದೆ. ಈ ಸಮಯದಲ್ಲಿ ಜಮಾತ್ ಪದಾಧಿಕಾರಿಗಳಾದ ಅಬ್ದುಲ್ ಕರೀಮಸಾಬ ಬಾಗವಾನ, ಉಸ್ಮಾನ ಗನಿ ಖಾಜಿ, ಇರ್ಫಾನ್ ಖಾಜಿ, ಅಕ್ಬರ್ ಶಾ ಮಕಾನದಾರ, ಜಾವೇದ ಕೆಂಭಾವಿ, ಶಫೀಕ ಇನಾಮದಾರ, ಹುಸೇನ್ ಪಟೇಲ, ಅಬ್ದುಲ್ ಅಜೀಜ ಜಮಾದಾರ, ಇಲಿಯಾಸ್ ಚೌದರಿ, ಇಸ್ಮಾಯಿಲ್ ನಮಾಜಕಟ್ಟಿ, ಯಾಸೀನ ಬಾಗಬಾನ, ಅಜೀಜ ಪೀರಾಪೂರ, ಅಲ್ಲಾಭಕ್ಷ ಮುದನೂರ ಹಾಗೂ ಕಸಾಪ ಪದಾಧಿಕಾರಿ ಡಾ. ನಜೀರ ಕೋಳ್ಯಾಳ, ಜೈ ಭೀಮ ಮುತ್ತಗಿ, ಸಂಗನಗೌಡ ಅಸ್ಕಿ, ಅಶೋಕ ಬಳಗಾನೂರ, ಜಗದೀಶ್ ಬಿಳೇಭಾವಿ ಉಪಸ್ಥಿತರಿದ್ದರು. ಶಿಕ್ಷಕ ಜಾಮಗೊಂಡಿ ವಂದಿಸಿದರು.

ಕೊಲ್ಹಾರ ತಾಲೂಕಿನ ಮಸೂತಿ ಗ್ರಾಮದ ವಿದ್ಯಾರ್ಥಿನಿಯರು ಇತ್ತೀಚೆಗೆ ಆಲಮಟ್ಟಿ ಎಂ.ಎಚ್.ಎಂ ಪ್ರೌಢಶಾಲೆಯಲ್ಲಿ ಜರುಗಿದ ತಾಲೂಕು ಮಟ್ಟದ ಬಾಲಕಿಯರ ಖೋ ಖೋ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾದ ಪ್ರಯುಕ್ತ ಸಚಿವ ಶಿವಾನಂದ ಪಾಟೀಲ ಮಸೂತಿ ಗ್ರಾಮದಲ್ಲಿ ವಿದ್ಯಾರ್ಥಿನಿಯರನ್ನು ಸನ್ಮಾನಿಸಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಅನೇಕ ಗಣ್ಯರು ಉಪಸ್ಥಿತರಿದ್ದರು.

ನಾನು ಸಿದ್ದರಾಮಯ್ಯ ಪರ: ಯಶವಂತರಾಯ ಗೌಡರು

ಇಂಡಿ: ಪ್ರಾಸಿಕ್ಯೂಷನ್ ಕುರಿತು ಹೈಕೋರ್ಟ ಪರವಾಗಿ ತೀರ್ಪು ನೀಡಿದ್ದರೂ ಕೂಡ ನಾವು ನ್ಯಾಯಾಲಯಕ್ಕೆ ಅಪೀಲು

ಮಾಡುತ್ತಿದ್ದೇವೆ. ಮತ್ತು ನಾನು ಅಲ್ಲದೆ ಕರ್ನಾಟಕದ 136 ಶಾಸಕರು ಸಿದ್ದರಾಮಯ್ಯನವರ ಪರವಾಗಿ ನಿಲ್ಲುತ್ತೇವೆ ಎಂದು ಯಶವಂತರಾಯ ಗೌಡರು ಹೇಳಿದರು. ಪಟ್ಟಣದ ಪ್ರವಾಸಿ ಮಂದಿರದಲ್ಲಿ ಪತ್ರಿಕಾ ಗೋಷ್ಟಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸರಕಾರ ಎಲ್ಲಿ ಬಿಜೆಪಿಯೇತರ ಸರ ಕಾರ ಇದೆ ಆ ಮುಖ್ಯಮಂತ್ರಿಗಳಿಗೆ ಕಿರುಕುಳ ನೀಡುತ್ತಿದೆ. ಇಡಿ,ಐಟಿ, ಸಿಬಿಐ ದುರ್ಬಳಕೆ ಮಾಡಿಕೊಂಡು ವಿರೋಧಿ ಚುನಾಯಿತ ಪ್ರತಿ ನಿಧಿಗಳನ್ನು ಹತ್ತಿಕ್ಕುವ ಹುನ್ನಾರ ಮಾಡುತ್ತಿದೆ ಎಂದರು. 1983 ರಲ್ಲಿ ಕನ್ನಡ ಕಾವಲು ಸಮಿತಿಯ ಅಧ್ಯಕ್ಷರಾಗಿ ಇಲ್ಲಿಯ ವರೆಗೆ ಸಿದ್ದರಾಮಯ್ಯ ಕಪ್ಪು ಚುಕ್ಕೆ ಇಲ್ಲದ ರಾಜಕೀಯ ಮಾಡಿದ್ದಾರೆ. ಸಚ್ಚಾರಿತ್ರತೆಯ, ಬದ್ಧತೆಯ ಮತ್ತು ಜನಮಾ ನಸದಲ್ಲಿ ಛಾಪು ಮೂಡಿಸಿದ್ದಾರೆ. ಅವರ ತೋಜೊವಧೆ ಬಿಜೆಪಿ ಮಾಡುತ್ತಿದೆ ಎಂದರು. ಕಾಂಗ್ರೆಸ್ ಪಕ್ಷ, ಪಕ್ಷದ ಕೇಂದ್ರ ನಾಯ ಕರು, ಎಲ್ಲ ಶಾಸಕರು, ಮಂತ್ರಿಮಂಡಳ ಸಿದ್ದ ರಾಮಯ್ಯನವರ ಪರವಾಗಿದೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಇಲಿಯಾಸ ಬೋರಾ ಮಣಿ, ಜಟ್ಟೆಪ್ಪ ರವಳಿ, ಭೀಮಣ್ಣ ಕವಲಗಿ, ಜಾವೇದ ಮೋಮಿನ, ಪ್ರಶಾಂತ ಕಾಳೆ ಮತ್ತಿತರಿದ್ದರು.

ಬೆಂಗಳೂರು
ಬುಧವಾರ
25 | 09 | 2024

ವಿಶ್ವವಾಣಿ
ಆರಾಮ

@vishwavaninews

ಅನುದಿನವೂ ವಿರಾಮಕ್ಕೆ ಒಂದು ನೆಪ

ಚಿತ್ತ ವಿಹಾರ

ಕುಗ್ಗದಿರು ಮನವೇ!

ಭಾರತೀಯ ಒಲಂಪಿಕ್ಸ್ ಆಟಗಾರ್ತಿ ಮನು ಭಾಕರ್ 2020 ರ ಟೋಕಿಯೋದಲ್ಲಿ ನಡೆದ ಒಲಂಪಿಕ್ಸ್ ಸಂದರ್ಭದಲ್ಲಿ ತಾಂತ್ರಿಕ ಕಾರಣದಿಂದ ಪಿಸ್ತೂಲ್ ಕೈಕೊಟ್ಟ ಕಾರಣಕ್ಕೆ ಸ್ಪರ್ಧಿಸಲಾಗದ ಅಸಹಾಯಕತೆಯಿಂದ ನೊಂದಿದ್ದರು. ಕ್ರೀಡೆಯಿಂದ ಸಂಪೂರ್ಣ ಹೊರಗೆ ಬರಬೇಕೆಂದು ಬಯಸಿ ನಿವೃತ್ತಿಯ ಕುರಿತು ಯೋಚಿಸಿದ್ದರು. ನಂತರ ತನ್ನೆಲ್ಲ ನೋವು ಮರೆತು ನಿರ್ಧಾರವನ್ನು ಬದಲಿಸಿಕೊಂಡರು. ತನ್ನೆಲ್ಲ ನೋವು, ಸಂಕಟಗಳಿಂದ ಹೊರಬಂದು ವಿದೇಶಗಳಲ್ಲಿ ನಿರಂತರ ತರಬೇತಿ ಪಡೆದರು. ಮಾನಸಿಕವಾಗಿ

ಗಟ್ಟಿಯಾದರು. ಸಂಪೂರ್ಣವಾಗಿ ತರಬೇತಿಗೆ ತೊಡಗಿಸಿಕೊಂಡರು. ಒಲಂಪಿಕ್ಸ್-2024 ಕ್ರೀಡೆಯಲ್ಲಿ ಉತ್ಸಾಹದಿಂದ ಭಾಗವಹಿಸಿದರು. ಮಹಿಳೆಯರ 10 ಮೀಟರ್ ಏರ್ ಪಿಸ್ತೂಲ್ ವಿಭಾಗದಲ್ಲಿ ಪದಕ ಗೆದ್ದ ಮೊದಲ ಭಾರತೀಯ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿ ಸಾಧನೆಗೆ ಸಾಕ್ಷಿಯಾದರು. ಮಾತ್ರವಲ್ಲದೇ ಅದೇ ಆವೃತ್ತಿಯಲ್ಲಿ ಮಿಶ್ರ 10 ಮೀಟರ್ ಏರ್ ಪಿಸ್ತೂಲ ತಂಡದ ಸ್ಪರ್ಧೆಯಲ್ಲಿ ಸರಬ್ಜೋತ್ ಸಿಂಗ್ ಅವರೊಂದಿಗೆ ಪಾಲುದಾರಾದರು. ಒಲಂಪಿಕ್ಸ್ ನಲ್ಲಿ 2 ಪದಕಗಳನ್ನು ಗೆದ್ದ ಮೊದಲ ಭಾರತೀಯ ಮಹಿಳೆಯಾಗಿ ತನ್ನನ್ನು ಗುರುತಿಸಿಕೊಂಡರು. ನಮಗೆ ಇಷ್ಟವಾಗುವ ವಿಷಯವಾಗಲಿ, ಇಲ್ಲವೇ ಇಷ್ಟವಾಗದೇ ಇರುವ ವಿಷಯವಾಗಲಿ ನಮ್ಮ ಜೀವನದ ಉದ್ದೇಶಗಳಿಗೆ ಬದ್ಧರಾಗಿರಬೇಕು. ಸುಲಭವೆನಿಸುವ ವಿಷಯಗಳ ಬೆಂಬತ್ತಿ ಹೋಗುವುದಕ್ಕೆ ಬದಲಾಗಿ ನಮ್ಮ ಆಯ್ಕೆಗಳಿಗೆ ಆದ್ಯತೆ ನೀಡಿ ಅವುಗಳನ್ನು ನಮ್ಮ ದಕ್ಕುವಂತೆ ಮಾಡುವಲ್ಲಿ ದೃಢಸಂಕಲ್ಪ ತೊಡಬೇಕು. ನಮ್ಮ ಅಂತರಾಳದ ದನಿಗೆ ಕಿವಿಯಾಗಿ ನಮಗೆ ಸರಿಯೆನಿಸಿದ್ದನ್ನು ಮಾಡುವ ಹಾದಿಯಲ್ಲಿ ಯಾವುದೇ ಅಡೆತಡೆಗಳು ಎದುರಾದಾಗಲು ಅವುಗಳನ್ನು ನಿರ್ಲಕ್ಷಿಸಿ ಸಂಕಷ್ಟಗಳ ಸನ್ನಿವೇಶಗಳನ್ನು ಎದುರಿಸಲು ಮನಸ್ಸನ್ನು ಸಿದ್ಧಗೊಳಿಸಬೇಕು. ಮಾಡಲೇಬೇಕಾದದ್ದನ್ನು ಮಾಡುವ ಸಾಮರ್ಥ್ಯವನ್ನು ಇಂಬುಗೊಳಿಸಿಕೊಳ್ಳಬೇಕು. ಇದು ಯಶಸ್ಸನ್ನು ತಂದು ಕೊಡುತ್ತದೆ.

• ಮಹಾದೇವ ಬಸರಕೋಡ

ಹನಿ ಕಥೆಗಳು

ನಾಯಕರ ಸ್ವಚ್ಛತಾ ಅಭಿಯಾನ

ಸ್ವಚ್ಛತಾ ಅಭಿಯಾನಕ್ಕಾಗಿ ಮಾನ್ಯ ಶಾಸಕರ ನೇತೃತ್ವದಲ್ಲಿ ಕಾರ್ಯಕ್ರಮ ನಡೆದಿತ್ತು. ಅಲ್ಲಿನ ವಿಪರೀತ ಬಿಸಿಲಿನ ಧಗೆಯನ್ನು ಲೆಕ್ಕಿಸದೇ ಶಾಸಕರು ಸಾಮಾನ್ಯರಂತೆ ಬೀದಿಯ ಕಸವನ್ನು ಗುಡಿಸಿದ್ದು ಕಂಡು ಜನರು ಇಂತಹ ನಾಯಕನಿಗೆ ಮತ ಹಾಕಿದ್ದು ಸಾರ್ಥಕವಾಯಿತೆಂದು ಕೊಂಡರು. ಸ್ವಚ್ಛತಾ ಅಭಿಯಾನ ಮುಗಿದ ಮೇಲೆ ಉಪಾಹಾರದ ವ್ಯವಸ್ಥೆಯನ್ನು ಮಾಡಲಾಗಿತ್ತು. ಶಾಸಕರು ಉಪಾಹಾರ ತಿಂದ ಪೇಪರ್ ಪ್ಲೇಟನ್ನು ರಸ್ತೆಯ ಬದಿಯಲ್ಲಿಯೇ ಎಸೆದರು. ಜನರೂ ಹಾಗೆಯೇ ಮಾಡಿದರು. ಶಾಸಕರು ಕಾರ್ ಹತ್ತುವ ವೇಳೆಗೆ ರಸ್ತೆಯ ಬದಿಯಲ್ಲಿದ್ದ ಹಂದಿ, ನಾಯಿಗಳು ಉಪಾಹಾರದ ಪೇಪರ್ ಪ್ಲೇಟನ್ನು ಎಳೆದಾಡುತ್ತಿದ್ದವು.

ಶಾಸ್ತ್ರ

ದಿನನಿತ್ಯ ತನ್ನ ಬಳಿ ಬಂದವರ ಮನಸ್ಸಿನ ಸಮಸ್ಯೆಗಳನ್ನು ಆಲಿಸಿ ಶಾಸ್ತ್ರ ಹೇಳುತ್ತಿದ್ದ ಖ್ಯಾತ ಜ್ಯೋತಿಷಿಗೆ ತನ್ನ ಹೆಂಡತಿ ಯಾವ ಕಾರಣಕ್ಕಾಗಿ ವಿಚ್ಛೇದನ ನೀಡಿದಳೆಂಬುದು ಮಾತ್ರ ತಿಳಿಯಲೇ ಇಲ್ಲ.

ಸ್ವಾತಂತ್ರ್ಯ

ಐದಾರು ವರ್ಷದ ಮಕ್ಕಳು ಸಾವಿರಾರು ರೂಪಾಯಿಗಳ ಡೊನೇಷನ್ ಕೊಟ್ಟು ಶಿಕ್ಷಣ ಪಡೆಯಲು ಮಣಭಾರದ ಚೀಲವನ್ನು ಬೆನ್ನಿಗೆ ಏರಿಸಿಕೊಂಡು ಹೋಗುತ್ತಿದ್ದರು. ಪಕ್ಕದಲ್ಲಿದ್ದ ರಸ್ತೆಗೆ ಡಾಂಬರು ಹಾಕುವವನ ಮಗುವೊಂದು ಸಂತಸದಿಂದ ನಗುತ್ತಾ ಮಣ್ಣಿನಲ್ಲಿ ಆಡುತ್ತಿತ್ತು.

• ಗಿರಿಜಾಶಂಕರ್ ಜಿ ಎಸ್

ದೂರು ಪೆಟ್ಟಿಗೆ

ಪಕ್ಷಾತೀತವಾಗಿ ಸಲ್ಲಿಸುತ್ತಿದ್ದಾರೆ
ಒಬ್ಬರ ಮೇಲೆ ಒಬ್ಬರು ದೂರು
ಆಗುತ್ತಿದೆ ಕಚೇರಿ ದೂರುಗಳ ಪೆಟ್ಟಿಗೆ
ದಿನ ಬೆಳಗಾದರೆ ಕಣ್ಣಾಡಿಸಬೇಕಿದೆ
ಭೂತಕಾಲದ ಹಗರಣಗಳ ಪೆಟ್ಟಿಗೆ!

• ಮಹಾಂತೇಶ ಮಾಗನೂರ

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್: vishwavanimagazine@gmail.com

ಉತ್ತಮ ಉದ್ಯೋಗ ದೊರಕದೇ ಹತಾಶರಾಗುವ ಯುವ ಜನತೆಗೆ ಒಂದು ಆಶಾಕಿರಣ ಎಂದರೆ ಗುತ್ತಿಗೆದಾರರ ವೃತ್ತಿ! ನಿಮ್ಮಲ್ಲಿ ನಾಯಕತ್ವ ಗುಣವಿದ್ದರೆ, ಈ ಹಾದಿಯಲ್ಲಿ ಮುಂದುವರಿಯುವ ಅವಕಾಶಗಳಿವೆ.

ನಿರುದ್ಯೋಗಿಯೆಂದು ಕೊರಗಬೇಡಿ ಗುತ್ತಿಗೆದಾರರಾಗಿ!

• ಸಿದ್ದೇಶ್ ಹಾರನಹಳ್ಳಿ

ನಿರುದ್ಯೋಗ ವಿಶ್ವದ ಜ್ವಲಂತ ಸಮಸ್ಯೆ. ಈ ನಿರುದ್ಯೋಗ ಸಮಸ್ಯೆಯಿಂದಾಗಿಯೇ ಹಲವು ದೇಶದಲ್ಲಿ ಸರಕಾರಗಳೇ ಉರುಳು ಹೋಗಿವೆ. ಭಾರತದಲ್ಲಿ ನಿರುದ್ಯೋಗ ಎನ್ನುವುದು ಇಂದು ನಿನ್ನೆಯ ಸಮಸ್ಯೆಯೇನಲ್ಲ. ನಿರುದ್ಯೋಗ ನಿರ್ಮೂಲನೆಗೆ ಸರಕಾರಗಳು ಅಗತ್ಯ ಕ್ರಮವಹಿಸಬೇಕು ಎನ್ನುವುದು ಎಷ್ಟು ಸತ್ಯವೋ, ಸರಕಾರದಿಂದಲೇ ಶೇ.100ರಷ್ಟು ನಿರುದ್ಯೋಗ ನಿರ್ಮೂಲನೆ ಅಸಾಧ್ಯ ಎನ್ನುವುದು ಎಷ್ಟೇ ಸತ್ಯ.

ಇಂತಹ ಸಮಯದಲ್ಲಿ ಯುವಕರು ನಿರುದ್ಯೋಗ ಸಮಸ್ಯೆಗೆ ಪರಿಹಾರ ನೀಡುವುದಕ್ಕೆ ಸರಕಾರಗಳು ಹತ್ತು ಹಲವು ಯೋಜನೆಗಳನ್ನು ರೂಪಿಸಿದರೂ ನಮಗೆ ಕೆಲಸ ಸಿಗುತ್ತಿಲ್ಲವೆಂದು ಯುವಕರು 'ಆರೋಪಿಸುವ' ಬದಲು ಈ ಸಮಸ್ಯೆಯನ್ನು ಮೀರಿ ಸ್ವ ಉದ್ಯೋಗ ಮಾಡುವುದು ಹೇಗೆ ಎನ್ನುವುದು ಮುಖ್ಯವಾಗುತ್ತದೆ. ಯುವಕರು ಈ ನಿಟ್ಟಿನಲ್ಲಿ ಕೊಂಚ ಆಲೋಚನೆ ಮಾಡಿದರೆ ಪರಿಹಾರ ಸಿಗುವುದರಲ್ಲಿ ಅನುಮಾನವಿಲ್ಲ. ಸರಕಾರಿ ಕೆಲಸವಿಲ್ಲದಿದ್ದರೂ ಸರಕಾರದ ಭಾಗವಾಗಿರುವ ಬದುಕು ಕಟ್ಟಿಕೊಳ್ಳಬಹುದು ಎನ್ನುವ ಬಗ್ಗೆ ಅನೇಕ ಯುವಕರು ಯೋಚಿಸುವುದಿಲ್ಲ. ಈ ದಿಕ್ಕಿನಲ್ಲಿ ಯೋಚಿಸಿದರೆ, ನಿರುದ್ಯೋಗಿ ಎನ್ನುವ ಹಣೆಪಟ್ಟಿ ಕಟ್ಟಿಕೊಂಡಿರುವ ಯುವಕರು 'ಸ್ವಾವಲಂಬಿ'ಗಳಾಗುವುದರೊಂದಿಗೆ ಹತ್ತಾರು ಜನರಿಗೆ ಉದ್ಯೋಗ ನೀಡಬಹುದು. ಹಾಗಾದರೆ, ಈ ಕೆಲಸವಾದರೂ ಯಾವುದು ಎನ್ನುವ ಬಗ್ಗೆ ಯೋಚಿಸುತ್ತಿರಬಹುದು. ಅದಕ್ಕೆ ಉತ್ತರವಾಗಿ ಬರುವ ಕೆಲಸವೆಂದರೆ ಅದು 'ಗುತ್ತಿಗೆದಾರರು'!

ಹೌದು, ಕೇಂದ್ರ ಅಥವಾ ರಾಜ್ಯ ಸರಕಾರ ಸೇರಿದಂತೆ ಸರಕಾರದಲ್ಲಿ ಬರುವ ಎಲ್ಲಾ ಆರ್ಥಿಕ ಸಂಸ್ಥೆಗಳು ತಾವು ನಿರ್ವಹಿಸಬೇಕಾಗಿರುವ ಯಾವುದೇ ಕಾಮಗಾರಿ, ಸರಕು ಖರೀದಿ ಹಾಗೂ ಸೇವೆಗಳ ಪರಭಾರೆಗೆ ಗುತ್ತಿಗೆದಾರರನ್ನು ಅವಲಂಬಿಸಿದೆ. ಈ ರೀತಿ ಯಾವುದೇ ಕಾರ್ಯಕ್ಕೆ ಟೆಂಡರ್ ಎನ್ನಲಾಗುವುದು. ಈ ಸೇವೆಯನ್ನು ಒದಗಿಸುವವರನ್ನು ಗುತ್ತಿಗೆದಾರರು ಎಂದು ಕರೆಯಬಹುದು.

ಪಾರದರ್ಶಕವಾಗಿರಲು ಕೆಟಿಪಿಪಿ ಕಾಯಿದೆ

ಈ ಪ್ರಕ್ರಿಯೆಯನ್ನು ಸ್ಪರ್ಧಾತ್ಮಕವಾಗಿ ಹಾಗೂ ಪಾರದರ್ಶಕವಾಗಿ ನಡೆಸುವ ಉದ್ದೇಶದಿಂದ ರಾಜ್ಯ ಸರಕಾರ 'Karnataka Transparency in public procurement Act-1999' ಎನ್ನುವ ಕಾಯಿದೆಯನ್ನು ಜಾರಿಗೊಳಿಸಿದ್ದು, ಇದು ಕಾಲಕಾಲಕ್ಕೆ ತಿದ್ದುಪಡಿಯಾಗಿ ಇದರ ಸುಗಮವಾದ ಅನುಷ್ಠಾನಕ್ಕೆಂದೇ ಅಧಿಸೂಚನೆಗಳು, ನಿಯಮಗಳನ್ನು ಪ್ರಕಟಿಸಲಾಗುತ್ತಿದೆ. ಯುವಕರು ಗುತ್ತಿಗೆದಾರಾಗಲು ಬಯಸಿದರೆ ಅಥವಾ ಕನಸನ್ನು ಕಂಡಿದ್ದರೆ ಈ ಕೆಟಿಪಿಪಿ ಕಾಯಿದೆಯನ್ನು ಅರ್ಥ ಮಾಡಿಕೊಳ್ಳುವುದು ಅತ್ಯಗತ್ಯ. ಇನ್ನೊಂದು ಮಾತಲ್ಲಿ ಹೇಳುವುದಾದರೆ, ಗುತ್ತಿಗೆದಾರರಿಗೆ ಈ ಕಾಯಿದೆಯೆ 'ಧರ್ಮಗ್ರಂಥ'ವೆಂದರೂ ತಪ್ಪಾಗುವುದಿಲ್ಲ. ಈ ಕಾನೂನು ಮತ್ತು ಅದರ ಅಧಿಸೂಚನೆಗಳ ಬಗ್ಗೆ ತಿಳಿಯಬೇಕೆಂದರೆ ಕರ್ನಾಟಕ ಸರಕಾರದ ಆರ್ಥಿಕ ಇಲಾಖೆಯ ಜಾಲತಾಣದಲ್ಲಿ ಇದರ ಪ್ರತಿಯು ಲಭ್ಯವಿದ್ದು, ಆಸಕ್ತರು ಡೌನ್‌ಲೋಡ್ ಮಾಡಿಕೊಂಡು ಓದಿಕೊಳ್ಳಬಹುದು.

> **ನಿತ್ಯ 300ರಿಂದ 500 ಟೆಂಡರ್**
>
> **ಕರ್ನಾಟಕ ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸರಕಾರದ ಮತ್ತು ಅದರ ಅಧೀನ ಸಂಸ್ಥೆಗಳಿಂದ ಕರೆಯಲ್ಪಡುವ ಟೆಂಡರುಗಳನ್ನು ಪ್ರಕಟಿಸಲಾಗುತ್ತದೆ. ಈ ಜಾಲತಾಣದಲ್ಲಿ ನೋಂದಣಿಯಾಗಿ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ ಪಡೆದರೆ ಯಾವುದಾದರೂ ಟೆಂಡರಿನಲ್ಲಿ ಭಾಗ ವಹಿಸಲು ಅವಕಾಶ ಲಭಿಸುತ್ತದೆ. ವರ್ಷದ ಯಾವುದೇ ದಿನದಲ್ಲಿ ನೀವು ಈ ಜಾಲತಾಣವನ್ನು ವೀಕ್ಷಿಸಿದರೆ ಅದರಲ್ಲಿ ಕನಿಷ್ಠ ಆರು ಸಾವಿರ ಟೆಂಡರುಗಳಿರುತ್ತವೆ. ದಿನಂಪ್ರತಿ ಸುಮಾರು 300-500 ಟೆಂಡರುಗಳು ಮುಕ್ತಾಯಗೊಂಡರೆ ಸರಿಸುಮಾರು ಅಷ್ಟೇ ಸಂಖ್ಯೆಯಷ್ಟು ಟೆಂಡರುಗಳು ಸೇರ್ಪಡೆಗೊ ಳ್ಳುತ್ತವೆ. ಈ ಸಂಖ್ಯೆಗಳ ಆಧಾರದಲ್ಲಿ ನೋಡುವುದಾದರೆ ಗುತ್ತಿಗೆದಾರಿಕೆ ಎಂಬುದು ಅವಕಾಶಗಳ ಸಾಗರ.**

ಗುತ್ತಿಗೆದಾರರು ಎಂದರೆ ಯಾರು?

ಸರಕಾರವು ಅದರ ದೈನಂದಿನ ನಿರ್ವಹಣೆಗೆ ಮತ್ತು ಅಭಿವೃದ್ಧಿ ಕಾರ್ಯಗಳ ಅನುಷ್ಠಾನಕ್ಕೆ ಗುತ್ತಿಗೆ ಎಂಬ ಪ್ರಕ್ರಿಯೆಯನ್ನು ಅವಲಂಬಿಸಿದೆ. ಈ ಸೇವೆ ಒದಗಿಸುವವರನ್ನು ಗುತ್ತಿಗೆದಾರರು ಎಂದು ಕರೆಯಬಹುದು. ನಮಗೆಲ್ಲ ಸಾಮಾನ್ಯವಾಗಿ ತಿಳಿದಿರುವುದು, ರಸ್ತೆ ಕಾಮಗಾರಿ, ಕಟ್ಟಡ ನಿರ್ಮಾಣ ಮತ್ತು ಕಾಲುವೆ ನಿರ್ಮಾಣ ಮಾಡುವವರನ್ನು 'ಕಾಂಟ್ರಾಕ್ಟರ್' ಅಥವಾ 'ಗುತ್ತಿಗೆದಾರ' ಎಂದು ಕರೆಯುತ್ತಾರೆ. ಇವರೂ ಗುತ್ತಿಗೆದಾರರೇ, ಆದರೆ ಸಿವಿಲ್ ಗುತ್ತಿಗೆದಾರರು. ಕಾಂಟ್ರಾಕ್ಟ್ ಅಥವಾ ಗುತ್ತಿಗೆದಾರಿಕೆಯಲ್ಲಿ ಕಾಮಗಾರಿ, ಸರಕು ಹಾಗೂ ಸೇವೆಗಳು ಎನ್ನುವ ಮೂರು ವಿಧಗಳಿವೆ.

ಕಾಮಗಾರಿ

ರಸ್ತೆ, ಕಟ್ಟಡ, ಸೇತುವೆ ಅಥವಾ ಕಾಲುವೆಗಳ ವಿನ್ಯಾಸ, ಅನುಷ್ಠಾನ ಮತ್ತು ನಿರ್ವಹಣೆಯ ಕೆಲಸಗಳನ್ನು 'ಕಾಮಗಾರಿ' ಎನ್ನಬಹುದು. ಇದರಲ್ಲಿ ಎರಡು ವಿಧಗಳಿವೆ, ಸಿವಿಲ್ ಮತ್ತು ವಿದ್ಯುತ್ (ಎಲೆಕ್ಟ್ರಿಕಲ್) ಕಾಮಗಾರಿ. ರಸ್ತೆ ಮತ್ತು ಕಟ್ಟಡಗಳನ್ನು ಸಿವಿಲ್ ಗುತ್ತಿಗೆದಾರರು ಹಾಗೂ ವಿದ್ಯುತ್ ಸಂಬಂಧಿತ ಕಾಮಗಾರಿಗಳನ್ನು ವಿದ್ಯುತ್ ಗುತ್ತಿಗೆದಾರರು ನಿರ್ವಹಿಸುತ್ತಾರೆ. ಈ ತರಹದ ಕಾಮಗಾರಿಗಳನ್ನು ನಿರ್ವಹಿಸಲು ಗುತ್ತಿಗೆದಾರರು ಸರಕಾರದಿಂದ ಪರವಾನಗಿ ಪಡೆಯಬೇಕು. ಸಿವಿಲ್ ಕಾಮಗಾರಿಗೆ ಕರ್ನಾಟಕ ಸರಕಾರದ ಲೋಕೋಪಯೋಗಿ ಇಲಾಖೆ ಹಾಗೂ ವಿದ್ಯುತ್ ಕಾಮಗಾರಿಗೆ ವಿದ್ಯುತ್ ಪರಿವೀಕ್ಷಣಾಲಯದಿಂದ ಪರವಾನಗಿ ಪಡೆಯಬೇಕು.

ಸೇವೆಗಳು

ಸರಕಾರ ಹಣಕಾಸಿನ ಕೊರತೆಯಿಂದಾಗಿ ಕೆಲವು ಸರಕುಗಳನ್ನು ಖರೀದಿಸಲು ಸಾಧ್ಯವಾಗುವುದಿಲ್ಲ. ಆ ಸಮಯದಲ್ಲಿ ನಿರ್ದಿಷ್ಟ ಅವಧಿಗೆ ಸರಕನ್ನು ಎರವಲು ಪಡೆದು ಇಂತಿಷ್ಟು ಹಣವನ್ನು ಗುತ್ತಿಗೆದಾರರಿಗೆ ಪಾವತಿಸಲಾಗುತ್ತದೆ. ಈ ರೀತಿಯ ಸೇವೆಗಳನ್ನು ಒದಗಿಸುವವರನ್ನು ಸೇವಾ ಗುತ್ತಿಗೆದಾರರು ಎನ್ನಬಹುದು. ನೀವು ಈ ರೀತಿಯ ಸೇವೆಯನ್ನು ಒದಗಿಸಬೇಕೆಂದರೆ ಆ ಸರಕಿನ ಒಡೆತನ ನಿಮ್ಮಲ್ಲಿರಬೇಕು. ಉದಾಹರಣೆಗೆ ನಿಮ್ಮಲ್ಲಿ ಹಳದಿ ಬೋರ್ಡಿನ ಒಂದು ಕಾರಿದ್ದರೆ ವರ್ಷದ ಮಟ್ಟಿಗೆ ಯಾವುದಾದರೂ ಸರಕಾರ ಕಚೇರಿಗೆ ಅದರ ಸೇವೆಯನ್ನು ಒದಗಿಸಬಹುದು. ಇದಕ್ಕೆ ಸರಕಾರ ನಿಮಗೆ ತಿಂಗಳಿಗೆ 30-40 ಸಾವಿರ ವೇತನ ಸಹಿತ ಸೇವಾವೆಚ್ಚವನ್ನು ನೀಡುತ್ತದೆ. ಗುತ್ತಿಗೆ ಮುಗಿದ ನಂತರ ಆ ಕಾರನ್ನು ನೀವು ಸೇವೆಯಿಂದ ಹಿಂಪಡೆಯಬಹುದು. ಇದರೊಂದಿಗೆ ಸರಕಾರದ ನಿರ್ವಹಣೆಗೆ ಬೇಕಾಗುವ ಮಾನವ ಸಂಪನ್ಮೂಲವನ್ನು ಸಹ ಗುತ್ತಿಗೆ ಆಧಾರದಲ್ಲಿ ಪಡೆಯುತ್ತದೆ. ಸಾಮಾನ್ಯವಾಗಿ ಡಾಟಾ ಎಂಟ್ರಿ ಆಪರೇಟರುಗಳು, ವಾಚ್‌ಮ್ಯಾನ್ ಮತ್ತು 'ಡಿ' ವೃಂದದ ನೌಕರರನ್ನು ಸಾಮಾನ್ಯವಾಗಿ ಸರಕಾರವು ಹೊರಗುತ್ತಿಗೆಯ ಮೂಲಕ ಪಡೆಯುವುದು ರೂಢಿ.

ಸರಕು

ಸರಕಾರ ತನ್ನ ಸುಗಮ ನಿರ್ವಹಣೆಗೆ ಹಲವಾರು ವಸ್ತುಗಳ ಮೇಲೆ ಅವಲಂಬಿತವಾಗಿರುತ್ತರೆ. ಗುಂಡು ಪಿನ್‌ನಿಂದ ಹಿಡಿದು ಅತ್ಯಾಧುನಿಕ ಕಂಪ್ಯೂಟರ್‌ಗಳು ಸರಕಾರಕ್ಕೆ ಅಗತ್ಯವಾಗಿರುತ್ತದೆ. ತಯಾರಕರಿಂದ ಅಥವಾ ವಿತರಕರಿಂದ ಒಂದು ನಿಗದಿತ ಬೆಲೆಗೆ ಯಾವುದಾದರು ವಸ್ತುವನ್ನು ಸರಕಾರವು ಖರೀದಿಸುವ ಪ್ರಕ್ರಿಯಗೆ ಸರಕು ಗುತ್ತಿಗೆದಾರಿಕೆ ಅನ್ನಬಹುದು, ನೀವು ಈ ತರಹದ ಗುತ್ತಿಗೆದಾರರಾಗಬೇಕೆಂದರೆ ಸಿವಿಲ್ ಅಥವಾ ವಿದ್ಯುತ್ ಗುತ್ತಿಗೆದಾರರಿಗೆ ಬೇಕಾಗುವ ಸರಕಾರದ ಪರವಾನಗಿಯ ಅವಶ್ಯಕತೆ ಇಲ್ಲ, ನೀವು ಆ ವಸ್ತುವಿನ ತಯಾರಕರಾಗಿರಬೇಕು ಅಥವಾ ವಿತರಕರಾಗಿರಬೇಕು.

ಮುಂದೇನು?

ನೀವೂ ಸಹ ಗುತ್ತಿಗೆದಾರರಾಗಬೇಕೆಂಬ ಕನಸನ್ನು ಹೊಂದಿದ್ದರೆ ಈ ಮೇಲಿನ ಯಾವುದಾದರೊಂದು ಕಾರ್ಯಕ್ಷೇತ್ರವನ್ನು ಆರಿಸಿಕೊಳ್ಳಿ. ಸಿವಿಲ್ ಅಥವಾ ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಪದವೀಧರರಾಗಿದ್ದಾರೆ 'ಕಾಮಗಾರಿ', ವಸ್ತುಗಳ ತಯಾರಕ, ವಿತರಕರಾಗಿದ್ದರೆ ಸರಕುಗಳ ಒಡೆತನವಿದ್ದರೆ 'ಸೇವೆ' ನಿಮಗೆ ಹೊಂದುವಂತಹ ಕಾರ್ಯಕ್ಷೇತ್ರ. ಈ ಸದರಿ ಕಾರ್ಯಕ್ಷೇತ್ರಗಳಲ್ಲಿ ಟೆಂಡರ್‌ಗಳನ್ನು ಪಡೆಯಲು ಮತ್ತು ನಿರ್ವಹಿಸಲು ಆಯಾಯ ಕ್ಷೇತ್ರಕ್ಕೆ ಸಂಬಂಧಿಸಿದ ವಿಧಿ ವಿಧಾನಗಳಿವೆ, ಕಾನೂನುಗಳಿವೆ ಮತ್ತು ಇತಿಮಿತಿಗಳಿವೆ. ಗುತ್ತಿಗೆದಾರರಾಗಬೇಕೆ ಅಥವಾ ಬೇಡವೆ ಎಂಬುದನ್ನು ನಿರ್ಧರಿಸಿ; ಮನಸ್ಸಿದ್ದರೆ ಮಾರ್ಗ ವಿದೆ. ಮತ್ತು ಸರಿಯಾದ ಮಾರ್ಗದಲ್ಲಿ ನಡೆದರೆ ಗುರಿ ತಲುಪಲು ಸಾಧ್ಯವಿದೆ.

ಎಂಟು ಮಕ್ಕಳ ಪುಸ್ತಕಗಳು

• ಬೇದ್ರೆ, ಮಂಜುನಾಥ, ಮೈಸೂರು

ಬಣ್ಣಬಣ್ಣದ ಚಿತ್ರ-ಕಥಾಪುಸ್ತಕಗಳ ಮೂಲಕ ಮಕ್ಕಳ ಮನಸ್ಸನ್ನು ಅರಳಿಸುವ, ಮಕ್ಕಳಲ್ಲಿ ಓದುವ ಅಭಿರುಚಿ ಬೆಳೆಸುವ ಉದ್ದೇಶದಿಂದ ಬೆಂಗಳೂರಿನ ಗ್ಯೋಥೆ ಇನ್‌ಸ್ಟಿಟ್ಯೂಟ್ / ಮ್ಯಾಕ್ಸ್ ಮ್ಯುಲ್ಲರ್ ಭವನ್ ತನ್ನ 'ಕಿಂಡರ್ ಕಥಾ'ಸರಣಿಯಲ್ಲಿ, ನವಕರ್ನಾಟಕ ಪ್ರಕಾಶನದ ಸಹಯೋಗದಲ್ಲಿ, ಎಂಟು ಕನ್ನಡದ ಮಕ್ಕಳ ಪುಸ್ತಕಗಳನ್ನು ಹೊರತಂದಿದೆ. ಪ್ರತಿ ಪುಸ್ತಕದ ಬೆಲೆ ರು.70/-.

1.ನವಿಲಿನ ಜಂಭ - ಲೇ: ಮೀನಾಕ್ಷಿ ಬಿ. ಕೆ.

ಕೆಂಬೂತ ಮತ್ತು ನವಿಲು ಎರಡೂ ಒಟ್ಟಾಗಿ ತಿರುಗಾಡಲು ಹೊರಡುವ ಸನ್ನಿವೇಶದಿಂದ ಆರಂಭಗೊಳ್ಳುವ ಈ ಕಥೆ, ನವಿಲಮ್ಮನ ವಯ್ಯಾರ, ಅಹಂಕಾರ, ಅದರಿಂದ ಕೆಂಬೂತ ಅನುಭವಿಸಬೇಕಾಗಿ ಬಂದ ಕಷ್ಟ, ಅವಮಾನ, ಎಲ್ಲವನ್ನೂ ಕಥೆಯಾಗಿಸಿದ್ದಾರೆ ನಿವೃತ್ತ ಮುಖ್ಯಶಿಕ್ಷಕಿ ಬಿ. ಕೆ. ಮೀನಾಕ್ಷಿ. ವಿವಿಧ ಸನ್ನಿವೇಶಗಳಿಗೆ ಚಿತ್ರ ರಚಿಸಿದವರು ರಘುಪತಿ ಶೃಂಗೇರಿ.

2. ಪೆನ್ಸಿಲ್ ರಾಯರ ಪುರ ಪ್ರವೇಶ - ಲೇ: ಸಂತೋಷ ಗುಡ್ಡಿಯಂಗಡಿ

ಪ್ಲಾಸ್ಟಿಕ್‌ನಿಂದ ತಯಾರಾದ ವಸ್ತುಗಳು ಪರಿಸರ ಸಮಸ್ಯೆಗೆ ಕಾರಣವಾಗುತ್ತಿರುವುದನ್ನು ಪೆನ್ಸಿಲ್ ರಾಯರ ಪುರ ಪ್ರವೇಶ ಕಥೆಯ ಮೂಲಕ ಅನಾವರಣಗೊಳಿಸಿದ್ದಾರೆ ನಾಟಕದ ಮೇಷ್ಟ್ರು ಸಂತೋಷ ಗುಡ್ಡಿಯಂಗಡಿ. ಮುದ್ದು ಮಕ್ಕಳು ಹಾಗೂ ಪೆನ್ಸಿಲ್‌ಗಳ ಸಂತೋಷ, ದುಃಖ, ಗಾಬರಿ, ಪ್ರತಿಭಟನೆ, ರೋಷ ಮೊದಲಾದ ಭಾವಗಳನ್ನು ಯಥಾವತ್ತಾಗಿ ತಮ್ಮ ಚಿತ್ರಗಳಲ್ಲಿ ಪಡಿಮೂಡಿಸಿದ್ದಾರೆ ನಾಗಾನಾಥ್ ಜಿ. ಎಸ್.



ಕನ್ನಡದಲ್ಲಿ ಮಕ್ಕಳಿಗೆ ಸೂಕ್ತ ಎನಿಸುವ ಪುಸ್ತಕಗಳ ಕೊರತೆ ಇದೆ ಎಂಬ ಚರ್ಚೆ ಬಹು ಹಿಂದಿನದು. ಆ ಕೊರತೆಯನ್ನು ತುಂಬಲೆತ್ನಿಸುವ ಎಂಟು ಪುಸ್ತಕಗಳು ಇತ್ತೀಚೆಗೆ ಹೊರಬಂದಿವೆ.

3.ರುಕ್ಕುವಿನ ಸೈಕಲ್ - ಲೇ: ವಾಣಿ ಪೆರಿಯೋಡಿ

ಯಾವುದೇ ವಿದ್ಯೆ ಕಲಿಯುವ ಮೊದಲು ನಿಗೂಢ, ಆಮೇಲೆ ಅದು ಕರಗತ. ಹಿಂಜರಿಕೆ ಸಲ್ಲ; ಮುನ್ನುಗ್ಗಿ ಕಲಿಯಿರಿ ಎಲ್ಲ, ಎಂಬ ಸಂದೇಶವನ್ನು ರುಕ್ಕುವಿನ ಸೈಕಲ್ ಮೂಲಕ ಸಮರ್ಥವಾಗಿ ತಿಳಿಸಿದ್ದಾರೆ ವಾಣಿ ಪೆರಿಯೋಡಿ. ಈ ಪುಸ್ತಕಕ್ಕೆ ಆಕರ್ಷಕ ಚಿತ್ರಗಳನ್ನು ರಚಿಸಿದವರು, ಬಿ. ಜಿ. ಗುಜ್ಜಾರಪ್ಪ.

4.ರಾಜು ಮತ್ತು ಮರ - ಲೇ: ಸುಧಾ ಆಡುಕಳ

ಪರಿಸರ ಸಂರಕ್ಷಣೆಯ ಬಗ್ಗೆ ಪುಟ್ಟ ಪುಟ್ಟ ಪ್ರಯತ್ನಗಳಿಂದ ಪರಿಸರ ಕಾಳಜಿವಹಿಸುವುದನ್ನು ಗಣಿತ ಉಪನ್ಯಾಸಕಿ ಸುಧಾ ಆಡುಕಳ ಸಹಜವಾಗಿ, ಮಾರ್ಮಿಕವಾಗಿ, ಸರಳವಾದ ಭಾಷೆಯಲ್ಲಿ ಹಿಡಿದಿಟ್ಟಿದ್ದಾರೆ. ಎಂ. ಮೋಹನ್ ಅವರ ಚಿತ್ರಗಳು ಕಥೆಗೆ ಜೀವತುಂಬುವಂತಿವೆ.

5. ಡಾಕ್ಟರ್ ಇಲಿ ಮತ್ತು ಬೆಕ್ಕಿನ ಗಾಯ-ಲೇ: ವಿಭಾ ಬಿ. ಎಂ.

ವೃತ್ತಿಧರ್ಮ ಪಾಲಿಸುವ ಇಲಿ ಮತ್ತು ಅದರಿಂದ ಮನಃಪರಿವರ್ತನೆಗೊಂಡು, ಪಶ್ಚಾತ್ತಪದಿಂದ ಕ್ಷಮೆಯಾಚಿಸುವ ಗಾಯಾಳು ಬೆಕ್ಕಿನ ಕಥೆಯನ್ನು ವಿಭಾ ಬಿ. ಎಂ. ರಚಿಸಿದ್ದರೆ ಕಥೆಯ ಪಾತ್ರಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ ರಾ. ಸೂರಿ.

6. ತಂ ತಂ ತಥಾಸ್ತು - ಲೇ: ಎಂ ಮನೋಹರ ಪೈ

ಕ್ರಿಯಾಶೀಲರಾಗಿರಿ, ಸೋಮಾರಿತನ ತ್ಯಜಿಸಿರಿ ಎಂದು ಭಾಷಣ ಕುಟ್ಟುವುದಕ್ಕಿಂತ ಫ್ಯಾಂಟಸಿ ಮೂಲಕ ಕಷ್ಟಪಟ್ಟು ಕಲಿಯುವ, ದುಡಿದು ಗಳಿಸುವುದರ ಮಹತ್ವವನ್ನು ತಿಳಿಸಿಕೊಡುವ ಕಥೆ ಹೆಣೆದಿದ್ದಾರೆ ಟೆಕ್ಕಿ ಎಂ. ಮನೋಹರ ಪೈ. ಎಂ. ಮೋಹನ್ ಅವರ ಆಕರ್ಷಕ ವರ್ಣಚಿತ್ರಗಳು ಈ ಕಲ್ಪನಾಲೋಕವನ್ನು ಚೆಂದವಾಗಿ ತೋರಿಸುತ್ತವೆ.

7. ಬಣ್ಣದ ಉಸಿರು - ಲೇ: ಹೂರ್ ಬಾನು

ಸನ್ನಿವೇಶದ ಅಗತ್ಯಕ್ಕೆ ತಕ್ಕಂತೆ ಬಣ್ಣ ಬದಲಿಸಿ ತನ್ನನ್ನು ರಕ್ಷಿಸಿಕೊಳ್ಳುವ ಊಸರವಳ್ಳಿಯ ಜೀವನ ವಿಧಾನದ ಪರಿಚಯವನ್ನು ಮಾಡಿಕೊಟ್ಟಿದ್ದಾರೆ, ಗಣಿತ ಉಪನ್ಯಾಸಕಿ-ಕಥೆಗಾರ್ತಿ ಹೂರ್ ಬಾನು. ಬಿ. ಜಿ. ಗುಜ್ಜಾರಪ್ಪ ಅವರ ಸುಂದರ ಚಿತ್ರಗಳು ಈ ಕಥೆಗೆ ಮೆರಗು ನೀಡಿ ಕೃತಿಯ ಅಂದ ಹೆಚ್ಚಿಸಿವೆ.

8. ಶಶಾಂಕನ ಅಳಿಲುಮರಿ - ಲೇ: ಪ. ನಾ. ಹಳ್ಳಿ ಹರೀಶ ಕುಮಾರ್

ಮಕ್ಕಳಲ್ಲಿ ಸಹಜವಾಗಿರುವ ಪ್ರಾಣಿ ಪ್ರೀತಿ ಒಮ್ಮೊಮ್ಮೆ ಹೇಗೆ ಈ ಪ್ರಾಣಿ-ಪಕ್ಷಿಗಳಿಗೆ ಸಂಕಟ ತಂದೊಡ್ಡುತ್ತದೆ ಎಂಬುದನ್ನು ವಿವರಿಸುವ ಈ ಕಥೆಯನ್ನು ರಚಿಸಿದವರು, ವಿಜ್ಞಾನ ಶಿಕ್ಷಕ ಪ.ನಾ. ಹಳ್ಳಿ ಹರೀಶ ಕುಮಾರ್. ಕಲಾವಿದೆ ಶೈಲಜಾ ಎಸ್. ಅವರ ಚಿತ್ರಗಳು ಕಥೆಗೆ ಪೂರಕವಾಗಿವೆ.

ಮನಮೋಹಕ ಯೋಗಭಂಗಿ

• ವೈ.ಕೆ.ಸಂಧ್ಯಾ ಶರ್ಮ

ಲತೆಯಂಥ ಸಪೂರ ಮಾಟದ ದೇಹಶ್ರೀ ಹೊಂದಿದ ನೃತ್ಯಚತುರೆ ಧೃತಿ ಶೆಟ್ಟಿ, ಬಿಲ್ಲಿನಂತೆ ಹೇಗೆಂದರೆ ಹಾಗೇ ಬಾಗುವ ಚೈತನ್ಯದ ಸೊಬಗಿನಲ್ಲಿ, ತನ್ನ ರಂಗಪ್ರವೇಶದಲ್ಲಿ ಪ್ರದರ್ಶಿಸಿದ ಸುಮನೋಹರ ನೃತ್ಯ-ಯೋಗದ ಭಂಗಿಗಳು ಬೆರಗು ಹುಟ್ಟಿಸಿದವು. ಇತ್ತೀಚೆಗೆ ಬಸವೇಶ್ವರ ನಗರದ ಕೆ.ಇ.ಎ. ರಂಗಮಂದಿರದಲ್ಲಿ ಸಾಧನ ಸಂಗಮ ನೃತ್ಯಶಾಲೆಯ ಹಿರಿಯ ಗುರು ಜ್ಯೋತಿ ಪಟಾಭಿರಾಮ್ ಮತ್ತು ಡಾ. ಸಾಧನಶ್ರೀ ಗುರುದ್ವಯರ ಶಿಷ್ಯೆ ಉದಯೋನ್ಮುಖ ಕಲಾವಿದೆ ಧೃತಿ, ಬಹು ಆತ್ಮವಿಶ್ವಾಸ ಹಾಗೂ ಲವಲವಿಕೆಯಿಂದ ತನ್ನ ಭರತನಾಟ್ಯ ನೃತ್ಯ ಪ್ರದರ್ಶಿಸಿದಳು. ಸಾಂಪ್ರದಾಯಕ ಪುಷ್ಪಾಂಜಲಿಯ ನೃತ್ತಾರ್ಪಣೆಯಿಂದ ತನ್ನ ಪ್ರಸ್ತುತಿಯನ್ನು ಶುಭಾರಂಭಿಸಿದಳು. ಮುಂದಿನ ಗಣೇಶ ಸ್ತುತಿ ವಿಶೇಷವಾಗಿತ್ತು. ಮಹಾಮಹೋಪಾಧ್ಯಾಯ ರಾ. ಸತ್ಯನಾರಾಯಣ ವಿರಚಿತ ಸುಮನೇಶ ರಂಜಿನಿ ರಾಗದ ಶ್ರೀ ಸರಸ್ವತಿ ಆಶ್ರಯಾಮಿ ಸತತಂ.. ಕೃತಿಯಲ್ಲಿ- ಲಲಿತ ಸುಂದರಿಯ ಕಾಳಿ, ತ್ರಿಪುರ ಸುಂದರಿ ಮತ್ತು ಭುವನೇಶ್ವರಿಯರ ಮೂರು ಅವತಾರಗಳನ್ನು ಧೃತಿ, ವಿಭಿನ್ನ ಆಯಾಮದ ಹೊಳಪಿನ ಅಭಿನಯದಲ್ಲಿ ಸಾಕ್ಷಾತ್ಕರಿಸಿದಳು. ಅವಳು ಪ್ರದರ್ಶಿಸಿದ ಒಂದೊಂದು ದಿವ್ಯ-ಭವ್ಯ ದೈವೀಕ ಭಂಗಿಗಳೂ ಅನುಪಮವಾಗಿದ್ದವು. ಅವಳ ಮೃದು-ಮಧುರ ಚಲನೆಯ ಹಂಸಭಂಗಿ - ಸುಮನೋಹರ ನವಿಲನಡೆ, ನವಿರಾದ ದ್ರವೀಕೃತ ಆಂಗಿಕಾಭಿನಯ ಕಣ್ಣಿಗೆ ಹಬ್ಬವಾಗಿತ್ತು. ಗಂಧರ್ವರು ಸೋಮರಸವನ್ನು ಕದ್ದು ತಮ್ಮ ಲೋಕಕ್ಕೆ ಕೊಂಡೊಯ್ದ ಹಾಗೂ ಗಾಯತ್ರೀ ಮಾತೆಯು ಎರಡು ಬೃಹತ್ ರೆಕ್ಕೆಯನ್ನು ಪಡೆದುಕೊಂಡು, ಗಂಧರ್ವಲೋಕಕ್ಕೆ ಹಾರಿಹೋಗಿ, ತನ್ನ ಸಂಚಿತ ಶಕ್ತಿಯಿಂದ ಅಮೃತವನ್ನು ಹಿಂಪಡೆದ ವಿಸ್ತೃತ ಸಂಚಾರಿ ಕಥೆಯನ್ನು ಸೊಗಸಾಗಿ ಚಿತ್ರಿಸಿದಳು ಧೃತಿ. ಸರಸ್ವತಿಯ ಮಹಿಮೆಯನ್ನು ತನ್ನ ಶಕ್ತಿಶಾಲಿಯಾದ ಅಭಿನಯದ ಮೂಲಕ ಪ್ರದರ್ಶಿಸಿದ ಕಲಾವಿದೆಯ ರೋಮಾಂಚಕ ಪ್ರಸ್ತುತಿಯನ್ನು ಪರಿಣಾಮಕಾರಿಯಾಗಿಸಿದ ಬಾಲಸುಬ್ರಹ್ಮಣ್ಯ ಶರ್ಮರ ಭಾವಪೂರ್ಣ, ಚೇತೋಹಾರಿ ಗಾಯನ ಹೃದಯಸ್ಪರ್ಶಿಯಾಗಿತ್ತು. ಸಮಾಜದ ವಿಡಂಬನೆಗಳಿಗೆ- ಆಷಾಢಭೂತಿತನ- ಕೃತ್ರಿಮತೆಗೆ ಕನ್ನಡಿ ಹಿಡಿದ ಶ್ರೀ ಪ್ರಸನ್ನ ತೀರ್ಥರ ಎಲ್ಲ ಭಯ ಕ್ಷುಲ್ಲಕ ಜನಗಳಿಗೆಲ್ಲ ಭಯ ಮಾರ್ಮಿಕ ಕೃತಿಯ ಒಳಗನ್ನು ಬಯಲಾಗಿಸಿದ ಕಲಾವಿದೆಯ ಸಹಜಾಭಿನಯ ಕಲಾರಸಿಕರ ಹೃದಯವನ್ನು ಮುಟ್ಟಿತು. ಪ್ರಸ್ತುತ ಬದುಕಿಗೆ ಅನ್ವರ್ಥಕವಾಗಿರುವ, ಸಮಾಜದ ಡೋಂಗಿತನಗಳ ನಿಜ ಆಯಾಮವನ್ನು ತೆರೆದಿಡುವ ಕೃತಿಯ ಆಯ್ಕೆ ಮುದನೀಡಿತು. ಮಾರ್ಗಂ ಸಂಪ್ರದಾಯದಂತೆ ಅಂತ್ಯದ ಕೃತಿ ತಿಲ್ಲಾನ- ರಸ ರೋಮಾಂಚಕಾರಿಯಾಗಿ ಧೃತಿಯ ಪ್ರತಿಭಾಪೂರ್ಣ ನೃತ್ತ-ನೃತ್ಯ ಸಾಮರ್ಥ್ಯದ ನೃತ್ತಾಮೋದ ಮನವರಳಿಸಿತು.

• ಮಲ್ಲಪ್ಪ. ಸಿ. ಖೊದ್ನಾಪೂರ ತಿಕೋಟಾ

ನಾನಿರುವುದೆ ನಿನಗಾಗಿ!

'ನನಗಾಗಿ ಅಲ್ಲ ನಿನಗಾಗಿ' ಎಂಬ ಧ್ಯೇಯ ವಾಕ್ಯದೊಂದಿಗೆ ಸೆಪ್ಟಂಬರ 24, 1969 ರಂದು, ಉದ್ಘಾಟನೆಗೊಂಡು ರಾಷ್ಟ್ರೀಯ ಸೇವಾ ಯೋಜನೆಯು (ಎನ್‌ಎಸ್‌ಎಸ್) ಅನುಷ್ಠಾನಗೊಂಡಿತು. ಸೇವಾ ಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವನೆ ಮತ್ತು ಉತ್ತಮ ಭವಿಷ್ಯವನ್ನು ರೂಪಿಸುವುದು ಈ ಯೋಜನೆಯ ಉದ್ದೇಶವಾಗಿತ್ತು. ಈ ಸ್ವಯಂಪ್ರೇರಿತ ಸೇವಾ ಸಂಸ್ಥೆಯ ಮೂಲತತ್ವವು ವಿದ್ಯಾರ್ಥಿಗಳಿಗೆ ಲೋಕಸೇವೆಯ ಮೂಲಕ ರಾಷ್ಟ್ರ ನಿರ್ಮಾಣದ ಕಾರ್ಯಗಳಲ್ಲಿ ಒಳಗೊಂಡಂತಹ ಅನುಭವವನ್ನು ನೀಡುವುದ ಹಾಗೂ ಇದರೊಂದಿಗೆ ರಾಷ್ಟ್ರಪ್ರೇಮ ಮತ್ತು ನಿಸ್ವಾರ್ಥ ಮನೋಭಾವನೆಯನ್ನು ಬೆಳೆಸುವುದಾಗಿದೆ. 1969-70 ರಲ್ಲಿ ರಾಷ್ಟ್ರದ 37 ವಿಶ್ವವಿದ್ಯಾಲಯಗಳಲ್ಲಿ 40,000 ಸ್ವಯಂ ಸೇವಕರರಿಂದ ಪ್ರಾರಂಭಗೊಂಡು, ಇಂದು ದೇಶದ ಸುಮಾರು 400 ವಿಶ್ವವಿದ್ಯಾಲಯ, ಶಾಲಾ-ಕಾಲೇಜು ಸೇರಿ ಒಟ್ಟು ಸುಮಾರು 38 ಲಕ್ಷ ವಿದ್ಯಾರ್ಥಿಗಳು ಈ ಯೋಜನೆಯಲ್ಲಿ ಸಕ್ರೀಯವಾಗಿ ಪಾಲ್ಗೊಂಡು ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಈ ಯೋಜನೆಯ ಮೂಲ ಮಂತ್ರವೆಂದರೆ 'ನನಗಾಗಿಯಲ್ಲ ನಿನಗಾಗಿ' (ನಾಟ್ ಮಿ ಬಟ್ ಯು) ಎನ್ನುವದಾಗಿದೆ. ನಾನು ನನಗಾಗಿ ಮಾತ್ರವಲ್ಲ, ನಿಮ್ಮೆಲ್ಲರಿಗೂ ಸೇವೆ ಮಾಡಲು ಸಿದ್ಧನಿದ್ದೇನೆ ಎಂಬುದು ಇದರ ಅರ್ಥ. ಎನ್.ಎಸ್.ಎಸ್. ಎಂದರೆ 'ನಾನು ಸದಾ ಸಿದ್ಧ' ಎನ್ನಬಹುದು! ಇದು ವಿದ್ಯಾರ್ಥಿ, ಯುವಕರು ಮತ್ತು ಸಾರ್ವಜನಿಕರಲ್ಲಿ ಶ್ರಮದ ಮಹತ್ವವನ್ನು ತಿಳಿಸಿಕೊಡುತ್ತದೆ. ರಾಷ್ಟ್ರೀಯ ಸೇವಾ ಯೋಜನೆ (ಎನ್.ಎಸ್.ಎಸ್) ಘಟಕಗಳು ಸ್ವಯಂ ಸೇವಕ ವಿದ್ಯಾರ್ಥಿಗಳಲ್ಲಿ ಶಿಸ್ತು, ಸಂಯಮ, ಸಮಯ ಪರಿಪಾಲನೆ, ನಾಯಕತ್ವ, ಸಂಘಟನೆ, ಸಹಕಾರ, ಸಹಬಾಳ್ವೆ, ಸೌಹಾರ್ದತೆ, ಭಾವೈಕ್ಯತೆ ಹಾಗೂ ನಿಸ್ವಾರ್ಥ ಸೇವಾ ಮನೋಭಾವನೆ ಮತ್ತು ಶ್ರಮದಾನದಗಳಂತಹ ಗುಣಗಳನ್ನು ಮೈಗೂಡಿಸಿ ತನ್ಮೂಲಕ ಅವರ ವ್ಯಕ್ತಿತ್ವ ವಿಕಸನಕ್ಕೆ ಬೇಕಾಗುವ ವಿವಿಧ ಆಯಾಮಗಳನ್ನು ವಿದ್ಯಾರ್ಥಿ ಸಮುದಾಯಕ್ಕೆ ನೀಡುತ್ತಿದೆ.

ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಪಠ್ಯೇತರ ಅಥವಾ ಸಹಪಠ್ಯೇತರ ಚಟುವಟಿಕೆಗಳಲ್ಲೊಂದಾದ ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ಸಕ್ರೀಯವಾಗಿ ಪಾಲ್ಗೊಂಡು ಸಾರ್ವಜನಿಕರಲ್ಲಿ ಪರಿಸರ ಸಂರಕ್ಷಣೆ, ಮಳೆ ನೀರು ಕೊಯ್ಲು, ಗ್ರಾಮೀಣ ಅಭಿವೃದ್ಧಿ, ಜನಸೇವೆ, ಸಮುದಾಯ ಆರೋಗ್ಯ, ಯೋಗ, ಮದ್ಯ ಪಾನ, ಮತ್ತು ಇನ್ನಿತರ ಸಾಮಾಜಿಕ ಪಿಡುಗುಗಳ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕಾಗಿದೆ. ಇದಕ್ಕೆ ಎನ್‌ಎಸ್‌ಎಸ್ ಶಿಬಿರಗಳು ಸೂಕ್ತ ಎನಿಸಿವೆ.

ಅವೆನ್ಯೂ ರೋಡ್
ನಿತ್ಯದ ವಿಂಡೋ ಶಾಪಿಂಗ್

ವಿಶ್ವವಾಣಿ
25.09.2024 ಬುಧವಾರ
vishwavani.news

ದಿನ ದರ್ಶಿಕೆ

ಭಾದ್ರಪದ ಮಾಸ, ಕೃಷ್ಣ ಪಕ್ಷ, ಆರ್ದ್ರಾ ನಕ್ಷತ್ರ, ಅಷ್ಟಮಿ ತಿಥಿ, ವರಿಯನ ಯೋಗ, ಕೌಲವ ಕರಣ, ಶರದ್ ದ್ರಿಕ್ ಋತು, ದಕ್ಷಿಣಾಯನ ದ್ರಿಕ್ ಆಯನ, 1946 ಕ್ರೋಧಿನಾಮ ಸಂವತ್ಸರ, 2081 ವಿಕ್ರಮನಾಮ ಸಂವತ್ಸರ

ಮನೆಮದ್ದು

ಕೊತ್ತಂಬರಿ ಬರೀ ಮಸಾಲೆಯಗಷ್ಟೇ ಅಲ್ಲದೇ ಆಯುರ್ವೇದಿಕ ಗಿಡಮೂಲಿಕೂ ಹೌದು. ಕೊತ್ತಂಬರಿ ಬೀಜವನ್ನು ಕುಟ್ಟಿ ಪುಡಿ ಮಾಡಿ ಅದನ್ನು ನೀರಿನಲ್ಲಿ ನೆನೆಹಾಕಬೇಕು. ಚೆನ್ನಾಗಿ ಕಿವಿಚಿ ಸೋಸಬೇಕು. ಈ ಕಷಾಯಕ್ಕೆ ಹಾಲು, ಸಕ್ಕರೆ ಬೆರೆಸಿ ಸೇವಿಸಿದರೆ ಆಗಾಗ ಕಾಡುವ ಎದೆ ನೋವು ಕಡಿಮೆಯಾಗುತ್ತದೆ.

ಸೌಂದರ್ಯ ಸೂತ್ರ

1 ಚಮಚ ಅರಿಶಿನ ಪುಡಿಯನ್ನು 1 ಕಪ್ ನೀರಿನೊಂದಿಗೆ ಬೆರೆಸಿ. ಶಾಂಪೂ ಬಳಸಿ ಕೂದಲನ್ನು ತೊಳೆದ ನಂತರ, ಈ ಅರಿಶಿನ ನೀರನ್ನು ನಿಮ್ಮ ಕೂದಲಿಗೆ ಸುರಿಯಿರಿ. ಕೆಲವು ನಿಮಿಷಗಳ ಕಾಲ ಬಿಟ್ಟು ಅದನ್ನು ತೊಳೆಯಿರಿ. ಇದು ತಲೆಹೊಟ್ಟನ್ನು ತೊಡೆದುಹಾಕಲು ಸಹಾಯ ಮಾಡುತ್ತದೆ.

ದಿನ ಭವಿಷ್ಯ

ಮೇಷ ಸಂಗಾತಿ ಬಹುನಿರೀಕ್ಷಿತ ಕಲ್ಪನೆಗಳನ್ನು ಸಾಕ್ಷಾತ್ಕಾರ ಮಾಡುವ ಮೂಲಕ ಅಚ್ಚರಿಗೊಳಿಸುತ್ತಾರೆ. ಹೊಸ ಉದ್ಯಮಗಳಿಗಾಗಿ ಒಳ್ಳೆಯ ದಿನ

ವೃಷಭ ವೃತ್ತಿಯಲ್ಲಿ ಕೌಶಲ್ಯದ ಪರೀಕ್ಷೆ ನಡೆಯಲಿದೆ. ಬಯಸಿದ ಫಲಿತಾಂಶ ನೀಡಲು ನಿಮ್ಮ ಪ್ರಯತ್ನಗಳ ಮೇಲೆ ಗಮನ ಹರಿಸಬೇಕು.

ಮಿಥುನ ಸಾಮಾಜಿಕ ಸಮಾರಂಭಗಳು ಪ್ರಭಾವಿ ಮತ್ತು ಪ್ರಮುಖ ಜನರೊಡನೆ ಬಾಂಧವ್ಯವನ್ನು ಸುಧಾರಿಸಲು ಅವಕಾಶವಾಗಿರುತ್ತದೆ.

ಕಟಕ ಮನೆಯ ಕರ್ತವ್ಯಗಳನ್ನು ನಿರ್ಲಕ್ಷಿಸಿದ್ದಲ್ಲಿ ಮನೆಯ ಯಾವುದಾದರೂ ಸದಸ್ಯ ಸಿಟ್ಟಾಗಬಹುದು. ಅರ್ಥಮಾಡಿಕೊಳ್ಳಲು ಪ್ರಯತ್ನಿಸಿ.

ಸಿಂಹ ಪೋಷಕರನ್ನು ನಿರ್ಲಕ್ಷಿಸುವುದು ಭವಿಷ್ಯವನ್ನು ಕೆಡಿಸಬಹುದು. ಉತ್ತಮ ಸಮಯಗಳು ತುಂಬಾ ಕಾಲ ಇರುವುದಿಲ್ಲ.

ಕನ್ಯಾ ಇಂದು ಅತ್ಯಂತ ಪ್ರೀತಿಯ ಕನಸು ನನಸಾಗುತ್ತದೆ. ಆದರೆ ತುಂಬಾ ಸಂತೋಷ ಸ್ವಲ್ಪ ಸಮಸ್ಯೆಗಳನ್ನು ಉಂಟುಮಾಡಬಹುದು.

ತುಲಾ ತೊಂದರೆಯಲ್ಲಿರುವ ಯಾರಿಗಾದರೂ ಸಹಾಯ ಮಾಡಲು ಚೈತನ್ಯವನ್ನು ಬಳಸಿ. ಇಂದು ಎಲ್ಲ ಕೆಲಸದಲ್ಲೂ ಅದ್ಭುತವಾಗಿರುತ್ತೀರಿ.

ವೃಶ್ಚಿಕ ಧಾರ್ಮಿಕ ಮತ್ತು ಆಧ್ಯಾತ್ಮಿಕ ಆಸಕ್ತಿಗಳನ್ನು ಅನುಸರಿಸಲು ಒಂದು ಒಳ್ಳೆಯ ದಿನ. ಉಳಿಸಲಾಗಿರುವ ಹಣ ಕೆಲಸಕ್ಕೆ ಬರಬಹುದು.

ಧನು ಮನೆಯಲ್ಲಿ ಒತ್ತಡ ಸಿಟ್ಟು ತರಿಸಬಹುದು. ಅದರ ಬಗ್ಗೆ ತಲೆಕಡಿಸಿಕೊಳ್ಳುವುದರಿಂದ ಕೇವಲ ದೈಹಿಕ ಸಮಸ್ಯೆ ಹೆಚ್ಚುತ್ತದೆ.

ಮಕರ ಅನುಮಾನದ ಪ್ರಕೃತಿ ಸೋಲಿನ ಮುಖ ತೋರಿಸಬಹುದು. ಹಣದ ಪರಿಸ್ಥಿತಿ ಸುಧಾರಿಸುತ್ತದೆ. ಮಕ್ಕಳೊಂದಿಗೆ ಸಮಯ ಕಳೆಯಿರಿ.

ಕುಂಭ ಅತಿಯಾಗಿ ತಿನ್ನುವುದನ್ನು ತಪ್ಪಿಸಿ, ತೂಕದ ಮೇಲೆ ಹಿಡಿತ ಹೊಂದಿರಿ. ಹಣಕ್ಕೆ ಸಂಬಂಧಿಸಿದ ಸಮಸ್ಯೆಯನ್ನು ಹೊಂದಿರಬಹುದು.

ಮೀನ ಹಳೆಯ ಸ್ನೇಹಿತರ ಜೊತೆಗಿನ ಪುನರ್ಮಿಲನ ಚೇತೋಹಾರಿಯಾಗಿರುತ್ತದೆ. ಹೂಡಿಕೆಯಿಂದ ಹಣವನ್ನು ಗಳಿಸಬಹುದು.

• ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- ಜ್ಞಾನಪೀಠ ಪುರಸ್ಕೃತ ಯು.ಆರ್. ಅನಂತಮೂರ್ತಿ ಅವರ ಜನ್ಮದಿನ
- ಪಂ. ದೀನದಯಾಳ್ ಉಪಾಧ್ಯಾಯರವರ ಜನ್ಮದಿನ
- ಅಂತ್ಯೋದಯ ದಿನ

ಚಿತ್ರಸ್ಫೂರ್ತಿ

ಉತ್ತರ ಅಮೆರಿಕದಲ್ಲಿ ಪ್ರತಿವರ್ಷದ ವಸಂತ ಮತ್ತು ಶರತ್ ಕಾಲದಲ್ಲಿ ಹೆಚ್ಚೂಕಡಿಮೆ 1.3 ಬಿಲಿಯನ್‌ನಷ್ಟು ಪಕ್ಷಿಗಳು, ಮನೆಯ ಕಿಟಕಿಗಳಿಗೆ ಬಡಿದು ಸಾಯುತ್ತವೆ. ಅದರ ಕೆಲವು ಕಳೆಬರಗಳನ್ನು ಒಂದು ಸಂಸ್ಥೆ ಈ ರೀತಿಯಾಗಿ ಒಟ್ಟು ಗೂಡಿಸಿತ್ತು.

ಚಿತ್ರಕೃಪೆ: ಪ್ಯಾಟ್ರಿಸಿಯಾ ಸೀಟನ್

ಒಂದೊಳ್ಳೆ ಮಾತು

ತಲ್ಲಣಿಸದಿರು ಕಂಡ್ಯಾ, ತಾಳು ಮನವೇ....

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಮಹಾ ಸಂತರೊಬ್ಬರಿದ್ದರು. ಸದಾ ಸತ್ಯವನ್ನೇ ನುಡಿಯುತ್ತಾ, ಎಲ್ಲರನ್ನೂ ಸನ್ಮಾರ್ಗದಲ್ಲಿ ನಡೆಯುವಂತೆ, ಪ್ರಚೋದಿಸಿ ಪ್ರವಚನ ನೀಡುತ್ತಿದ್ದರು. ಅವರಿಗೆ ಅಪಾರ ಸಂಖ್ಯೆಯಲ್ಲಿ ಶಿಷ್ಯರಿದ್ದರು. ಇವರನ್ನು ಕಂಡರೆ ಸಹಿಸದ ಕೆಲವು ಜನರೂ ಒಂದಷ್ಟಿದ್ದರು. ಏನಾದರೂ ಮಾಡಿ ಅವರಿಗೆ ತೊಂದರೆ ಮಾಡುವುದು ಇವರ ಕೆಲಸ. ಆದರೂ ಸಂತರ ಬಳಿಗೆ ಬರುವ ಭಕ್ತರ ಸಮೂಹ ಹೆಚ್ಚುತ್ತಲೇ ಹೋಯಿತು.

ಕಡೆಗೆ ಅವರ ವಿರೋಧಿಗಳು ಹೇಗಾದರೂ ಮಾಡಿ, ಈ ಸಂತರನ್ನು ಮುಗಿಸಿಯೇ ಬಿಡಬೇಕೆಂದು ತೀರ್ಮಾನಿಸಿದರು. ಅದು ಹೇಗೋ ಅವರ ಭಕ್ತನೊಬ್ಬನಿಗೆ ತಿಳಿದುಬಿಟ್ಟಿತು. ಆತ ಬಂದು, 'ಗುರುಗಳೇ, ತಮ್ಮ ಜೀವ ತುಂಬಾ ಅಪಾಯದ ಸ್ಥಿತಿಯಲ್ಲಿದೆ, ತಾವು ಯಾರ ಕಣ್ಣಿಗೂ ಬೀಳದಂತೆ ಸ್ವಲ್ಪ ದಿನಗಳವರೆಗೆ ಮರೆಯಾಗಿರುವುದು ವಾಸಿ. ದೇವರ ಕೃಪೆಯಿಂದ ತಮಗೆ ಒಳ್ಳೆಯ ಕಾಲ ಬಂದೇ ಬರುತ್ತದೆ. ಅಲ್ಲಿಯವರೆಗೆ ಸ್ವಲ್ಪ ಕಾಲ ಹುಷಾರಾಗಿರಿ' ಎಂದು ಕೇಳಿಕೊಂಡರು.

ಸಂತರಿಗೂ ಇದು ಸರಿಯೆನಿಸಿತು, ತಮ್ಮ ಜೊತೆಗೆ ಹೊರಟ ಎಲ್ಲ ಶಿಷ್ಯರನ್ನು ಅಲ್ಲಿಯೇ ಉಳಿಸಿ ಒಬ್ಬರೇ ಹೊರಟರು. ಆದರೆ ಒಬ್ಬ ಶಿಷ್ಯ ಮಾತ್ರ ಹಠ ಮಾಡಿ ಅವರ ಹಿಂದೆ ಹೊರಟೇ ಬಿಟ್ಟ.

ಇಬ್ಬರೂ ತಲೆಮರೆಸಿಕೊಂಡು ರಾತ್ರೋರಾತ್ರಿ ಆಶ್ರಮವನ್ನು ಬಿಟ್ಟು, ಕಾಡಿನದಾರಿಯಲ್ಲಿ ನಡೆದರು. ಈ ವಿಷಯ, ಹೇಗೊ, ಕೊಲೆಗಡುಕರ ಕಿವಿಗೂ ಬಿತ್ತು. ತಕ್ಷಣವೇ ಅವರು, ಖಡ್ಗವನ್ನು ಹಿಡಿದುಕೊಂಡು ಇವರನ್ನು ಹುಡುಕುತ್ತಾ ಹಿಂಬಾಲಿಸಿದರು. ಕಾಲ್ನಡಿಗೆಯಲ್ಲಿ ಹೊರಟ ಗುರು ಶಿಷ್ಯರು, ಪಾಪ, ಎಷ್ಟು ವೇಗವಾಗಿ ತಾನೇ ಹೋಗಲು ಸಾಧ್ಯ? ಇವರ ಹಿಂದಿನಿಂದಲೇ ಕುದುರೆಗಳ ಕಾಲಿನ ಸದ್ದು ಕೇಳಿಸತೊಡಗಿತು. ಈಗ ಶಿಷ್ಯನಿಗೆ ತುಂಬಾ ಭಯವಾಯಿತು. ಆತ ನಡುಗುತ್ತಾ, 'ಗುರುಗಳೇ, ಇವರು ನಮ್ಮನ್ನು ಇಲ್ಲಿಯೇ ಮುಗಿಸಿಬಿಡುತ್ತಾರೆ, ನಮ್ಮ ಹೆಣ, ಈ ಕಾಡಿನ ಮೃಗಗಳಿಗೆ ಆಹಾರವಾಗುತ್ತದೆ. ಇವರಿಂದ ಪಾರಾಗುವುದು ಹೇಗೆ ಗುರುಗಳೇ?' ಎಂದು ಭಯದಿಂದಲೇ ಪ್ರಶ್ನಿಸಿದ.

ಗುರುಗಳು ಶಾಂತವಾಗಿಯೇ ಇದ್ದರು, ಒಂದು ಮಾತನ್ನೂ ಆಡದೆ, ಸ್ವಲ್ಪ ದೂರದಲ್ಲಿ ಒಂದು ಗುಹೆ ಕಾಣುತಿತ್ತು. ಶಿಷ್ಯನ ಕೈಹಿಡಿದುಕೊಂಡು ಆ ಗುಹೆಯೊಳಗೆ ನಡೆದು, ಇಬ್ಬರು ಅಲ್ಲಿ ಅಡಗಿ ಕುಳಿತರು. ಸ್ವಲ್ಪ ಸಮಯದ ನಂತರ, ಕೊಲೆಗಡುಕರ ಗುಂಪು ಆ ಗುಹೆಯ ಬಾಗಿಲಲ್ಲಿ ಬಂದು ನಿಂತಿತು. ಅವರಲ್ಲೊಬ್ಬ ಕೂಗಿ ಹೇಳಿದ, ಅವರು ಇಲ್ಲೇ ಅಡಗಿದ್ದಾರೆ, ಗುಹೆಯ ಒಳಗೆ ನುಗ್ಗಿ ಹುಡುಕಿ ಎಂದ.

'ಈಗೇನು ಮಾಡೋಣ ಗುರುಗಳೇ? ಈಗ ನಮ್ಮಿಬ್ಬರ ಕಥೆ ಮುಗಿಯಿತು.' ಎಂದು ನಡುಗುತ್ತಾ ಶಿಷ್ಯ ಹೇಳಿದ. ಗುರುಗಳು ಶಾಂತರಾಗಿ, 'ಹುಷ್ ಸುಮ್ಮನಿರು, ಇಲ್ಲಿ ನಾವು ಇಬ್ಬರೇ ಅಲ್ಲ, ಮೂವರಿದ್ದೇವೆ' ಎಂದರು. 'ಏನು ಮೂವರೇ? ಅದು ಹೇಗೆ ಗುರುಗಳೇ?' ಎಂದ ಶಿಷ್ಯ.

'ಭಗವಂತನನ್ನು ಮರೆತೆಯಾ? ಅವನಿರುವಾಗ ನಿನಗೇಕೆ ಭಯ?' ಎಂದರು ಗುರುಗಳು.

ಆಗ ಒಂದು ಪವಾಡವೇ ನಡೆಯಿತು. ಇವರು ಗುಹೆಯೊಳಗೆ ಸೇರಿದ ಕ್ಷಣವೇ, ಒಂದು ದೊಡ್ಡ ಜೇಡ ಗುಹೆಯ ಬಾಗಿಲಿಗೆ ತನ್ನ ಬಲೆಯನ್ನು ಹೆಣೆದು ಬಿಟ್ಟಿತ್ತು, ಅದನ್ನು ಕಂಡ ಕೊಲೆಗಡುಕರ ಗುಂಪಿನ ನಾಯಕ ಹೇಳಿದ, 'ಜೇಡರ ಬಲೆ ಹಾಗೆಯೇ ಇದೆ, ಅವರು ಗುಹೆಯೊಳಗೆ ಹೋಗಿರಲು ಸಾಧ್ಯವಿಲ್ಲ, ಅವರು ಬೇರೆಡೆಗೆ ಹೋಗಿರಬೇಕು, ಅವರು ಬಹಳ ದೂರ ಹೋಗುವ ಮುಂಚೆ ಅವರನ್ನು ಹುಡುಕೋಣ ಬನ್ನಿ' ಎಂದು ಅಲ್ಲಿಂದ ಬೇರಡೆಗೆ ನಡೆದರು. ಗುರು ಶಿಷ್ಯರ ಪ್ರಾಣ ಉಳಿಯಿತು.

ಅದಕ್ಕೇ, ದಾಸರು ಹೇಳಿರುವುದು. 'ತಲ್ಲಣಿಸದಿರು ಕಂಡ್ಯ ತಾಳು ಮನವೇ, ಎಲ್ಲರನು ಸಲಹುವನು ಇದಕ್ಕೆ ಸಂಶಯ ಬೇಡ. ಹುಟ್ಟಿಸಿದ ಸ್ವಾಮಿ, ತಾ ಹೊಣೆಗಾರನಾಗಿರಲು, ಗಟ್ಟ್ಯಾಗಿ, ಸಲಹುವನು ಇದಕ್ಕೆ ಸಂಶಯ ಬೇಡ' ಎಂದು. ಎಂತಹ ವಿಷಮ ಪರಿಸ್ಥಿತಿಯಲ್ಲೂ ಭಗವಂತನ ಮೇಲೆ ನಮಗಿರುವ ಅಪರಿಮಿತವಾದ ನಂಬಿಕೆ ನಮ್ಮನ್ನು ಸದಾ ಮುಳುಗದಂತೆ ಕಾಯುತ್ತದೆ.

ಪ ದ ಬಂ ಧ



ಎಡದಿಂದಬಲಕ್ಕೆ:

5. ಸತ್ವ ಅಥವಾ ತಿರುಳು (2)
6. ರಸಭರಿತ ಮಾವು (3)
7. ಆಚರಣೆ, ನಡತೆ (2)
8. ಮತ್ತೊಂದು ಈಟಿ (3)
10. ಜನರ ಮಧ್ಯೆ ಸಿಲುಕಿರುವ ಸೇವಕ (3)
14. ವಿಷ್ಣು ಮತ್ತು ಶಿವ ಜೊತೆಯಾಗಿ ಬಂದಿರುವ ಸ್ಥಳ (4)
15. ಕೊನೆಗೆ ಬೆಲೆಯಿದ್ದರೂ ಉದಾಸೀನತೆ (4)
16. ನೂಲುವ ಸಾಧನ (3)
18. ವಿಸ್ತಾರ ಅಥವಾ ಸಾಮರ್ಥ್ಯ (3)
20. ಎರಡಕ್ಷರದ ಜನಕ (2)
21. ಶಬ್ದ ಅಥವಾ ಕೂಗು (3)
22. ಭಯಂಕರನಾದವನು, ಶಿವ (2)

ಮೇಲಿನಿಂದಕೆಳಕ್ಕೆ:

1. ಮನಸುಗಳ ನಡುವಿನ ವೈಮನಸ್ಯ (3)
2. ದುರ್ಲಭವಾದುದು (3)
3. ನೀರಿನಲ್ಲಿ ಜನಿಸಿದುದು (3)
4. ಆಹಾರ ಅರಗುವಿಕೆ (3)
9. ಲೇಖಕ ಅಥವಾ ಸಾಹಿತಿ (5)
11. ಪುಸ್ತಕಗಳನ್ನು ಓದಲು ಇರುವ ಸ್ಥಳ (5)
12. ಮನುಷ್ಯರಿಗೆ ಇರಬೇಕಾದ ತಾಳ್ಮೆ (3)
13. ತಿರುಗುತ್ತ ಬಂದ ಕುದುರೆ (3)
16. ಬಳ್ಳಿ ಹಬ್ಬಲು ಹಾಕಿರುವ ಚಪ್ಪರ (3)
17. ಬಣ್ಣದ ದಾರಗಳಿಂದ ಬಟ್ಟೆಗಳಿಗೆ ಮಾಡುವ ಹೆಣಿಗೆಯ ಅಲಂಕಾರ (3)
18. ಶಬ್ದ ಅಥವಾ ಕೂಗು (3)
19. ಭಿಕ್ಷೆಗೆ ಮತ್ತೊಂದು ಹೆಸರು (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಸಂಕ 3. ಪದುಮ 5. ಹಣೆ 6. ವಿವಾದ 7. ನುಡಿಸು 8. ಕರ 9. ಗೂಟ 10. ತಿಲಕ 13. ಕಡಿತ 16. ಮಂಗ 17. ರಿಪು 18. ರಿಲಜಾ 19. ನೀರಸ 20. ಹೊಗೆ 21. ತನಯ

ಮೇಲಿನಿಂದ ಕೆಳಕ್ಕೆ: 2. ಕವಿರತ್ನ 3. ಪದಚ್ಯುತಿ 4. ಮನುಕುಲ 5. ಹಸುಗೂಸು 11. ಕಪ್ಪಡಿ 12. ಬಗರಿಗೆ 13. ಕರಜಾತ 14. ತಪನೀಯ 15. ಪರಿಸರ

• ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಅತಿ ವಿರಳ ಸಾಂದ್ರತೆ

ನಾವೆಲ್ಲಿದ್ದರೂ ಜನರ ಮಧ್ಯೆಯೇ ಇರುತ್ತೇವೆ. ಯಾರದ್ದೇ ಶಬ್ದ ಬರಬಾರದೆಂದು ಮನೆಯ ಬಾಗಿಲು ಹಾಕಿಕೊಂಡರೂ, ಪಕ್ಕದ ಮನೆಯವರ ಶಬ್ದ ಕಿವಿ ಮೇಲೆ ಬೀಳುತ್ತಲೇ ಇರುತ್ತೆ. ಆದರೆ, ಎಂದಾದರೂ ಮನುಷ್ಯರ ಸಂಪರ್ಕವೇ ಇಲ್ಲದೇ ದಿನಗಳನ್ನು ಕಳೆಯಬೇಕಾ? ಹೊರಗೆ ಹೋದರೂ ಮನುಷ್ಯರು ಕಾಣಸಿಗಬಾರದೆಂದು ಅನಿಸುತ್ತಿದ್ದರೆ, ನೀವು ಮಂಗೋಲಿಯಾಗೆ ಹೋಗಬಹು. ಉತ್ತರದಲ್ಲಿ ರಷ್ಯಾ ಮತ್ತು ದಕ್ಷಿಣದಲ್ಲಿ ಚೀನಾ ದೇಶದ ನಡುವೆ ಇರುವ ಮಂಗೋಲಿಯಾ, ಗಾತ್ರದಲ್ಲಿ ಪ್ರಪಂಚದ ಅತಿ ದೊಡ್ಡ ದೇಶವೂ ಅಲ್ಲ, ಆದರೆ, ಅಲ್ಲಿರುವ ವಿರಳ ಸಾಂದ್ರತೆಗೆ ಅದು ವಿಶ್ವದ ಅತಿ ದೊಡ್ಡ ದೇಶವೆಂದೇ ಭಾಸವಾಗುತ್ತದೆ. ಕೆಲವು ಪ್ರದೇಶಗಳಲ್ಲಿ ಜನರನ್ನು ನೋಡದೆ ದಿನಗಳನ್ನೇ ಕಳೆಯಬಹುದು. ಅದರ ಜತೆಗೆ ಮಂಗೋಲಿಯಾದಲ್ಲಿ ಬಿಲ್ಡಿಂಗ್ ಅಥವಾ ಮನೆಗಳು ಕಾಣುವುದಕ್ಕಿಂತ ಜಾಸ್ತಿ ಕಾಡು, ಭೂಪ್ರದೇಶ, ಹುಲ್ಲುಗಾವಲು ಪ್ರದೇಶ, ಇನ್ನ ಕೆಲವೆಡೆ ಮರಭೂಮಿಯನ್ನು ಕಾಣಬಹುದು. ನಮ್ಮ ಕಡೆ ಎಷ್ಟೋ ಜನರಿಗೆ ಒಂಟಿಯಾರುವದರಲ್ಲೇ ಸುಖವನ್ನೂ ಕಾಣುತ್ತಿರುತ್ತಾರೆ. ಅಂಥವರಿಗೆ ಅದು ನೆಚ್ಚಿನ ಪ್ರದೇಶವೂ ಆಗಬಹುದು.

ಪುಸ್ತಕ ಲೋಕ

ಕನ್ನಡ ಕೈದೀವಿಗೆ



ಕನ್ನಡ ಪರ ಹೋರಾಟಗಾರ ರಾ.ನಂ. ಚಂದ್ರಶೇಖರ ಅವರು ಬರೆದಿರುವ ಈ ಪುಸ್ತಕವು ಸಂಘಟನೆಯ ಮುಂದಾಳುಗಳಿಗೆ, ಕಾರ್ಯಕರ್ತರಿಗೆ ಕನ್ನಡ ಕೆಲಸ ಮಾಡುವ ಬಗ್ಗೆ ಉಪಯುಕ್ತ ಮಾಹಿತಿ ನೀಡಿದ್ದಾರೆ. ಇದರಲ್ಲಿ ಸಂಘಟನೆಯ ರೂಪುರೇಷದ ಜತೆಗೆ ಅದರ ಸ್ವರೂಪದಿಂದ ಹಿಡಿದು, ಒಬ್ಬ ಸಂಘಟಕನಿಗೆ ತಿಳಿಯಬೇಕಾಗುವ ಮೂಲ ಪ್ರಶ್ನೆ ಹಾಗೂ ಅನಿರ್ದಿಷ್ಟತೆಯನ್ನು ತೊಡೆಯುವಯೆಡೆಗೆ ಮಾರ್ಗದರ್ಶನ ಮಾಡಿದ್ದಾರೆ. ಈ ಪುಸ್ತಕವು ಬರೀ ಹೊಸದಾಗಿ ಸೇರಿದ ಕಾರ್ಯಕರ್ತನಿಗಷ್ಟೇ ಅಲ್ಲದೆ, ಪ್ರತಿಯೊಬ್ಬ ನಾಯಕರಿಗೂ ಕೈಪಿಡಿಯ ರೀತಿಯಲ್ಲಿ ಕೆಲಸಮಾಡುತ್ತದೆ. ಅದೆಲ್ಲದರ ಜತೆಗೆ ಎಲ್ಲ ಕನ್ನಡ ಸಂಗಟನೆಯ ಧ್ಯೇಯ , ವಿವೇಚನೆಯನ್ನೂ ಎತ್ತಿ ಹಿಡಿಯುತ್ತದೆ. ಮತ್ತು ಒಂದು ಯಶಸ್ವಿ ಕಾರ್ಯಕ್ರಮ ಮಾಡುವಲ್ಲಿ ಬೇಕಾದ ಪ್ರತಿ ಹೆಜ್ಜೆಗಳನ್ನೂ ಈ ಪುಸ್ತಕದಲ್ಲಿ ನಮೂದು ಮಾಡಿದ್ದಾರೆ. ಪ್ರತಿಯೊಬ್ಬ ಸಂಘಟಕನೂ ಈ ಪುಸ್ತವನ್ನು ಓದಿ, ತ್ನ ಸಂಘಟನೆಯ ಜವಾಬ್ದಾರಿಯನ್ನು ಸರಿಯಾಗಿ ನಿಭಾಯಿಸುವಲ್ಲಿ ಈ ಪುಸ್ತಕ ಸಹಾಯ ಮಾಡುತ್ತದೆ.

ದಿನಕ್ಕೊಂದು ಪ್ರಶ್ನೆ

• ಎಲ್.ಪಿ.ಕುಲಕರ್ಣಿ, ಬಾದಾಮಿ

• ಸಟ್ಲೆಜ್ ನದಿಯಲ್ಲಿ ಯಾವ ವಿರಳ ಅಂಶ ಇರುವುದನ್ನು ಪತ್ತೆಹಚ್ಚಲಾಗಿದೆ?

- ಎ. ಟ್ಯಾಂಟಲಮ್.
- ಬಿ. ಸ್ಕ್ಯಾಂಡಿಯಮ್.
- ಸಿ. ಬಿಸ್ಮತ್.
- ಡಿ. ಯುರೇನಿಯಂ.

ಉತ್ತರ: ಎ. ಟ್ಯಾಂಟಲಮ್.

ಮಾಹಿತಿ

ಟ್ಯಾಂಟಲಮ್ ಅನ್ನು ಇತ್ತೀಚೆಗೆ ಸಟ್ಲೆಜ್‌ನಲ್ಲಿ ಕಂಡುಹಿಡಿಯಲಾಯಿತು. ಟ್ಯಾಂಟಲಮ್ ಒಂದು ವಿರಳವಾದ ಲೋಹೀಯ ಅಂಶವಾಗಿದ್ದು, ಅದರ ಪರಮಾಣು ಸಂಖ್ಯೆ 73 ರಿಂದ ನಿರೂಪಿಸಲ್ಪಟ್ಟಿದೆ. ಇದು ಅಂಶದ ಒಂದು ಪರಮಾಣುವಿನೊಳಗಿನ ಪ್ರೋಟಾನ್‌ಗಳ ಎಣಿಕೆಯನ್ನು ಸೂಚಿಸುತ್ತದೆ. ಬೂದು ಬಣ್ಣ, ಗಣನೀಯ ತೂಕ ಮತ್ತು ಅಸಾಧಾರಣ ಗಡಸುತನವನ್ನು ಹೊಂದಿರುವ ಟ್ಯಾಂಟಲಮ್ ಪ್ರಸ್ತುತ ವಿವಿಧ ಅನ್ವಯಿಕೆಗಳಲ್ಲಿ ಬಳಸಲಾಗುವ ಅತ್ಯಂತ ತುಕ್ಕು-ನಿರೋಧಕ ಲೋಹಗಳಲ್ಲಿ ಒಂದಾಗಿದೆ.

ನನ್ನ ಪುಟ್ಟ ಪೋರಿ

ಸೌಜನ್ಯ ಬೊಕ್ಕಸಂ

ನನ್ನ ಪುಟ್ಟ ಪೋರಿ ಅದೆಷ್ಟು ಬಾರಿ ತನ್ನಿಷ್ಟದ ಚಿಟ್ಟೆಗಳನ್ನು ನೋಡಲು ತುಳಸೀಕಟ್ಟೆಯ ಕಡೆಗೆ ಓಡುತ್ತಾಳೆ! ಅವಳ ಬೆನ್ನಟ್ಟಿ ನಾನೂ ಹೋಗುತ್ತೇನೆ ನಿಟ್ಟುಸಿರು ಬಿಡುತ್ತಾ. ನನ್ನ ಮುಷ್ಟಿಗೆ ಸಿಗದೆ ತಪ್ಪಿಸಿಕೊಳ್ಳುವ ಅವಳ ಈ ಅಪ್ಪಟ ಚೇಷ್ಟೆ ನನಗೆ ಇಷ್ಟವೂ ಹೌದು ಕಷ್ಟವೂ ಹೌದು. ಬಾಲ್ಯದ ಈ ಘಟ್ಟದಲ್ಲಿ ಮಕ್ಕಳ ಅಟ್ಟಹಾಸಗಳನ್ನು ಸಿಟ್ಟುಮಾಡದೆ ಒಪ್ಪಿಕೊಂಡರೆ ಸರಿ. ಬದಲಾಗಿ ಅವರ ಹುಟ್ಟಡಗಿಸಿಬಿಡುತ್ತೇವೆಂದು ನಾವೇ ಎದುರು ಮೆಟ್ಟಿನಿಂತರೆ ಸೋಲೇ ನಮಗೆ ಕಟ್ಟಿಟ್ಟ ಬುತ್ತಿ.

ಮಗುವೊಂದು ಈ ಜಗವನ್ನು ನೋಡುವ ಬಗೆಯೇ ಸುಂದರ. ಒಂದು ನಿಗೂಢವಾದ ಸೋಜಿಗದಿಂದಲೇ ಎಲ್ಲವನ್ನೂ ಎಲ್ಲರನ್ನೂ ಬಾಚಿ ತಬ್ಬುತ್ತಾ ಬದುಕನ್ನು ಆಚರಿಸಬೇಕು ಎಂದು ಮಾತಿಲ್ಲದೆಯೇ ಸೂಚಿಸಿಬಿಡುತ್ತದೆ. ನಮಗಾರಿಗೂ ಗೋಚರಿಸದ, ನಮ್ಮರಿವಿಗೂ ಆಚೆಗಿನ ಅದೆಷ್ಟೋ ರೋಚಕ ಸಂಗತಿಗಳು ಒಂದು ಪುಟ್ಟ ಮಗುವಿಗೆ ಮಾತ್ರವೇ ತೋಚಿಬಿಡುತ್ತದೆ. ಅದರ ಜಗದೊಳಗೆ ಬರೇ ಬುಗುರಿ, ಹೊಗೆಯ ರೈಲು, ಚಿಗುರು ಮರ, ನೆಗೆವ ಕಪ್ಪೆ – ಇಂತಹ ಸಣ್ಣ ಸಾಧಾರಣ ವಿಷಯಗಳೇ ಇದ್ದರೂ ಅವುಗಳಿಂದಲೇ ನವನವೀನ ಕಥೆಗಳನ್ನು, ಕಲ್ಪನೆಗಳನ್ನು ಹುಟ್ಟುಹಾಕುವ ಶಕ್ತಿ ಮಗುವಿಗಿದೆ. ಬುಗುರಿಯೊಂದರ ಆಟದೊಳಗೆ ಮಗುವು ಆ ಅಗಾಧ ಬ್ರಹ್ಮಾಂಡವನ್ನೇ ಮನಗಾಣಬಲ್ಲದು. ಮರದೆಲೆಗಳ ಮರ್ಮರದ ಭಾಷೆ ಬಹುಷಃ ಈ ನಿರ್ಮಲ ಕೂಸಿಗೆ ಅರ್ಥವಾದೀತೋ ಏನೋ! ಹುಟ್ಟುವಾಗಲೇ ಮಗುವು ಅಧ್ಯಾತ್ಮದ ಉತ್ತುಂಗಕ್ಕೇ ಏರಿಬಿಟ್ಟಿರುತ್ತದೆ, ತನಗೆ ಗೊತ್ತಿಲ್ಲದೆಯೇ.



ಹಿತ್ತಲಿನ ಪೊದೆಗಳನ್ನು ಪದೇ ಪದೇ ಮುತ್ತುವ ಈ ಪಾತರಗಿತ್ತಿಗಳೆಂದರೆ ಅದೇತಕೋ ಬಲು ಪ್ರೀತಿ ನನ್ನ ಎಳೆಬಾಲೆಗೆ. ಸಣ್ಣ ವಯಸ್ಸಿನಲ್ಲಿಯೇ ಅಲ್ಲವೇ ಇನ್ನಿಲ್ಲದಂತೆ ಸೆಳೆಯುವುದು ನಮ್ಮನ್ನು ಈ ಬಣ್ಣದ ಚಿಟ್ಟೆಯ ಬಳಗವು? ಬೆಳೆದು ಹಣ್ಣಾಗಿ ಹೋದ ಮೇಲೆ ಕಳೆದೇ ಹೋಗುತ್ತದೆ ಆ ವಿಸ್ಮಯದ ಸೆಲೆಯು, ಅಚ್ಚರಿಯ ನೆಲೆಯು. ಖರ್ಚು ವೆಚ್ಚಗಳಷ್ಟೇ ತುಂಬಿದ ಈ ಲೆಕ್ಕಾಚಾರದ ಬದುಕಿನಲ್ಲಿ ನನಗೆಂದೂ ಹಕ್ಕಿಯ ಹಾಡು ಮುಖ್ಯವೆಂದೆನಿಸಿರಲಿಲ್ಲ. ಮಗಳು ಸಿಕ್ಕ ಮೇಲೆ ಬದಲಾಗಿದೆ ನನ್ನ ಚಿಂತನೆಯ ದಿಕ್ಕೇ. ಇದೀಗ ನನಗೆ ಚುಕ್ಕಿ-ಚಂದ್ರಮ, ಬೆಕ್ಕು ಕೊಕ್ಕರೆ ಇಂತಹ ಚಿಕ್ಕ ಚಿಕ್ಕ ವಿಷಯಗಳೇ ಸಖ್ಯವೆನಿಸತೊಡಗಿದೆ. ಮಗಳು ಪಕ್ಕದಲ್ಲಿರುವಾಗ ನನ್ನ ಹೆಗಲಿಗೆ ಒಂದು ಹೊಸತೇ ಆದ ರೆಕ್ಕೆಯು ದಕ್ಕಿದಂತೆ ಭಾಸವಾಗುತ್ತಿದೆ. ನನಗೂ ಈಗ ಆಗಸಕೇರುವ ಆಸೆಯಾಗುತ್ತಿದೆ. ಹಚ್ಚ ಹಸಿರಿನಲ್ಲಿ ಸ್ವಚ್ಛಂದವಾಗಿ ಗರಿಯ ಬಿಚ್ಚುವ ಗುಬ್ಬಚ್ಚಿಯ ಹಾಗೆ. ಭಾರವೆಲ್ಲವ ಕಳಚಿ.

ಮಗಳ ಕೈಹಿಡಿದು ಹೀಗೆಯೇ ಬಾಯಗಲಿಸುತ್ತಾ ಆ ಗಗನದ ಅಗಣಿತ ಸೊಬಗನ್ನು ಆಹ್ಲಾದಿಸುವಾಗ, ಈ ಹೃದಯವು ಹಗುರಾಗಿಬಿಡುತ್ತದೆ. ಮುಗಿಲಿನ ಮೊಗವೇ ಅಂತಹದ್ದು. ಎದೆಯೊಳಗಿನ ದುಗುಡಗಳನ್ನು ಒಡನೆಯೇ

ಕಡಿದುಹಾಕುವಷ್ಟು ಪ್ರಭಾವಶಾಲಿ. ಇಲ್ಲೇ ಹುಲ್ಲಿನ ಬದಿಯಲ್ಲಿ ಮೆಲ್ಲಗೆ ಹರಿಯುತ್ತಾ ಬರುವ ಇರುವೆಗಳನ್ನು ನೋಡುತ್ತಾ ನಿಲ್ಲುತ್ತೇನೆ ಅವಳೊಂದಿಗೆ. ಏನೂ ಕೆಲಸವಿಲ್ಲದವಳ ಹಾಗೆ. ಇದುವರೆಗೂ ನಾನು ಇರುವೆಯನ್ನು ಸರಿಯಾಗಿ ನೋಡಿಯೇ ಇರಲಿಲ್ಲವಲ್ಲ! ಈ ಪಿಪೀಲಿಕೆಗಳ ಸಪೂರ ದೇಹ, ಕೈಕಾಲುಗಳ ರೂಪುರೇಖೆ, ಅವು ಉಪಾಯವಾಗಿ ಊಟವನ್ನು ಒಯ್ಯುವ ಪರಿ – ಎಲ್ಲವೂ ಪ್ರಕೃತಿಯ ಅಪಾರ ನೈಪುಣ್ಯತೆಯನ್ನೇ ಬಿಂಬಿಸುತ್ತದೆ. ನಿಸರ್ಗದೊಂದಿಗಿನ ಸಂಬಂಧವನ್ನು ನಾನು ಮತ್ತೆ ಕಂಡುಕೊಳ್ಳುವ ಹಾಗೆ ಮಾಡಿದ್ದು ನನ್ನ ಕಂದಮ್ಮ. ಅವಳನ್ನೇ ಹಿಂಬಾಲಿಸುತ್ತಾ ಹೋಗುತ್ತಿದ್ದೇನೆ. ನಿಂಬೆಯ ಮರ, ಹೊಂಬಾಳೆ ಹೂವು, ಕಂಬಳಿಹುಳ, ಕೊಂಬಿರುವ ಹಸು, ಅಂಬೆಗಾಲಿಡುವ ನಾಯಿಮರಿ – ಇವುಗಳ ಒಂದು ತುಂಬು ನೆಮ್ಮದಿಯ ಸುಂದರ ಲೋಕವನ್ನೇ ಕಣ್ಣ ಮುಂದೆ ತಂದಿರಿಸಿದ್ದಾಳೆ. ಆ ನೀಲಿ ಅಂಬರವನ್ನೇ ನೋಡುತ್ತಾ ಅವಳು ಅದಾವ ಗಂಭೀರ ಧ್ಯಾನದಲ್ಲಿ ಒಂದಾಗಿ ಹೋಗುತ್ತಾಳೋ ನಾ ಕಾಣೆ! ಅಂತಹ ತಲ್ಲೀನತೆ ನನಗೇಕಿಲ್ಲ ಎಂದೆನಿಸುತ್ತದೆ.

ಇಷ್ಟೂ ದಿನಗಳಿಂದ ಬಹಳ ಪ್ರತಿಷ್ಠೆಯಿಂದ ಹೇಳಿಕೊಳ್ಳುತ್ತಿದ್ದೆ ನಾನು ಅವಳನ್ನು ಬೆಳೆಸುತ್ತಿದ್ದೇನೆ ಎಂದು. ಆದರೆ ವಾಸ್ತವದಲ್ಲಿ – ನನ್ನನ್ನು ಬೆಳೆಸುತ್ತಾ ಮೊಳೆಯಿಸುತ್ತಾ ಬಂದಿರುವುದು ಅವಳು. ನನ್ನ ಬೆರಳ ಹಿಡಿದು ಕರೆದುಕೊಂಡು ಹೋಗುತ್ತಿದ್ದಾಳೆ ಅರಿವಿನೂರಿಗೆ. ಜೀವನದ ಸರಳ ಪಾಠಗಳನ್ನು ತನ್ನ ಆಟ-ನಾಟಕಗಳ ಮೂಲಕವೇ ಕಲಿಸಿಬಿಡುತ್ತಿದ್ದಾಳೆ. ಅವಳ ಈ ತೀಟೆಗಳನ್ನು, ಕೀಟಲೆಗಳನ್ನು ಮನದ ಮೂಟೆಯಲ್ಲಿ ಗಂಟಿಕ್ಕಿ ಕೊನೆಯವರೆಗೂ ಕೂಡಿಟ್ಟುಕೊಳ್ಳುವಾಸೆ. ನನ್ನನ್ನು ನೋಡುತ್ತಲೇ ಓಡಿ ಬಂದು ಅವಳು ನೀಡುವ ಈ ಗಾಢ ಅಪ್ಪುಗೆಯಿದೆಯಲ್ಲ – ಅದು ಈ ತಾಯಿಯ ಹೃದಯದಲ್ಲಿ ಎಂದೂ ಮಾಯದೆಯೇ ಚಿರಸ್ಥಾಯಿಯಾಗಿ ಉಳಿದುಬಿಡುವ ನೆನಪಿನ ಹೊಲಿಗೆ. ಅವಳು ಕೊಡುವ ಈ ನಯವಾದ ಮುತ್ತುಗಳು ಸ್ವಲ್ಪ ಹೊತ್ತಿನ ನಂತರ ಕಳೆದೇ ಹೋಗುತ್ತದೆಂದು ಒಳಗೊಳಗೇ ಭಯವಾಗುತ್ತಿದೆ. ಬೆಳೆಯುತ್ತಾ ಬೆಳೆಯುತ್ತಾ.

ಅವಳು ಇನ್ನೂ ಮಗುವಾಗಿಯೇ ಇರುವ ಈ ದಿನಗಳನ್ನು, ಕ್ಷಣಗಳನ್ನು ಮನಸಾರೆ ಅನುಭವಿಸಿಬಿಡುತ್ತೇನೆ. ಏಕೆಂದರೆ ಅವಳ ಈ ಎಳವೆಯು ಮರಳಿ ಬರುವುದಿಲ್ಲ. ಬಾಲ್ಯದ ಈ ಸಂಚಿಕೆಯು ಮಿಂಚಿನ ವೇಗದಲ್ಲಿ ಮಾಯವೇ ಆಗಿಬಿಡುತ್ತದೆ. ತದನಂತರ ಯಾವುದೂ ಈಗಿನಂತಿರುವುದಿಲ್ಲ. ಎಲ್ಲವೂ ಬದಲಾಗಿಯೇ ಬಿಡುತ್ತದೆ. ಅವಳ ಈ ತೊದಲು ನುಡಿ. ಮೊದಲ ಹೆಜ್ಜೆಗಳು. ಮುದ್ದಾಗಿ ಕೆದರಿರುವ ಕೂದಲು. ಮನೆಯ ತುಂಬಾ ಚೆದುರಿದ ಆಟಿಕೆ. ಅವಳ ಕುದುರೆ ಗಾಡಿ. ಒದೆದು ಒದೆದು ಆಡುವ ಚೆಂಡು. ವಿಧ ವಿಧವಾದ ಅವಳ ಅಂಗಿ-ಲಂಗಗಳು. ಎದುರು ಮನೆಯ ಗದರುವ ನಾಯಿ. ಯಾರೂ ಕದಿಯದ ಹಾಗೆ ಅವಳು ಬದಿಗೇ ಇರಿಸಿಕೊಳ್ಳುವ ಸದರದ ಗೊಂಬೆ. ಅಧರದಿಂದುದುರುವ ಜೊಲ್ಲು. ಅವಳು ಬೆದರಿದಾಗ ನಾ ಹಾಡುವ ಪದಗಳು. ನನ್ನೆದೆಗೊರಗಿ ಅವಳು ಮಾಡುವ ಈ ಮಧುರ ನಿದಿರೆ...

ಮನಸೇ ಸ್ವಲ್ಪ ರಿಲ್ಯಾಕ್ಸ್!

ವಾಣಿ ಮೈಸೂರು

ಜೀವನದ ಸಂತೆಯಲ್ಲಿ ನೋವಿದೆ ನಲಿವಿದೆ ಏಳು ಬೀಳಿದೆ. ಸೋತಾಗ ಬೇಕು ಸ್ಫೂರ್ತಿ ಗೆದ್ದಾಗ ಬೇಕು ಅಹಂ ಇಲ್ಲದ ಭಾವ. ನೋವನ್ನು ಮಾರಿ ನಲಿವನ್ನು ತೆಗೆದುಕೊಂಡು ಸಾಗಿಸುವ ಜೀವನ ಅಷ್ಟು ಸಲೀಸಾಗಿರಲಿಲ್ಲ. ಕೆಲವೊಂದು ನಮ್ಮ ಕೈ ಮೀರಿದ್ದು, ಕಳೆದು ಕೊಂಡು ಪಡುವ ಪರಿತಾಪದ ಭಾವ ಮತ್ತೆ ಕಳೆದುಕೊಂಡಿದ್ದು ಮರೆಯುವ ದಾರಿ ಕಂಡುಕೊಳ್ಳುವುದು.

ಋಣಾತ್ಮಕ ಭಾವನೆಗಳನ್ನು ತ್ಯಜಿಸಿ ಧನಾತ್ಮಕ ಭಾವನೆಗಳ ಕಡೆಗೆ ಮನಸ್ಸನ್ನು ಕೊಂಡೊಯ್ಯುವಲ್ಲಿ ಸಹಾಯವಾಗುತ್ತದೆ. ನಮ್ಮತನವಲ್ಲದ ಬದುಕಿನ ಪರಿಚಯ ನೋವು – ನಲಿವಿನ ಮತ್ತು ಸೋಲು- ಗೆಲುವಿನ ಪಯಣ, ನಾವು ನಮ್ಮನ್ನು ಪ್ರೀತಿಸುವಾಗ ಸಿಗುವ ಹಿತವಾದ ಅನುಭೂತಿಯು ಅದ್ಭುತವೇ? ಸ್ಫೂರ್ತಿಯೇ ಬದುಕಿಗೆ ಬೆಳಕು. ಸೋತಾಗ ಸ್ಫೂರ್ತಿ ಸಾಲುಗಳೇ ಕತ್ತಲಿನಿಂದ ಬೆಳಕಿನ ಕಡೆಗೆ ಕರೆದುಕೊಂಡು ಹೋಗುತ್ತದೆ. ನಾವು ನೆಮ್ಮದಿಯಾಗಿ ಜೀವಿಸಲು ಬುದ್ಧಿವಂತಿಕೆ, ತಾಳ್ಮೆ ಮತ್ತು ಸಹನೆ ಅತಿಮುಖ್ಯ. ಚಿಂತೆ ಬಿಡುವುದು ಅಷ್ಟು ಸುಲಭದ ಮಾತಲ್ಲ? ಚಿಂತೆ ಬಿಡುವ ಸಾಹಸ ಮಾಡಿದಷ್ಟು ತಪ್ಪಸ್ಸೇ ಅನ್ನಿಸಬಹುದು. ಯಾವುದು ಕ್ಲಿಷ್ಟಕರವಲ್ಲ ಅಂದುಕೊಂಡರೆ ಸುಲಭವೇ? ಚಿಂತೆ ಬಿಟ್ಟು ಚಿಲ್ ಮಾಡುವ ಮನೋಭಾವದ ಬೆಳಕು



ಅಪ್ಪುವ ಭಾವಕ್ಕೆ ಚಿಂತೆ ಬಿಟ್ಟು ಖುಷಿಯಾದ ದಾರಿಯನ್ನು ಕೊಂಡುಕೊಳ್ಳುವುದೇ ನೆಮ್ಮದಿಯ ಬದುಕಿಗೆ ಅಡಿಪಾಯ.

ಸಮಾಚಾರ ಸಣ್ಣದಲ್ಲ

ಎಟಿಪಿ: ಜೀವನ್-ವಿಜಯ್‌ಗೆ ಪ್ರಶಸ್ತಿ

ದೆಹಲಿ: ಭಾರತದ ಜೀವನ್ ನೆಡುಂಚೆಳಿಯನ್ ಮತ್ತು ಅವರ ಜೊತೆಗಾರ ವಿಜಯ್ ಸುಂದರ್ ಪ್ರಶಾಂತ್ ಅವರು ಮೊದಲ ಬಾರಿ ಒಟ್ಟಾಗಿ ಎಟಿಪಿ ಟೂರ್ನಿಯೊಂದರಲ್ಲಿ ಪ್ರಶಸ್ತಿಯೊಂದನ್ನು ಗೆದ್ದುಕೊಂಡಿದ್ದಾರೆ. ಹಾಂಗ್ಝು ಓಪನ್ ಪುರುಷರ ಡಬಲ್ಸ್ ಟೂರ್ನಿಯ ಫೈನಲ್‌ನಲ್ಲಿ ಅವರು ಜರ್ಮನಿಯ ಜೋಡಿಯನ್ನು ಮಂಗಳವಾರ ಸೋಲಿಸಿದರು. ಒಂದು ಗಂಟೆ 49 ನಿಮಿಷಗಳವರೆಗೆ ನಡೆದ ಫೈನಲ್‌ನಲ್ಲಿ ಶ್ರೇಯಾಂಕರಹಿತ ಜೀವನ್- ವಿಜಯ್ ಜೋಡಿ ಹಿನ್ನಡೆಯಿಂದ ಚೇತರಿಸಿಕೊಂಡು ಜರ್ಮನಿಯ ಕಾನ್ಸ್‌ಟಂಟೈನ್ ಫ್ರಾಂಟ್ಜೆನ್- ಹೆಂಡ್ರಿಕ್ ಜೆಬೆನ್ಸ್ ಜೋಡಿಯನ್ನು 4-6, 7-6 (5), 10-7 ರಿಂದ ಸೋಲಿಸಿದರು. ಜರ್ಮನಿಯ ಜೋಡಿ ಸಹ ಶ್ರೇಯಾಂಕ ಪಡೆದಿರಲಿಲ್ಲ. 35 ವರ್ಷ ವಯಸ್ಸಿನ ಜೀವನ್ ಅವರಿಗೆ ಇದು ಎರಡನೇ ಎಟಿಪಿ ಟೂರ್ ಪ್ರಶಸ್ತಿ. ಅವರು ಈ ಹಿಂದೆ, 2017ರಲ್ಲಿ ರೋಹನ್ ಬೋಪಣ್ಣ ಜೊತೆಗೂಡಿ ಚೆನ್ನೈ ಓಪನ್‌ನಲ್ಲಿ ವಿಜೇತರಾಗಿದ್ದರು. ಇನ್ನೊಂದೆಡೆ ವಿಜಯ್‌ಗೆ ಒಲಿದ ಮೊದಲ ಎಟಿಪಿ ಪ್ರಶಸ್ತಿಯಿದು. ಮೊದಲ ಸೆಟ್‌ಅನ್ನು 4-6ರಲ್ಲಿ ಸೋತ ನಂತರ ಭಾರತದ ಜೋಡಿ ಪ್ರತಿರೋಧ ಪ್ರದರ್ಶಿಸಿತು. ಎರಡನೇ ಸೆಟ್‌ಅನ್ನು ಟೈಬ್ರೇಕರ್‌ನಲ್ಲಿ ಪಡೆದು, ಪಂದ್ಯವನ್ನು ನಿರ್ಣಾಯಕ ಸೆಟ್‌ಗೆ ಬೆಳೆಸಿದರು. ಇಲ್ಲಿ ಒತ್ತಡದ ನಡುವೆಯೂ ಸಂಯಮ ವಹಿಸಿ ಸೆಟ್ ಹಾಗೂ ಪಂದ್ಯ ತನ್ನದಾಗಿಸಿಕೊಂಡಿತು.

ಚೆಂಗ್ಡು ಓಪನ್: ಯುಕಿ ಅಲ್ಬಾನೊಗೆ ಸೋಲು

ದೆಹಲಿ: ಯುಕಿ ಭಾಂಬ್ರಿ ಮತ್ತು ಫ್ರಾನ್ಸ್‌ನ ಅವರ ಜೊತೆಗಾರ ಅಲ್ಬಾನೊ ಒಲಿವೆಟ್ಟಿ ಅವರು ಈ ವರ್ಷ ಮೂರನೇ ಪ್ರಶಸ್ತಿಯನ್ನು ಮಂಗಳವಾರ ಸ್ವಲ್ಪದರಲ್ಲೇ ಕಳೆದುಕೊಂಡರು. ತೀವ್ರ ಹೋರಾಟ ಕಂಡ ಚೆಂಗ್ಡು ಓಪನ್ ಟೆನಿಸ್ ಟೂರ್ನಿಯ ಡಬಲ್ಸ್ ಫೈನಲ್‌ನಲ್ಲಿ ಯುಕಿ- ಒಲಿವೆಟ್ಟಿ ಜೋಡಿ 4-6, 6-4, 4-10ರಲ್ಲಿ ಅಗ್ರ ಶ್ರೇಯಾಂಕದ ಸಾದಿಯೊ ದೌಂಬಿಯಾ- ಫ್ಯಾಬಿಯನ್ ರಿಬೋಲ್ ಜೋಡಿ ಎದುರು ಸೋಲನುಭವಿಸಿತು. ಸುಮಾರು ಒಂದೂವರೆ ಗಂಟೆ ನಡೆದ ಫೈನಲ್‌ನಲ್ಲಿ ಗೆಲುವಿಗೆ ತೀವ್ರ ಹೋರಾಟ ನಡೆಸಿದ ಇಂಡೊ-ಫ್ರೆಂಚ್ ಜೋಡಿ ಎರಡನೇ ಸೆಟ್ ಗೆದ್ದುಕೊಂಡರೂ, ಅಂತಿಮ ಕ್ಷಣಗಳಲ್ಲಿ ತಪ್ಪುಗಳನ್ನು ಎಸಗಿತು. ಆರು ಡಬಲ್ ಫಾಲ್ಟ್‌ಗಳೂ ದುಬಾರಿಯಾದವು. ಇದು ಅಗ್ರ ಶ್ರೇಯಾಂಕದ ಫ್ರಾನ್ಸ್ ಜೋಡಿಗೆ ಯುಕಿ-ಒಲಿವೆಟ್ಟಿ ವಿರುದ್ಧ ಮೊದಲ ಜಯ. ಈ ವರ್ಷ ಯುಕಿ-ಒಲಿವೆಟ್ಟಿ ಜೋಡಿ ಆವೆ ಅಂಕಣದಲ್ಲಿ ನಡೆದ ಎರಡು ಎಟಿಪಿ ಟೂರ್ನಿಗಳಲ್ಲಿ ಜಯಶಾಲಿಯಾಗಿದೆ. ಜುಲೈನಲ್ಲಿ ಸ್ವಿಸ್ ಓಪನ್ ಮತ್ತು ಏಪ್ರಿಲ್‌ನಲ್ಲಿ ಮ್ಯೂನಿಕ್‌ನಲ್ಲಿ ನಡೆದ ಬಿಎಂಡಬ್ಲ್ಯು ಓಪನ್‌ನಲ್ಲಿ ಪ್ರಶಸ್ತಿ ಗೆದ್ದಿತ್ತು.

ಅ.11ರಿಂದ ಶುರುವಾಗುವ ಪ್ರೊ ಕಬಡ್ಡಿ ಲೀಗ್ | ಕಳೆದ 4 ಆವೃತ್ತಿಗಳಿಂದ ಕಪ್ ಗೆಲ್ಲದ ಬೆಂಗಳೂರು ಬುಲ್ಸ್

ಪ್ರೊ ಕಬಡ್ಡಿ: ಗೂಳಿಗಳಿಗೆಷ್ಟು ಬಲ?

ಬೆಂಗಳೂರು: ಪ್ರೊ ಕಬಡ್ಡಿ ಲೀಗ್ 11ನೇ ಆವೃತ್ತಿಗೆ ದಿನಗಣನೆ ಆರಂಭವಾಗಿದೆ. ಅಕ್ಟೋಬರ್ 11ರಂದು ಉದ್ಘಾಟನಾ ಪಂದ್ಯ ನಡೆಯುತ್ತಿದೆ. ಟೂರ್ನಿಯಲ್ಲಿ ಈ ಬಾರಿ ಬೆಂಗಳೂರು ಬುಲ್ಸ್ ತಂಡವು ಭಾರಿ ನಿರೀಕ್ಷೆ ಮೂಡಿಸಿದೆ. ಆರನೇ ಆವೃತ್ತಿಯ ಚಾಂಪಿಯನ್ ಆಗಿರುವ ಬೆಂಗಳೂರು ಬುಲ್ಸ್ ತಂಡ ಕಳೆದ ನಾಲ್ಕು ಆವೃತ್ತಿಗಳಲ್ಲಿ ಕಪ್ ಗೆಲ್ಲುವಲ್ಲಿ ವಿಫಲವಾಗಿದೆ. ಹೀಗಾಗಿ ಈ ಬಾರಿ ಒಂದಷ್ಟು ಹೊಸತನದೊಂದಿಗೆ ಟೂರ್ನಿಗೆ ಎಂಟ್ರಿ ಕೊಟ್ಟು ಪಿಕೆಎಲ್ ಪ್ರಶಸ್ತಿ ಗೆಲ್ಲುವ ತವಕದಲ್ಲಿದೆ.

ಕಳೆದ ನಾಲ್ಕು ಋತುಗಳಲ್ಲಿ ಮೂರರಲ್ಲಿ ಪ್ಲೇಆಫ್ ತಲುಪಿದ್ದ ತಂಡವು, ಕೊನೆಯ ಅಂದರೆ ಸೀಸನ್ 10ರಲ್ಲಿ ಪ್ಲೇಆಫ್ ಸ್ಥಾನ ಪಡೆಯಲು ವಿಫಲವಾಗಿತ್ತು. ಬೆಂಗಳೂರು ಗೂಳಿಗಳ ಬಳಗವು ಇದುವರೆಗೂ ಆಡಿರುವ 10 ಪಿಕೆಎಲ್ ಆವೃತ್ತಿಗಳಲ್ಲಿ 6ರಲ್ಲಿ ಪ್ಲೇಆಫ್ ಹಂತ ತಲುಪಿದೆ. ಇದರಲ್ಲಿ ಸೀಸನ್ 6ರಲ್ಲಿ ರೋಹಿತ್ ಕುಮಾರ್ ನೇತೃತ್ವದಲ್ಲಿ ತಂಡ ಚಾಂಪಿಯನ್ ಆಗಿತ್ತು. 2 ಸೀಸನ್ನಲ್ಲಿ ರನ್ನರ್ ಅಪ್ ಸ್ಥಾನ ಪಡೆದಿತ್ತು.

ಗೂಳಿಗಳು 11ನೇ ಆವೃತ್ತಿಗೆ ಎಂಟ್ರಿಕೊಡುತ್ತಿದ್ದಂತೆ ತಂಡದ ಪ್ರಮುಖ ಬಲವಾಗಿರುವುದು ಕೋಚ್. ಬೆಂಗಳೂರು ಬುಲ್ಸ್ ತಂಡದ ಮುಖ್ಯ ಕೋಚ್ ರಣಧೀರ್ ಸಿಂಗ್ ಸೆಹ್ರಾವತ್ ಪಿಕೆಎಲ್ ಉದ್ಘಾಟನಾ ಆವೃತ್ತಿಯಿಂದಲೂ ಫ್ರಾಂಚೈಸಿಯೊಂದಿಗೆ ಇರುವುದು ತಂಡದ ಅತಿ ದೊಡ್ಡ ಬಲ. ಲೀಗ್‌ನಲ್ಲಿ ದೀರ್ಘ ಕಾಲ ಒಂದೇ ತಂಡಕ್ಕೆ ಸೇವೆ ಸಲ್ಲಿಸಿದ ಹೆಗ್ಗಳಿಕೆ ಇವರದ್ದು.

ಸೀಸನ್ 11ರ ಆರಂಭಕ್ಕೂ ಮುನ್ನ ನಡೆದ ಆಟಗಾರರ ಹರಾಜು ಪ್ರಕ್ರಿಯೆಯಲ್ಲಿ ಫ್ರಾಂಚೈಸಿಯು ಹೊಸ ಹೊಸ ಪ್ರತಿಭೆಗಳನ್ನು ತೆಕ್ಕೆಗೆ ಹಾಕಿಕೊಂಡಿದೆ. ಹೊಸ ಮುಖವುಳ್ಳ ಪ್ರಬಲ ರೈಡಿಂಗ್ ಘಟಕ ಹಾಗೂ

ಟ್ಯಾಕಲ್ ಬಳಗ ಗಟ್ಟಿಯಾಗಿದೆ.

ಪರ್ದೀಪ್ ಮೇಲೆ ಭಾರಿ ನಿರೀಕ್ಷೆ: ಆಟಗಾರರ ಹರಾಜಿನಲ್ಲಿ ಬುಲ್ಸ್ ತಂಡವು ಬಲಿಷ್ಠ ರೈಡರ್ ಪರ್ದೀಪ್ ನರ್ವಾಲ್ ಅವರನ್ನು ಕೇವಲ 70 ಲಕ್ಷ ರುಪಾಯಿಗೆ ತೆಕ್ಕೆಗೆ ಹಾಕಿಕೊಂಡಿತ್ತು. ಅಜಿಂಕ್ಯ ಪವಾರ್ ಅವರನ್ನು 1.107 ಕೋಟಿ ರೂಪಾಯಿ ಕೊಟ್ಟು ಖರೀದಿಸಿತು. ರೈಡರ್ ಪರ್ದೀಪ್ ನರ್ವಾಲ್ 1690 ರೈಡ್ ಪಾಯಿಂಟ್‌ಗಳೊಂದಿಗೆ ಪಿಕೆಎಲ್ ಇತಿಹಾಸದಲ್ಲಿ ಅತಿ ಹೆಚ್ಚು ಸ್ಕೋರ್ ಗಳಿಸಿದ ರೈಡರ್ ಆಗಿದ್ದರೆ, ಅಜಿಂಕ್ಯ ಪವಾರ್ 454 ರೈಡ್ ಪಾಯಿಂಟ್‌ಗಳನ್ನು ಗಳಿಸಿದ್ದಾರೆ. ಸೀಸನ್ 2ರಲ್ಲಿ ಬುಲ್ಸ್ ಪರ ಪಿಕೆಎಲ್ ಪದಾರ್ಪಣೆ ಮಾಡಿದ ನರ್ವಾಲ್, ಇದೇ ಮೊದಲ ಬಾರಿಗೆ ಬುಲ್ಸ್ ಪರ ಆಡುತ್ತಿದ್ದಾರೆ. ಕಳೆದ ಆವೃತ್ತಿಯಲ್ಲಿ ಅವರು ನಿರೀಕ್ಷಿತ ಪ್ರದರ್ಶನ ನೀಡಿರಲಿಲ್ಲ. ಹೀಗಾಗಿ ಮತ್ತೆ ತಮ್ಮ ಲಯಕ್ಕೆ ಮರಳುವ ನಿರೀಕ್ಷೆಯಲ್ಲಿದ್ದಾರೆ.

ಈ ಬಾರಿಯ ಆಟಗಾರರ ಹರಾಜಿನಲ್ಲಿ ಏಳನೇ ಅತ್ಯಂತ ದುಬಾರಿ ಆಟಗಾರ ಹಾಗೂ ಕಳೆದ ಮೂರು ಋತುಗಳಲ್ಲಿ ಸರಾಸರಿ 100ಕ್ಕೂ ಹೆಚ್ಚು ರೈಡ್ ಪಾಯಿಂಟ್‌ಗಳನ್ನು ಗಳಿಸಿರುವ ಅಜಿಂಕ್ಯ ಪವಾರ್ ಅವರಿಂದ ತಂಡ ಭಾರಿ ನಿರೀಕ್ಷೆ ಹೊಂದಿದೆ. ರೈಡರ್ ಜೈ ಭಗವಾನ್ ಅವರನ್ನು 62 ಲಕ್ಷ ರುಪಾಯಿಗೆ ಖರೀದಿಸಿದ ಬುಲ್ಸ್ ಮತ್ತಷ್ಟು ಬಲಿಷ್ಠವಾಗಿದೆ. ಸುಶೀಲ್ ಮತ್ತು ಅಕ್ಷಿತ್ ಅವರಂಥ ರೈಡರ್‌ಗಳು ಮತ್ತೆ ಆಕ್ರಮಣಕಾರಿ ಆಟ ಮುಂದುವರೆಸಲು ಸಿದ್ಧರಾಗಿದ್ದಾರೆ.

ಡಿಫೆನ್ಸ್‌ನಲ್ಲಿ ಅನುಭವದ ಕೊರತೆ: ಈ ಬಾರಿ ತಂಡದ ಡಿಫೆನ್ಸ್ ಆಸಕ್ತಿದಾಯಕವಾಗಿದೆ. ತಂಡದಲ್ಲಿ ನಾಯಕ ಸೌರಭ್ ನಂದಾಲ್ ಏಕೈಕ ಅನುಭವಿ ಡಿಫೆಂಡರ್ ಆಗಿದ್ದು, ಹೊಸ ಅಭಿಯಾನದಲ್ಲಿ ಡಿಫೆನ್ಸ್ ಅನ್ನು ಮುನ್ನಡೆಸುವ ಮಹತ್ತರ ಜವಾಬ್ದಾರಿ ಅವರಲ್ಲಿದೆ. ಪಿಕೆಎಲ್ ವೃತ್ತಿಜೀವನದಲ್ಲಿ ಬರೋಬ್ಬರಿ 246 ಟ್ಯಾಕಲ್ ಪಾಯಿಂಟ್ ಗಳಿಸಿರುವ ನಂದಾಲ್ ಅವರಿಗೆ, ಅನನುಭವಿ ಡಿಫೆನ್ಸ್ ಘಟಕದಿಂದ ಉತ್ತಮ ಬೆಂಬಲದ ಅಗತ್ಯವಿದೆ. ಇದು ತಂಡಕ್ಕೆ ದೌರ್ಬಲ್ಯವಾಗಿ ಕಾಣುತ್ತದೆ. ಪರ್ತೀಕ್, ರೋಹಿತ್ ಕುಮಾರ್ ಪಿಕೆಎಲ್‌ನ ಒಂದು ಋತುವಿನಲ್ಲಿ ಮಾತ್ರ ಆಡಿದ್ದಾರೆ. ಆಡಿದ ನಾಲ್ಕು ಋತುಗಳಲ್ಲಿ 40 ಟ್ಯಾಕಲ್ ಪಾಯಿಂಟ್ ಗಳಿಸಿರುವ ಪೊನ್ಪರ್ತಿಬನ್ ಸುಬ್ರಮಣಿಯನ್ ತಂಡಕ್ಕೆ ನೆರವಾಗಬೇಕಿದೆ.

ಗಾಯದಿಂದಾಗಿ ಸೀಸನ್ 10ರಿಂದ ಹೊರಗುಳಿದಿದ್ದ ಆಲ್ರೌಂಡರ್ ನಿತಿನ್ ರಾವಲ್ ತಮ್ಮ ಪಿಕೆಎಲ್ ವೃತ್ತಿಜೀವನದಲ್ಲಿ 142 ರೈಡ್ ಪಾಯಿಂಟ್ ಮತ್ತು 94 ಟ್ಯಾಕಲ್ ಪಾಯಿಂಟ್ ಗಳಿಸಿದ್ದಾರೆ. ಅವರ ರಕ್ಷಣಾತ್ಮಕ ಸಾಮರ್ಥ್ಯವು ಗೂಳಿಗಳಿಗೆ ಪ್ಲಸ್ ಪಾಯಿಂಟ್. 13 ಲಕ್ಷ ರೂ ಪಡೆದು ತಂಡಕ್ಕೆ ಬಂದ ನಿತಿನ್ ರಾವಲ್, ಸಹ ಆಲ್‌ರೌಂಡರ್ ಚಂದ್ರನಾಯಕ್ ಅವರೊಂದಿಗೆ ಹೇಗೆ ತಂತ್ರ ರೂಪಿಸುತ್ತಾರೆ ಎಂಬುದು ಸದ್ಯದ ಕುತೂಹಲ.

ಕಳೆದ ಬಾರಿ ತಂಡಕ್ಕೆ ರೈಡಿಂಗ್‌ನಲ್ಲಿ ಆಧಾರವಾಗಿದ್ದ ಭರತ್ ಅವರನ್ನು ಕೈಬಿಟ್ಟ ಬಳಿಕ, ಈ ಬಾರಿ ಬೆಂಗಳೂರು ಬುಲ್ಸ್ ಟೂರ್ನಿಯಲ್ಲಿ ಯಾವ ರೀತಿಯ ಆರಂಭ ಪಡೆಯಲಿದೆ ಎಂಬುದು ಪ್ರದೀಪ್ ನರ್ವಾಲ್ ಅವರ ಫಾರ್ಮ್ ಮೇಲೆ ಅವಲಂಬಿಸಿದೆ. ಕಳೆದ ಕೆಲವು ಆವೃತ್ತಿಗಳಲ್ಲಿ ಪರ್ದೀಪ್ ಅತ್ಯುತ್ತಮ ಪ್ರದರ್ಶನ ನೀಡಿರಲಿಲ್ಲ. ಇದೀಗ ರಣಧೀರ್ ಸಿಂಗ್ ಅವರ ಮಾರ್ಗದರ್ಶನದಲ್ಲಿ ಹೊಸತನದೊಂದಿಗೆ ಕಬಡ್ಡಿ ಅಂಗಳಕ್ಕಿಳಿಯಲು ಕಾತರರಾಗಿದ್ದಾರೆ.

ರೈಡರ್‌ಗಳು

ಪರ್ದೀಪ್ ನರ್ವಾಲ್, ಪ್ರಮೋತ್ ಸೈಸಿಂಗ್, ಅಜಿಂಕ್ಯಾ ಪವಾರ್, ಸುಶಿಲ್, ಜೈ ಭಗವಾನ್, ಜತಿನ್, ಅಕ್ಷಿತ್, ಮನ್‌ಜೀತ್, ಲಕ್ಕಿ ಕುಮಾರ್,

ಡಿಫೆಂಡರ್ಸ್

ಪರ್ತೀಕ್, ಅರುಲಂಥಬಾಬು, ಹಸನ್ ಥೊಂಗ್ ಕ್ರೂಯಾ, ರೋಹಿತ್ ಕುಮಾರ್

ಆಲ್ ರೌಂಡರ್ಸ್

ನಿತಿನ್ ರಾವಲ್, ಚಂದ್ರನಾಯಕ್ ಎಂ.

ಕಳೆದ ಸರಣಿಯಲ್ಲಿ ಬುಲ್ಸ್‌ನ ಅಂಕಿಅಂಶ

ಗೆಲುವು 15

ಸೋಲು 7

ಡ್ರಾ 2

ಗಳಿಸಿದ ಸ್ಥಾನಗಳು

ಆವೃತ್ತಿ	ಸ್ಥಾನ
1	3
2	2
3	7
4	6
5	4 ಝೋನ್ ಬಿನಲ್ಲಿ
6	1 ಗೆಲುವು
7	6
8	4
9	3

ಇತಿಹಾಸದಲ್ಲೇ ಮೊದಲ ಬಾರಿಗೆ ಭಾರತದ ಮಹಿಳಾ ರೋಲರ್ ಡರ್ಬಿ ಪದಕ | ಕಂಚನ್ನು ಕೊರಳಿಗೇರಿಸಿದ ಶ್ರುತಿಕಾ ಸರೋದೆ ನೇತೃತ್ವದ ತಂಡ

ವಿಶ್ವ ಸ್ಕೇಟ್ ಗೇಮ್ಸ್: ಭಾರತೀಯ ನಾರಿಯರಿಗೆ ಕಂಚು

ದೆಹಲಿ: ಇಟಲಿಯಲ್ಲಿ ನಡೆದ ವಿಶ್ವ ಸ್ಕೇಟ್ ಗೇಮ್ಸ್ 2024 ರಲ್ಲಿ ಭಾರತದ ಮಹಿಳಾ ರೋಲರ್ ಡರ್ಬಿ ತಂಡವು ದೇಶಕ್ಕೆ ಮೊದಲ ಪದಕವನ್ನು ಗೆದ್ದು ಇತಿಹಾಸವನ್ನು ನಿರ್ಮಾಣ ಮಾಡಿದೆ. ಶ್ರುತಿಕಾ ಸರೋದೆ ನೇತೃತ್ವದ ಭಾರತ ತಂಡವು ಮಹಿಳಾ ವಿಭಾಗದ ಕಂಚಿನ ಪದಕದ ಪಂದ್ಯದಲ್ಲಿ ಚೀನಾ ವಿರುದ್ಧ ಅದ್ಭುತ ಪ್ರದರ್ಶನ ನೀಡಗ ಮೂಲಕ ಪ್ರೇಕ್ಷಕರಿಗೆ ಅಚ್ಚರಿ ನೀಡಿದ ಪದಕವನ್ನು ತನ್ನದಾಗಿಸಿಕೊಂಡಿತು. ರೋಲರ್ ಡರ್ಬಿಯಲ್ಲಿ ವರ್ಲ್ಡ್ ಸ್ಕೇಟ್ ಗೇಮ್ಸ್‌ನಲ್ಲಿ 2ನೇ ಬಾರಿಗೆ ಮುಖಾಮುಖಿಯಾದ ಎರಡೂ ತಂಡಗಳು ತಮ್ಮ ಪ್ರಾಥಮಿಕ ಪಂದ್ಯಗಳ ಉದ್ದಕ್ಕೂ ಉತ್ತಮ ಸುಧಾರಣೆಗಳನ್ನು ತೋರಿಸಿದವು, ತಮ್ಮ ಫೈನಲ್‌ನ ಪ್ರಾರಂಭದಲ್ಲಿ ಸಮವಾಗಿ ಎರಡೂ ತಂಡಗಳು

ಸಮಬಲದ ಹೋರಾಟ ನಡೆಸಿದ್ದರು. ಆದರೆ, ಪಂದ್ಯ ಮುಕ್ತಾಯದ ವೇಳೆಗೆ ಭಾರತ 127 ರಿಂದ 39 ಸ್ಕೋರ್‌ನೊಂದಿಗೆ ಗೆಲುವು ಕಂಡಿತು. ಆ ಮೂಲಕ ಭಾರತ ಐತಿಹಾಸಿಕ ವಿಜಯವನ್ನು ಸಾಧಿಸಿತು.

ಭಾರತದ ಜಾಮರ್‌ಗಳನ್ನು ತಡೆಯುವುದು ಚೀನಾ ಆಟಗಾರ್ತಿಯರಿಗೆ ಸುಲಭವಾಗಿರಲಿಲ್ಲ. ಚೀನಾದ ಪ್ರತಿ ರಕ್ಷಣಾತ್ಮಕ ಲೋಪವನ್ನು ಭಾರತ ಬಳಕೆ ಮಾಡಿಕೊಂಡಿತು. ಮಿಂಚಿನ ವೇಗದ ಪಾಸ್‌ಗಳೊಂದಿಗೆ ಪಾಯಿಂಟ್‌ಗಳನ್ನು ಗಳಿಸಿದರು. ಚೀನಾದ ರಕ್ಷಣೆಯು ಭಾರತದ ಬಿರುಸಿನ ವೇಗ ಮತ್ತು ಚುರುಕುತನದ ಎದುರು ಮಂಕಾಯಿತು. ಭಾರತದ ಕಲ್ಲು ಬಂಡೆಯಂಥ ರಕ್ಷಣಾತ್ಮಕ ಫಾರ್ಮೆಟ್ ಅನ್ನು ಬೇಧಿಸಿ ಅಂಕ ಗಳಿಸುವುದು ಚೀನಾದ ಜಾಮರ್‌ಗಳಿಗೆ ಸುಲಭವಾಗಿರಲಿಲ್ಲ. ಪ್ರತಿ ಅಂಕಕ್ಕೂ ಚೀನಾ ಪರದಾಡುವಂತಾಯಿತು. ತಮ್ಮ ಅಮೋಘ ವಿಜಯದ ಮೇಲೆ ಸವಾರಿ ಮಾಡಿದ ಭಾರತ ತಂಡವು ಕಂಚಿನ ಪದಕದ ಗೆಲುವು ಕಂಡಿತು.

ಪುರುಷರ ತಂಡಕ್ಕೆ ಪದಕ ಮಿಸ್: ಮಹಿಳಾ ತಂಡದ ಪ್ರದರ್ಶನಕ್ಕೆ ವ್ಯತಿರಿಕ್ತವಾಗಿ, ಭಾರತದ ಪುರುಷರ ತಂಡವು 75-119 ರಿಂದ ಚೀನಾಕ್ಕೆ ಶರಣಾಗುವ ಮೂಲಕ ಪದಕದಿಂದ ವಂಚಿತವಾಯಿತು.

ಗೋಪಿಲೋಲನ ಟ್ರೇಲರ್ ರಿಲೀಸ್

ಶೀರ್ಷಿಕೆಯಲ್ಲಿಯೇ ಮನಗೆದ್ದಿರುವ ಗೋಪಿಲೋಲ ಚಿತ್ರದ ಟ್ರೇಲರ್ ರಿಲೀಸ್ ಆಗಿದೆ. ಎಸ್.ವಿ.ರಾಜೇಂದ್ರಸಿಂಗ್ ಬಾಬು, ಜೋಸೈಮನ್ ಟ್ರೇಲರ್ ರಿಲೀಸ್ ಮಾಡಿದರು. ಹಿರಿಯ ನಟ ದೊಡ್ಡಣ್ಣ, ಶ್ರೀನಗರ ಕಿಟ್ಟಿ, ಕೆ.ಮಂಜು, ಎಂ.ಜಿ. ರಾಮಮೂರ್ತಿ, ಕೃಷ್ಣೇಗೌಡ, ಪಿ.ಸಿ. ಶೇಖರ್ ಮುಂತಾದ ಗಣ್ಯರು ಚಿತ್ರತಂಡಕ್ಕೆ ಶುಭಕೋರಿದರು. ಗೋಪಿಲೋಲ ಟೈಟಲ್ ಹೇಳುವಂತೆ ಇಲ್ಲಿ ತ್ರಿಕೋನ ಪ್ರೇಮಕಥೆ ಇದೆ. ಅದರ ಜತೆಗೆ ರೈತರ ಸಮಸ್ಯೆಗಳು, ಸಾವಯವ ಕೃಷಿಯ ಬಗ್ಗೆಯೂ ಚಿತ್ರದಲ್ಲಿ ಹೇಳಲಾಗಿದೆ. ಆರ್.ರವೀಂದ್ರ ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಗೋಪಿಲೋಲ ನೈಸರ್ಗಿಕ ಕೃಷಿಯ ಕುರಿತಾದ ಹಾಗೂ ಸುಂದರ ಪ್ರೇಮಕಥೆಯುಳ್ಳ ಚಿತ್ರ. ಜನರಿಗೆ ಒಂದೊಳ್ಳೆ ಸಂದೇಶ ಕೂಡ ಇಲ್ಲಿದೆ ಎನ್ನುತ್ತಾರೆ ನಿರ್ದೇಶಕರು.

ಮಂಜುನಾಥ ಅರಸು ನಾಯಕನಾಗಿ ನಟಿಸಿದ್ದು, ನಿರ್ಮಾಣದಲ್ಲಿಯೂ ಕೈ ಜೋಡಿಸಿದ್ದಾರೆ. ಇದು ನಾಯಕನಾಗಿ ನನ್ನ ಮೊದಲ ಚಿತ್ರ. ಲವ್, ಆ್ಯಕ್ಷನ್, ಸಸ್ಪೆನ್ಸ್ ಹೀಗೆ ಪ್ರೇಕ್ಷಕರಿಗೆ ಬೇಕಾದ ಎಲ್ಲಾ ಅಂಶಗಳು ಚಿತ್ರದಲ್ಲಿವೆ. ಎಲ್ಲಕ್ಕಿಂತ ಹೆಚ್ಚಾಗಿ ಒಳ್ಳೆಯ ಕಂಟೆಂಟ್ ಇದೆ. ಅದೇ ನಮ್ಮ ಚಿತ್ರದ ಹೀರೊ ಎಂದು ಮಂಜುನಾಥ್ ಅರಸ್ ತಿಳಿಸಿದರು. ಹಿರಿಯ ನಟ ಹಾಗೂ ನಿರ್ದೇಶಕ ಎಸ್.ನಾರಾಯಣ್ ನಾಯಕನ ತಂದೆಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದು,

ಈ ಚಿತ್ರ ಎಲ್ಲರಿಗೂ ಮೆಚ್ಚುಗೆಯಾಗಲಿದೆ ಎಂಬ ನಂಬಿಕೆ ನನ್ನಗಿದೆ, ಅಂತಹ ಉತ್ತಮ ಅಂಶಗಳು ನಮ್ಮ ಚಿತ್ರದಲ್ಲಿವೆ. ನಾನು ಮೂಲತಃ ಕೃಷಿ ಕುಟುಂಬದಿಂದ ಬಂದವನು. ಹಾಗಾಗಿ ರೈತರ ಸಮಸ್ಯೆಗಳ ಬಗ್ಗೆ ಹೇಳಬೇಕು ಎಂಬ ನಿಟ್ಟಿನಲ್ಲಿ ಚಿತ್ರದ ಕಥೆ ಹೆಣೆದೆ. ಅದಲ್ಲಿಯೂ ನೈಸರ್ಗಿಕ ಕೃಷಿಗೆ ಸಂಬಂಧಿಸಿದ ಸ್ಟೋರಿ ಇಲ್ಲಿದೆ, ಇಂತಹ ಸಿನಿಮಾ ನಿರ್ಮಿಸಿದ ಸಂತಸ ನನಗಿದೆ.

-ಎಸ್.ಆರ್.ಸನತ್‌ಕುಮಾರ್
ನಿರ್ಮಾಪಕ

ನಿಮಿಷಾ ಹಾಗೂ ಜಾಹ್ನವಿ ನಾಯಕಿಯರಾಗಿ ಬಣ್ಣಹಚ್ಚಿದ್ದಾರೆ. ಪದ್ಮಾವಾಸಂತಿ, ರೇಖಾದಾಸ್, ಜೋಸೈಮನ್, ಸ್ವಾತಿ, ಡಿಂಗ್ರಿ ನಾಗರಾಜು, ರೇಖಾ ಸೇರಿದಂತೆ ಹಲವರು ತಾರಾಗಣದಲ್ಲಿದ್ದಾರೆ. ಚಿತ್ರದಲ್ಲಿ ಆರು ಹಾಡುಗಳಿದ್ದು, ಮಿಥುನ್ ಅಶೋಕನ್ ಸಂಗೀತ ಸಂಯೋಜಿಸಿದ್ದಾರೆ. ಸುಕೃತಿ ಚಿತ್ರಾಲಯ ಲಾಂಛನದಲ್ಲಿ ಎಸ್.ಆರ್.ಸನತ್ ಕುಮಾರ್ ಚಿತ್ರ ನಿರ್ಮಾಣಕ್ಕೆ ಬಂಡ ವಾಳ ಹೂಡಿದ್ದಾರೆ. ಅಕ್ಟೋಬರ್ 4ರಂದು ಗೋಪಿಲೋಲ ತೆರೆಗೆ ಬರಲಿದೆ.

ಸಿಟಿಲೈಟ್ಸ್‌ಗೆ ವಿಜಯ್ ಆ್ಯಕ್ಷನ್ ಕಟ್

ಭೀಮ ಚಿತ್ರದ ಯಶಸ್ಸಿನ ಖುಷಿಯಲ್ಲಿರುವ ನಟ, ನಿರ್ದೇಶಕ ದುನಿಯಾ ವಿಜಯ್ ಈಗ ಮತ್ತೊಂದು ಚಿತ್ರವನ್ನು ಘೋಷಿಸಿದ್ದಾರೆ. ಸಿಟಿಲೈಟ್ಸ್ ಶೀರ್ಷಿಕೆಯಲ್ಲಿ ಸಿನಿಮಾ ಸೆಟ್ಟೇರಲಿದೆ. ವಿಶೇಷ ಎಂದರೆ ವಿಜಯ್ ಪುತ್ರಿ ಮೊನಿಷಾ ಈ ಚಿತ್ರದ ಮೂಲಕ ಚಂದನವನಕ್ಕೆ ಎಂಟ್ರಿಕೊಡಲಿದ್ದಾರೆ. ತಮ್ಮ ಪುತ್ರಿಯ ಚೊಚ್ಚಲ ಚಿತ್ರವನ್ನು ದುನಿಯಾ ವಿಜಯ್ ನಿರ್ದೇಶನ ಮಾಡುತ್ತಿದ್ದಾರೆ. ಇನ್ನೂ ವಿಶೇಷ ಎಂದರೆ ದೊಡ್ಮನೆ ಮೊಮ್ಮಗ ವಿನಯ್ ರಾಜ್‌ಕುಮಾರ್ ಈ ಚಿತ್ರದಲ್ಲಿ ನಟಿಸ ಲಿದ್ದಾರೆ. ಹಾಗಾಗಿ ಸಿಟಿಲೈಟ್ಸ್ ಚಿತ್ರದ ಬಗ್ಗೆ ಸೆಟ್ಟೇರುವ ಮೊದಲೇ ನಿರೀಕ್ಷೆ ಹೆಚ್ಚಾಗಿದೆ. ಭೀಮ ಚಿತ್ರವನ್ನು ವೀಕ್ಷಿಸಿದ್ದ ವಿನಯ್ ರಾಜ್‌ಕುಮಾರ್, ವಿಜಯ್ ಅವರ ನಟನೆ ಹಾಗೂ ನಿರ್ದೇಶನವನ್ನು ಕೊಂಡಾಡಿದ್ದರು. ಅಂತೆಯೇ ದುನಿಯಾ ವಿಜಯ್, ಪೆಪೆ ಚಿತ್ರದ ರಿಲೀಸ್ ಸಂದರ್ಭದಲ್ಲಿ ವಿನಯ್ ಅವರನ್ನು ಸಂದರ್ಶನ ಮಾಡುವ ಮೂಲಕ ಚಿತ್ರತಂಡಕ್ಕೆ ಸಾಥ್ ನೀಡಿದ್ದರು. ಈಗ ವಿನಯ್ ಹಾಗೂ ವಿಜಯ್ ಕಾಂಬಿನೇಷನ್‌ನಲ್ಲಿ ಅದ್ದೂರಿ ಚಿತ್ರ ಮೂಡಿಬರಲಿದೆ.

ರಾ ಸ್ಟೈಲ್‌ನಲ್ಲಿ ಮೂಡಿಬಂದ ಪೆಪೆ ಚಿತ್ರದಲ್ಲಿ ರಗಡ್ ಆಗಿ ಕಂಗೊಳಿಸಿದ ವಿನಯ್, ಸಿಟಿಲೈಟ್ಸ್‌ನಲ್ಲೂ ರಗಡ್ ಅವತಾರ ತಾಳುವುದು ಬಹುತೇಕ ಖಚಿತ ಎನ್ನಲಾಗುತ್ತಿದೆ. ಚಿತ್ರದ ಶೀರ್ಷಿಕೆ ಕೇಳಿದಾಕ್ಷಣ ಇದು ಬೆಂಗಳೂರಿನ ಸುತ್ತಮುತ್ತ ನಡೆಯುವ ಕಥೆಯನ್ನು ಒಳಗೊಂಡಿದೆ ಎಂಬುದು ಸ್ಪಷ್ಟ ವಾಗುತ್ತದೆ. ವಿಜಯ್ ಪುತ್ರಿ ಮೊನಿಷಾ ಬಾಲ್ಯದಿಂದಲೂ ನಟಿ ಯಾಗಬೇಕು ಎಂದು ಕನಸು ಕಂಡಿದ್ದರು, ಅದಕ್ಕಾಗಿ ಅಮೇರಿಕಾಗೆ ತೆರಳಿ ನಟನೆಯ ಬಗ್ಗೆ ತರಬೇತಿ ಪಡೆದಿದ್ದರು. ಈಗ ತಮ್ಮ ಆಸೆಯಂತೆಯೇ ಚಂದನವನ ಪ್ರವೇಶಿಸುತ್ತಿದ್ದು ಸಿಟಿಲೈಟ್ಸ್ ಚಿತ್ರದ ಮೂಲಕ ನಟಿಯಾಗಿ ಗುರುತಿಸಿ ಕೊಳ್ಳಲಿದ್ದಾರೆ.

ಕಂಟೈನರ್‌ನಲ್ಲಿ ಕಾರ್ಮಿಕನ ಕಥನ

ಈ ಹಿಂದೆ ಗರುಡಾಕ್ಷ ಚಿತ್ರವನ್ನು ನಿರ್ಮಿಸಿ ಸೈ ಎನಿಸಿಕೊಂಡ ಎಸ್.ನರಸಿಂಹಮೂರ್ತಿ ಕಂಟೈನರ್ ಚಿತ್ರವನ್ನು ನಿರ್ಮಿಸಿದ್ದಾರೆ. ಜತೆಗೆ ಚಿತ್ರದ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಚಿತ್ರೀಕರಣ ಮುಗಿಸಿರುವ ಕಂಟೈನರ್ ಚಿತ್ರಕ್ಕೆ ಸೆನ್ಸಾರ್ ಮಂಡಳಿಯೂ ಪ್ರಶಂಸೆ ವ್ಯಕ್ತಪಡಿಸಿದ್ದು, ಯಾವುದೇ ದೃಶ್ಯಕ್ಕೆ ಆಕ್ಷೇಪಣೆ ವ್ಯಕ್ತಪಡಿಸದೆ ಯು ಪ್ರಮಾಣ ಪತ್ರ ನೀಡಿದೆ.

ಸದ್ಯ ಈ ಚಿತ್ರದ ಟ್ರೇಲರ್ ರಿಲೀಸ್ ಆಗಿದ್ದು ಕುತೂಹಲ ಮೂಡಿಸಿದೆ. ಹಡಗಿನಲ್ಲಿ ಕಂಟೈನರ್ ಸಾಗಿಸುವಾಗ ಅಚಾತುರ್ಯದಿಂದ ಅದರ ಒಳಗಡೆ ಕಾರ್ಮಿಕನೊಬ್ಬ ಬಂದಿ ಯಾಗುತ್ತಾನೆ. ಅಲ್ಲಿ ಆತ ಪಡುವ ಪಾಡೇನು ಅಲ್ಲಿಂದ ಆತ ಹೊರಗೆ ಬರುತ್ತಾನಾ, ಇಲ್ಲವೆ ಎಂಬುದೇ ಚಿತ್ರದ ಸಸ್ಪೆನ್ಸ್. ಒಂದು ದಿನದಲ್ಲಿ ನಡೆಯುವ ಘಟನೆಯನ್ನು ಚಿತ್ರದಲ್ಲಿ ರೋಚಕವಾಗಿ ಕಟ್ಟಿಕೊಡಲಾಗಿದೆ. ನೈಜ ಘಟನೆ ಆಧರಿಸಿ ಚಿತ್ರಕಥೆ ಹೆಣೆದಿದ್ದು, ಅದಕ್ಕೆ ಒಂದಷ್ಟು ವೈದ್ಯಕೀಯ ವಿಚಾರ ಗಳನ್ನು ಸೇರಿಸಿ ಸಸ್ಪೆನ್ಸ್ ಅಂಶಗಳನ್ನು ಬೆರೆಸಿ ನಿರ್ದೇಶಕರು ತೆರೆಯಲ್ಲಿ ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾರೆ. ಸಣ್ಣ ಹಾಗೂ ದನಿ ಇಲ್ಲದ ಕಾರ್ಮಿಕನಿಗೂ ಬೆಲೆ ಇರುತ್ತದೆ ಎಂಬ ಸಂದೇಶ ವನ್ನು ಚಿತ್ರದಲ್ಲಿ ಹೇಳಿದ್ದಾರೆ. ಕಾರ್ಮಿಕನಾಗಿ ದತ್ತಾತ್ರೇಯ ಪೂಜಾರಿ ನಟಿಸಿದ್ದು, ಪುಣ್ಯಾಗೌಡ ನಾಯಕಿಯಾಗಿ ಬಣ್ಣ ಹಚ್ಚಿದ್ದಾರೆ. ಉಳಿದಂತೆ ಮಂಜು ನಾಥ್, ರಂಗನಾಥ್, ಬಿ.ಕೆ.ಮಂಜು.ಬಿ.ಕೆ ಉದಯಕುಮಾರ್ ಮುಂತಾದವರು ನಟಿಸಿದ್ದಾರೆ. ಸಂಗೀತ ಅಲಂಕಾರ್, ಛಾಯಾಗ್ರಹಣ ಶ್ರೀನಿವಾಸ್, ಸಂಕಲನ ಭಾರ್ಗವ ಅವರದಾಗಿದೆ. ಬೆಂಗಳೂರು, ಮಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. ದಸರಾ ಬಳಿಕ ಚಿತ್ರವನ್ನು ತೆರೆಗೆ ತರಲು ಚಿತ್ರತಂಡ ಸಿದ್ಧತೆ ನಡೆಸಿದೆ.

ಆ..ಈ.. ಜತೆಗೆ ರಾಜದೇವನಿಗೂ ಮುಹೂರ್ತ

ದುರ್ಗ ಮೋಹನ್ ನಿರ್ದೇಶನದ ಆ..ಈ.. ಮತ್ತು ರಾಜದೇವ ಸಿಂಧು ಶೀರ್ಷಿಕೆಯ ಎರಡು ಸಿನಿಮಾಗಳು ಒಟ್ಟಿಗೆ ಸೆಟ್ಟೇರಿವೆ. ಆರ್‌ಎಸ್‌ಪಿ ಪ್ರೊಡಕ್ಷನ್ಸ್ ಮತ್ತು ಚಿನ್ಮಯ್ ಸಿನಿ ಕ್ರಿಯೇಶನ್ಸ್ ಸಂಸ್ಥೆಯು ಈ ಚಿತ್ರ ನಿರ್ಮಾಣದ ಜವಬ್ದಾರಿಯನ್ನು ಹೊತ್ತಿದೆ. ಆ..ಈ ಎಂದರೆ ಆ ದಿನಗಳು, ಈ ದಿನಗಳು ಎಂದು ಅರ್ಥ. ಕಥೆಗೆ ಪೂರಕವಾಗಿರುವ ಜತೆಗೆ ಪ್ರೇಕ್ಷಕರ ಕುತೂಹಲಕ್ಕಾಗಿ ಆ..ಈ..ಎಂದು ಶೀರ್ಷಿಕೆ ಇಟ್ಟಿದ್ದೇವೆ. ಕಾಶಿನಾಥ್ ಅವರ ಪ್ರೇರಣೆಯಿಂದ ಹಾಸ್ಯ ಕಥೆಯನ್ನು ಸಿದ್ದಪಡಿಸಿ, ಅದರೊಂದಿಗೆ ಸಂದೇಶವನ್ನು ತಿಳಿಸುವ ಪ್ರಯತ್ನ ಮಾಡಲಾಗಿದೆ. ಹಳ್ಳಿ ಬದುಕು, ಕಾರ್ಪೋರೇಟ್ ಜೀವನ. ಅಂದಿನ ಮತ್ತು ಇಂದಿನ ಕಾಲ, ಜತೆಗೆ ನಾಲ್ಕು ಭಿನ್ನ ಪ್ರೀತಿಯ ಕಥೆಯನ್ನು ಚಿತ್ರದಲ್ಲಿ ಹೇಳಲಾಗುತ್ತಿದೆ.

ರಾಜ ದೇವ ಸಿಂಧು ಸಿನಿಮಾ ಫ್ಯಾಂಟಸಿ ಕಥೆಯನ್ನು ಒಳಗೊಂಡಿದ್ದು, ಪ್ರಸ್ತುತ ಕಾಲಘಟ್ಟದ ಜತೆಗೆ ಐತಿಹಾಸಿಕ ಕಥೆಯನ್ನು ಒಳಗೊಂಡಿದೆ. ರಾಜರು ಎಂದಾಕ್ಷಣ ಕೃಷ್ಣ ದೇವರಾಯ ನಮ್ಮ ಕಣ್ಣ ಮುಂದೆ ಬರುತ್ತಾರೆ. ಅವರು ಮಾಡಿರುವ ಕಾರ್ಯಗಳ ಬಗ್ಗೆ ತಿಳಿದು ಸಂಶೋಧನೆ ನಡೆಸಿ ಚಿತ್ರಕಥೆ ಹೆಣೆಯಲಾಗಿದೆ. ಆ..ಈ ಚಿತ್ರದಲ್ಲಿ ಭಾರ್ಗವ್ ನಾಯಕನಾಗಿ ನಟಿಸುತ್ತಿದ್ದು ದ್ವಿಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ರಾಘವೇಂದ್ರ ರಾಜ್ ಕುಮಾರ್, ಸುಧಾರಾಣಿ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಉಳಿದಂತೆ ಶ್ವೇತಾ ಸಂಕೇತ್, ಮೋನಿಕಾ ವಸಿಷ್ಠ, ಆರಾ ಮುಂತಾದವರು ತಾರಾಗಣದಲ್ಲಿದ್ದಾರೆ. ಚಿತ್ರದ ಹಾಡುಗಳಿಗೆ ವಿವೇಕ್ ಜಂಗ್ಲಿ ಸಂಗೀತ ಸಂಯೋಜಿಸುತ್ತಿದ್ದಾರೆ. ರಾಜದೇವ ಸಿಂಧು ಸಿನಿಮಾದಲ್ಲಿಯೂ ಭಾರ್ಗವ ನಾಯಕ ನಟಿಸುತ್ತಿದ್ದು, ಸ್ವಾತಿ ಪ್ರಭು, ಚವಸಖಿ ತಿಮ್ಮಯ್ಯ, ಆರಾ ನಾಯಕಿಯರಾಗಿ ಬಣ್ಣಹಚ್ಚುತ್ತಿದ್ದಾರೆ. ಈ ಎರಡು ಸಿನಿಮಾಗಳನ್ನು ಬೆಂಗಳೂರು, ಮಡಕೇರಿ, ಮಂಗಳೂರಿನಲ್ಲಿ ಚಿತ್ರೀಕರಣ ನಡೆಸಲು ಯೋಜನೆ ಹಾಕಿಕೊಳ್ಳಲಾಗಿದೆ. ಐತಿಹಾಸಿಕ ದೃಶ್ಯಗಳ ಚಿತ್ರೀಕರಣಕ್ಕಾಗಿ ಅದ್ದೂರಿ ಸೆಟ್ ಹಾಕಲು ನಿರ್ಧರಿಸಲಾಗಿದೆ.